ಕಲ್ಹಣ

ಸೋಮನಾಥ ಧರ್

K
891.202 109 2
K 124 D

891.202 109
2
K 124 D

INDIAN INSTITUTE
OF
ADVANCED STUDY
LIBRARY, SHIMLA

ಕಲ್ಹಣ

ಒಳಬದಿಯ ರಕ್ಷಾಪುಟದಲ್ಲಿ ಕಾಣಿಸಿರುವ ಶಿಲ್ಪಕಲೆಯಲ್ಲಿ ಮೂವರು ಭವಿಷ್ಯವಾದಿಗಳು ಗೌತಮ ಬುದ್ಧನ ತಾಯಿ ರಾಣಿ ಮಾಯಾಳ ಕನಸನ್ನು ರಾಜ ಶುದ್ಧೋದನನಿಗೆ ವಿವರಿಸುವ ದೃಶ್ಯ ವಿದೆ. ಅದರ ಕೆಳಗೆ ಆ ವಿವರಣೆಯನ್ನು ಬರೆದುಕೊಳ್ಳುತ್ತಿರುವ ಬರಹಗಾರ ಕುಳಿತಿದ್ದಾನೆ. ಬಹುಶಃ ಇದು ಭಾರತದಲ್ಲಿ ಬರವಣಿ ಗೆಯ ಕಲೆ ಕುರಿತ ಪ್ರಥಮ ಚಾರಿತ್ರಿಕ ದಾಖಲೆ.

ಸ್ಥಳ: ನಾಗಾರ್ಜುನಕೊಂಡ - ಕ್ರಿ.ಶ. ಎರಡನೆಯ ಶತಮಾನ.
ಕೃಪೆ: ನ್ಯಾಷನಲ್ ಮ್ಯೂಸಿಯಂ, ನವದೆಹಲಿ.

ಭಾರತೀಯ ಸಾಹಿತ್ಯದ ನಿರ್ಮಾಣಕಾರರು

ಕಲ್ಹಣ

ಮೂಲ :

ಸೋಮನಾಥ ಧರ್

ಕನ್ನಡ ಅನುವಾದ:

ಬನ್ನಂಜೆ ಗೋವಿಂದಾಚಾರ್ಯ

ಸಾಹಿತ್ಯ ಅಕಾದೆಮಿ

Kalhana - Kannada translation by Bannanje Govindacharya of Somnath Dhar's monograph in English. Sahitya Akademi, 1991.

SAHITYA AKADEMI
REVISED PRICE Rs. 15·00

Indian Institute of Advanced Study
117228
10/12/04
SHIMLA
K
891.202 109 2
K 124 D

ISBN 81 7201 054 0
© Sahitya Akademi
First Published 1991

ಸಾಹಿತ್ಯ ಅಕಾದೆಮಿ

ಪ್ರಧಾನ ಕಾರ್ಯಾಲಯ:

ರವೀಂದ್ರಭವನ, ೩೫, ಫಿರೋಜಶಾ ರಸ್ತೆ, ನವದೆಹಲಿ - ೧೧೦ ೦೦೧.

ಮಾರಾಟ ವಿಭಾಗ :

'ಸ್ವಾತಿ' ಮಂದಿರ್ ಮಾರ್ಗ್, ನವದೆಹಲಿ - ೧೧೦ ೦೦೧.

ಪ್ರಾದೇಶಿಕ ಕಾರ್ಯಾಲಯಗಳು:

೨೯, ಎಲ್ಡಾಮ್ಸ್ ರಸ್ತೆ, ತೇನಾಂಪೇಟೆ, ಮದ್ರಾಸ್ - ೬೦೦ ೦೧೮.

ಜೀವನತಾರ ಬಿಲ್ಡಿಂಗ್ಸ್, ಡೈಮಂಡ್ ಹಾರ್ಬರ್ ರಸ್ತೆ, ಕಲಕತ್ತಾ - ೭೦೦ ೦೫೩.

೧೭೨, ಮುಂಬಯಿ ಮರಾಠಿ ಗ್ರಂಥ ಸಂಗ್ರಹಾಲಯ ಮಾರ್ಗ,

ದಾದರ್, ಮುಂಬಯಿ - ೪೦೦ ೦೧೪.

Library IIAS, Shimla
K 891.202 109 2 K 124 D
00117228

SAHITYA AKADEMI
REVISED PRICE Rs. 15·00

Laser Typesetting by : Gee Bee Graphics, Madras-21. and

Printed by : Classic printers, Madras.

ಪರಿವಿಡಿ

ವಿಷಯ		ಪುಟಸಂಖ್ಯೆ
	ಪ್ರಸ್ತಾವನೆ	6
1.	ಕಲ್ಹಣನ ಮನೆತನ	15
2.	ಕಲ್ಹಣ ಮತ್ತು ಅವನ ಕಾಲ	22
3.	ಕವಿಯಾಗಿ ಕಲ್ಹಣ	37
4.	ಇತಿಹಾಸಕಾರನಾಗಿ ಕಲ್ಹಣ	51
5.	ಕಾಲಾನುಕ್ರಮಣಿಕೆ	55
6.	ಕಲ್ಹಣನ ಕಥನ ಕಲೆ	59
7.	ಪ್ರಾಗೈತಿಹಾಸಿಕ ಮತ್ತು ಇತಿಹಾಸದ ಆರಂಭದ ದಿನಗಳು	71
8.	ಕರ್ಕೋಟರ ಆಳಿಕೆ ಮತ್ತು ಅನಂತರದ ಅವಧಿ	79
9.	ರಾಜತರಂಗಿಣಿಯಿಂದ ಕಲಿಯಬೇಕಾದ ಪಾಠ	92
10.	ಇತರ ಇತಿಹಾಸಕಾರರು	99
	ಗ್ರಂಥ ಋಣ	111

ಪ್ರಸ್ತಾವನೆ

ಭಾರತದ ಪ್ರಾಚೀನಯುಗ ಸರಿಯಾದ ಐತಿಹಾಸಿಕ ದಾಖಲೆಗಳಿಲ್ಲದೆ ಮಸಕಾಗಿದೆ. ಪ್ರಾಚೀನ ಭಾರತದ ಇತಿಹಾಸಪ್ರಜ್ಞೆ, ವಾಸ್ತವ ಮತ್ತು ಕಾಲ್ಪನಿಕಗಳ ಕಲಬೆರಕೆಯಾಗಿ ಆಳಿದ ಅರಸರ ವಿಜಯಸಾಧನೆಯ ವೀರಗಾಥೆಗಷ್ಟೇ ಸೀಮಿತವಾಯಿತು. ಉದಾ:- ಪುರಾಣಗಳು: ಇವು ಆರ್ಯರ ಆಗಮನಕ್ಕಿಂತ ಪೂರ್ವದ ಭಾರತದ ಆಳರಸರ ಸಾಧನೆಗಳನ್ನು ವಿಸ್ತಾರವಾಗಿ ಬಣ್ಣಿಸಿದವು; ಅವರ ವಂಶಾವಳಿಯ ವಿವರ ನೀಡಿದವು. ಆದರೆ ರಾಜರ ಬಗೆಗಿನ ಶುದ್ಧವಾದ ಐತಿಹಾಸಿಕ ಅಂಶವನ್ನು ಗುರುತಿಸಲು ಸಿಗುವ ಮಾಹಿತಿ ಅತ್ಯಲ್ಪ. ಇಡಿಯ ಸಂಸ್ಕೃತ ಸಾಹಿತ್ಯದ ಸಮಗ್ರ ಅವಧಿಯಲ್ಲಿ ಸಂಶೋಧನದೃಷ್ಟಿಯ ಇತಿಹಾಸಪ್ರಜ್ಞೆಯ ಲೇಖಕ ಇಲ್ಲ ಎನ್ನುವಷ್ಟು ವಿರಳ.

ಭಾರತವನ್ನಾಳಿದ ಖ್ಯಾತರಾಜರ ಸರಿಯಾದ ಐತಿಹಾಸಿಕ ದಾಖಲೆ ದೊರಕುವುದು ಕ್ರಿ.ಶ. ಆರನೆಯ ಶತಕದ ಅನಂತರವೆ. ಉದಾ:- ಬಾಣನ "ಹರ್ಷಚರಿತ", ಕಲ್ಹಣನ "ರಾಜತರಂಗಿಣಿ", "ಆಯನಿ-ಅಕ್‌ಬರಿ", "ಅಕ್‌ಬರ್ ನಾಮಾ" - ಇತ್ಯಾದಿ. ಈ ಗ್ರಂಥಗಳಲ್ಲಿ ಉಲ್ಲೇಖಗೊಂಡ ಘಟನೆಗಳನ್ನು ಇತರ ಸಮಕಾಲೀನ ಸಾಹಿತ್ಯಗಳಲ್ಲಿ ದೊರಕುವ ಸಮೃದ್ಧ ಐತಿಹಾಸಿಕ ಸಾಮಗ್ರಿಗಳಿಂದ, ಶಾಸನಗಳಿಂದ, ನಾಣ್ಯಗಳ ಆಧಾರದಿಂದ ಸಮರ್ಥಿಸಬಹುದಾಗಿದೆ. ಈ ನಿಟ್ಟನಲ್ಲಿ ಕಾಶ್ಮೀರಕ್ಕೆ ಭಾರತದಲ್ಲೇ ಹೆಮ್ಮೆಯ ಸ್ಥಾನವಿದೆ. ಅದು ಸಾವಿರಾರು ವರ್ಷಗಳಷ್ಟು ಹಿಂದಿನ ತನ್ನ ಇತಿಹಾಸವನ್ನು ದಾಖಲೆಮಾಡಿ ಉಳಿಸಿಕೊಂಡಿದೆ. ಇದಕ್ಕಾಗಿ ಕಲ್ಹಣನಿಗೆ ಕೃತಜ್ಞತೆ ಸಲ್ಲಬೇಕು.

ಕಲ್ಹಣಪಂಡಿತನ ರಾಜತರಂಗಿಣಿ ಈಗ ಲಭ್ಯವಿರುವ ಕಾಶ್ಮೀರದ ಇತಿಹಾಸಗ್ರಂಥಗಳಲ್ಲೆ ಪ್ರಾಚೀನವಾದದ್ದು. ಇದೊಂದು ಅದ್ವಿತೀಯವಾದ ಇತಿಹಾಸ - ಕಾವ್ಯ. ಇದರ ರಚನೆ ಕ್ರಿ.ಶ. 1148 - 1150ರ ನಡುವಿನ ಅವಧಿಯಲ್ಲಿ ನಡೆಯಿತು. ಕಾಶ್ಮೀರಕ್ಕೆ, ಭಾರತದ ಇತರ ಭಾಗಗಳಿಗೆ ಕೂಡ, ಸಂಬಂಧಿಸಿದ ರಾಜಕೀಯ ಸಾಮಾಜಿಕ ಮತ್ತು ಇತರ ಮಹತ್ವದ ಮಾಹಿತಿಗಳು ರಾಜತರಂಗಿಣಿಯಲ್ಲಿವೆ. ಎಚ್. ಜಿ. ರಾಲಿನ್‌ಸನ್ ಅವರ ಮಾತಿನಲ್ಲಿ ಇದು "ಬಹುಶಃ ಇತಿಹಾಸಪ್ರಪಂಚಕ್ಕೆ ಹಿಂದೂ ಭಾರತದ 'ಏಕಮಾತ್ರ ಕೊಡುಗೆ'. ಈಗ ಪ್ರಚಲಿತವಿರುವ ಸಂಸ್ಕೃತ ಸಾಹಿತ್ಯ ಕೃತಿಗಳಲ್ಲಿ ಕಲ್ಹಣನ ಈ ಕೃತಿ ಇತರ ಕೃತಿಗಳಿಗಿಂತ ಹೆಚ್ಚು ಕರಾರುವಾಕ್ಕಾಗಿ ಘಟನೆಗಳ ಕಾಲಕ್ರಮವನ್ನು ನಿರ್ದೇಶಿಸುವ ಮೂಲಕ ವಿಶಿಷ್ಟವಾದ ಸ್ಥಾನ ಪಡೆಯುತ್ತದೆ. ಸಾಹಿತ್ಯ ಮತ್ತು ವೇದಾಂತ ಗ್ರಂಥಗಳನ್ನು ಬರೆದ ಹಲವಾರು ಭಾರತೀಯ ವಿದ್ವಾಂಸರ ಕಾಲ ನಿರ್ಣಯಕ್ಕು ಈ ಗ್ರಂಥದಲ್ಲಿ ಸುಳಿವು ಸಿಗುತ್ತದೆ. ಇಷ್ಟಂತು ನಿಶ್ಚಿತ: ಈ ಚರಿತ್ರಗ್ರಂಥ ಭಾರತದ

ಪ್ರಾಚೀನ ಇತಿಹಾಸದ ಪುನಾರಚನೆಯ ಪಥದಲ್ಲಿ ಒಂದು ಮಹತ್ವದ ಕೊಡುಗೆ.

ಕಲ್ಹಣನ ಈ ಗ್ರಂಥ ನೀಡುವ ಕರಾರುವಾಕ್ಕಾದ ಮಾಹಿತಿಯಿಂದಾಗಿ ಆನಂತರದ ಸಂಸ್ಕೃತ ಚರಿತ್ರಗ್ರಂಥಗಳ ಅಪೂರ್ಣವಾದ ವಿಕ್ಷಿಪ್ತವಾದ ಐತಿಹಾಸಿಕ ದಾಖಲೆಗಳನ್ನು ಸರಿಯಾಗಿ ವ್ಯಾಖ್ಯಾನಿಸುವುದು ಸಾಧ್ಯವಾಯಿತು. ಇದರ ಪೂರ್ತಿ ಕೃತಜ್ಞತೆ ಕಲ್ಹಣನ ಈ ಕೃತಿಗೇ ಸಲ್ಲಬೇಕು. ಹೀಗೆ ಹಿರಿಯ ಕವಿ — ಇತಿಹಾಸಕಾರ ಕಲ್ಹಣ ಕಾಶ್ಮೀರದ ಇತಿಹಾಸವನ್ನು, ಪ್ರಾಚೀನ ಸಂಸ್ಕೃತಿಯನ್ನು ಮರೆವಿನ ಮರೆಯಿಂದ ಉಳಿಸಿದ, ಅಷ್ಟೇ ಅಲ್ಲ, ಇತಿಹಾಸದ ವಿದ್ಯಾರ್ಥಿಗೆ ಆನಂತರದ ಚರಿತ್ರಗ್ರಂಥಗಳ ವಿಕ್ಷಿಪ್ತ ಉಲ್ಲೇಖಗಳನ್ನು ಸಂಯೋಜಿಸಿ ಸಮೀಕರಿಸಲು ನೆರವಾದ. ಅದರಿಂದ ಕಾಶ್ಮೀರದ ಇತಿಹಾಸದ ವಿದ್ಯಾರ್ಥಿ ಭಾರತದ ಬೇರಾವುದೇ ಪ್ರಾಂತದ ವಿದ್ಯಾರ್ಥಿಗಿಂತ ಹೆಚ್ಚು ಪ್ರಜ್ಞಾವಂತಿಕೆಯಿಂದ, ಹೆಚ್ಚು ತೃಪ್ತಿಕರವಾಗಿ ತನ್ನ ಪ್ರಾಚೀನ ಇತಿಹಾಸದ ಬಗೆಗೆ ಮಾತನಾಡಬಲ್ಲ.

ಆರ್.ಎಸ್. ಪಂಡಿತರ ರಾಜತರಂಗಿಣೀ ಅನುವಾದಕ್ಕೆ[1] ಜವಾಹರಲಾಲ್ ನೆಹರೂ ವಿಸ್ತಾರವಾದ ಮುನ್ನುಡಿ ಬರೆದಿದ್ದಾರೆ. ಅವರು ತನ್ನ ಮುನ್ನುಡಿಯಲ್ಲಿ ರಾಜತರಂಗಿಣಿಯ ಕಥೆ ಮತ್ತು ಅದರ ವೈಲಕ್ಷಣ್ಯಗಳು, ತನ್ನ ಕಾಲದ ಮತ್ತು ಪ್ರಾಚೀನರ ಸಾಮಾಜಿಕ - ರಾಜಕೀಯ ಜೀವನದ ಚಿತ್ರವನ್ನು ಕಲ್ಹಣ ಅಧಿಕೃತವಾಗಿ ನೀಡಿದ ಬಗೆ ಇವನ್ನೆಲ್ಲ ಅಡಕವಾಗಿ ನುಡಿದಿದ್ದಾರೆ, ಇವು ಅಲ್ಲಿ ಬಂದ ಕೆಲವು ಮಾತುಗಳು:

> ಇದು ಇತಿಹಾಸ ಗ್ರಂಥ; ಇದೊಂದು ಕಾವ್ಯ ಕೂಡ, ಇವು ಜತೆಗೂಡುವುದು ಪ್ರಾಯಃ ಬಲುಕಷ್ಟ. ಅನುವಾದದಲ್ಲಂತು ಈ ಮೇಳವಿಕೆಗಾಗಿ ನಾವು ಪರದಾಡಬೇಕಾಗುತ್ತದೆ. ಮೂಲ ಕಾವ್ಯದ ಗೇಯತೆಯನ್ನು ನಾವಿಲ್ಲಿ ಆಸ್ವಾದಿಸಲಾರೆವು; ಕಲ್ಹಣನ ಭಾಷೆಯ ಪೆಂಪನ್ನು ಇಂಪನ್ನು ನಾವಿಲ್ಲಿ ಸವಿಯಲಾರೆವು....... ಇದೊಂದು ಮಧ್ಯಯುಗೀನ ಕಾಲದ ಕಥೆ; ಅನೇಕ ವೇಳೆ ಇದು ಸಂತಸದ ಗಾಥೆಯಲ್ಲ; ಇದೊಂದು ಕರುಣ ಕಥೆ. ಅರಮನೆಯ ಒಳಸಂಚು, ಕಗ್ಗೊಲೆ, ವಿಶ್ವಾಸದ್ರೋಹ, ಒಳಜಗಳ, ದಬ್ಬಾಳಿಕೆಗಳಿಂದಲೆ ತುಂಬಿದ ಕಥೆ. ಇದು ನಿರಂಕುಶ ಪ್ರಭುತ್ವದ ಕಥೆ. ಕೆಲವೇ ಬಲಿಷ್ಠರ ಕೈಯಲ್ಲಿ ಜುಟ್ಟನ್ನು ಕೊಟ್ಟು ಸೈನಿಕ ದಮನಕ್ಕೆ ತುತ್ತಾದ ಬಹುಜನರ ಕಥೆ....... ಇದು ಉದಾತ್ತ ವ್ಯಕ್ತಿಗಳ ಕಥೆ; ರಾಜರ, ರಾಜವಂಶೀಯರ ಕಥೆ. ಸಾಮಾನ್ಯವರ್ಗದ ಬಡಜನತೆಯ ಕಥೆಯಲ್ಲ. ಆದರೂ ಕಲ್ಹಣನ ಈ ಕೃತಿ ರಾಜರ ನಡೆ ನುಡಿಗಳ ದಾಖಲೆಯಷ್ಟೆ ಆಗಿ ಉಳಿದಿಲ್ಲ; ಇದು ಇನ್ನೂ ಆಚೆಗೆ, ಇನ್ನೂ ಎತ್ತರದಲ್ಲಿ ನಿಂತಿದೆ. ಇದೊಂದು ರಾಜಕೀಯ, ಸಾಮಾಜಿಕ ಮತ್ತು ಸ್ವಲ್ಪಮಟ್ಟಿಗೆ ಆರ್ಥಿಕ

---

[1] ದಿ. ಇಂಡಿಯನ್ ಪ್ರೆಸ್ ಲಿಮಿಟೆಡ್, ಅಲಹಾಬಾದ್, 1935; ಪುನರ್ಮುದ್ರಣ; ಸಾಹಿತ್ಯ ಅಕಾದೆಮಿ 1968, 1977 ಮತ್ತು 1990.

ಸ್ಥಿತಿಯ ಮಾಹಿತಿಗಳ ಸಮೃದ್ಧವಾದ ಉಗ್ರಾಣ. ನಾವಿಲ್ಲಿ ಮಧ್ಯಯುಗದ ರಕ್ಷಾ ಸಜ್ಜಿಕೆಗಳನ್ನು ನೋಡುತ್ತೇವೆ. ಹೊಳೆವ ಬಿರುದು ಬಾವಲಿಗಳೊಡನೆ ಮೆರೆವ ಉಂಬಳಿಮಾನ್ಯದ ವೀರಸೈನಿಕರನ್ನು ನೋಡುತ್ತೇವೆ........ ಮತ್ತು ನೋಡುತ್ತೇವೆ ಒಳಸಂಚುಗಳನ್ನು, ಕಾದಾಟಗಳನ್ನು, ಜಾರೆಯರಾದ ಜಗಳಗಂಟಿಯರಾದ ರಾಣಿಯರನ್ನು. ಇಲ್ಲಿ ಸ್ತ್ರೀಯರೂ ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಪರದೆಯ ಹಿಂದೆ ಅಷ್ಟೆ ಅಲ್ಲ; ರಾಜಸಭೆಗಳಲ್ಲಿ ಯುದ್ಧ ರಂಗದಲ್ಲಿ ನಾಯಕಿಯರಾಗಿ, ಸೈನಿಕರಾಗಿ ಕೂಡ. ನಾವಿಲ್ಲಿ ಕೆಲಮೊಮ್ಮೆ ಪ್ರೀತಿ - ದ್ವೇಷಗಳ, ನಿಷ್ಠೆ - ಸೇಮರ್ಗಗಳ ಮಾನವೀಯ ಸಂಬಂಧಗಳ, ಮಾನವೀಯ ಸಂವೇದನೆಗಳ ಆತ್ಮೀಯ ಹೊಳಹುಗಳನ್ನು ಕಾಣುತ್ತೇವೆ. ಸುಯ್ಯನ ನೀರಾವರಿ ಯೋಜನೆಗಳ ತಾಂತ್ರಿಕ ನೈಪುಣ್ಯದ ಸಾಹಸಗಳನ್ನು ನಾವಿಲ್ಲಿ ಕಾಣುತ್ತೇವೆ; ದೂರದ ದೇಶಗಳಲ್ಲಿ ವಿಜಯಾದಿತ್ಯ ನಡೆಸಿದ ವಿಜಯಯಾತ್ರೆಗಳನ್ನು ನಾವಿಲ್ಲಿ ಕಾಣುತ್ತೇವೆ. ವಿಜಯದ ಮೂಲಕವೆ ಅಹಿಂಸೆಯನ್ನು ಪಸರಿಸುವ ಮೇಘವಾಹನನ ಕುತೂಹಲಕಾರಿ ಪ್ರಯತ್ನವನ್ನು ಕಾಣುತ್ತೇವೆ; ದೇವಾಲಯಗಳ ಮಠಮಂದಿರಗಳ ನಿರ್ಮಾಣವನ್ನು ಕಾಣುತ್ತೇವೆ; ನಂಬಿಕೆಯಿಲ್ಲದ ಮೂರ್ತಿ ಭಂಜಕರು ಇಂಥ ಮಂದಿರಗಳನ್ನು ಕೆಡವಿದ್ದನ್ನು ಕಾಣುತ್ತೇವೆ; ಕೆಡವಿ ದೇವಾಲಯಗಳ ನಿಧಿಯನ್ನು ದೋಚಿದ್ದನ್ನೂ ಕಾಣುತ್ತೇವೆ. ಹಾಗೆಯೇ ಅಲ್ಲಿ ಬರಗಾಲಗಳುಂಟು; ಹುಚ್ಚು ನೆರೆಗಳುಂಟು; ಜನಸಂಖ್ಯೆಯ ದಶಾಂಶವನ್ನು ಕಬಳಿಸಿದ ಅಗ್ನಿಪ್ರಕೋಪಗಳುಂಟು; ಬದುಕಿ ಉಳಿದವರು ಹೊಟ್ಟೆಗಿಲ್ಲದೆ ಪಾಡು ಪಟ್ಟದ್ದುಂಟು.

ಅದು ಅಂಥ ಒಂದು ಕಾಲವಾಗಿತ್ತು: ದೇಶದ ಉಳಿದ ಕಡೆಗಳಂತೆ ಕಾಶ್ಮೀರದಲ್ಲು ಹಳೆಯ ಆರ್ಥಿಕ ವ್ಯವಸ್ಥೆ ಅವನತಿಗಿಳಿದಿತ್ತು; ಹಳೆಯ ರೀತಿ ರಿವಾಜು ಬದಲಾವಣೆಯ ಮಜಲಿನಲ್ಲಿತ್ತು. ಕಾಶ್ಮೀರ ವಿಭಿನ್ನ ಸಂಸ್ಕೃತಿಗಳ ಸಂಗಮಕ್ಷೇತ್ರವಾಗಿತ್ತು; 'ಏಶಿಯದ ಮತ್ತು ಪಶ್ಚಿಮದ ಗ್ರೀಕೊರೋಮನ್ ಮತ್ತು ಇರಾಣಿಯನ್ ಮತ್ತು ಪೂರ್ವದ ಮಂಗೋಲಿಯನ್ ಸಂಸ್ಕೃತಿಗಳು ಇಲ್ಲಿ ಮೇಳವಿಸಿದ್ದವು. ಆದರೆ ಮೂಲತಃ ಇದು ಭಾರತೀಯವಾಗಿತ್ತು; ಇಂಡೋ-ಆರ್ಯನ್ ಸಂಪ್ರದಾಯಗಳ ಹರಿಕಾರನಾಗಿತ್ತು. ಇಲ್ಲಿಯ ಆರ್ಥಿಕರಚನೆಯ ಬುಡ ಕುಸಿದಾಗ ಇಲ್ಲಿಯ ಇಂಡೋ-ಆರ್ಯನ್ ಸಮಾಜ ವ್ಯವಸ್ಥೆಯೂ ನಡುಗಿತು; ಶಿಥಿಲಗೊಂಡಿತು. ಅದರಿಂದ ಈ ಪ್ರದೇಶ ಆಂತರಿಕದಂಗೆಗಳಿಗೆ ಮತ್ತು ವಿದೇಶೀ ಆಕ್ರಮಣಗಳಿಗೆ ಸುಲಭವಾಗಿ ಬಲಿಯಾಯಿತು. ಹಳೆಯ ಇಂಡೋ-ಆರ್ಯನ್ ಆದರ್ಶಗಳ ಹೊಳಹುಗಳು ಕಾಣಿಸಿಕೊಂಡರೂ ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಅವು ಕಾಲಬಾಧಿತವಾಗಿಬಿಟ್ಟವೆ. ಸೇನಾಪತಿಗಳು ಅಶ್ತಿಂದಿತ್ತ ಶಿಸ್ತಿನ ಸೇನೆಯ ಗಸ್ತು ತಿರುಗಿಸುತ್ತಾರೆ; ಬಡಪಾಯಿ ಪ್ರಜೆಗಳನ್ನು ಬಲಿತೆಗೆದುಕೊಳ್ಳುತ್ತಾರೆ. ಜನತೆ ಬಂಡಾಯವೇಳುತ್ತಾರೆ — ಕಲ್ಹಣ ವರ್ಣಿಸಿದಂತೆ ಕಾಶ್ಮೀರ "ಸ್ಥಾಪಿತ ಹಿತಾಸಕ್ತಿಗೆ ಎದುರು ಬಿದ್ದು ದಂಗೆಯೇಳುವಲ್ಲಿ ಹಿಗ್ಗುಕಂಡ ದೇಶ."

ಈ ಇಂಥ ಜನರನ್ನು ಸೈನಿಕ ಮುಖಂಡರು ಮತ್ತು ಸಮಯ ಸಾಧಕರು ತಮ್ಮ ಸ್ವಂತ ಲಾಭಕ್ಕಾಗಿ ಸುಲಿದು ಸೂರೆ ಮಾಡಿದರು......

ರಣಜಿತ್ ಸೀತಾರಾಮ ಪಂಡಿತರು ತಮ್ಮ ರಾಜತರಂಗಿಣಿಯ ಅನುವಾದದಲ್ಲಿ ಅದಕ್ಕೊಂದು ರೂಪ — ಆಕಾರ ಕೊಡುವ ತನಕವೂ ಅದು ಹಸ್ತಪ್ರತಿಯ ರೂಪದಲ್ಲಿ ಸಂಚರಿಸುತ್ತ ಮುಗ್ಗರಿಸುತ್ತ ನಡೆದಿತ್ತು. ಅದೊಂದು ನೆನೆಯಬೇಕಾದ ರೋಚಕ ಕಥೆ. ಗ್ರಂಥದ ಆದಿ - ಅಂತಗಳಲ್ಲಿ ಕಲ್ಹಣನೇ ಖಚಿತವಾದ ದಿನಾಂಕವನ್ನು ಬರೆದಿಟ್ಟಿರುವುದರಿಂದ ಅವನು ಗ್ರಂಥ ಮುಗಿಸಿದ ಆನಂತರ ಅದರ ಗಾತ್ರವನ್ನು ಪೂರ್ತಿ ವಿಕೃತಗೊಳಿಸುವುದು ಸಾಧ್ಯವಾಗಿಲ್ಲ. ಅದಕ್ಕಾಗಿ ಕಲ್ಹಣನಿಗೆ ಕೃತಜ್ಞತೆ ಸಲ್ಲಬೇಕು. ಆದರೆ ಕೆಲವು ಗ್ರಾಂಥಿಕ ಅಪಭ್ರಂಶಗಳು, ಛಂದೋದೋಷಗಳು — ವಿಶೇಷತಃ ಕೊನೆಯ ಉಪಸಂಹಾರದ ಭಾಗದಲ್ಲಿ — ಉಳಿದಿರುವುದರಿಂದ ಅವನು ಪೂರ್ತಿ ಕೃತಿಯನ್ನು ಪುನಃ ಪರಿಶೀಲಿಸಿ ಪರಿಷ್ಕರಿಸಲಿಲ್ಲ ಎಂದು ಕಾಣುತ್ತದೆ. ಕೊನೆಯ 600 ಪದ್ಯಗಳಲ್ಲಿರುವ ಕೆಲವು ಪ್ರಾಯಃ ಯಾವ ಅರ್ಥವನ್ನೂ ಕೊಡದ ವಾಕ್ಯಭಾಗಗಳು ಮತ್ತು ಕೆಲವೆಡೆ ನಡುನಡುವೆ ಗ್ರಂಥಲೋಪಗಳು ಇದನ್ನು ಸ್ಫುಟಪಡಿಸುತ್ತವೆ.

ಇದರ ಕೊರತೆಗಳೇನೇ ಇರಲಿ, ಕಾಶ್ಮೀರದ ಪ್ರಾಚೀನವೂ ಸಮಗ್ರವೂ ಆದ ಒಂದು ಇತಿಹಾಸಗ್ರಂಥ ಆನಂತರದ ಚರಿತ್ರಕಾರರ ಕುತೂಹಲವನ್ನು ಕೆರಳಿಸದೆ ಇರುವುದು ಸಾಧ್ಯವಿಲ್ಲ. ರಾಜತರಂಗಿಣಿ ಮೊದಲು ಭಾಗಶಃ ಅನುವಾದಗೊಂಡದ್ದು ಪರ್ಶಿಯನ್ ಭಾಷೆಯಲ್ಲಿ, ಕಾಶ್ಮೀರದ ಸುಲ್ತಾನ್ ಜೈನ್ - ಉಲ್ - ಅಬಿದಿನ್ (ಕ್ರಿ.ಶ. 1421 - 1472) ನ ಆಣತಿಯ ಮೇರೆಗೆ. ಈ ಅನುವಾದಕ್ಕೆ ಬಹ್ರ್ - ಉಲ್ - ಅಸ್‌ಮಾರ್ (ಕಥೆಗಳ ಕಡಲು) ಎಂದು ಹೆಸರಿಡಲಾಗಿತ್ತು. ಸಮ್ರಾಟ್ ಅಕ್ಬರನು ಕಾಶ್ಮೀರವನ್ನು ಸ್ವಾಧೀನಪಡಿಸಿಕೊಂಡಾಗ ಅವನು ಅಬ್ದುಲ್ ಕಾದಿರ್ ಬದಾವೊನಿಯನ್ನು ಈ ಅನುವಾದವನ್ನು ಪೂರ್ತಿಗೊಳಿಸುವಂತೆ ಆಜ್ಞಾಪಿಸಿದನು. ಇದು ನಡೆದದ್ದು ಕ್ರಿ. ಶ. 1594 ರಲ್ಲಿ. ಅಬುಲ್ ಫಝುಲ್ ತನ್ನ ಆಯನಿ - ಅಕ್‌ಬರಿಯಲ್ಲಿ ಕಾಶ್ಮೀರದ ಪ್ರಾಚೀನ ಇತಿಹಾಸವನ್ನೂ ಸಂಕ್ಷೇಪವಾಗಿ ವಿವರಿಸಿದ್ದಾನೆ. ಈ ವಿವರಣೆಗೆ ಕಲ್ಹಣನೆ ತನಗೆ ಮೂಲ ಎಂದು ಆತ ಹೇಳಿಕೊಂಡಿದ್ದಾನೆ. ಸಮ್ರಾಟ್ ಜಹಾಂಗೀರನ ಆಡಳಿತದ ಅವಧಿಯಲ್ಲಿ ಕ್ರಿ.ಶ. 1617 ರಲ್ಲಿ, ಮಲಿಕ್ ಹೈದರನು ರಾಜತರಂಗಿಣಿಯ ಸಂಗ್ರಹಾನುವಾದವನ್ನು ಪರ್ಶಿಯನ್ ಭಾಷೆಯಲ್ಲಿ ತಂದ. ಡಾ. ಫ್ರಾನ್ಸಿಸ್ ಬೆರ್ನೀರ್ (ಕ್ರಿ.ಶ. 1665) ತನ್ನ "ಪ್ಯಾರಡೈಸ್ ಆಫ್ ದಿ ಇಂಡೀಸ್" (ಭರತ ಖಂಡದ ಸ್ವರ್ಗಧಾಮ) ನಲ್ಲಿ ಹೈದರ್ ಮಲಿಕನ ಈ ರಾಜತರಂಗಿಣೀ ಅನುವಾದವನ್ನು ಉಲ್ಲೇಖಿಸಿದ್ದಾನೆ. ಹಾಗೆಯೆ, ಒಂದು ಶತಕದ ಅನಂತರ ಫಾ. ಟೀಫೆಂಥೇಲರ್ ಈ ಸಂಕ್ಷಿಪ್ತಾನುವಾದವನ್ನು ಬಳಸಿಕೊಂಡದ್ದುಂಟು.

ಯುರೋಪಿನಲ್ಲಿ ಸಂಸ್ಕೃತಾಧ್ಯಯನದ ಆದ್ಯಪ್ರವರ್ತಕರಾದ ಸರ್ ವಿಲಿಯಂ ಜೋನ್ಸ್, 19ನೆಯ ಶತಕದ ತರುಣದಲ್ಲಿ, "ಏಶಿಯಾಟಿಕ್ ರಿಸರ್ಚಸ್" ಎಂಬ ಸಂಪು

ಟದಲ್ಲಿ "ಭಾರತದ ಇತಿಹಾಸವನ್ನು ಕಾಶ್ಮೀರದ ಸಂಸ್ಕೃತ ಕೃತಿಗಳ ಮೂಲಕ ತಿಳಿಯಲು ತಾನು ಯೋಚಿಸುತ್ತಿದ್ದೇನೆ" — ಎಂದು ಹೇಳಿದ್ದಾರೆ. ಆದರೆ ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಸಂಗ್ರಹಿಸುವಷ್ಟು ದೀರ್ಘಕಾಲ ಅವರು ಬದುಕಿ ಉಳಿಯಲಿಲ್ಲ. ರಾಜತರಂಗಿಣಿಯ ಒಂದು ಅಪೂರ್ಣ ಪ್ರತಿ ಕ್ರಿ.ಶ. 1805 ರಲ್ಲಿ ಕೋಲ್‌ಬ್ರೂಕರಿಗೆ ದೊರಕಿತ್ತು. ಆದರೆ ಆ ಹಸ್ತಪ್ರತಿಯ ಬಗೆಗಿನ ಅವರ ಹೇಳಿಕೆ ಕ್ರಿ.ಶ. 1825ರಲ್ಲಷ್ಟೆ ಬೆಳಕಿಗೆ ಬಂತು.

ಅದಕ್ಕಿಂತ ಉತ್ತಮವಾದ ಮೂಲಪಾಠದ ಸಾಮಗ್ರಿ ಮೂರ್‌ಕ್ರಾಫ್ಟ್ ಅವರಿಗೆ ದೊರಕಿತ್ತು. ಮಹಾರಾಜ ರಣಜಿತ್ ಸಿಂಗರ ಅನುಮತಿಯ ಮೇರೆಗೆ ಆತ ಕ್ರಿ.ಶ. 1823 ರಲ್ಲಿ ಶ್ರೀನಗರಕ್ಕೆ ಬಂದಿದ್ದರು. ಅಲ್ಲಿ ಆತ ಹಳೆಯ ಶಾರದಾ ಲಿಪಿಯಿಂದ ದೇವನಾಗರಿ ಲಿಪಿಯ ಒಂದು ಹಸ್ತಪ್ರತಿಯನ್ನು ಸಿದ್ಧಗೊಳಿಸಿದ್ದರು. ಕ್ರಿ.ಶ. 1835 ರಲ್ಲಿ, ಕಲ್ಕತ್ತದಲ್ಲಿ, "ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್" ಎಂಬ ಸಂಸ್ಥೆಯ ಮೂಲಕ ಪ್ರಕಟಗೊಂಡ ರಾಜತರಂಗಿಣಿಯ ಸಂಪುಟಕ್ಕೆ ಈ ಹಸ್ತಪ್ರತಿಯೇ ಮೂಲಾಧಾರವಾಗಿತ್ತು. "ಕಾಶ್ಮೀರದ ಹಸ್ತಪ್ರತಿಗಳಲ್ಲೆಲ್ಲ ಇದು ಮೂಲಕ್ಕೆ ಹೆಚ್ಚು ಹತ್ತಿರವಾದ ಹಸ್ತಪ್ರತಿ" ಎಂದು ಸ್ಟೈನ್ ಇದನ್ನು ವರ್ಣಿಸಿದ್ದಾರೆ. ಆದರೆ ಇದೂ ನಕಲು ತೆಗೆದವರ ಪ್ರಮಾದಗಳಿಂದ ಮುಕ್ತವಾಗಿಲ್ಲ. ಕಾಶ್ಮೀರದ ಸಂಪ್ರದಾಯ ಮತ್ತು ಭೂವಿನ್ಯಾಸಗಳ ಪರಿಚಯವಿರದ ಕಲ್ಕತ್ತಾದ ಪಂಡಿತರಂತು ಮೂಲಪಾಠದ ನಿರ್ಧಾರದಲ್ಲಿ ಅನುಚಿತವಾದ ಸ್ವಾತಂತ್ರ್ಯವನ್ನು ವಹಿಸಿಬಿಟ್ಟಿದ್ದಾರೆ.

ಈ ನಡುವೆ ಡಾ. ಹೊರೇಸ್ ಹೇಮನ್ ವಿಲ್ಸನ್ ಎಂಬವರು, ಇದಕ್ಕಿಂತ ಸುಮಾರು ಹತ್ತು ವರ್ಷಗಳ ಮೊದಲೇ ಇದರ ಜಾಡನ್ನು ಗುರುತಿಸಿ ಒಂದು ಪ್ರಬಂಧ ಬರೆದಿದ್ದರು. ಅದರ ಹೆಸರು: "ಎಸೇ ಆನ್ ದಿ ಹಿಂದೂ ಹಿಸ್ಟರಿ ಅಫ್ ಕಾಶ್ಮೀರ್"[2] (ಕಾಶ್ಮೀರದ ಹಿಂದೂ ಇತಿಹಾಸದ ಮೇಲೊಂದು ಪ್ರಬಂಧ). ಇದು ರಾಜತರಂಗಿಣಿಯ ಚರಿತ್ರಕಾರರಿಗೆ ಮೊದಲ ಬಾರಿಗೆ ಈ ಮಹತ್ವದ ಗ್ರಂಥವನ್ನು ಪರಿಚಯಿಸಿತು. ಈ ಸಂಸ್ಕೃತ ವಿದ್ವಾಂಸ ಮೂಲದ ನೇರ ಅನುವಾದದ ಬದಲು ಅಪೂರ್ಣವಾದ ಮೂರು ದೇವನಾಗರಿ ಹಸ್ತಪ್ರತಿಗಳನ್ನವಲಂಬಿಸಿ ಬುದ್ಧಿವಂತಿಕೆಯಿಂದ ತನ್ನ ಕೆಲಸವನ್ನು ನಿರ್ವಹಿಸಿದ್ದಾರೆ.

ರಾಜತರಂಗಿಣಿಯ ಸಂಸ್ಕೃತ ಮೂಲದ ಸಂಪೂರ್ಣ ಅನುವಾದ ಮೊದಲು ಪ್ರಕಟವಾದದ್ದು ಫ್ರೆಂಚ್ ಭಾಷೆಯಲ್ಲಿ, ಕ್ರಿ.ಶ. 1852 ರಲ್ಲಿ, ಪ್ಯಾರಿಸ್ಸಿನ "ಸೊಸೈಯೆಟಿ ಏಶಿಯಾಟಿಕ್" ನ ಪ್ರತಿಷ್ಠಿತ ಲಾಂಛನದಡಿಯಲ್ಲಿ. ಇದರ ಅನುವಾದಕ ವಿ. ಟ್ರಾಯರ್ ಫ್ರೆಂಚ್ ಪ್ರಜೆ; ಕಲ್ಕತ್ತ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾಗಿದ್ದವರು. ಅವರೂ ಬಳಸಿದ್ದು ಕ್ರಿ.ಶ. 1835 ರಲ್ಲಿ ಕಲ್ಕತ್ತದಲ್ಲಿ ಪ್ರಕಟನಕ್ಕೆ ಉಪಯೋಗಿಸಿದ ಮೂಲಸಾಮಗ್ರಿಯನ್ನೆ.

---

[2] ಏಶಿಯಾಟಿಕ್ ರೀಸರ್ಚಸ್, ಕಲ್ಕತ್ತ, 1825, ಸಂಪುಟ: XV

1835 ರ ಈ ಕಲ್ಕತ್ತ ಪ್ರಕಾಶನವನ್ನೇ ಜೋಗೇಶ್ ಚಂದ್ರ ದತ್ತರು ರಾಜತರಂಗಿಣಿಯ ತನ್ನ ಇಂಗ್ಲಿಷ್ ಅನುವಾದದಲ್ಲಿಯೂ ಬಳಿಸಿಕೊಂಡರು. ಅವರ ಈ ಅನುವಾದದ ಹೆಸರು: "ಕಿಂಗ್ಸ್ ಆಫ್ ಕಾಶ್ಮೀರ್ (ಕಾಶ್ಮೀರದ ರಾಜರು): ಕಲ್ಹಣ ಪಂಡಿತನ ಸಂಸ್ಕೃತ ಕೃತಿ ರಾಜತರಂಗಿಣಿಯ ಅನುವಾದ ರೂಪ". ಇದು ಕಲ್ಕತ್ತದಲ್ಲಿ ಕ್ರಿ.ಶ. 1879 - 1887 ರ ಅವಧಿಯಲ್ಲಿ ಬೆಳಕು ಕಂಡಿತು. ಇದು ಟ್ರಾಯರ್ ಪ್ರಕಾಶನವನ್ನು ಕೆಲ ಮಟ್ಟಿಗೆ ಮೀರಿನಿಂತರೂ ದತ್ತರ ಈ ಅನುವಾದ ಕಲ್ಕತ್ತ ಪ್ರಕಾಶನದ ದೋಷಗಳಿಂದ ಮುಕ್ತವಾಗಿಲ್ಲ. ಅದರ ಜತೆಗೆ ಪ್ರಾಚೀನ ಕಾಶ್ಮೀರದ ಭೂ ವಿನ್ಯಾಸ, ಸಂಪ್ರದಾಯಗಳು ಮತ್ತು ಸಂಘ ಸಂಸ್ಥೆಗಳ ಮೂಲ ಸ್ರೋತವನ್ನು ಗುರುತಿಸುವಲ್ಲಿ ಅನುವಾದಕರ ಅಸಾಮರ್ಥ್ಯವೂ ಸೇರಿಕೊಂಡಿದೆ.

ರಾಜತರಂಗಿಣಿಯ ಬಗೆಗೆ ಪಂಡಿತರ ಆಸಕ್ತಿ ಎಂದೂ ಕುಗ್ಗದೆ ಮುಂದುವರಿಯುತ್ತಲೇ ಇತ್ತು. ಕಾಶ್ಮೀರದಲ್ಲಿ ಡೋಗ್ರಾ ಆಡಳಿತ ಬಂದ ಅನಂತರ ಇಲ್ಲಿಗೆ ಭೇಟಿ ನೀಡಿದ ಎ. ಕನ್ನಿಂಗ್ಹಾಮ್ ರಾಜತರಂಗಿಣಿಯ ಚರಿತ್ರನಿರೂಪಣ ಕ್ರಮದಲ್ಲಿ ಒಳಗೊಂಡ ಅನೇಕ ಸಂಗತಿಗಳನ್ನು ಸ್ಪಷ್ಟಪಡಿಸಿದರು. ಅದಕ್ಕೆ ಸಂಬಂಧಿಸಿದ ನಾಣ್ಯಗಳ ದಾಖಲೆಯನ್ನು ಬಹಿರಂಗಗೊಳಿಸಿದರು. ಕಲ್ಹಣನ ಚಾರಿತ್ರಿಕ ಹೇಳಿಕೆಗಳಲ್ಲಿ ಬಂದ ಕಾಲಮಾನಗಳ ಮೇಲೆ ಹೊಸ ಬೆಳಕು ಚೆಲ್ಲಿದರು. ಅದರ ಆಧಾರದ ಮೇಲೆ ರಾಜತರಂಗಿಣಿಯಲ್ಲಿ ಬಂದ ಎಲ್ಲ ರಾಜರ ಕಾಲಮಾನವನ್ನೂ ಬಹುಮಟ್ಟಿಗೆ ನಿರ್ಧರಿಸಿದರು. ಇದು ಬಹ್ವಂಶ ಕರಾರುವಾಕ್ಕಾದ ನಿರೂಪಣೆ ಎನ್ನಬಹುದು. ಅದೇ ಸಮಯದಲ್ಲಿ ಜನರಲ್ (ಆಗ ಕ್ಯಾಪ್ಟನ್) ಕನ್ನಿಂಗ್ಹಾಮ್ ಕಲ್ಹಣ ಉಲ್ಲೇಖಿಸಿದ ಪ್ರಮುಖ ಘಟನೆಗಳನ್ನು ವಿಮರ್ಶಾತ್ಮಕವಾಗಿ ತೂಗಿ ನಿರ್ಧರಿಸುವಲ್ಲಿ ನಾಣ್ಯಗಳ ದಾಖಲೆಯನ್ನು[3] ಮುಂದಿಟ್ಟರು. ಹಿಂದೂ ಪದ್ಧತಿಯ ವಾಸ್ತುಶಿಲ್ಪಗಳ ಅವಶೇಷಗಳ ಅಧ್ಯಯನ ಈ ಸೈನಿಕ ವಿದ್ವಾಂಸನಿಗೆ ಐತಿಹಾಸಿಕ ಸ್ಥಳಗಳನ್ನು ಬೊಟ್ಟಿಟ್ಟು ಗುರುತಿಸಲು ಸಹಕರಿಸಿತು. ಕಾಶ್ಮೀರದ ಪ್ರಾಚೀನ ಭೂ ವಿನ್ಯಾಸವನ್ನು ನಿರ್ಧರಿಸಲು ಈ ಸ್ಥಳಗಳ ಖಚಿತ ಪರಿಜ್ಞಾನ ಅವಶ್ಯವಿತ್ತು. ಅದನ್ನು ಅವರು ಸಮರ್ಥವಾಗಿ ಮಾಡಿದರು.

ಕಲ್ಹಣನ ಇತಿಹಾಸಗ್ರಂಥ ಮತ್ತೊಮ್ಮೆ ಪಶ್ಚಿಮದ ಗಮನವನ್ನು ಸೆಳೆದಿತ್ತು. ಈ ಬಾರಿ ಅದು ಕಂಡು ಬಂದದ್ದು ಪ್ರೊ. ಲಾಸೆನ್ ಅವರ ಜರ್ಮನ್ ಭಾಷೆಯ ಪ್ರಸಿದ್ಧ ವಿಶ್ವಕೋಶ "ಇಂಡಿಶೆ ಆಲ್ಟರ್‌ತುಮ್‌ಸ್ಕುಂಡೆ" ದಲ್ಲಿ. ಇಲ್ಲಿ ಈ ಕೃತಿಯ ಐತಿಹಾಸಿಕ ಅಂಶಗಳನ್ನು ವಿಸ್ತಾರವಾಗಿ ವಿಶ್ಲೇಷಿಸಲಾಗಿದೆ. ಪ್ರೊಫೆಸರರ ಪಾಂಡಿತ್ಯದ ಎರಕವಿದ್ದರೂ ಈ ವಿಶ್ವಕೋಶೀಯ ವಿಶ್ಲೇಷಣೆಯಲ್ಲಿ ಡಾ. ವಿಲ್ಸನ್ ಮತ್ತು ಜನರಲ್ ಕನ್ನಿಂಗ್ಹಾಮ್ ಇವರು ಸಂಗ್ರಹಿಸಿದ ಐತಿಹಾಸಿಕ ಆಧಾರಗಳಿಗಿಂತ ಹೆಚ್ಚಿನದೇನೂ ಸೇರಿಕೊಂಡಿಲ್ಲ.

---

[3] ಈ ದಾಖಲೆ, ಆನಂತರದ ಸಂಶೋಧನಗಳ ಜತೆಗೆ, ಈ ಶತಮಾನದಲ್ಲಿ ಕೂಡ ಇತಿಹಾಸ-ವಿದ್ವಾಂಸರ ಮತ್ತು ಅನುವಾದಕರ ಪರಿಶ್ರಮಕ್ಕೆ ಬೆಳಕು ನೀಡುತ್ತ ಮುಂದುವರಿದಿದೆ.

ಕಾಶ್ಮೀರದ ಪ್ರಾಚೀನ ಭೂಗೋಲದ ವಾಸ್ತವಸ್ಥಿತಿಯನ್ನು ಪುನಾರೂಪಿಸುವ ವಿಧಾನವನ್ನು ಸಮರ್ಪಕವಾಗಿ ತೋರಿದ ಕೀರ್ತಿ (ಆಗಣ ಮುಂಬಯಿ ಶಿಕ್ಷಣವಿಭಾಗದ) ಪ್ರೊಫೆಸರ್ ಜಿ. ಬ್ಯೂಲರ್ ಅವರಿಗೆ ಸಲ್ಲಬೇಕು. ಅವರು ಕ್ರಿ.ಶ. 1875 ರಲ್ಲಿ ಕಾಶ್ಮೀರಕ್ಕೆ ಭೇಟಿನೀಡಿದರು. ಕಾಶ್ಮೀರದ ಭೌಗೋಲಿಕ ಸ್ಥಿತಿಯ ಬಗೆಗೆ ತನ್ನ ಹೆಸರಾಂತ 'ವರದಿ' ಯಲ್ಲಿ ಒತ್ತು ನೀಡಿ ಬರೆದರು. ಇವರ ಈ ವರದಿ ಕಲ್ಹಣನ ಇತಿಹಾಸ ನಿರೂಪಣೆಯ ಸಮಗ್ರವಾದ ತಿಳಿವಳಿಕೆಗೆ ಒಂದು ಅನಿವಾರ್ಯವಾದ ಪೂರಕ. ಒಟ್ಟಿನಲ್ಲಿ ಈ ಪುರಾತತ್ವಜ್ಞ, ವಿದ್ವಾಂಸನ ಕಾಶ್ಮೀರ ಪ್ರವಾಸ ಸಂಸ್ಕೃತಭಾಷಾ ಶಾಸ್ತ್ರಕ್ಕೆ ಒಂದು ಚಿರಸ್ಮರಣೀಯ ಘಟನೆಯಾಯಿತು. ರಾಜತರಂಗಿಣಿಯ ವಿಷಯಗಳನ್ನು ಸ್ಫುಟಪಡಿಸಲು ಪ್ರೊ. ಬ್ಯೂಲರ್ ಸಿದ್ಧವಾದ ಸಾಮಗ್ರಿಗಳನ್ನೇ ಮುಂದಿಟ್ಟರು. ಉದಾ: ನೀಲಮತ ಪುರಾಣ, ಕಲ್ಹಣೋತ್ತರ ಸಂಸ್ಕೃತೇತಿಹಾಸ ಗ್ರಂಥಗಳು ಮತ್ತು ಇತರ ಕಾಶ್ಮೀರಿಕೃತಿಗಳು. ದೇವನಾಗರಿ ಹಸ್ತಪ್ರತಿಗಳಿಂದ ಕಾಶ್ಮೀರಿ ಹಸ್ತಪ್ರತಿಗಳು ಸರ್ವಾತ್ಮನಾ ಹೆಚ್ಚು ಶುದ್ಧವಾದವುಗಳು ಎನ್ನುವುದನ್ನೂ ಅವರು ತೋರಿಸಿಕೊಟ್ಟರು. ಆ ಮೂಲಕ ರಾಜತರಂಗಿಣಿಯ ಮೂಲಪಾಠದ ಪ್ರಾಮಾಣಿಕ ಶಾಸ್ತ್ರೀಯ ಪುನಾರಚನೆಗೆ ದಾರಿ ತೆರೆದು ತೋರಿದರು. ಕಾಶ್ಮೀರದ ಮತ್ತು ಭಾರತದ ಇತರ ಭಾಗದ ಚರಿತ್ರೆಯನ್ನು ನಿರ್ಧರಿಸುವಲ್ಲಿ ಕಲ್ಹಣನ ಈ ಕೃತಿಯನ್ನು ಹೇಗೆ ಬಳಸಬೇಕು ಎನ್ನುವಲ್ಲಿ ಮುಂದಿನ ಇತಿಹಾಸಕಾರರಿಗೆ ಇವರ ಪ್ರಸಿದ್ಧವಾದ ಈ ವರದಿ ಒಂದು ಶಾಸ್ತ್ರೀಯವಾದ ರೂಪರೇಖೆಯನ್ನು ಒದಗಿಸಿತು. ಪ್ರೊ. ಬ್ಯೂಲರ್‌ರಿಂದ ಸ್ಫೂರ್ತಿಪಡೆದ ಡಾ. ಇ.ಹುಲ್‌ಝ್ಕ್ ಎಂಬವರು ಕ್ರಿ.ಶ. 1885 ರಲ್ಲಿ, ರಾಜತರಂಗಿಣಿಯಮೇಲೆ ವಿಮರ್ಶಾತ್ಮಕ ಉಪಯುಕ್ತ ಲೇಖನಗಳನ್ನು ಬರೆದರು. ಇವು "ಇಂಡಿಯನ್ ಆಂಟಿಕ್ವರಿ" (ಸಂಪುಟ: 18 ಮತ್ತು 19) ಯಲ್ಲಿ ಪ್ರಕಟಗೊಂಡವು. 19 ನೆಯ ಶತಕದ ಕೊನೆಯ ದಶಕದ ತನಕವೂ ಐರೋಪ್ಯ ಮತ್ತು ಭಾರತೀಯ ಸಂಸ್ಕೃತವಿದ್ವಾಂಸರಿಂದ ರಾಜತರಂಗಿಣಿಯ ಕೆಲವು ವಿಶಿಷ್ಟವಾದ ಪ್ರಸಂಗಗಳು, ಭಾಗಗಳ ಬಗೆಗೆ ಈ ಮಾದರಿಯ ಹೊಸ ಅನ್ವೇಷಣೆಗಳು ನಡೆದವು. ಈ ಸಂದರ್ಭದಲ್ಲಿ ಮತ್ತೊಬ್ಬ ಹಿರಿಯ ವಿದ್ವಾಂಸ ಎಂ.ಎ. ಸ್ಟೈನ್ ಎಂಬವರು ಪುರಾತತ್ವದ ಅನ್ವೇಷಣಕ್ಕಾಗಿ ಹಲವು ಬಾರಿ ಕಾಶ್ಮೀರದ ಪ್ರವಾಸ ಕೈಗೊಂಡರು. ಆಗ ಕಾಶ್ಮೀರಿ ವಿದ್ವಾಂಸರಾದ ಪಂಡಿತ ರಾಜಾನಕ ರತ್ನಕಾಂತ ಎಂಬವರು ಸುಮಾರಾಗಿ 17 ನೆಯ ಶತಕದ 6 - 7 ನೆಯ ದಶಕದಲ್ಲಿ ಪ್ರತಿ ತೆಗೆದ ರಾಜ ತರಂಗಿಣಿಯ ಒಂದು ಹಸ್ತಪ್ರತಿಯನ್ನು ಪತ್ತೆಹಚ್ಚಿದರು. ಹಳೆಯ ವಿದ್ವಾಂಸರು ಕೈಯಾಡಿಸಿದ ಆ ಪ್ರತಿಯಲ್ಲಿ ಮಹತ್ವದ ಪೂರಕಟಿಪ್ಪಣಿಗಳು, ತಿದ್ದುಪಡಿಗಳು ದೊರಕಿದವು. ಶ್ರೀನಗರದ ಪಂಡಿತ ಗೋವಿಂದ ಕೌಲರ ಸಹಾಯದಿಂದ ಸ್ಟೈನ್ ಹಳೆಯ ಸಂಸ್ಕೃತಪಾಠಗಳನ್ನು ಅಭ್ಯಾಸ ಮಾಡಿದರು; ಭಾರತದ ಇತರ ಭಾಗಗಳಿಂದ ಈ ಕಣಿವೆಯನ್ನು ಬೇರ್ಪಡಿಸಿ ಬೆಟ್ಟಗಳ ಮರೆಯಾಚೆ ಬೆಳೆದ ಕಾಶ್ಮೀರದ ವಿಶಿಷ್ಟ ಸಂಪ್ರದಾಯಗಳನ್ನು ಅಧ್ಯಯನಮಾಡಿದರು. ಇದರಿಂದ ಕಲ್ಹಣನ ಕಥನವನ್ನು ಯಥಾವತ್ತಾಗಿ ಗ್ರಹಿಸುವುದು ಸಾಧ್ಯವಾಯಿತು. ಅವರು ಸಂಪಾದಿಸಿದ ಸಂಸ್ಕೃತಮೂಲ ಕ್ರಿ.ಶ.1892 ರಲ್ಲಿ ಕಾಶ್ಮೀರ ದರ್ಬಾರಿನ ಆಶ್ರಯದಲ್ಲಿ ಮುಂಬಯಿಯ 'ಎಜುಕೇಶನ್

ಸೊಸೈಟಿ ಪ್ರೆಸ್' ಮೂಲಕ ಪ್ರಕಟಗೊಂಡಿತು.

ಸುಮಾರಾಗಿ ಇದೇ ಸಮಯದಲ್ಲಿ ಕಾಶ್ಮೀರದವರೇ ಆದ ಪಂಡಿತ ದುರ್ಗಾಪ್ರಸಾದರೂ ಈ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದರು. ಮುಂಬಯಿಯ ನಿರ್ಣಯಸಾಗರ್ ಪ್ರೆಸ್ ಇದನ್ನು ಪ್ರಕಾಶಪಡಿಸಿತು. ಅನಂತರ, 1900 ರಲ್ಲಿ, ಸ್ಟೈನ್ ರಾಜತರಂಗಿಣಿಯನ್ನು ಇಂಗ್ಲಿಷ್‌ನಲ್ಲಿ ಗದ್ಯರೂಪದಲ್ಲಿ ಅನುವಾದಿಸಿದರು. ಅವರು ಪ್ರೊಫೆಸರ್ ಬ್ಯೂಲರ್ ಅವರ ಮಾದರಿ ಅನುವಾದವನ್ನೇ ಅನುಸರಿಸಿದರು. ಜತೆಗೆ "ಭಾಷಾಂತರಕಾರನಿಗೆ ಮೂಲದ ಭಾವವನ್ನು ಸರಳವಾಗಿ ನಿರೂಪಿಸಲು ಸಾಧ್ಯಾವಾಗುವಂಥ, ಮಾತ್ರವಲ್ಲ, ತನ್ನ ತರ್ಜುಮೆಗೆ ಹಿನ್ನೆಲೆಯಾಗಿರುವ ರಚನಾಬಂಧ ಅಥವಾ ಇನ್ನಿತರ ವಿವರಣೆಗಳ ಉದ್ದೇಶಗಳನ್ನೂ ಅಪ್ರತ್ಯಕ್ಷವಾಗಿ ಸೂಚಿಸಲು ಸಾಧ್ಯವಾಗುವಂಥ ಪದ್ಧತಿಯನ್ನು" ಬಳಸಿದರು. ಟಿಪ್ಪಣಿಗಳಿಂದ ಪುಷ್ಟವಾದ, ಚಿರಸ್ಥಾಯಿಯಾದ ಈ ಕೃತಿ (ಎರಡು ಸಂಪುಟಗಳಲ್ಲಿ) ರಾಜತರಂಗಿಣಿಯ ತಿರುಳನ್ನು ಮೊದಲಬಾರಿಗೆ ಸಾಕಷ್ಟು ಬಯಲುಮಾಡಿತು.

ಆನಂತರದ ಪ್ರಮುಖ ಅನುವಾದ, ಈ ಮೊದಲೇ ಸೂಚಿಸಿದಂತೆ, ಆರ್. ಎಸ್. ಪಂಡಿತರದ್ದು. ಅವರು ಸಾಮಾನ್ಯವಾಗಿ ಸ್ಟೈನ್ ಅವರ ಸಂಸ್ಕೃತ ಮೂಲ ಪಾಠವನ್ನೇ ಅನುಸರಿಸಿದ್ದಾರೆ. ಜತೆಗೆ ಪಂಡಿತ ದುರ್ಗಾಪ್ರಸಾದರ ವಿಮರ್ಶಾತ್ಮಕವಾದ ಸಂಪುಟದ ಉಲ್ಲೇಖಗಳನ್ನು ಹೇರಳವಾಗಿ ಉಪಯೋಗಿಸಿಕೊಂಡಿದ್ದಾರೆ; ಏನಿದ್ದರೂ, ಆರ್.ಎಸ್. ಪಂಡಿತರ ಅಭಿಪ್ರಾಯದಂತೆ "ಸ್ಟೈನರ ಅನುವಾದದ ರೀತಿ ಮೂಲವನ್ನೇ ಓದಿ ಅರಿತುಕೊಳ್ಳಲಾಗದ ಓದುಗನಿಗೆ ಮೂಲದ ಕಾವ್ಯಾಂಶದ ಮಟ್ಟಿಗೆ ಸರಿಯಾದ ಅರಿವನ್ನು ಒದಗಿಸುವುದಿಲ್ಲ." ತನ್ನ ಅನುವಾದದ ಬಗೆಗೆ ಆರ್.ಎಸ್. ಪಂಡಿತರು ಹೀಗೆ ಹೇಳುತ್ತಾರೆ: "ಮೂಲದಲ್ಲಿ ಇರುವ ಲುಪ್ತಾಂಶಗಳನ್ನು ಬಿಟ್ಟರೆ ಈ ಅನುವಾದ ಮೂಲದ ಯಾವ ಭಾಗವನ್ನೂ ಕೈಬಿಡದ ಸಮಗ್ರ ಅನುವಾದ."

ಆರ್.ಎಸ್. ಪಂಡಿತರ ಅನುವಾದಕ್ಕೆ ಜವಾಹರ್‌ಲಾಲ್ ನೆಹರೂ ಬರೆದ ಮುನ್ನುಡಿಯಿಂದ ಕೆಲವಂಶವನ್ನು ನಾವು ಈ ಮೊದಲೇ ಉದ್ಧರಿಸಿದ್ದೇವೆ. ಇದನ್ನು ಬರೆದದ್ದು 1934ರ ಜೂನ್ ತಿಂಗಳಲ್ಲಿ, ಡೆಹ್ರಾಡೂನ್ ಸೆರೆಮನೆಯಲ್ಲಿ. ಎಸ್.ಪಿ. ಪಂಡಿತರ (ಅಗ್ಗೆ "ಸುಮಾರು ಅರ್ಧಶತಕದ ಕೆಳಗೆ" ನೀಡಿದ್ದ) ಒಂದಿ ಪ್ರತಿಕ್ರಿಯೆಯನ್ನು ನೆಹರೂ ಉಲ್ಲೇಖಿಸಿದ್ದಾರೆ: "ರಾಜತರಂಗಿಣಿಯು ಇತಿಹಾಸ ಎಂಬ ಪರಿಗಣನೆಗೆ ಅರ್ಹವಾದ, ಭಾರತದಲ್ಲಿ ಈ ತನಕ ದೊರಕಿದ 'ಏಕಮಾತ್ರ ಕೃತಿ'. ಮತ್ತೆ ಅವರು ತಮ್ಮ ಅಭಿಪ್ರಾಯಗಳನ್ನು ಹೀಗೆ ಸೇರಿಸುತ್ತಾರೆ: "ಪ್ರಾಚೀನಭಾರತದ ಇತಿಹಾಸ - ಸಂಸ್ಕೃತಿಗಳ ಜಿಜ್ಞಾಸುವಾದ ಪ್ರತಿಯೊಬ್ಬನಿಗೂ ಇಂಥ ಗ್ರಂಥ ಅವಶ್ಯವಾಗಿ ಮಹತ್ವದ್ದಾಗಿರಬೇಕು." ಆರ್.ಎಸ್. ಪಂಡಿತರ ಅನುವಾದದ ಬಗ್ಗೆ ಅವರು ಹೀಗೆ ಹೇಳುತ್ತಾರೆ: "ಈ ಅನುವಾದವು ಪದಶಃ ಭಾಷಾಂತರದ ದಾರಿಯನ್ನೆ ಆಯ್ದುಕೊಂಡಿದೆ. ಕೆಲವೊಮ್ಮೆ ಇದರಿಂದ ಭಾಷೆಯ ಚೆಲುವಿಗೆ ಭಂಗ ಬಂದದ್ದುಂಟು. ಆದರೆ ಅವರ ಆಯ್ಕೆ ಸರಿಯಾದದ್ದೆಂದೇ ನನ್ನ ಭಾವನೆ. ಏಕೆಂದರೆ ಇಂಥ ಒಂದು ಕೃತಿ

ಯಲ್ಲಿ ನಿಷ್ಕೃಷ್ಟತೆ ತುಂಬ ಅವಶ್ಯಕ". "ಕಾಶ್ಮೀರದ ಇತಿಹಾಸದಲ್ಲಿ, ವೈದಿಕಯುಗ — ಬೌದ್ಧಯುಗ ಮತ್ತು ಬ್ರಾಹ್ಮಣ ಸಂಸ್ಕೃತಿಯ ಯುಗಗಳಲ್ಲಿ ನಡೆದ ಗಮನಾರ್ಹವಾದ ಕೊಡುಗೆಗಳನ್ನು ಬೆಳಕಿಗೆ ತರುವ"[4] ಮತ್ತು ಸ್ಟೈನರ ಟಿಪ್ಪಣಿ — ವಿವರಣೆಗಳಿಂದ ತಿಳಿವಳಿಕೆಯಲ್ಲು ಮೇಲುಗೈಯಾಗುವಂಥ ಟಿಪ್ಪಣಿ — ಪರಿಶಿಷ್ಟಗಳಿಂದ ಪರಿಪುಷ್ಟವಾದ ಈ ಅನುವಾದ ತನ್ನ ಹಿರಿಮೆಯನ್ನು ಉಳಿಸಿಕೊಂಡಿದೆ ಮತ್ತು ಕಾಲದ ಪರೀಕ್ಷೆಯಲ್ಲಿ ಗೆದ್ದು ಬಂದಿದೆ.

ಉಳಿದಿರುವ ಈ ಒಂದೇ ಕೃತಿಯಿಂದ ಭಾರತೀಯ ಸಾಹಿತ್ಯನಿರ್ಮಾಪಕರಲ್ಲಿ ಕಲ್ಹಣನ ಸ್ಥಾನ ಭದ್ರವಾಗಿದೆ. ಇದೊಂದು ಸಾಹಿತ್ಯಕ ಭೌಮಕೃತಿಯೂ ಹೌದು; ಐತಿಹಾಸಿಕ ದಾಖಲೆಯೂ ಹೌದು. ಅವನ ಜೀವನ ಮತ್ತು ಸಾಧನೆಯ ಬಗೆಗೆ ಹೆಚ್ಚೇನೂ ತಿಳಿದಿಲ್ಲ; ಸಿಗುವ ಮೂಲಗಳಿಂದ ಅವನ ಕಾಲದ ಬಗೆಗೆ, ಜೀವಿತದ ಬಗೆಗೆ ಇಣುಕುನೋಟ ಬೀರಲು, ಭಾರತೀಯ ಸಾಹಿತ್ಯಕ್ಕೆ ಅವನಿತ್ತ ಕೊಡುಗೆಯ ಮಹತ್ವವನ್ನು ಅಳೆಯಲು ಮುಂದಿನ ಪುಟಗಳಲ್ಲಿ ಪ್ರಯತ್ನಿಸಲಾಗಿದೆ.

---

[4] ಸೂಫಿ, ಜಿ.ಎಂ.ಡಿ. ಕಾಶ್ಮೀರ್, ಮುನ್ನುಡಿ

ಕಲ್ಹಣನ ಮನೆತನ

ಕಲ್ಹಣನ ಇತಿವೃತ್ತದ ವಿವರ ದೊರಕಿದ್ದು ಅತ್ಯಲ್ಪ. ಕಲ್ಹಣನೇ ಏನು? ಅವನ ಸಮಕಾಲೀನರು, ಅವನ ಪೂರ್ವಿಕರು ಅನೇಕ ಲೇಖಕರುಂಟು. ಅವರ ಬಗೆಗಾದರೂ ಏನು ಮಾಹಿತಿ ದೊರಕಿದೆ! ಕಾಶ್ಮೀರದ ಇತಿಹಾಸವನ್ನು ನಮಗಾಗಿ ಬರೆದಿಟ್ಟ ಕವಿ — ಇತಿಹಾಸಕಾರ: ಕಲ್ಹಣ. ಆದರೆ ಅವನ ಇತಿಹಾಸದ ಬಗೆಗೆ ಮಾತ್ರ ಯಾವ ದಾಖಲೆಯೂ ಇಲ್ಲ. ಎಂಥ ಶೋಚನೀಯ ವಿಪರ್ಯಾಸ! ಉಳಿದಿರುವ ಒಂದೇ ದಾರಿ: ಅವನ ಬರವಣಿಗೆಯನ್ನೆ ಸೂಕ್ಷ್ಮವಾಗಿ ಪರೀಕ್ಷಿಸುವುದು. ಅದರಿಂದ ಅವನ ಬದುಕಿನ ಕೆಲ ಘಟನೆಗಳ ಎಳೆಯನ್ನು ಗುರುತಿಸುವುದು ಸಾಧ್ಯ. ಕಾಳಿದಾಸನಂಥವರ ಬಗೆಗೆ ಕೂಡ ವಿರೋಧಾಭಾಸದ ಕಟ್ಟುಕಥೆಗಳಿಂದಲೆ ತೃಪ್ತಿಪಟ್ಟವರು ನಾವು. ಸಂತೋಷದ ಸಂಗತಿ ಎಂದರೆ ಕಲ್ಹಣನ ಬಗೆಗೆ ಅದಕ್ಕಿಂತ ಹೆಚ್ಚಿನ ಮಾಹಿತಿಗಳು ದೊರೆತಿವೆ.

ರಾಜತರಂಗಿಣಿಯ ಎಂಟು ಪರಿಚ್ಛೇದ (ತರಂಗ) ಗಳ ಕೊನೆಯಲ್ಲಿ ಉಪಸಂಹಾರವಾಕ್ಯದಲ್ಲಿ "ಕಲ್ಹಣ" ಎಂಬ ಹೆಸರು ಉಲ್ಲೇಖಗೊಂಡಿದೆ. ಪ್ರತಿಯೊಂದು ಪರಿಚ್ಛೇದದ ಕೊನೆಯಲ್ಲು ಹೀಗೆ ಬರೆಯಲಾಗಿದೆ: "ಇದು ಕಾಶ್ಮೀರದ ಹಿರಿಯ ಮಂತ್ರಿ, ಘನತೆವೆತ್ತ ಜನನಾಯಕ ಚಂಪಕನ ಮಗನಾದ ಕಲ್ಹಣನ ಕೃತಿ". ಕಲ್ಹಣನ ತಂದೆ ಚಂಪಕ ಕಾಶ್ಮೀರದ ಒಬ್ಬ ಹಿರಿಯ ವ್ಯಕ್ತಿ. ಅವನು ಕಾಶ್ಮೀರದ 'ದ್ವಾರಪತಿ' ಅರ್ಥಾತ್ ಕಾಶ್ಮೀರದ ಗಡಿಯ ರಕ್ಷಣೆಯ ಹೊಣೆಹೊತ್ತ ಸೇನಾನಾಯಕನಾಗಿದ್ದ. ಅದು ದುರ್ದೈವಿ ರಾಜ ಹರ್ಷನ ಕಾಲದ ಮಾತು.

ಕಲ್ಹಣ ತನ್ನ ಗ್ರಂಥದ ಪ್ರಸ್ತಾವನೆಯನ್ನು ಕ್ರಿ.ಶ. 1148 - 49 ರಲ್ಲಿ ಬರೆದ. ಮುಂದಿನ ವರ್ಷ ಕೃತಿಯನ್ನು ಪೂರ್ಣಗೊಳಿಸಿದ. ಈ ಕಾಲಮಾನದ ಹಿನ್ನೆಲೆಯಲ್ಲಿ ಗಮನಿಸಬೇಕಾದ ಇನ್ನೊಂದು ಮಾತು: ರಾಜಾಹರ್ಷನ ಆಡಳಿತದ ಒಬ್ಬ ಪ್ರಮುಖ ಅಧಿಕಾರಿಯಾಗಿ ಚಂಪಕನ ಉಲ್ಲೇಖ ಈ ಗ್ರಂಥದಲ್ಲಿ ಹಲವು ಬಾರಿ ಬಂದಿದೆ. ಇದರಿಂದ ಚಂಪಕ—ಕಲ್ಹಣನ ಪಿತಾ—ಪುತ್ರ ಸಂಬಂಧದ ಗಾಢತೆಯನ್ನು ಅರಿಯಬಹುದು: ಅವನು ತನ್ನ ತಂದೆಯನ್ನು 'ದ್ವಾರಪತಿ' ಎಂದು ತುಂಬ ಗೌರವದಿಂದ ಉಲ್ಲೇಖಿಸುತ್ತಾನೆ; ಗಡಿನಾಡಿನಲ್ಲಿ ತಲೆ ಎತ್ತಿ ಕಿರುಕುಳ ಕೊಡತೊಡಗಿದ ದರದನನ್ನು ಮಣಿಸುವಲ್ಲಿ ತನ್ನ ತಂದೆಯ ಪಾತ್ರವನ್ನು ಬಾಯಿತುಂಬ ಪ್ರಶಂಸಿಸುತ್ತಾನೆ; ಹರ್ಷನ ದುರಂತ ಮರಣದ ತನಕವೂ ಆತನಿಗೆ ವಿಧೇಯನಾಗಿದ್ದು ರಾಜ್ಯಸೂತ್ರವನ್ನು ನಡೆಸಿದ ತನ್ನ ತಂದೆಯ ವ್ಯಕ್ತಿತ್ವವನ್ನು ಅಭಿಮಾನದಿಂದ ಹೇಳಿಕೊಳ್ಳುತ್ತಾನೆ. ಹರ್ಷ ದುರಂತಕ್ಕೊಳಗಾದಾಗ ಚಂಪಕ ರಾಜ್ಯದಲ್ಲಿರಲಿಲ್ಲ; ಯಾವುದೋ ಒಂದು ದಂಡಯಾತ್ರೆಗಾಗಿ

ರಾಜ ಅವನನ್ನು ಬೇರೆಡೆಗೆ ಕಳಿಸಿದ್ದ; ಚಂಪಕ ಇರದ್ದರಿಂದ ರಾಜ ಶತ್ರುಗಳ ತಂತ್ರಕ್ಕೆ ಬಲಿಯಾದ ಎನ್ನುವ ಮಾತನ್ನು ಉಲ್ಲೇಖಿಸಿದ್ದಾನೆ.

ಚಂಪಕ ಮತ್ತು ದುರ್ದೈವಿ ರಾಜ ಹರ್ಷನ ನಡುವೆ ನಡೆದ ಮಾತುಕತೆಗಳು, ಮುಂದೆ ರಾಜ ತನ್ನ ರಾಜಧಾನಿಯಿಂದ ಬಲಾತ್ಕಾರವಾಗಿ ಓಡಿಹೋಗಬೇಕಾಗಿ ಬಂದ ಪ್ರಸಂಗ, ರಾಜನ ದುರಂತ ಮರಣಕ್ಕೆ ಕಾರಣವಾದ ಇತರ ಬೆಳವಣಿಗೆಗಳು — ಈ ಎಲ್ಲ ಘಟನೆಗಳನ್ನು ಆತ ತುಂಬ ವಸ್ತುನಿಷ್ಠವಾಗಿ ನಿರೂಪಿಸಿದ ಬಗೆಯಿಂದ ಈ ಪಿತಾ-ಪುತ್ರ ಸಂಬಂಧದ ಆತ್ಮೀಯತೆ ಸ್ಫುಟವಾಗುತ್ತದೆ. ಆದರೆ ಚಂಪಕನಿಗೆ ತನ್ನ ದೊರೆಯ ಮೇಲಿದ್ದ ಸ್ವಾಮಿನಿಷ್ಠೆಯಲ್ಲಿ ಮಾತ್ರ ಕಲ್ಹಣ ಪಾಲುಗೊಂಡಂತೆ ಕಾಣುವುದಿಲ್ಲ. ಈ ಚಂಪಕ ಕ್ರಿ.ಶ. 1136 ರಲ್ಲಿ ಬದುಕಿದ್ದಂತೆ ತಿಳಿದು ಬರುತ್ತದೆ (ತ. VIII 2365).

ಕಲ್ಹಣನ ರಾಜತರಂಗಿಣಿಯಲ್ಲಿ ಆತನ ಇನ್ನೊಬ್ಬ ಸಮೀಪದ ಸಂಬಂಧಿಯ ಉಲ್ಲೇಖವೂ ಇದೆ. ಅವನೇ ಚಂಪಕನ ತಮ್ಮ ಕನಕ. ಅವನೂ ಹರ್ಷನ ಒಲವು ಸಂಪಾದಿಸಿದ್ದ. ಹರ್ಷನಿಗೆ ಸಂಗೀತವೆಂದರೆ ಪಂಚಪ್ರಾಣ ಎಂದು ಅವನಿಗೆ ಗೊತ್ತು. ಅದಕೆಂದೆ ಅವನು ಅವನಿಂದಲೆ ಸಂಗೀತಪಾಠ ಹೇಳಿಸಿಕೊಂಡು ಹರ್ಷನ ಸಮೀಪ ವರ್ತಿಯಾಗಿದ್ದ. ಕನಕ ರಾಜನಿಂದ ಒಂದು ಲಕ್ಷ ಚಿನ್ನದ ನಾಣ್ಯಗಳ ಅಪೂರ್ವ ಬಹುಮಾನವನ್ನೂ ಪಡೆದಿದ್ದ. ಈ ಔದಾರ್ಯದ ಕೊಡುಗೆಯೇ ಕಲ್ಹಣನ ಮನೆತನದ ಎತ್ತರವನ್ನು ಸೂಚಿಸುತ್ತದೆ. ಕಲ್ಹಣನ ಬರವಣಿಗೆಯಿಂದಲೆ ಊಹಿಸಬಹುದಾದ ಇನ್ನೊಂದು ತೀರ್ಮಾನ: ಕಲ್ಹಣ ತುತ್ತಿಗಾಗಿ ಎಂದೂ ಚಾಕರಿಗಿಳಿಯಲಿಲ್ಲ. ಅವನು ಬದುಕಿನಲ್ಲಿ ಯಾವ ಕೊರತೆಯನ್ನೂ ಕಂಡವನಲ್ಲ. ಅವನದು ಸಮೃದ್ಧ ಜೀವನ.

ಕಲ್ಹಣನ ನಿರೂಪಣೆಯಂತೆ — ಕನಕ ದೊರೆ ನೀಡಿದ ರಾಜಾಶ್ರಯವನ್ನು ಮರೆಯದೆ ಕೊನೆಯ ತನಕವೂ ಅರಮನೆಗೆ ವಿಧೇಯನಾಗಿಯೆ ನಡೆದುಕೊಂಡ; ರಾಜ ಸತ್ತಮೇಲೆ ವಾರಾಣಸಿಗೆ ತೆರಳಿ ಅಲ್ಲಿಯೆ ನೆಲಸಿದ. ಅಲ್ಲಿ ತನ್ನ ಕೊನೆಯ ದಿನಗಳನ್ನು ಆಧ್ಯಾತ್ಮದ ಚಿಂತನದಲ್ಲಿ ಶಾಂತಿಯಿಂದ ಕಳೆದ.

ಇನ್ನು ಚಂಪಕನ ಬಗೆಗೆ: ಯಾವುದೇ ಪೂರ್ವಪೀಠಿಕೆಯಿಲ್ಲದೆ ಇದ್ದಕಿದ್ದಂತೆ ಕಲ್ಹಣ ಚಂಪಕನನ್ನು ಥಟ್ಟನೆ ತನ್ನ ಗ್ರಂಥದಲ್ಲಿ ಉಲ್ಲೇಖಿಸುತ್ತಾನೆ (vii, 954) ಇದರಿಂದ ಅವನಿಗೂ ತಂದೆಗೂ ಇರುವ ಆತ್ಮೀಯತೆ ವ್ಯಕ್ತವಾಗುತ್ತದೆ, ಮಾತ್ರವಲ್ಲ: ಚಂಪಕನಂಥ ಪ್ರಸಿದ್ಧ ವ್ಯಕ್ತಿತ್ವದ ಬಗೆಗೆ ವಿಸ್ತಾರದ ಪೀಠಿಕೆಯನ್ನು ಬೆಳೆಸಿ ಸಮಕಾಲೀನರಿಗೆ ತನ್ನ ತಂದೆಯನ್ನು ಪರಿಚಯಿಸುವುದು ಅನಪೇಕ್ಷಿತವಾಗಿತ್ತು. ಈ ನಿಲುವು ಅವನ ವಸ್ತುನಿಷ್ಠ ಪ್ರಾಮಾಣಿಕತೆಗೆ ಒಂದು ಸಾಕ್ಷಿ.

ಅವನ ತಂದೆಯ ಬಗೆಗಿನ ಒಂದು ಪದ್ಯ ಹೀಗಿದೆ: "ಚಂಪಕ ವರ್ಷದಲ್ಲಿ ಒಂದು ಸಪ್ತಾಹವನ್ನು ನಂದಿಕ್ಷೇತ್ರದಲ್ಲಿ ಕಳೆಯುತ್ತಿದ್ದ, ಮತ್ತು ಇಡಿಯ ವರ್ಷದುದ್ದಕ್ಕೂ

ಗಳಿಸಿದ ಸಂಪತ್ತನ್ನು ಅಲ್ಲಿ ಸಾರ್ಥಕಗೊಳಿಸುತ್ತಿದ್ದ." ಅಲ್ಲಿನ ತೀರ್ಥಗಳನ್ನೆಲ್ಲ ಕಲ್ಹಣ ಕಣ್ಣಿಗೆ ಕಟ್ಟುವಂತೆ ತನ್ನ ರಾಜತರಂಗಿಣಿಯಲ್ಲಿ ಬಣ್ಣಿಸಿದ್ದಾನೆ. ಇದರಿಂದ ಸ್ಫುಟವಾಗುವ ಮಾತು ಇದು: ನಂದಿಕ್ಷೇತ್ರದ ತೀರ್ಥಗಳ ಅಚ್ಚಿನ್ನ ಭಕ್ತನಾದ ತಂದೆಯ ಜತೆಗೆ ಕಲ್ಹಣನೂ ಬಾಲ್ಯದಲ್ಲಿ ಆ ಪುಣ್ಯಸ್ಥಳಗಳಿಗೆ ಸಂದರ್ಶನವಿತ್ತಿರಬೇಕು. ಈ ಎಲ್ಲ ವಿವರಣೆಯಿಂದ ಒಂದು ಮಾತು ನಿಶ್ಚಿತ: ಕಲ್ಹಣನದು ಬ್ರಾಹ್ಮಣ ಮನೆತನ. ಸಂಸ್ಕೃತ ಭಾಷೆಯ ಅಧ್ಯಯನ ಆಗಣ (ಬ್ರಾಹ್ಮಣ) ಪಂಡಿತರ ಹೆಗ್ಗಳಿಕೆಯಾಗಿತ್ತು. ಕಲ್ಹಣನ ಸಂಸ್ಕೃತ ಪಾಂಡಿತ್ಯದ ಆಳ — ಅಗಲಗಳನ್ನು ಅವನ ರಾಜತರಂಗಿಣಿಯೆ ಕಣಿ ಹೇಳುತ್ತದೆ. ಅವನು ಬ್ರಾಹ್ಮಣ ಮನೆತನದವನು ಎನ್ನುವುದಕ್ಕೆ ಬೇಕಿದ್ದರೆ ಇದೂ ಒಂದು ಪುರಾವೆಯಾಗಬಲ್ಲುದು (ಮೂರು ಶತಕಗಳ ಅನಂತರದ ಜೋಮರಾಜ ಕಲ್ಹಣನನು 'ದ್ವಿಜ' ಎಂದೇ ಕರೆದಿದ್ದಾನೆ).

ಕಲ್ಹಣನ ಹುಟ್ಟೂರಿನ ಬಗೆಗೂ ಅವನ ಗ್ರಂಥದಲ್ಲಿ ಪರೋಕ್ಷವಾದ ಸುಳಿವುಂಟು. ಅವನು ತನ್ನ ಚಿಕ್ಕಪ್ಪ ಕನಕನ ಒಂದು ಪ್ರಶಂಸನೀಯ ಕೃತ್ಯವನ್ನು ಹೀಗೆ ಉಲ್ಲೇಖಿಸುತ್ತಾನೆ: ಕನಕನ ಹುಟ್ಟೂರಾದ ಪರಿಹಾಸಪುರದಲ್ಲಿ ಒಂದು ಬೃಹದ್‌ಗಾತ್ರದ ಬುದ್ಧ ಪ್ರತೀಕವಿತ್ತು. ರಾಜ ಹರ್ಷ ಒಮ್ಮೆ ಇದನ್ನು ಭಗ್ನಗೊಳಿಸುವ ಹುಚ್ಚು ನಿರ್ಧಾರ ಮಾಡಿದ್ದನಂತೆ. ಆಗ ಆಯತಕಾಲದಲ್ಲಿ ಕನಕ ಮಧ್ಯೆ ಪ್ರವೇಶಿಸಿ ಈ ಪ್ರತಿಮೆಯನ್ನು ರಕ್ಷಿಸಿದನಂತೆ. ಈ ವಿವರಣೆಯ ಧಾಟಿಯನ್ನು ನೋಡಿದರೆ ಕನಕನೂ ಒಂದು ಬಗೆಯ ಬೌದ್ಧ ಆರಾಧನೆಯ ಪದ್ಧತಿಯನ್ನು ಒಪ್ಪಿಕೊಂಡಿದ್ದ ಎಂದು ಕಾಣುತ್ತದೆ. ಕಲ್ಹಣನೂ ಸ್ವತಃ ಬೌದ್ಧಧರ್ಮದ ಬಗೆಗೆ ಸಹಾನುಭೂತಿಯ ಭಾವವನ್ನು ತಳೆದಿದ್ದ ಎನ್ನುವುದನ್ನೂ ಇದು ಸೂಚಿಸುತ್ತದೆ. ಈ ಪರಿಹಾಸಪುರವೆ ಕಲ್ಹಣನ ವಂಶಿಕರ ಮೂಲಸ್ಥಾನವಾಗಿತ್ತು ಎನ್ನುವುದು ಸ್ಪಷ್ಟ. ಅದರಿಂದಲೇ ಅವನು ಆ ಪುರದ ಪವಿತ್ರ ರಚನೆಯ ಬಗೆಗೆ, ಅಲ್ಲಿಯ ಭೌಗೋಳಿಕ ರಚನೆಯ ಬಗೆಗೆ ತನ್ನ ಗ್ರಂಥದಲ್ಲಿ ವಿಸ್ತಾರವಾದ ವಿವರಣೆಯನ್ನು ನೀಡಿದ್ದಾನೆ.

ಕಲ್ಹಣನದು ತುಂಬ ಶ್ರೀಮಂತಿಕೆಯ ಮನೆತನ. ತಂದೆಯ ಬದುಕಿನಿಂದ, ನಡೆ - ನುಡಿಯಿಂದ ಆತ ತುಂಬ ಪ್ರಭಾವಿತನಾಗಿದ್ದ. ತನ್ನ ಹುಟ್ಟು ಮತ್ತು ವಂಶದ ಬಗೆಗೆ ಆತನಿಗೆ ಅಪಾರ ಅಭಿಮಾನ. ಕಲ್ಹಣನ ಮನೆತನದವರು ಜಾತಿಯಿಂದ ಬ್ರಾಹ್ಮಣರು; ನಂಬಿಕೆಯಿಂದ ಶೈವರು; ಬೌದ್ಧಧರ್ಮದ ಬಗೆಗೂ ಅವರಿಗೆ ಸಹಾನುಭೂತಿಯಿತ್ತು. ಕಲ್ಹಣ ಬ್ರಾಹ್ಮಣ ಸಂಪ್ರದಾಯದಂತೆ ಶೈವಧರ್ಮದ ಆಧ್ಯಾತ್ಮ ಆದೇಶಗಳನ್ನು ಅರಗಿಸಿ ಕೊಂಡಿದ್ದ. ಅದರ ತಾಂತ್ರಿಕ ಪ್ರಕ್ರಿಯೆಗಳಲ್ಲು ಪರಿಣತನಾಗಿದ್ದ. ಅದರಿಂದಲೇ ಇರಬೇಕು: ಕಾಶ್ಮೀರಿ ಶೈವ ಪಂಥದ ಪ್ರಮುಖ ಆಚಾರ್ಯರಲ್ಲಿ ಒಬ್ಬನಾದ ಭಟ್ಟ ಕಲ್ಲಟನನ್ನು ಕಲ್ಹಣ ತನ್ನ ಗ್ರಂಥದಲ್ಲಿ ಗೌರವ ಪೂರ್ವಕವಾಗಿ ಉಲ್ಲೇಖಿಸುತ್ತಾನೆ. ಆತ ತನ್ನ ಗ್ರಂಥವನ್ನು ಶಿವಸ್ತುತಿಯಿಂದಲೆ ಪ್ರಾರಂಭಿಸಿದ್ದಾನೆ: "ಕೊರಳನ್ನು ಸುತ್ತಿದ ಹಾವುಗಳೆಂಬ ಮಣಿಸರದ ಮಿನುಗುಬಣ್ಣದ ಮೇಳವಿಕೆಯಿಂದ ಶಿವ ಕಂಗೊಳಿಸುತಿದ್ದಾನೆ"

ಅವನು ಅರ್ಧನಾರೀಶ್ವರನಾದಾಗ — "ಅವನ ದೇಹಾರ್ಧವನ್ನು ಅವನ ಅರ್ಧಾಂಗಿ ಪಾಲುಗೊಂಡಳು." ಈ ಮಂಗಳ ಪದ್ಯ ಗಮನಾರ್ಹ. ಇದು ಕಲ್ಹಣನ ಕಾಲದಲ್ಲಿ ವ್ಯಾಪಕವಾಗಿದ್ದ ಶೈವಪಂಥದ ನಂಬಿಕೆಯನ್ನು ದೃಢಪಡಿಸುತ್ತದೆ.

ಬ್ರಾಹ್ಮಣರಲ್ಲಿ ಬೆಳೆದುಬಂದ ಈ ಶೈವಧರ್ಮದ ನಂಬಿಕೆ ಕಲ್ಹಣನ ಆನುವಂಶಿಕವಾದ ಒಂದು ಮುಖ. ಜತೆಗೆಯೆ ಅವನು ತನ್ನ ಗ್ರಂಥದುದ್ದಕ್ಕೂ, ಬೌದ್ಧಧರ್ಮದ ಬಗೆಗೆ ಸ್ನೇಹಲವಾದ ಮನೋಭಾವವನ್ನೆ ವ್ಯಕ್ತಗೊಳಿಸುತ್ತಾನೆ. ರಾಜಾ ಅಶೋಕನಿಂದ ಕಲ್ಹಣನ ಕಾಲದ ತನಕದ ರಾಜರುಗಳು ಬೌದ್ಧಧರ್ಮದ ಪ್ರಸಾರಕ್ಕಾಗಿ ಕಟ್ಟಿಸಿದ ವಿಹಾರಗಳನ್ನು[1] ಸ್ತೂಪಗಳನ್ನು ಆತ ಮೆಚ್ಚಿಕೆಯ ಮಾತುಗಳಿಂದಲೆ ಉಲ್ಲೇಖಿಸುತ್ತಾನೆ. ಇತರರು ವೈಯಕ್ತಿಕವಾಗಿ ಕಟ್ಟಿದ ಇಂಥ ಸಂಘ ಸಂಸ್ಥೆಗಳ ಬಗೆಗೂ ಅವನು ಅಷ್ಟೇ ಗಮನವನ್ನು ಹರಿಸಿದ್ದಾನೆ, "ಬೋಧಿಸತ್ವರು ಅಥವಾ ಬುದ್ಧ ಸಮಸ್ತ ಜೀವಕೋಟಿಯ ಕ್ಷೇಮಚಿಂತಕರು, ಹೃದಯ ವೈಶಾಲ್ಯದ ಮತ್ತು ಔದಾರ್ಯದ — ಅನುಕಂಪಗಳ ಮೂರ್ತರೂಪ" ಎಂದು ಪದೇ ಪದೇ ಉಲ್ಲೇಖಿಸಲು ಕಲ್ಹಣ ಹಿಂಜರಿಯುವುದಿಲ್ಲ. ಅವನ ದೃಷ್ಟಿಯಲ್ಲಿ ಅವರು "ತನಗೆ ಕೇಡು ಬಗೆದವರ ಮೇಲೂ ಕೋಪಿಸದ ಸಜ್ಜನಿಕೆಯ ಸಾಕಾರಮೂರ್ತಿ; ಅಂಥವರ ಮೇಲೂ ದಯೆದೋರುವ ಸಹನಾಮೂರ್ತಿ".[2] ಬೌದ್ಧಧರ್ಮದ ಪ್ರಮೇಯ ವಿಶೇಷಗಳ ಬಗೆಗೆ, ಪರಿಭಾಷೆಗಳ ಬಗೆಗೆ ಆತನಿಗೆ ಗಾಢಪರಿಚಯವಿತ್ತು ಎಂದು ಕಾಣುತ್ತದೆ. ಕಾಶ್ಮೀರದ ನೆಲದ ಸಂಸ್ಕೃತಿಯೆ ಅಂಥದು: ಈ ಕಣಿವೆಯ ಬ್ರಾಹ್ಮಣ ಸಂಸ್ಕೃತಿಯ ಪ್ರಾಚೀನ ಗ್ರಂಥ ನೀಲಮತ ಪುರಾಣ. ಆದರೆ ಈ ಗ್ರಂಥ ಬುದ್ಧ ಜನ್ಮದಿನವನ್ನು, ಉತ್ಸವವಾಗಿ ಆಚರಿಸಬೇಕು ಎಂದು ಹೇಳುತ್ತದೆ. ಅಂದು ಬುದ್ಧನ ವಿಗ್ರಹಗಳ ಆರಾಧನೆ, ಚೈತ್ಯಾಲಯಗಳ ಅಲಂಕರಣ ನಡೆಯುತ್ತದೆ. ಇಂಥ ಸಮನ್ವಯ ಈ ನೆಲದ ಗುಣ. ಕಲ್ಹಣನ ಸಹಾನುಭೂತಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತದೆ; ಮೂರ್ತಿಪೂಜೆಯನ್ನು ದ್ವೇಷಿಸುವ ಮೂರ್ತಿ ಭಂಜಕರ ಬಗೆಗೆ ಕೂಡ ಅವನದು ಅದೇ ನಿರ್ಲಿಪ್ತ ಸಹಾನುಭೂತಿ. ಯಾವ ಮುಲಾಜಿಗೂ ಮಣಿಯದ, ಎಲ್ಲವನ್ನೂ ನಿರ್ಲಿಪ್ತ ತಟಸ್ಥತೆಯಿಂದ ಕಂಡು, ದೂರನಿಂತು ಸಾಕ್ಷಿಯಾಗಿ ಬರೆಯಬಲ್ಲ ನಿಜವಾದ ಇತಿಹಾಸಕಾರ ಕಲ್ಹಣ.

ಕಲ್ಹಣನ ಗ್ರಂಥದಲ್ಲಿ ಎದ್ದು ಕಾಣುವ ಅಂಶ: ಅವನ ಕರ್ಮಸಿದ್ಧಾಂತದ ಶ್ರದ್ಧೆ. ಇದು ಬೌದ್ಧಧರ್ಮದ ಕರ್ಮಕಲ್ಪನೆಗೆ ತೀರ ಹತ್ತಿರವಾದದ್ದು. ಅದೃಷ್ಟ ಅಥವಾ ವಿಧಿನಿಯತಿಯ ಬಗೆಗೆ ರಾಜತರಂಗಿಣಿಯಲ್ಲಿ ಪದೇ ಪದೇ ಉಲ್ಲೇಖವುಂಟು. ಮಹತ್ವಾಕಾಂಕ್ಷೆ, ಕಾಮಕ್ರೋಧಗಳು, ಪಾಪಾಚರಣೆ ಇಂಥ ಮೂಲಭೂತ ಪ್ರವೃತ್ತಿಗಳು ಮನುಷ್ಯನ ನಡೆಯನ್ನು ರೂಪಿಸುತ್ತವೆ. ಮೊತ್ತದಲ್ಲಿ ಒಂದನ್ನೊಂದು ಹೊಡೆದು ಹಾಕಿ

---

[1] ಕ್ರಿ.ಶ. 759 ರಲ್ಲಿ ಕಾಶ್ಮೀರವನ್ನು ಸಂದರ್ಶಿಸಿದ ಚೀನೀ ಯಾತ್ರಿಕ ಊ- ಕಾಂಗ್ ಆಗ ಕಾಶ್ಮೀರದಲ್ಲಿ 300 ಬೌದ್ಧವಿಹಾರಗಳನ್ನು ಗುರುತಿಸಿದ್ದಾನೆ.

[2] ಸ್ಟೈನ್, ಎಂ.ಎ. — ಕಲ್ಹಣನ ರಾಜತರಂಗಿಣಿಯ ಅನುವಾದ - ಸಂಪುಟ 1, ಮುನ್ನುಡಿ.

ವ್ಯರ್ಥವಾಗುತ್ತವೆ. ಹೀಗಿದ್ದೂ ಪ್ರತಿಯೊಂದು ಯುಗ ಪರಿವರ್ತದ ಉದ್ದೇಶ: ಕಂಡು ಬರುವ ಈ ಅತಂತ್ರಸ್ಥಿತಿಯಿಂದ ಮೇಲೆದ್ದು ಬರುವುದೇ ಆಗಿದೆ. ಇದು ಕಲ್ಹಣನ ಅನ್ನಿಸಿಕೆ. ಅದಕೆಂದೆ ಪ್ರತಿಯೊಂದು ತರಂಗದ ಮೊದಲ ಶ್ಲೋಕಗಳಲ್ಲಿ ಜೀವನದ ನಿಗೂಢ ಅರ್ಥವಂತಿಕೆಯ ಬಗೆಗೆ ಕಲ್ಹಣ ತನ್ನ ಅನ್ನಿಸಿಕೆಗಳನ್ನು ಉಲ್ಲೇಖಿಸುತ್ತಾನೆ. ಆ ಉಲ್ಲೇಖ ಇಡಿಯ ತರಂಗದ ಕಥಾನಿರೂಪಣೆಗೆ ಹಿನ್ನೆಲೆಯ ಧ್ವನಿಯನ್ನು ಒದಗಿಸುತ್ತದೆ. ಅದೇ ಕಾರಣದಿಂದ ಅವನು ಪ್ರಕೃತಿಯ ದೃಶ್ಯವೈಭವವನ್ನು ವರ್ಣಿಸುತ್ತ ತತ್ವಜ್ಞಾನದ ಸಮನ್ವಯ ಸಿದ್ಧಾಂತಕ್ಕೆ ಬಂದು ಬಿಡುತ್ತಾನೆ. ಕಲ್ಪದ ಕೊನೆಯಲ್ಲಿ ಬರುವ ವಿಶ್ವಪ್ರಳಯದ ಬಗೆಗೂ ಅವನು ಆಗಾಗ ಉಲ್ಲೇಖಿಸುತ್ತಾನೆ.

ಕಲ್ಹಣನಲ್ಲಿ ಒಂದು ಅಸಾಧಾರಣವಾದ ಹೆಚ್ಚಳವಿದೆ: ಅವನು ಧರ್ಮಸಹಿಷ್ಣು ಆಗಿದ್ದ — ಅಷ್ಟೆ ಅಲ್ಲ, ಸಂಕುಚಿತ ಮತಾಂಧತೆ — ದೇಶಾಂಧತೆಗಳಿಂದಲೂ ಅವನು ಮುಕ್ತನಾಗಿದ್ದ. ಕಲ್ಹಣನ ಈ ವೈಶಿಷ್ಟಕ್ಕೆ ಒಂದು ಉದಾಹರಣೆ: ಬಂಗಾಲದ ಯೋಧರನ್ನು ಅವನು ಮೆಚ್ಚಿ ಹೊಗಳಿದ್ದು. ಈ ಸೈನಿಕರು ಕಾಶ್ಮೀರದ ಕಣಿವೆಯ "ತ್ರಿಗಾಮಿ" ಯಲ್ಲಿ ತಮ್ಮ ದೊರೆಯನ್ನು ಮೋಸದಿಂದ ಕೊಲೆ ಮಾಡಿದ್ದರ ಪ್ರತೀಕಾರವಾಗಿ ಕಾಶ್ಮೀರದ ಮೇಲೆ ನಿರ್ದಯವಾಗಿ ದಾಳಿ ಮಾಡಿದ್ದರು. ಅಂಥವರನ್ನು, ಇಲ್ಲಿ ಬಂದು ಹೋರಾಡಿ ಜೀವ ತೆತ್ತವರನ್ನು ಅವನು ಹೀಗೆ ಹೊಗಳುತ್ತಾನೆ: "ಅವರು ಗೌಡದೇಶ (ಬಂಗಾಲ)ದ ವೀರಪುರುಷರು. ಅವರು ಸುರಿಸಿದ ನೆತ್ತರ ಧಾರೆಯಿಂದ ದೊರೆಯ ಮೇಲೆ ಅವರಿಗಿರುವ ಅಸಾಧಾರಣವಾದ ನಿಷ್ಠೆ ಉಜ್ವಲವಾಯಿತು; ಭೂಮಿ ಧನ್ಯವಾಯಿತು."

ದೊಡ್ಡವರನ್ನು ಎತ್ತಿಕಟ್ಟುವುದು ಕಲ್ಹಣನ ಮರ್ಜಿಯೆ ಅಲ್ಲ. ರಾಜತರಂಗಿಣಿಯಲ್ಲಿ ಯಾವ ರಾಜನನ್ನಾಗಲಿ, ರಾಣಿಯನ್ನಾಗಲಿ ಕಲ್ಹಣ ಅನಗತ್ಯ ಅಟ್ಟಕ್ಕೇರಿಸಲಿಲ್ಲ. ಜಾತೀಯತೆಯ ಹುಳು ಅವನ ತಲೆ ಕೊರೆದದ್ದೂ ಇಲ್ಲ. ಅವನು ಪುರೋಹಿತ ಶಾಹಿಯ ಉಗ್ರಟೀಕಾಕಾರನಾಗಿದ್ದ. ರಾಜ್ಯವ್ಯವಹಾರಗಳಲ್ಲಿ ಈ ಪುರೋಹಿತವರ್ಗ ಅನಪೇಕ್ಷಿತವಾಗಿ ಮೂಗು ತೂರುವುದರ ಬಗೆಗೆ ಅವನಿಗಿದ್ದ ಅಸಮಾಧಾನವನ್ನು ಅವನೇನೂ ಮುಚ್ಚಿಡಲಿಲ್ಲ. ಸಾಮಾಜಿಕ ಅಥವಾ ಸೈನಿಕ ಅಧಿಕಾರದ ಹುದ್ದೆಯನ್ನೇರಲು ಜಾತಿ ಅಥವಾ ಹುಟ್ಟು ಒಂದು ಅರ್ಹತೆಯಲ್ಲ ಎನ್ನುವುದನ್ನು ಅವನು ಸಮರ್ಥಿಸುತ್ತಾನೆ. ಕೆಳವರ್ಗದ ದೊಂಬರೂ ಸೈನ್ಯದಲ್ಲಿದ್ದರು. ಮೇಲ್ವರ್ಗದ ಬ್ರಾಹ್ಮಣರೂ ಇದ್ದರು. ಇಬ್ಬರಲ್ಲೂ ಸೇನಾಪತಿಯ ಪದವಿಯ ತನಕ ಮೇಲೇರಿದವರಿದ್ದರು. ಒಬ್ಬ ಕ್ಷತ್ರಿಯ ಅರಸು ರೋಹಟಕ್ಕಿನ ವೈಶ್ಯಸ್ತ್ರೀಯನ್ನು ಮದುವೆಯಾದದ್ದನ್ನೂ ಆತ ಉಲ್ಲೇಖಿಸಿದ್ದಾನೆ.

ಬೌದ್ಧಧರ್ಮದ ಅವಧಿಯಲ್ಲಿ ಅಸ್ಪೃಶ್ಯತೆ ಕೂಡ ತನ್ನ ಬಿಗುವನ್ನು ಕಳೆದುಕೊಂಡಿತ್ತು. ಇಂಥ ಒಂದು ಉದಾರವಾದ ಸಂಪ್ರದಾಯ ಈ ಕಣಿವೆಯಲ್ಲಿ ಈಗಲೂ ಉಳಿದುಬಂದಿದೆ. ಕಲ್ಹಣ ತನ್ನ ಸ್ಥಾನಮಾನದಿಂದ ಬಾಂಧವ್ಯದಿಂದ ಅಧಿಕಾರಿವರ್ಗದ ನಿಕಟಸಂಪರ್ಕ ಹೊಂದಿದ್ದ. ಆದರೆ ಅಧಿಕಾರಿಗಳ ಬಗೆಗೆ ಅವನೆಂದೂ ಪಕ್ಷಪಾತ

ತೋರಿದ್ದಿಲ್ಲ. ಜಾತಿಯಲ್ಲಿ ಬ್ರಾಹ್ಮಣರೇ ಆದ "ಕಾಯಸ್ಥರ" ದುರ್ಗಣಗಳನ್ನೂ ಅವನು ಬಯಲಿಗೆಳೆದಿದ್ದಾನೆ.

ಕಲ್ಹಣ ತನ್ನ ಬಗ್ಗೆ ಎಷ್ಟೇ ಮೌನ ವಹಿಸಿದರೂ ಆತನ ಅಧ್ಯಯನದ ಹರವನ್ನು ಗುರುತಿಸಲು ಈ ಗ್ರಂಥದಲ್ಲಿ ಸಾಕಷ್ಟು ಪುರಾವೆಗಳುಂಟು; ಸಾಂಪ್ರದಾಯಿಕ ಶಿಕ್ಷಣದ ವಿಭಿನ್ನ ಶಾಖೆಗಳಲ್ಲಿ ಆತ ಪರಿಣಿತನಾಗಿದ್ದ ಎನ್ನುವುದಕ್ಕೆ ದಾಖಲೆಗಳುಂಟು. ರಘುವಂಶ — ಮೇಘದೂತದಂಥ ಉನ್ನತ ಕಾವ್ಯಗಳಷ್ಟೆ ಅಲ್ಲ; ರಾಮಾಯಣ - ಮಹಾಭಾರತದಂಥ ಪುರಾಣ ಕೃತಿಗಳೂ ಅವನಿಗೆ ತೀರ ಪರಿಚಿತವಾಗಿದ್ದವು. ದಾಖಲೆಗೊಂಡ ಐತಿಹಾಸಿಕ ಘಟನೆಗಳಲ್ಲಿ ಮೂಲಭೂತವಾದ ಏಕರೂಪತಿಯನ್ನು ಗುರುತಿಸುವುದಕ್ಕಾಗಿ ಅವನು ಇವೆರಡನ್ನೂ ಬಳಸಿಕೊಂಡಿದ್ದಾನೆ. ಕೌರವ-ಪಾಂಡವರ ಯುದ್ಧದ ಸುತ್ತ ಹೆಣೆದುಕೊಂಡ ಐತಿಹ್ಯಗಳ ಮತ್ತು ಪೌರಾಣಿಕ ಲಿಖಿತದಾಖಲೆಗಳು ಇತರ ವಿದ್ವಾಂಸರಂತೆ ಕಲ್ಹಣನಿಗೂ ಇತಿಹಾಸವನ್ನು ರೂಪಿಸುವ ಸಾಧನಗಳಾದವು. ಸ್ಟೈನ್[3] ತನ್ನ ಗ್ರಂಥದಲ್ಲಿ ಹೇಳುವಂತೆ: "ಚಾರಿತ್ರಿಕ ಘಟನೆಗಳಿಗಿಂತ ಪೌರಾಣಿಕ ಕಥೆಗಳಲ್ಲಿ ಭಾರತೀಯಪ್ರಜ್ಞೆ ಗುರುತಿಸುವ ವಿಶೇಷ ಇದು: ಸಾಹಸದ ವೀರಗಾಥೆಯ ಮನಸೆಳೆವ ಸೊಬಗಿನಿಂದಾಗಿ ಮಾಸದ ಕುತೂಹಲ ಮತ್ತು ಅವು ದಾಖಲಿಸಿದ ಪವಿತ್ರ ಗ್ರಂಥಗಳ ಭರವಸೆ. ಇಷ್ಟಂತು ನಾವು ಖಚಿತವಾಗಿ ಊಹಿಸಬಹುದು: ಕಲ್ಹಣನ ಈ ಬರವಣಿಗೆಯಲ್ಲಿ ಪವಿತ್ರ ಪೌರಾಣಿಕ ಗ್ರಂಥಗಳ ಅಧ್ಯಯನ ನೇರವಾದ ಪ್ರಭಾವ ಬೀರಿದೆ."

ಕವಿ - ಇತಿಹಾಸಕಾರನಾಗಿ ಕಲ್ಹಣ ತನ್ನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾನೆ. ಅದಕ್ಕೆ ಬೇಕಾದ ಸಾಹಿತ್ಯಕ ಅಧ್ಯಯನದ ಸಂಪೂರ್ಣ ಸಿದ್ಧತೆ ಅವನಲ್ಲಿತ್ತು ಎನ್ನುವುದಕ್ಕೆ ಸಾಕಷ್ಟು ಪುರಾವೆಗಳೂ ಉಂಟು. ಅದರಿಂದಾಗಿ ಬರಿಯ ಕಾಶ್ಮೀರದ ಅಷ್ಟೆ ಅಲ್ಲ, ಇಡಿಯ ಭಾರತದ ಸಾಹಿತ್ಯ ಮತ್ತು ಇತಿಹಾಸ ಪ್ರಪಂಚದಲ್ಲಿ ಕಲ್ಹಣನ ಹೆಸರು ಒಂದು ಅಳಿಯದ ಅಚ್ಚಾಗಿ ಉಳಿದುಕೊಂಡಿದೆ. ಅವನು ತನ್ನ ಕಾಲದ ಮತ್ತು ಪ್ರಾಚೀನ ಸಾಮ್ರಾಜ್ಯಗಳ ಅನೇಕ ಮಂದಿ ಕವಿಗಳ ಮತ್ತು ವಿದ್ವಾಂಸರ ಉಲ್ಲೇಖ ಮಾಡಿದ್ದಾನೆ. ಅವನ ಅಧ್ಯಯನದ ಹರವು ಮತ್ತು ತಿಳಿವಿನ ಆಳ ಇದರಿಂದ ವ್ಯಕ್ತವಾಗುತ್ತದೆ. ಅಷ್ಟೆ ಅಲ್ಲ; ಈ ಉಲ್ಲೇಖಗಳು ಸಂಸ್ಕೃತ ಸಾಹಿತ್ಯೇತಿಹಾಸದ ವಿದ್ಯಾರ್ಥಿಗಳಿಗೆ ಒಂದು ಅಮೂಲ್ಯವಾದ ಕೊಡುಗೆಯೂ ಹೌದು. ಕಲ್ಹಣ ತನ್ನ ಸರಿದೊರೆಯಾದ ಕಾಶ್ಮೀರಿ ಕವಿ ಬಿಲ್ಹಣ ಬರೆದ "ವಿಕ್ರಮಾಂಕದೇವ ಚರಿತ" ವನ್ನು ಓದಿರಬೇಕು ಎನ್ನುವುದರಲ್ಲಿ ಸಂದೇಹಕ್ಕೆ ಕಾರಣವಿಲ್ಲ. ಕ್ರಿ.ಶ. 11 ನೆಯ ಶತಕದ 8ನೆಯ ದಶಕದಲ್ಲಿ ಈ ಗ್ರಂಥ ನಿರ್ಮಾಣವಾಯಿತು. ಈ ನಿಟ್ಟಿನಲ್ಲಿ ಇನ್ನೊಂದು ಗಮನಾರ್ಹ ಅಂಶ: ಕಲ್ಹಣನ ಸಮಕಾಲೀನನಾದ ಮಂಖಕವಿ ತನ್ನ "ಶ್ರೀಕಂಠಚರಿತ" ದಲ್ಲಿ ಕವಿ ಕಲ್ಯಾಣನನ್ನು ಉಲ್ಲೇಖಿಸಿರುವುದು. ಕಲ್ಯಾಣನ ಕಾವ್ಯ ಕೌಶಲದ ಕುರಿತು ಅವನು ಹೇಳುತ್ತಾನೆ: "ಬಿಲ್ಹಣನ ಕಾವ್ಯಸಿದ್ಧಿಯೆಲ್ಲ ಕಲ್ಯಾಣನ ಕಾವ್ಯಕನ್ನಡಿಯಲ್ಲಿ ಪಡಿಮೂಡಿದೆ!" ಈ ಕಲ್ಯಾಣನೆಂದರೆ

---

[3] ಸ್ಟೈನ್, ಎ.ಎಮ್. : ಕಲ್ಹಣನ ರಾಜತರಂಗಿಣಿಯ ಅನುವಾದದ ಮುನ್ನುಡಿಯಲ್ಲಿ.

ಕಲ್ಹಣನಲ್ಲದೆ ಇನ್ನಾರೂ ಅಲ್ಲ. ಸಂಸ್ಕೃತದ 'ಕಲ್ಯಾಣ'ವೆ ಪ್ರಾಕೃತದಲ್ಲಿ 'ಕಲ್ಹಣ' ಆಯಿತು. ಜೋನರಾಜ ತಾನು ಬರೆದ ಶ್ರೀಕಂಠಚರಿತದ ಟೀಕೆಯಲ್ಲು ಕಲ್ಹಣನ ಅದಮ್ಯವಾದ ಕಥಾ ಕುತೂಹಲದ ಬಗ್ಗೆ ಹೇಳುತ್ತಾನೆ. ಮಹಾಭಾರತ ಮತ್ತು ಇತರ ಪುರಾಣ ಕಾವ್ಯಗಳ ಅಖ್ಯಾನಗಳನ್ನೆ ಮನಸ್ಸಿನಲ್ಲಿಟ್ಟು ಅವನಿದನ್ನು ಬರೆದಿದ್ದಾನೆ ಎನ್ನುವುದು ಸ್ಪಷ್ಟ. ಅದರಿಂದ ಕಲ್ಹಣ ಮತ್ತು ಕಲ್ಯಾಣ ಒಬ್ಬನೇ ವ್ಯಕ್ತಿ. ಕಲ್ಯಾಣ ಎನ್ನುವುದು ಕಲ್ಹಣನ ಹೆಸರಿನ ಸಂಸ್ಕೃತೀಕರಣ ಮಾತ್ರ. ಹೀಗೆ ಇವೆಲ್ಲ ದಾಖಲೆಗಳು ಕಲ್ಹಣನ ಅಧ್ಯಯನ ಮತ್ತು ಉದಾತ್ತವಾದ ಹಿನ್ನೆಲೆಯ ವ್ಯಕ್ತಿತ್ವಕ್ಕೆ ಪುರಾವೆಯೊದಗಿಸುತ್ತವೆ.

ಕಲ್ಹಣನ ವ್ಯಕ್ತಿತ್ವದ ವೈಶಿಷ್ಟ್ಯ ವೈಲಕ್ಷಣ್ಯಗಳನ್ನು ಹೀಗೆ ಅವನ ನಿರೂಪಣೆಗಳಿಂದಲೇ ಸಾಕಷ್ಟು ಗುರುತಿಸಬಹುದು. ಅವನು ಬದುಕಿ ಬಾಳಿದ ಆ ಕಾಲದ ಪರಿಸರದ ಹಿನ್ನೆಲೆಯಲ್ಲಿ ಇದಕ್ಕೆ ವಿಶೇಷವಾದ ಮಹತ್ವ ಉಂಟು. ಸಮಕಾಲೀನ ಘಟನೆಗಳನ್ನು ಅವನು ಗ್ರಹಿಸಿದ ರೀತಿ, ಅವನದೇ ಆದ ಸ್ವಂತಿಕೆಯ ರಾಜಕೀಯ ಅಭಿಪ್ರಾಯಗಳು ಇವನ್ನು ನಾವು ಮೆಚ್ಚಲೇಬೇಕು. ಸೈನಿಕಕಾರ್ಯಾಚರಣೆಗಳನ್ನು ಅವನು ಇಷ್ಟು ಕರಾರುವಾಕ್ಕಾಗಿ ವಿವರಿಸುತ್ತಾನೆ: ಅದರಿಂದ ಅವನು ಯುದ್ಧ ತಂತ್ರಗಳಲ್ಲಿ ಸ್ವತಃ ಪರಿಣತನಾಗಿದ್ದ ಎನ್ನುವುದು ಸ್ಪಷ್ಟ. ಅವನ ಭೌಗೋಲಿಕ ಪ್ರಜ್ಞೆ, ಕಾಡುಬೆಟ್ಟಗಳ ಹಳ್ಳಕೊಳ್ಳಗಳ ಪರಿಚಯ ಇಷ್ಟು ಖಚಿತವಾಗಿದೆ: ಅದರಿಂದ ಅವನು ಸ್ವಚ್ಛಂದವಾಗಿ ದೇಶದ ಸುತ್ತೆಲ್ಲ ಹಲವುಸಲ ಸುತ್ತಾಡಿದ್ದ ಎನ್ನುವುದು ಸ್ಪಷ್ಟ. ಎಲ್ಲಕ್ಕಿಂತ ಹೆಚ್ಚು ಎದ್ದು ಕಾಣುವ ಮಾತೆಂದರೆ ಕಲ್ಹಣ ತನ್ನ ಕಾಲದ ಘಟನೆಗಳ ಬಗೆಗೆ ವ್ಯಕ್ತಿಗಳ ಬಗೆಗೆ ನೀಡಿದ ನಿರ್ಭಿಡೆಯ ಸ್ವಂತಿಕೆಯ ತೀರ್ಮಾನಗಳು.

ಕಲ್ಹಣ ಮತ್ತು ಅವನ ಕಾಲ

ರಾಜತರಂಗಿಣಿಯ ಬಹುಭಾಗ ಕಲ್ಹಣನ ಸಮಕಾಲೀನ ಘಟನೆಗಳ ವರ್ಣನೆಗೇ ಮೀಸಲಾಗಿದೆ. ಅವನು ಕಂಡದ್ದನ್ನು, ಕೇಳಿದ್ದನ್ನು, ನೆನಪಿನ ಭಂಡಾರದಲ್ಲಿ ಉಳಿದದ್ದನ್ನೆಲ್ಲ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ. ಅವನ ಕಾಲದ ಕಾಶ್ಮೀರದ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯ ಸ್ಪಷ್ಟಚಿತ್ರ ಇಲ್ಲಿ ಮೂಡಿದೆ. ಅವನ ಸಮಕಾಲೀನ ಅಥವಾ ಹಿಂದಿನ ಯಾವನೇ ಭಾರತೀಯ ಲೇಖಕ ಇಷ್ಟು ಖಚಿತವಾದ ಐತಿಹಾಸಿಕ ಪ್ರಜ್ಞೆಯಿಂದ ಬರೆದದ್ದಿಲ್ಲ. ಅವನಿಗೆ ಈ ಕಣಿವೆಯ ಪ್ರಾಚೀನ ಭೂ ವಿನ್ಯಾಸದ ವಿವರವಾದ ಪರಿಜ್ಞಾನವಿತ್ತು. ಇತಿಹಾಸಜ್ಞರಿಗೆ, ಭೂಗೋಳ ತಜ್ಞರಿಗೆ ಇದೊಂದು ಮಾಹಿತಿಗಳ ಚಿನ್ನದ ಗಣಿ. ಅವನ ಕಾಲದ ಜನರ (ಮತ್ತು ಸ್ವಭಾವದ) ಬಗ್ಗೆ ಅವನ ಕೆಲವು ಅನ್ನಿಸಿಕೆಗಳು ಅವನ ಸ್ವಂತ ಚಾರಿತ್ರ್ಯದ ಮತ್ತು ವೈಯಕ್ತಿಕ ಸಂಬಂಧಗಳ ಬಗ್ಗೆ ಸುಳಿವು ನೀಡುತ್ತವೆ.

ಈ ಘಟನೆಗಳನ್ನು ಆತ ನಿರೂಪಿಸಿದ ಬಗೆಯನ್ನು ನೋಡಿದರೆ, ಆತ ಇದನ್ನು ಬರೆದಾಗ ತುಂಬ ಲೋಕಾನುಭವಿಯಾಗಿದ್ದ ಎನ್ನುವುದು ಸ್ಪಷ್ಟ. ಕಲ್ಹಣನೇ ಹೇಳಿಕೊಂಡಂತೆ ಈ ಗ್ರಂಥ ರಚನೆಯಾದದ್ದು ಕ್ರಿ.ಶ. 1148 - 50ರ ಅಂತರದಲ್ಲಿ. ಇದರ ಶೈಲಿ:- ಉದಾ: ಸುಸ್ಸಲನ ಅಡಳಿತಾವಧಿ (ಕ್ರಿ.ಶ. 1112 - 28) ಯ ಘಟನೆಗಳನ್ನು ಬಣ್ಣಿಸಿದ ರೀತಿ — ಆಗಲೇ ಅವನು ಜನರ ಒಲವು - ನಿಲವುಗಳ ನಿರೀಕ್ಷಣೆಯಲ್ಲಿ ಪರಿಣತನಾಗಿದ್ದ ಎನ್ನುವುದನ್ನು ಸ್ಫುಟಪಡಿಸುತ್ತದೆ. ಆದುದರಿಂದ ಅವನ ಜನನ ಆ ಶತಕದ ಪ್ರಾರಂಭದ ವರ್ಷಗಳಲ್ಲಿ ಆಗಿರಬೇಕು.

ಕಲ್ಹಣ ಬದುಕಿದ್ದ ಕಾಲ — ಕಾಶ್ಮೀರ ದೀರ್ಘಕಾಲದ ಅಂತಃಕಲಹದಲ್ಲಿ, ರಾಜಕೀಯಹೋರಾಟದಲ್ಲಿ ಮುಳುಗಿದ್ದ ಕಾಲ. ಹನ್ನೆರಡನೆಯ ಶತಕದ ತರುಣದಲ್ಲಿ, ಕಾಶ್ಮೀರದಲ್ಲಿ ನಡೆದ ಮಹತ್ವದ ಅರಸೊತ್ತಿಗೆಯ ಕ್ರಾಂತಿ ದೇಶದ ರಾಜಕೀಯ ಜೀವನದ ಮೇಲೆ ಪರಿಣಾಮ ಬೀರಿತು. ರಾಜಾ ಹರ್ಷನ ಆಳಿಕೆ (ಕ್ರಿ.ಶ. 1089 - 1101) ತರುಣದಲ್ಲಿ ಏಳಿಗೆ — ನೆಮ್ಮದಿಗಳಿಗೆ ಕಾರಣವಾದರೂ ಕೊನೆಕೊನೆಗೆ ಅವನು ತನ್ನ ಸ್ವಚ್ಛಂದತೆಗಳಿಗೆ ತಾನೇ ಬಲಿಯಾದ. ಆಗಲೇ ಮೇಲುಗೈಯಾಗಿದ್ದ ಡಾಮರರ ದೌಲತ್ತನ್ನು ದಬ್ಬಾಳಿಕೆಯನ್ನು ಆತ ನಿರ್ದಯವಾಗಿ ಸದೆಬಡಿದ. ಪರಿಣಾಮವಾಗಿ ಅವರು ರಾಜನ ವಿರುದ್ಧ ದಂಗೆಯೆದ್ದರು. ಹರ್ಷನನ್ನು ಕೊಲೆಮಾಡಲಾಯಿತು. ಎಂದಿನಿಂದಲೂ ಸಿಂಹಾಸನಕ್ಕೆ ಹೊಂಚು ಹಾಕುತ್ತ ಲೋಹರದಲ್ಲಿ ನೆಲಸಿದ್ದ ಅವನ ಸೋದರರು — ಉಚ್ಚಲ ಮತ್ತು ಸುಸ್ಸಲ — ದೇಶವನ್ನು ಹಂಚಿಕೊಂಡರು.

ಕಣಿವೆಯ ಆಳಿಕೆ ಹಿರಿಯಣ್ಣ ಉಚ್ಚಲನ ಪಾಲಿಗೆ ಬಂತು. ಲೋಹರ ಮತ್ತು ಸುತ್ತುಮುತ್ತಣ ಗುಡ್ಡಗಾಡು ಪ್ರದೇಶಗಳು ಸುಸ್ಸಲನ ಪಾಲಿಗೆ ಬಂದವು. ದಂಗೆಕೋರರಾದ ರಾಜಕುಮಾರರು ತಕ್ಷಣವೇ ಕಾಶ್ಮೀರದ ಸಿಂಹಾಸನದ ಸ್ಪರ್ಧಿಗಳಾದರು. ಸಿಂಹಾಸನದ ಮೇಲೆ ಕಣ್ಣಿಟ್ಟವರ ಈ ಮೇಲಾಟಗಳಿಂದ, ನಿರಂತರವಾದ ರಾಜಕೀಯ ಕ್ಷೋಭೆ ಕಿರುಕುಳಗಳಿಂದ ಉಚ್ಚಲನ ಆಡಳಿತ (ಕ್ರಿ.ಶ. 1101 - 1111) ಕಂಗೆಟ್ಟಿತ್ತು. ಪರಿಣಾಮವಾಗಿ ನಾಡಿನ ಆರ್ಥಿಕಸ್ಥಿತಿ ಬುಡಮೇಲಾಯಿತು. ಉಚ್ಚಲನ ಕೊಲೆಯ ಅನಂತರ ಸಿಂಹಾಸನ ಮೇಲಾಟದ ಕಣವಾಗಿ ಹಲವರ ಕೈವಶವಾಯಿತು. ಕೊನೆಗೊಮ್ಮೆ ಡಾಮರರ ಮುಖಂಡನಾದ ಗರ್ಗಚಂದ್ರನ ಸಹಾಯದಿಂದ ಸಿಂಹಾಸನವೇರುವ ತನ್ನ ಹೆಬ್ಬಯಕೆಯನ್ನು ಸುಸ್ಸಲ ಈಡೇರಿಸಿಕೊಂಡ. ಅರಮನೆಯಿಂದಲೇ ಪ್ರೇರಿತವಾದ ಒಳಸಂಚುಗಳಿಂದ ತುಂಬಿದ ಅವನ ಆಡಳಿತವೂ ಕಮ್ಮಿದಬ್ಬಾಳಿಕೆಯದೇನೂ ಆಗಿರಲಿಲ್ಲ. ಅವನ ನೀತಿಯೆ ಅವನಿಗೆ ತಿರುಗುಬಾಣವಾಗಿ ಪರಿಣಮಿಸಿತು. ಅದರಿಂದ ಕೆಲ ತಿಂಗಳ ಕಾಲ ಸುಸ್ಸಲ ಲೋಹರಕ್ಕೆ ಓಡಿಹೋಗಬೇಕಾಯಿತು. ಆದರೆ ಪ್ರಭಾವಿ ಡಾಮರರ ಒಗ್ಗಟ್ಟು ಮುರಿದಾಗ, ಕ್ರಿ.ಶ. 1121 ರಲ್ಲಿ ಅವನು ಮತ್ತೆ ಸಿಂಹಾಸನವನ್ನು ಗಳಿಸಿದ. ಅವನ ಆಡಳಿತದ ಮುಂದಿನ ಏಳು ವರ್ಷಗಳು ಅಖಂಡವಾದ ಅಂತಃಕಲಹದಲ್ಲಿ ಮುಳುಗಿಹೋದವು. ಕ್ರಿ.ಶ. 1128 ರಲ್ಲಿ, ತನ್ನ ಪ್ರತಿಸ್ಪರ್ಧಿ, ಹರ್ಷನ ಮೊಮ್ಮಗ ಭಿಕ್ಷಾಚರನನ್ನು ಕೊಲ್ಲುವ ತನ್ನ ಒಳಸಂಚಿನ ಫಲವಾಗಿ ಅವನೇ ಸತ್ತ. ಮುಂದೆ ಅವನ ಮಗ ಜಯಸಿಂಹ ರಾಜನಾದ. ಡಾಮರರನ್ನು ವಿಶ್ವಾಸಕ್ಕೆ ತೆಗೆದುಕೊಂಡ ಅವನ ಆಡಳಿತ ಸ್ವಲ್ಪಮಟ್ಟಿಗೆ ನೆಮ್ಮದಿಯನ್ನು ತಂದಿತ್ತು. ಭೇದನೀತಿಯಿಂದ ಆಳುವ ಅವನ ತಂತ್ರ ಸಾಕಷ್ಟು ಸಫಲವಾಗಿತ್ತು. ಅಲ್ಪಾವಧಿಯ ಆಂತರಿಕ ಶಾಂತಿ ಕೂಡ ವಿರೋಧ ಶಕ್ತಿಗಳ ಹೋರಾಟದಿಂದ ಮತ್ತು ನಿರಂತರ ಒಡಕುಗಳಿಂದ ಜರ್ಜರಗೊಂಡಿತ್ತು.

ಕಲ್ಹಣನ ಗ್ರಂಥದ ಕೊನೆಯ ಕೆಲವು ವರ್ಷ (ಕ್ರಿ.ಶ. 1145 - 1149) ಗಳ ವಿವರಣೆಯಿಂದ ತಿಳಿಯುವಂತೆ ಜಯಸಿಂಹನ ಕಾಲ ಉಳಿದವುಗಳಿಗಿಂತ ಹೆಚ್ಚು ಶಾಂತಿಯುತವಾಗಿತ್ತು. ಅವನು ತನ್ನ ಹಿರಿಮಗ ಗುಲ್ಹಣನನ್ನು ಲೋಹರದ ದೊರೆಯಾಗಿ ಪೀಠಕ್ಕೇರಿಸಿದ. ಭಿಕ್ಷಾಚರನನ್ನು ಸೆರೆಹಿಡಿದು ಕ್ರಿ.ಶ. 1130 ರಲ್ಲಿ ಕೊಲ್ಲಲಾಯಿತು. ಹಕ್ಕುದಾರಿಕೆಗೆ ಹೊಂಚುಹಾಕುವ ಎಲ್ಲರೂ ನಾಮಾವಶೇಷವಾದರು. ಈ ಅವಧಿಯಲ್ಲಿ ಜಯಸಿಂಹ ಸ್ಥಾಪಿಸಿದ ಧಾರ್ಮಿಕ ಸಂಸ್ಥೆಗಳ ಬಗೆಗೆ, ದತ್ತಿ - ಉಂಬಳಿಗಳ ಬಗೆಗೆ ಕಲ್ಹಣ ಉಲ್ಲೇಖಿಸುತ್ತಾನೆ. ಹಾಗೆಯೇ ಅವನ ಈ ಆದರ್ಶವನ್ನೇ ಹಲವು ಮಂತ್ರಿಗಳು, ರಾಜ ಮನೆತನದ ಸದಸ್ಯರು ಮುಂದುವರಿಸಿದ್ದನ್ನು ಉಲ್ಲೇಖಿಸುತ್ತಾನೆ.

ಹಿಂದೆ ಹೇಳಿದ ಘಟನಾವಳಿಗಳಿಂದ ತಿಳಿಯುವ ಮಾತು ಇದು: ಕಲ್ಹಣನ ಜೀವಿತ ಕಾಲದ ರಾಜಕೀಯ ಒಳ ಜಗಳ ಹೋರಾಟಗಳಿಂದ ಅಮರಿತ್ತು; ಆದರೆ ಇಂಥ ಆತಂಕಕಾರಿ ಪರಿಸರ ಕೂಡ ಅವನ ಬರವಣಿಗೆಯ ಚಟುವಟಿಕೆಯ ಮೇಲೆ ಅನಪೇಕ್ಷಿತ ಪರಿಣಾಮವನ್ನು ಬೀರಲಿಲ್ಲ. ಬದಲಾಗುತ್ತ ನಡೆದಿದ್ದ ರಾಜಕೀಯ ಸ್ಥಿತ್ಯಂ

ತರಗಳು ಕಲ್ಹಣನ ಜೀವನ ಮತ್ತು ಬರವಣಿಗೆಯ ಮೇಲೆ ಏನಾದರೂ ಗಮನಾರ್ಹ ಪ್ರಭಾವ ಬೀರಿದ್ದವೇ ಎನ್ನುವುದು ಅಧ್ಯಯನಕ್ಕೆ ರೋಚಕವಾದ ಒಂದು ವಿಷಯವಾದೀತು. ಹರ್ಷನ ಅನಂತರದ ಅರಸರ ಕಾಲದಲ್ಲಿ ಭಟ್ಟಂಗಿಗಳಾಗಿ ಇಲ್ಲವೆ ಪಿತೂರಿಗಾರರಾಗಿ ಅರಮನೆ ಸೇರಿಕೊಂಡ ಬಹಳಷ್ಟು ಅಧಿಕಾರಿಗಳಲ್ಲಿ ಕಲ್ಹಣನ ತಂದೆ ಚಂಪಕನ ಹೆಸರು ಕಾಣುವುದಿಲ್ಲ. ಈ ಮೊದಲೆ ತಿಳಿಸಿದಂತೆ, ಹರ್ಷನ ಆಡಳಿತದಲ್ಲಿ ಚಂಪಕ ಅತ್ಯುನ್ನತ ಅಧಿಕಾರ ಸ್ಥಾನದಲ್ಲಿದ್ದ. ಹರ್ಷನ ಮರಣದ ಅನಂತರ ಅವನ ನಿವೃತ್ತಿ ಪೂರ್ತಿ ಸ್ವಯಂಪ್ರೇರಿತವಾಗಿತ್ತೇ ಇಲ್ಲವೆ ಎನ್ನುವುದು ರಾಜತರಂಗಿಣಿಯಲ್ಲಿ ಸ್ಫುಟವಾಗಿಲ್ಲ.

ರಾಜತರಂಗಿಣಿ ಇಷ್ಟನ್ನು ಮಾತ್ರ ಧಾರಾಳವಾಗಿ ಸ್ಪಷ್ಟಪಡಿಸುತ್ತದೆ. ಕಲ್ಹಣನಂತು ಯಾವ ಅರಸನ ಕೈಕೆಳಗೂ ಯಾವ ಅಧಿಕಾರವನ್ನೂ ನಿರ್ವಹಿಸಲಿಲ್ಲ; ಯಾವ ರಾಜನ ಹಂಗಿನ ಬದುಕನ್ನೂ ಅವನು ಬಯಸಲಿಲ್ಲ. ಆದರೂ ರಾಜಗೃಹಗಳಲ್ಲಿ ಅವನಿಗೆ ಸದಾ ಬಾಗಿಲು ತೆರೆದಿತ್ತು ಎಂದು ತಿಳಿದು ಬರುತ್ತದೆ. ಆಶ್ರಯದಾತನನ್ನು ಹೊಗಳುವ ಅಲಿಖಿತ ಸಂಪ್ರದಾಯವನ್ನು ಅವನೂ ಅನುಸರಿಸಿರಬಹುದಾದ ಯಾವ ಕುರುಹೂ ಈ ಗ್ರಂಥದಲ್ಲಿಲ್ಲ — ಏಕೆಂದರೆ ಅವನಿಗೆ ಯಾರ ಆಶ್ರಯದ ಹಂಗೂ ಇರಲಿಲ್ಲ. ಕಲ್ಹಣ (ಈ ಕೃತಿಯನ್ನು ಪೂರ್ತಿಗೊಳಿಸಿದ್ದು ಜಯಸಿಂಹನ ಆಡಳಿತದ ಕಾಲದಲ್ಲಾದರೂ) ಜಯಸಿಂಹನ ಆಣತಿಯ ಮೇರೆಗೆ ಲೇಖನಿ ಓಡಿಸಿದ ಸೂಚನೆಯೇನೂ ಇಲ್ಲ. ಅಥವಾ ಅವನಿಗಿಂತ ಪೂರ್ವದ ಯಾವುದೇ ರಾಜರ ಆಣತಿಯೂ ಇದರ ಹಿಂದೆ ಇದ್ದಂತಿಲ್ಲ. ಅವನು ಜಯಸಿಂಹನ ಸಾಧನೆಗಳನ್ನು ವರ್ಣಿಸುವಾಗಲೂ ಎಲ್ಲ ಸಾಮಾನ್ಯ ಸಂಗತಿಯಂತೆಯೇ ಆವೇಶರಹಿತವಾದ ನಿರ್ಲಿಪ್ತ ಭಾಷೆಯನ್ನು ಬಳಸುವ ಸರಿದಾರಿಯಲ್ಲೆ ಸಾಗಿದ್ದಾನೆ. ಏನಿದ್ದರೂ ಜಯಸಿಂಹನ ತಂದೆ ಸುಸ್ಸಲನ ಗಂಭೀರ ದೋಷಗಳತ್ತ ಅವನು ಬೊಟ್ಟು ಮಾಡುತ್ತಾನೆ; ಭಿಕ್ಷಾಚರನ ನಡೆಯಿಂದ ಜಯಸಿಂಹ ಮತ್ತು ಅವನ ತಂದೆ ಕಷ್ಟದ ದಿನಗಳನ್ನು ಎದುರಿಸಬೇಕಾಗಿ ಬಂದರೂ ಅವನ ಸಾಹಸಗಳನ್ನು ಮೆಚ್ಚಿ ಹೊಗಳಲು ಕಲ್ಹಣ ಹಿಂಜರಿಯಲಿಲ್ಲ: "ಸೈನಿಕರು ತೊಂದರೆಯಲ್ಲಿ ಸಿಕ್ಕಿಕೊಂಡಾಗ ಆಸರೆಯಾಗಿ ನಿಂತವ, ಎಂದೂ ಬಳಲದವ, ಎಂದೂ ಬಡಾಯಿಕೊಚ್ಚದವ — ಇಂಥ ವೀರ ಭಿಕ್ಷಾಚರನನ್ನು ಬಿಟ್ಟರೆ ಇನ್ನೊಬ್ಬನಿಲ್ಲ" (VIII, 1017). ಅದೇ ತರಂಗದ 1776 ನೇ ಶ್ಲೋಕದಲ್ಲಿ ಹೀಗೆ ಹೇಳುತ್ತಾನೆ: "ಅವನು ಯಾರ ದೀರ್ಘಕಾಲೀನ ದಂಗೆಗೆ ಬೀಜ ಬಿತ್ತಿದನೋ ಯಾರ ಸರ್ವನಾಶಕ್ಕೆ ಕಾರಣನಾದನೋ ಅಂಥವರು ಕೂಡ ಅವನ ಪರಾಕ್ರಮ ಕಂಡು ಬೆರಗುಗೊಂಡು ಕೊಂಡಾಡಿದರು". ಸಿಂಹಾಸನದ ಹಕ್ಕುದಾರಿಕೆಗಾಗಿ ಹೋರಾಡಿದ ಮಿಕ್ಕವರಲ್ಲಿ ಭೋಜನೊಬ್ಬನೆ ಕಲ್ಹಣನ ಸಹಾನುಭೂತಿ ಪಡೆಯುತ್ತಾನೆ.

ಕಾಶ್ಮೀರಿ ಜನರ ರೀತಿ ರಿವಾಜನ್ನು ಅಧ್ಯಯನ ಮಾಡಲು ಸಾಕಷ್ಟು ಅವಕಾಶ ಪಡೆದ ಕಲ್ಹಣ ಅವರನ್ನು ತುಂಬ ವಾಸ್ತವವಾಗಿ, ಶಬ್ದಲೋಭವಿಲ್ಲದೆ, ಚಿತ್ರಿಸುತ್ತಾನೆ. ಏಕೆಂದರೆ ಅವನು ಬರಿಯ ಇತಿಹಾಸಜ್ಞನಷ್ಟೆ ಅಲ್ಲ; ಒಬ್ಬ ಕವಿ ಕೂಡ — ಕಾಡು ಕವಿದ ಕಣಿವೆಗಳನ್ನು, ಹಿಮದ ಪಾಗು ತೊಟ್ಟ ಅದರ ಉನ್ನತ ಗಿರಿಶಿಖರಗಳನ್ನು

ಹಸಿರು ಹೊತ್ತ ಹುಲ್ಲುಗಾವಲುಗಳನ್ನು, ತಿಳಿನೀರಿನ ಹೊಳೆ - ಹಳ್ಳಗಳನ್ನು ಪ್ರೀತಿಸುವ ಕವಿ ಕೂಡ ಆಗಿದ್ದ. ಅವನು ತನ್ನ ಈ ಕೃತಿಯಮೂಲಕ, ಹಿಂದಿನ ಮತ್ತು ಅಂದಿನ ಜನರಿಗೆ, ಅವರ ಬದುಕಿನ ರೀತಿಗೆ ಮತ್ತೆ ಜೀವಕಳೆ ತುಂಬಿ ನಮ್ಮ ಮುಂದಿಡುತ್ತಾನೆ.

ಕಲ್ಹಣನ ನಿರೀಕ್ಷಣ ಶಕ್ತಿ ತುಂಬ ಚುರುಕಾದುದು: ಆಗಣ ಕಾಶ್ಮೀರಿಗಳಲ್ಲಿ, ವಿಶೇಷತಃ ಸಮಾಜದ ಕೆಳ ದರ್ಜೆಯ ವರ್ಗದಲ್ಲಿ, ಶಾರೀರಿಕ ಮತ್ತು ನೈತಿಕ ಕೆಚ್ಚಿನ ಕೊರತೆಯನ್ನು ಅವನು ಗುರುತಿಸದೆ ಇರಲಿಲ್ಲ. ಕಾಶ್ಮೀರದ ಸೈನಿಕರ ಪೊಳ್ಳು ಬಡಾಯಿಯನ್ನು ಅವನು ಗೇಲಿ ಮಾಡುತ್ತಾನೆ; ಈ ಸೈನಿಕರು ತುರುಕರ ಆಕ್ರಮಣಕ್ಕೆ ಹೆದರಿ ಅವಸರಿಸಿ ಹಿಂದೆ ಸರಿದದ್ದನ್ನು, ಕೆಲಮೊಮ್ಮೆ ಇಡಿಯ ಸೇನಾಠಾಣೆಗಳೇ ದಿಕ್ಕೆಟ್ಟು ಚೆಲ್ಲಾಪಿಲ್ಲಿ ಓಡಿದ್ದನ್ನು ಅವನು ಬಯಲಿಗೆಳೆಯುತ್ತಾನೆ; ಹಾಗೆಯೇ ರಾಜವಂಶದ ಉನ್ನತವ್ಯಕ್ತಿ "ಬಾಲದಂತೆ ಕಠಾರಿಯನ್ನು ಹಿಂದೆ ಮುಚ್ಚಿಹಿಡಿದು ನಾಯಿಯಂತೆ ಕಾಲು ಕಿತ್ತದ್ದನ್ನು" (ತ. VIII, 324) ಉಲ್ಲೇಖಿಸುತ್ತಾನೆ. ಇಷ್ಟಂತು ಸ್ಪಷ್ಟ: ತನ್ನ ನಾಡಿನ ಸೈನ್ಯ ಶಕ್ತಿಯ ಬಗೆಗೆ ಕಲ್ಹಣನಿಗೆ ಹೆಚ್ಚಿನ ಗೌರವವೇನೂ ಇರಲಿಲ್ಲ. ಪರಸ್ಪರ ಜಗಳ ಕಾಯುತ್ತಿದ್ದ ತನ್ನ ಕಾಲದ ರಾಜವಂಶೀಯರ ವಿಶ್ವಾಸದ್ರೋಹದ ಹತ್ತು ಹಲವು ಘಟನೆಗಳಿಂದ ಅವನು ರೋಸಿಹೋಗಿದ್ದ. ಬದಲಾಗಿ, ಜಿದ್ದಿಗೆ ನಿಂತ ಈ ರಾಜವಂಶೀಯರಿಗೆ ಊರೆಯಾಗಿ ಬಂದ ಭಾರತದ ಬೇರೆ ಭಾಗದ ಸಿಪಾಯಿಗಳ ಮತ್ತು "ರಾಜಪುತ್ರ"ರ ಶೌರ್ಯವನ್ನು ಹಲವು ಸಂದರ್ಭಗಳಲ್ಲಿ ಅವನು ಪ್ರಶಂಸಿಸುತ್ತಾನೆ.

ಅದೇ ಸಮಯದಲ್ಲಿ ಉತ್ತರಾಧಿಕಾರಕ್ಕಾಗಿ ನಡೆಯುವ ಆಳರಸರ ಈ ಕದನಗಳನ್ನು, ಪಿತೂರಿಗಳನ್ನು ಸ್ವಾಗತಿಸುವ ತನ್ನ ನಾಡಿಗರ ನಿರ್ದಯ ಅನಾಸ್ಥೆಯನ್ನು ಕಲ್ಹಣ ಗುರುತಿಸುತ್ತಾನೆ. ಉಂಬಳಿಮಾನ್ಯದ ಜಮೀನುದಾರರಾದ ಡಾಮರರ ಬಗೆಗೆ ಆತ ಟೀಕಾಸ್ತ್ರವನ್ನೆಸೆಯುತ್ತಾನೆ. ಈ ಡಾಮರರೆ ಹರ್ಷನ ಪತನಕ್ಕೆ ಕಾರಣರಾದವರು; ಕಲ್ಹಣನ ಕಾಲದ ಕಾಶ್ಮೀರದ ಎಲ್ಲ ರಾಜಕೀಯ ಪಲ್ಲಟಗಳ ಹಿಂದೆ ಸೂತ್ರಧಾರರಾಗಿ ನಿಂತವರು; ಅವಂತಿವರ್ಮ ಮತ್ತು ದಿದ್ದಾ ಮುಂತಾದ ಶಕ್ತಿಶಾಲಿ ಆಡಳಿತಗಾರರು ಈ ಅಂಕೆಮೀರಿದ ಡಾಮರರನ್ನು ದಮನಿಸಲು ಪ್ರಯತ್ನಿಸಿದ್ದುಂಟು; ಪ್ರಯತ್ನಿಸಿ ಅಂಶತಃ ಸಫಲರಾದದ್ದೂ ಉಂಟು. ಆದರೂ ಉಂಬಳಿಮಾನ್ಯ ಪದ್ಧತಿಯ ಸಮಾಜದ ಆರ್ಥಿಕ ರಚನೆ ಡಾಮರರಿಗೆ ನಿರಂತರವಾದ ಪುಷ್ಟಿ ನೀಡಿತ್ತು. ಇಂಥ ಸಮಾಜದಲ್ಲಿ ಜಮೀನುದಾರಿಕೆಯ ಶ್ರೀಮಂತ ಪ್ರಭುತ್ವ ಅನಿವಾರ್ಯ. ಈ ವ್ಯವಸ್ಥೆಯಲ್ಲಿ ಬೇಸಾಯಗಾರನಾದ ರೈತ ಉಂಬಳಿಮಾನ್ಯದ ಜಮೀನುದಾರನಿಗೆ ಗೇಣಿ ತೆರಬೇಕಾದ ಒಕ್ಕಲಾಗಿರುತ್ತಾನೆ. ಈ ಜಮೀನುದಾರರೋ ಪಾಪ - ಪುಣ್ಯ ನೋಡದದೆ ಆ ನೆಲದ ಹುಟ್ಟುವಳಿಯನ್ನು ವಸೂಲು ಮಾಡುತ್ತಿದ್ದರು. ಮತ್ತು ವರ್ಷಕ್ಕೊಮ್ಮೆ ಅರಮನೆಯ ಅಧಿಕಾರಿಗಳಿಗೆ ಲೆಕ್ಕ ಒಪ್ಪಿಸುತ್ತಿದ್ದರು. ಕೆಲವು ಡಾಮರರು ತಮ್ಮ ಜಮೀನಿನ ಉತ್ಪತ್ತಿಯಿಂದ ಹೇಗೆ ಹೇರಳ ಸಂಪತ್ತನ್ನು ಕೂಡಿ ಹಾಕಿದ್ದರು ಎನ್ನುವುದನ್ನು ಕಲ್ಹಣ ಉಲ್ಲೇಖಿಸಿದ್ದಾನೆ. ಈ ಉಂಬಳಿ ಮಾನ್ಯದ ಪ್ರಜಾಪೀಡಕರ ನಯವಿಹೀನ ಒರಟುತನವನ್ನು ಕಲ್ಹಣ ಬೆಳಕಿಗೆ ತಂದಿದ್ದಾನೆ;

ಹಾಗೆಯೆ ಕ್ಷುದ್ರ ಅಧಿಕಾರಿಗಳಾದ 'ಕಾಯಸ್ಥ'ರ ದಬ್ಬಾಳಿಕೆಯನ್ನೂ ಬಯಲಿಗೆಳೆದಿದ್ದಾನೆ; ಬ್ರಾಹ್ಮಣ ಪುರೋಹಿತರ ರಾಜಕೀಯ ಚಾಣಾಕ್ಷತೆಯನ್ನೂ ಅವನು ಅಳೆದು ತೂಗಿದ್ದಾನೆ. ಈ ಬ್ರಾಹ್ಮಣರು ತಮ್ಮ ಬೇಳೆ ಬೇಯಿಸಿಕೊಳ್ಳಲು ದುರ್ಬಲ ರಾಜರನ್ನು ಪುಸಲಾಯಿಸಲು 'ಪ್ರಾಯೋಪವೇಶ' (ಆಮರಣ ಉಪವಾಸ) ಮಾಡುತ್ತಿದ್ದರು ಎಂದು ನಗೆಯಾಡುತ್ತಾನೆ. ಬೇರೆ ಸಂದರ್ಭಗಳಲ್ಲಿ, ಅವನು ಅವರ ಒಣಜಂಭ ಮತ್ತು ಪುಕ್ಕಲುತನದ ವಿಚಿತ್ರ ಮೇಳವಿಕೆಯನ್ನು ಗೇಲಿಮಾಡುತ್ತಾನೆ.

ಲಲಿತಾದಿತ್ಯನ (ಮತ್ತು ಅವನಂಥ ಬಲಿಷ್ಠ ರಾಜರ) ಆಡಳಿತದಲ್ಲಿ ಜನ ಗುಲಾಮರಂತೆ ಬದುಕಿದರು. ಜೀವನದ ಉತ್ತಮ ಅಂಶಗಳೆಲ್ಲ ಹಿಂದೆ ಹೇಳಿದ ಡಾಮರರು ಮತ್ತು ಅಂಥ ಇತರರಿಂದ ಪ್ರತಿನಿಧಿಸಲ್ಪಟ್ಟ ಉಂಬಳಿಮಾನ್ಯರ ಶ್ರೀಮಂತವರ್ಗದ ಸೊತ್ತಾಯಿತು. ಈ ದುಡ್ಡಿನ ಮಂದಿ ಮತ್ತು ಅರಮನೆಯ ದರ್ಬಾರಿಗಳು ಕಾಶ್ಮೀರದ ಖ್ಯಾತವಾದ ಪಾಕ ವೈವಿಧ್ಯಗಳನ್ನು ಹೊಟ್ಟೆಬಾಕರಂತೆ ಮುಕ್ಕಿ ಸವಿದರು. ಅವರಿಗೆ ತಿನ್ನಲಿಕ್ಕೆ "ಹುರಿದ ಮಾಂಸ" ಇತ್ತು; ಕಡಿಯಲಿಕ್ಕೆ "ಮಂಜು ಬೆರೆತು ತಂಪು ಸೂಸುವ, ಹೂ ಪಕಳೆಯಿಂದ ಕಂಪು ಬೀರುವ ದ್ರಾಕ್ಷಾರಸದ ಲಘುಮದ್ಯ" ಇತ್ತು. (ಈ ದ್ರಾಕ್ಷೆಯ ಕಳ್ಳಿನ ಬಳಕೆ ಬಹಳ ಹಿಂದಿನಿಂದಲೂ ಇತ್ತು. ಉತ್ಸವದ ಆಚರಣೆಗಳಲ್ಲಿ ದ್ರಾಕ್ಷಾಮದ್ಯದ ಬಳಕೆಯ ಉಲ್ಲೇಖ ನೀಲಮತಪುರಾಣದಲ್ಲು ಉಂಟು.) ಸಾಮಾನ್ಯ ಜನರಿಗೋಸ್ಕರ ಅಕ್ಕಿ ಮತ್ತು ಹಾಖ್‌ಸಸ್ಯ (ಕಾಶ್ಮೀರದ ಒಂದು ಬೆಳೆ) ಗಳೇ ಹೊಟ್ಟೆಗೆ ಗತಿ. ಕ್ಷಾಮ-ಡಾಮರಗಳಲ್ಲಿ ಅದಕ್ಕೂ ಸಂಚಕಾರ; ದರಿದ್ರರ ಬಗ್ಗೆ ದಲಿತರ ಬಗ್ಗೆ ಕಲ್ಹಣನ ಸಹಾನುಭೂತಿ ಈ ಗ್ರಂಥದಲ್ಲಿ ವ್ಯಕ್ತವಾಗಿದೆ. ತರಂಗ IV, ಶ್ಲೋಕ 397 ರಲ್ಲಿ, ನಿರ್ದಯಿಯೂ ವಿಷಯಲಂಪಟನೂ ಆದ ರಾಜ ವರ್ಧಾದಿತ್ಯನ ಬಗ್ಗೆ ಅವನು ಹೀಗೆ ಹೇಳುತ್ತಾನೆ: "ಆತ ಗಂಡಾಳುಗಳನ್ನು[1] ಮ್ಲೇಚ್ಛರಿಗೆ ಮಾರಿದನು." ಮತ್ತು ಈ ಗುಲಾಮವ್ಯಾಪಾರ ಪದ್ಧತಿಯನ್ನು ಅವನು ಹೀಗೆ ವಿಶ್ಲೇಷಿಸುತ್ತಾನೆ: "ಆತ ಮಾಡಿದ ಕೆಲಸ ಮ್ಲೇಚ್ಛರಿಗೇ ಹೇಳಿದ ಕೆಲಸ".

ವಿದೇಶೀಯ ವ್ಯಾಪಾರವೂ ಕುದುರಿದ್ದ ಕಾಶ್ಮೀರದ ವ್ಯಾಪಾರೀ ಉದ್ಯಮದ ಸಮೃದ್ಧಿ (ಕಾಶ್ಮೀರ ತನ್ನ ಸುತ್ತುಮುತ್ತಲ ಪರ್ವತೀಯ ಪ್ರಾಂತಗಳ ಮೇಲೆ ಸಾರ್ವಭೌಮಾಧಿಕಾರ ಪಡೆದಿದ್ದ ಮತ್ತು ಅದರ ವ್ಯಾಪಾರದ ಜಾಲ ಮಧ್ಯ ಏಶಿಯಾದ ತನಕವೂ ಹರಡಿದ್ದ ಕ್ರಿ.ಶ. 7ನೆಯ ಶತಕದಿಂದ 9ನೆಯ ಶತಕದ ಕಾಲಾವಧಿಯಲ್ಲಿ ಅತ್ಯುತ್ಕರ್ಷದಲ್ಲಿದ್ದು) 10ನೆಯ ಶತಕದ ಅನಂತರ ಕ್ರಮೇಣ ಇಳಿಮುಖವಾಯಿತು. ಪರಿಣಾಮ:

---

[1] ಈ ಮ್ಲೇಚ್ಛರು ಗಡಿನಾಡಿನ ಬುಡಕಟ್ಟಿನ ಜನಾಂಗವಾಗಿ ತರಂಗ VIII ರಲ್ಲು ಉಲ್ಲೇಖಗೊಂಡಿದ್ದಾರೆ. ಅವರು ರಾಜಕುಮಾರ ಭೋಜನಿಗೆ ನೆರವು ನೀಡಿದ್ದರು. ಈಗಲೂ ಕಾಶ್ಮೀರಿ ಪಂಡಿತರು ಮ್ಲೇಚ್ಛಶಬ್ದವನ್ನು ಅವಿಶ್ವಸನೀಯ, ಕೊಳಕ, ಅಸಂಸ್ಕೃತ ಎಂಬ ಅರ್ಥದಲ್ಲಿ ಬಳಸುತ್ತಾರೆ. ಅದರಿಂದ ಮ್ಲೇಚ್ಛವರಿಗೆ ಸಮಾಜದಲ್ಲಿ ಗೌರವದ ಸ್ಥಾನವಿರಲಿಲ್ಲ ಎನ್ನುವುದು ಸ್ಪಷ್ಟ. ಆದರೆ ಕಲ್ಹಣ ಇಲ್ಲಿ ಗ್ರೀಕರನ್ನು ಉದ್ದೇಶಿಸಿ ಈ ಶಬ್ದವನ್ನು ಬಳಸಿರುವ ಸಂಭವ ಉಂಟು.

ಕಲ್ಹಣನ ಕಾಲಕ್ಕಿಂತ ಬಹಳ ಮೊದಲೇ ಅಪಾರಶ್ರೀಮಂತರು ಮತ್ತು ಸಮಾಜದ ಬಲಿಷ್ಠ ವರ್ಗ ಎಂದು ವರ್ತಕರು ಪಡೆದಿದ್ದ ಸಾಮಾಜಿಕ ಮಹತ್ವ ಕಮ್ಮಿಯಾಗತೊಡಗಿತ್ತು. ರಾಜತರಂಗಿಣಿ ಉಲ್ಲೇಖಿಸುವ ವರ್ತಕರು "ಸ್ವಭಾವತಃ ಕಪಟಿಗಳು." ಕಲ್ಹಣ ಒಂದೆಡೆ ಅವರನ್ನು ಹೀಗೆ ವಿಡಂಬಿಸುತ್ತಾನೆ:

"ಇಡುಗಂಟು ತಿಂದು ಹಾಕುವ ಈ ವರ್ತಕರು ಧರ್ಮಗ್ರಂಥಗಳ ವಾಚನವನ್ನು ಕೇಳಲು ಎಲ್ಲಿಲ್ಲದ ಶ್ರದ್ಧೆ ತೋರಿಸುತ್ತಾರೆ". ಡಾಮರರು ತಾವೂ ಈ ಉದ್ದಿಮೆಗೆ ಕೈ ಹಾಕಿದ್ದರಿಂದ ವರ್ತಕರು ಮೋಸದ ದಾರಿ ಹಿಡಿಯುವುದು ಅನಿವಾರ್ಯವೂ ಆಗಿತ್ತು.

ಬೇಸಾಯಗಾರರು ಮತ್ತು ವ್ಯಾಪಾರಿಗಳಲ್ಲದೆ, ಸಮಾಜದಲ್ಲಿ ಇತರ ದುಡಿಮೆಯ ವರ್ಗಗಳೂ ಇದ್ದುವು. ಅದರಲ್ಲಿ, ರಾಜತರಂಗಿಣಿಯಲ್ಲಿ ಉಲ್ಲೇಖಗೊಂಡ ಕೆಲವು ಇವು: ಶಿಕ್ಷಕರು, ಜೋಯಿಸರು, ವೈದ್ಯರು, ಕೂಲಿಕಾರರು, ಕಾರಭಾರಿಗಳು, ಶಿಲ್ಪಿಗಳು, ಬಂಡಿ ಬೋವರು, ನೀರ್ಗಾಲಿಗಳ ಮತ್ತು ಕೈಗಿರಣಿಗಳ ಕೆಲಸಗಾರರು. ಸೈನಿಕರೂ ಸಾಕಷ್ಟು ಸಂಖ್ಯೆಯಲ್ಲಿದ್ದರು. ಈ ಔದ್ಯೋಗಿಕ ವರ್ಗಗಳಲ್ಲಿ ಮತ್ತೆ ಪುನಃ ವಿಭಾಗಗಳೂ ಉಪ ವಿಭಾಗಗಳೂ ಇದ್ದವು.

ಆಡಳಿತ ನಡೆಸುವ ಅರಮನೆಯ ಅಧಿಕಾರಿಗಳಲ್ಲಿ ಪ್ರಧಾನವಾಗಿ ಎರಡು ಪಂಗಡ: ಶ್ರೀಮಂತವರ್ಗ ಮತ್ತು ದರ್ಬಾರಿಗಳು — ಎರಡನೆಯ ಗುಂಪನ್ನು 'ಕಾಯಸ್ಥರು' ಎಂದು ಕರೆಯುತ್ತಿದ್ದರು. ಮೊದಲನೆಯ ಗುಂಪಿನ ಶ್ರೀಮಂತವರ್ಗದ ಸದಸ್ಯರು ರಾಜ್ಯದ ಹಿರಿಯ ಅಧಿಕಾರಿಗಳಾಗಿ ಅತ್ಯಧಿಕ ವೇತನ ಪಡೆಯುತ್ತಿದ್ದರು. ಕೆಲವರು ವಿಶಾಲವಾದ ಸ್ಥಿರಾಸ್ತಿ (ಎಸ್ಟೇಟು) ಗಳ ಒಡೆಯರೂ ಆಗಿದ್ದರು. ಕಾಯಸ್ಥ ಅಧಿಕಾರಿಗಳಲ್ಲಿ ಈ ಕೆಳಗಿನ ವಿಶಿಷ್ಟ ಅಧಿಕಾರದ ಹುದ್ದೆಗಳಿದ್ದವು: ಗೃಹಕೃತ್ಯಾಧಿಪತಿ ಅಥವಾ ಮಹತ್ತಮ, ಪರಿಪಾಲಕ, ಮಾರ್ಗೇಶ ಅಥವಾ ಮಾರ್ಗಪತಿ, ಶೌಲ್ಕಿಕ, ನಿಯೋಗಿ, ನಗರದಿವಿರ, ಗ್ರಾಮದಿವಿರ ಇತ್ಯಾದಿ. ಇವರೆಲ್ಲರ ಕೆಲಸ ಒಂದಲ್ಲ ಒಂದು ಬಗೆಯಿಂದ ಕರ — ಕಂದಾಯಗಳ ವಸೂಲಿಯೇ ಆಗಿತ್ತು. ಕಾಯಸ್ಥರು ಅರಮನೆಯ ಬೊಕ್ಕಸದಿಂದ ಸಂಬಳ ಪಡೆಯುತ್ತಿದ್ದರೂ ಆಗಾಗ್ಗೆ ಅವ್ಯಕ್ತ ವಿಧಾನಗಳಿಂದ ಮೇಲು ಸಂಪಾದನೆಯನ್ನೂ ಮಾಡಿಕೊಳ್ಳುತ್ತಿದ್ದರು. ಕಲ್ಹಣ ಹೇಳುತ್ತಾನೆ: ಜಯಾಪೀಡನ ಆಡಳಿತದ ಅವಧಿಯಲ್ಲಿ ಈ ಕಾಯಸ್ಥರು ದುರ್ವ್ಯಯಿ ಪ್ರಜೆಗಳ ಸೊತ್ತುಗಳನ್ನು ಕಸಿದುಕೊಂಡರು. ತಾವು ಹೀಗೆ ಸಂಗ್ರಹಿಸಿದ ಮೊತ್ತದ ಅತ್ಯಲ್ಪ ಅಂಶವನ್ನು ಮಾತ್ರವೆ ರಾಜನಿಗೆ ಮುಟ್ಟಿಸಿದರು (IV, 629). ಇತರ ರಾಜರ ಆಡಳಿತದಲ್ಲಿ ಅವರು ಅದೇ ಬಗೆಯಲ್ಲಿ ಪ್ರಜಾಪೀಡಕರೇ ಆಗಿದ್ದರು. ಪ್ರಾಯಃ ಇದಕ್ಕೆ ಕಾರಣ: ಆಡಳಿತಗಳ ಅಲ್ಪಾಯುಷ್ಯ ಮತ್ತು ಅಸ್ಥಿರತೆ; ಸಿಂಹಾಸನದ ಅಧಿಕಾರ ಬದಲಾದಾಗೆಲ್ಲ ಸಿಕ್ಕಾಬಟ್ಟೆ ಅಧಿಕಾರಿಗಳ ಬದಲಾವಣೆ ಮತ್ತು ತಮಗೆ ಬೇಕಾದ ಮಂದಿಗೆ ಹೊಸ ನೇಮಣೂಕಿಗಳು.

ರಾಜತರಂಗಿಣಿಯ ಮೊದಲ ಮೂರು ತರಂಗಗಳಲ್ಲಿ ಕಾಯಸ್ಥರ ಉಲ್ಲೇಖ

ವಿಲ್ಲ. ನಾಲ್ಕನೆಯ ತರಂಗದ ಅನಂತರ, ಮುಂದಕ್ಕೆ ಹೆಚ್ಚು ಹೆಚ್ಚು, ಹೊಸ ಹೊಸ ಹುದ್ದೆಗಳಲ್ಲಿ ಅವರ ಉಲ್ಲೇಖ ಬರುತ್ತದೆ. ಜನಸಂಖ್ಯೆ ಬೆಳೆದಂತೆ ನೆಲದ ಒತ್ತಡ ಹೆಚ್ಚಾಯಿತು. ಬೇಸಾಯಕ್ಕೆ ಬರುವ ಪ್ರತಿಯೊಂದು ಅಂಗುಲ ನೆಲವನ್ನೂ ಜನರಿಗೆ ಹಂಚಬೇಕಾಯಿತು. ಪರಿಣಾಮವಾಗಿ, ಕರ - ಕಂದಾಯದ ವಸೂಲಿಗಾಗಿ ರಾಜ ಹೆಚ್ಚು ಮಂದಿ ಅಧಿಕಾರಿಗಳನ್ನು ನಿಯಮಿಸಬೇಕಾಯಿತು. ಕರ್ಕೋಟರ ಪತನದ ಅನಂತರ, ವಿದೇಶಗಳೊಡನಿದ್ದ ವಾಣಿಜ್ಯ ವ್ಯವಹಾರಗಳು ಬಹುಮಟ್ಟಿಗೆ ಸ್ಥಗಿತಗೊಂಡಾಗ, ರಾಜ್ಯಾಡಳಿತ ತನ್ನ ಆದಾಯಕ್ಕಾಗಿ ಭೂ ಹುಟ್ಟುವಳಿಯನ್ನೆ ಮುಖ್ಯವಾಗಿ ಅವಲಂಬಿಸಬೇಕಾಯಿತು. ಇಂಥ ಸ್ಥಿರಾಸ್ತಿ (ಎಸ್ಟೇಟು) ಗಳ ಮೇಲ್ವಿಚಾರಣೆ ಮತ್ತು ಅವುಗಳಿಂದ ಸಾಧ್ಯವಾದಷ್ಟು ಹೆಚ್ಚು ಭೂಕಂದಾಯ ಪಡೆಯಲು ಹೆಚ್ಚು ಮಂದಿ ಕಾಯಸ್ಥರ ನೇಮಣೂಕಿ ಅನಿವಾರ್ಯವಾಯಿತು.

ಬ್ರಾಹ್ಮಣರೂ ಕಾಯಸ್ಥರಾಗಿದ್ದರು ಎಂಬ ಕಲ್ಹಣನ ಹೇಳಿಕೆ (VIII, 2383) ಗಮನಾರ್ಹವಾದದ್ದು. ಇದರಿಂದ, ಹಳೆಯ ಕಾಶ್ಮೀರದಲ್ಲಿ ಕಾಯಸ್ಥ ಎಂದರೆ ಒಂದು ವಿಶಿಷ್ಟವಾದ ಜಾತಿಯಲ್ಲ ಎಂದು ತಿಳಿಯುತ್ತದೆ. "ಕಾಯಸ್ಥ" ಹುದ್ದೆ ಜಾತಿ ಮತಗಳ ಪ್ರಭೇದವಿಲ್ಲದೆ ಎಲ್ಲರಿಗೂ ತೆರೆದಿತ್ತು. ಒಬ್ಬ ಉದ್ಯಾನಪಾಲಕ ಕೂಡ ಕಾಯಸ್ಥನಾಗಬಲ್ಲ. ಕೆಳಗಿನ ಹುದ್ದೆಯಲ್ಲಿದ್ದ ಕಾಯಸ್ಥ ಮೇಲಿನ ಹುದ್ದೆಗೆ ಬಡ್ತಿಹೊಂದಬಲ್ಲವನಾಗಿದ್ದ (VIII, 38 - 39).

ರಾಜಾ ಉಚ್ಚಲ "ಪ್ರಜೆಗಳನ್ನು ಪ್ರೀತಿಸುತಿದ್ದ" ಮತ್ತು "ಸ್ವಭಾವತಃ ದುಡ್ಡಿನ ಬಗ್ಗೆ ಬಾಯಿ ಬಿಡುವ ಆಸೆಬುರುಕನಾಗಿರಲಿಲ್ಲ" (ತರಂಗ VIII); ಅವನು ("ಕೊಲೆಗೇಡಿಗಳಾದ, ಪರರ ದುಡ್ಡುದೋಚುವ ಲಂಚಕೋರರಾದ") ಕಾಯಸ್ಥ ಅಧಿಕಾರಿಗಳನ್ನು ನಿರ್ಮೂಲ ಮಾಡುವ ಮೂಲಕ ಅವರಿಂದ ಪ್ರಜೆಗಳನ್ನು ಪಾರುಮಾಡಲು ಮುಂದಾದನು. ಕಾಯಸ್ಥರ ಆಗಣ ಪಾಡನ್ನು ಚಿತ್ರಿಸುತ್ತ ಕಲ್ಹಣ ಹೇಳುತ್ತಾನೆ:

ಯತ್ ತೇ ವಿಮೂಚಿಕಾಶೂಲಸನ್ನಾಸೇಚ್ಛಃ ಕಿರೇತರೇ ।
ಘ್ನಂತ್ಯಾಶುಕಾರಿಣೋ ವಿಶ್ವಂ ಪ್ರಜಾರೋಗಾ ನಿಯೋಗಿನಃ ।। 88

"ಈ ಅಧಿಕಾರಿಗಳು ಕಾಲರಾದಂತೆ, ವಾತದ ಬೇನೆಗಳಂತೆ, ಶಕ್ತಿಕ್ಷಯದಂತೆ ವೇಗವಾಗಿ ಹಬ್ಬಿ ಜನಾಂಗವನ್ನು ಕಾಡುವ ಕಾಯಿಲೆಗಳು."

ಪಿತರಂ ಕರ್ಕಟೋ ಹಂತಿ ಮಾತರಂ ಹಂತಿ ಪುತ್ತಿಕಾ ।
ಹಂತಿ ಸರ್ವಂ ತು ಕಾಯಸ್ಥ ಕೃತಘ್ನಃ ಪ್ರಾಪ್ತಸಂಭವಃ ।। 89

"ಏಡಿ ತನ್ನ ತಂದೆಯನ್ನು ಕೊಲ್ಲುತ್ತದೆ. ಗೆದ್ದಲು ತಾಯಿಯನ್ನು ಕೊಲ್ಲುತ್ತದೆ. ಅಧಿಕಾರಕ್ಕೇರಿದ ಕೃತಘ್ನನಾದ ಕಾಯಸ್ಥ ಸರ್ವವನ್ನೂ ನಾಶಮಾಡುತ್ತಾನೆ."

ವಿಷವೃಕ್ಷೋ ನಿಯೋಗೀ ಚ ಯದೇವಾಶ್ರಿತ್ಯ ವರ್ಧತೇ ।
ಚಿತ್ರಂ ಕರೋತಿ ತಸ್ಯೈವ ಸ್ಥಾನಸ್ಯಾನಭಿಗಮ್ಯತಾಮ್ ॥ 91

"ಅಧಿಕಾರಿ ಮತ್ತು ವಿಷವೃಕ್ಷ ತಮಗೆ ಆಸರೆ ನೀಡಿ ಬೆಳೆಸಿದ ತಾಣವನ್ನೆ ಕೆಡಿಸಿ ಬೇರೊಬ್ಬರು ಬಳಿಸಾರದಂತೆ ಮಾಡಿಬಿಡುತ್ತವೆ. ಎಂಥ ಅಚ್ಚರಿ!"

ಕಾರ್ಯಾನ್ನಿವಾರ್ಯ ಬಹುಶಃ ಸಹೇಲಾದ್ಯಾನ್ ಮಹತ್ತಮಾನ್ ।
ಭಂಗಾಸೂತ್ರಮಯಂ ವಾಸಃ ಕಾರಾಯಾಂ ಪರ್ಯಧಾಪಯತ್ ॥ 93

"ಸಹೇಲ ಮುಂತಾದ ಹಲವಾರು 'ಮಹತ್ತಮ' ಅಧಿಕಾರಿಗಳನ್ನು ಆ ಹುದ್ದೆಯಿಂದ ವಜಾಗೊಳಿಸಿ, ಅವರಿಗೆ ಗೋಣಿಸಾರಿನ ಬಟ್ಟೆ ತೊಡಿಸಿ ಸೆರೆಯಲ್ಲಿರಿಸಿದನು."

ಬದ್ಧ್ವಾನ್ಯಂ ಶಕಟೇ ನಗ್ನಂ ಕ್ಷುರಲೂನಾರ್ಧ ಮಸ್ತಕಮ್ ।
ಅಕಾರಯತ್ ಸಟಾನ್ಯಸ್ತ ಚೀನಪಿಷ್ಟಚ್ಛಟಾಂಕಿತಮ್ ॥ 97

"ಇನ್ನೊಬ್ಬ (ಲಂಚಕೋರ) ಅಧಿಕಾರಿಯನ್ನು ಬತ್ತಲೆಮಾಡಿ ಗಾಡಿಗೆ ಕಟ್ಟಿಸಿದ. ಬಾಳಿನಿಂದ ಅರ್ಧ ತಲೆ ಬೋಳಿಸಿ, ಉಳಿದ ಜಡೆಗೆ ರಂಗಿನ ಪುಡಿ ಹಾಕಿಸಿದ."

ತೇ ಕುಂಭವಾದನೈರ್ಮುಂಡ ಮುಂಡನೈಶ್ಚಾಂಕಿತಾಭಿಧಾಃ ।
ನೈಯೋಗಿನೋ ಭಗ್ನಮಾನಾಃ ಸರ್ವತಃ ಖ್ಯಾತಿಮಾಯಯುಃ ॥ 98

"ಆ ಅಧಿಕಾರಿಗಳು, ಮಾನ ಕಳೆದುಕೊಂಡವರಾಗಿ ತಾವು ಅನುಭವಿಸಿದ ಶಿಕ್ಷೆಗೆ ಅನುಗುಣವಾಗಿ — 'ಘಟವಾದ್ಯ' , 'ಬಣ್ಣದ ಮಂಡೆ' ಮುಂತಾದ ಅಡ್ಡಹೆಸರಿನಿಂದಲೆ ಎಲ್ಲೆಡೆಯು ಖ್ಯಾತರಾದರು."

ಎಚ್ಚರಿಕೆಯಿಂದ, ಜವಾಬುದಾರಿಕೆಯಿಂದ ನಡೆದುಕೊಂಡ ನ್ಯಾಯನಿಷ್ಠರಾದ ಅಧಿಕಾರಿಗಳೂ ಇಲ್ಲದೆ ಇಲ್ಲ. ಒಮ್ಮೆ ಲಲಿತಾದಿತ್ಯ (ತರಂಗ IV) ತನ್ನ ರಾಜಧಾನಿ ಪರಿಹಾಸಪುರದಲ್ಲಿ ಕುಡಿದ ಅಮಲಿನಲ್ಲಿದ್ದ. ದೂರದಲ್ಲಿ, ಹಳೆಯ ನಗರ ಪ್ರವರಪುರದ ದೀಪದ ಬೆಳಕು ಅವನ ಕಣ್ಣಿಗೆ ಬಿತ್ತು. ಅದನ್ನು ಸುಟ್ಟು ಬಿಡುವಂತೆ ಅವನು ತನ್ನ ಮಂತ್ರಿಗಳಿಗೆ ಆಜ್ಞಾಪಿಸಿದನು. ಆದರೆ ಅವರು, ಅದರ ಬದಲು, ಅಶ್ವದಳಕ್ಕೆಂದು ಒಟ್ಟಿದ್ದ ಹುಲ್ಲಿನ ಬಣಬೆಗೆ ಬೆಂಕಿಯಿಡಿಸಿದರು. ಅಮಲೇರಿದ ರಾಜ ಅದನ್ನು ಕಂಡು ತನ್ನ ಆಜ್ಞೆ ಈಡೇರಿತೆಂದೆ ಭಾವಿಸುವಂತಾಯಿತು. ಮರುದಿನ, ನಿಜಸಂಗತಿ ತಿಳಿದಾಗ, ಅವರು ವಿವೇಚನೆಯಿಂದ ನಡೆದುಕೊಂಡದ್ದಕ್ಕಾಗಿ ರಾಜ ಅವರನ್ನು ಶ್ಲಾಘಿಸಿ ಹೀಗೆ ಹೇಳಿದ: "ನಾನು ಅಮಲಿನಲ್ಲಿದ್ದಾಗ ನನ್ನ ಬಾಯಿಂದ ಬಂದ ಆಣತಿಯನ್ನು ಎಂದೂ ಅನುಷ್ಠಾನಕ್ಕೆ ತರಬೇಡಿ." ಈ ನಿಟ್ಟಿನಲ್ಲಿ, ಇಂದಿನ ಅಧಿಕಾರಿಗಳಿಗೂ ಉಪಯುಕ್ತವಾದಂಥ ಒಂದು ಮಾತನ್ನು ಕಲ್ಹಣ ಆಡಿದ್ದಾನೆ:

ಪ್ರಿಯಮನುಚಿತಂ ಕ್ಷ್ಮಾಪಣ್ಯಸ್ತ್ರೀ ಕ್ಷಣಪ್ರಭುರೀಶ್ವರೋ
ರಮಯತಿ ಯತೋ ಧಿಕ್‌ತಾನ್ ಭೃತ್ಯಾನ್ ಸ್ವವೃತ್ತಿ ಸುಖಾರ್ಥಿನಃ ।

ನೃಪಮಪಥಗಂ ಪಾಂತಿ ಪ್ರಾಣಾನುಪೇಕ್ಷ್ಯ ನಿಜಾನಪಿ
ಪ್ರಸಭಮಿಹ ಯೇ ತೈಃ ಪೂತೇಯಂ ಮಹಾತ್ಮಭಿರುರ್ವರೀ || 321

"ಭೂಮಿ ಒಂದು ಬೆಲೆವೆಣ್ಣು. ರಾಜ ಅದರ ಒಂದು ಕ್ಷಣದ ಒಡೆಯ. ಅಂಥವನನ್ನು ಕೆಲವು ಅಧಿಕಾರಿಗಳು ಆಯುಕ್ತವಾದ ಸುಖ ಭೋಗಗಳಲ್ಲಿ ತೊಡಗಿಸಿ ತಲೆಗೆಡಿಸಿ ಬಿಡುತ್ತಾರೆ. ತಮ್ಮ ಸುಖ - ಸಂಪತ್ತು, ಸಂಬಳ-ಸಾರಿಗೆಗಳಲ್ಲಿ ಮಾತ್ರವೆ ಆಸಕ್ತರಾದ ಇಂಥ ಸ್ವಾರ್ಥಿ ಅಧಿಕಾರಿಗಳಿಗೆ ಧಿಕ್ಕಾರವಿರಲಿ. ತಮ್ಮ ಪ್ರಾಣದ ಹಂಗನ್ನಾದರೂ ತೊರೆದು, ದಾರಿತಪ್ಪಿದ ದೊರೆಯನ್ನು ಬಲವಂತವಾಗಿಯಾದರೂ ತಿದ್ದಿ ಕಾಪಾಡುವವರು ನಿಜವಾಗಿ ಮಹಾತ್ಮರು. ಇಂಥವರಿಂದ ಈ ಭೂಮಿ ಪಾವನಗೊಂಡಿದೆ."

ನಿರ್ದಿಷ್ಟವಾದ ಚಾತುರ್ವರ್ಣ್ಯದ ಉಲ್ಲೇಖ ಬರದಿದ್ದರೂ ರಾಜತರಂಗಿಣಿ ಹಲವಾರು ಕೆಳಜಾತಿಗಳನ್ನು ಉಲ್ಲೇಖಿಸುತ್ತದೆ. ಉದಾ:- ನಿಷಾದರು, ಕಿರಾತರು, ಕೈವರ್ತರು, ಡೊಂಬರು, ಶ್ವಪಾಕರು ಮತ್ತು ಚಂಡಾಲರು. ಬ್ರಾಹ್ಮಣರದು ಹೆಚ್ಚು ಗೌರವದ ಜಾತಿಯಾಗಿತ್ತು. ಬೇರೆಡೆಗಳಿಂದ ಈ ಕಣಿವೆಗೆ ಬಂದು ನೆಲಸಿದಂದಿನಿಂದಲೂ ಅವರಿಗೆ ಎಲ್ಲ ಗೌರವಾದರಗಳೂ ಸಲ್ಲುತಿದ್ದವು. ಅವರು ರಾಜನಿಗೆ ಮಂತ್ರಿಗಳಾಗಿದ್ದರು; ಸಲಹೆಗಾರರಾಗಿದ್ದರು. ಅವರು ಬಯಸಿದರೆ ಸೈನಿಕ ಅಥವಾ ರಾಜಕೀಯ ಉದ್ಯೋಗಗಳಲ್ಲು ಇರಬಹುದಿತ್ತು. ಆದರೆ ಹೆಚ್ಚಿನವರು ಧಾರ್ಮಿಕ ಗ್ರಂಥಗಳ ಅಧ್ಯಾಪನ ಅಥವಾ ಪೌರೋಹಿತ್ಯದಿಂದಲೆ ಬದುಕು ಸಾಗಿಸುತ್ತಿದ್ದರು. ದೇವಾಲಯಗಳ ಪೂಜಾರಿಗಳು, ರಾಜಶಾಸನದಂತೆ (ii, 132), ದೇವಾಲಯಕ್ಕೆ ಸೇರಿದ ಗ್ರಾಮಗಳ ಆದಾಯವನ್ನು ಅನುಭವಿಸುತ್ತ ಬೆಚ್ಚಗೆ ಭದ್ರವಾಗಿದ್ದರು. ಕೆಲವೊಮ್ಮೆ ಅವರು ದೇವಸ್ಥಾನದ ಖಾತೆಯ ಮಿಗತೆ ಸೊತ್ತುಗಳನ್ನು, ಹೂಗಳನ್ನು, ಧೂಪ ಮುಂತಾದ ಸುಗಂಧದ್ರವ್ಯಗಳನ್ನು ಜನರಿಗೆ ಮಾರುತ್ತಿದ್ದರು (v, 168).

ಪ್ರಾಯಃ ನಿಷಾದರು ಆದಿವಾಸಿ ಬುಡಕಟ್ಟಿನವರು. ಕಲ್ಹಣನ ಪ್ರಕಾರ, ಕಿರಾತರು, ಇನ್ನೊಂದು ಕೀಳು ಜಾತಿಯ ಜನಾಂಗ, ಕಾಡಿನಲ್ಲಿ ಪ್ರಾಣಿಗಳನ್ನು ಹೊಡೆದುಕೊಂದು ಬದುಕುತ್ತಿದ್ದರು. ಡೊಂಬರನ್ನು ಕೀಳು ಕೆಲಸದ ಜಾತಿಯವರೆಂದು ಅವನು ಹಲವೆಡೆ ಉಲ್ಲೇಖಿಸಿದ್ದುಂಟು. ಕೆಲವೊಮ್ಮೆ ಅವರು ಚಂಡಾಲರ [2] ಜತೆ ಹೊಕ್ಕುಬಳಕೆ ಮಾಡಿದ್ದುಂಟು. ಡೊಂಬರಲ್ಲಿ ಹಾಡುಗಾರರು, ಸಂಗೀತಗಾರರು ಇದ್ದದ್ದನ್ನು ಕಲ್ಹಣ ಉಲ್ಲೇಖಿಸುತ್ತಾನೆ. ಅವರು ಮುಂದೆ ಜಾನಪದ ಸಂಗೀತಗಾರರಾಗಿ ಉಳಿದು ಬಂದರು.

ಒಟ್ಟಿನಲ್ಲಿ ಸಾಂಪ್ರದಾಯಿಕವಾದ ನಾಲ್ಕು ಪ್ರಧಾನ ಜಾತಿಗಳು, ಭಾರತದ ಇತರ

---

[2] ಅಲ್ಬೆರೂನಿ ಮತ್ತು ಕಲ್ಹಣ ಇಬ್ಬರ ಅಭಿಪ್ರಾಯದಂತೆಯೂ ಬಾಡಿಗೆಯ ಕೊಲೆಗಾರರಾಗಿ ಬಳಸಲ್ಪಡುತ್ತಿದ್ದರು. ಅದರಿಂದಲೆ ಇಂದಿಗೂ ಕಾಶ್ಮೀರಿಗಳು 'ಚಂಡಾಲ' ಶಬ್ದವನ್ನು ಕೊಳಕ, ತುಚ್ಛ ಎನ್ನುವ ಅರ್ಥದಲ್ಲಿ ಬಳಸಿದರೆ ಅಚ್ಚರಿಯೇನೂ ಇಲ್ಲ.

ಕಡೆಗಳಲ್ಲಿ ಹೇಗೆ ಹಾಗೆ ಕಾಶ್ಮೀರದಲ್ಲಿ ಪ್ರಚುರವಾಗಿರಲಿಲ್ಲ. ಅಲ್ಲಿ ಕ್ಷತ್ರಿಯರು, ವೈಶ್ಯರು, ಶೂದ್ರರು ಇಂಥ ಜಾತಿಯ ಬಳಕೆಯಿರಲಿಲ್ಲ. ಅವರವರ ಉದ್ಯೋಗಕ್ಕೆ ತಕ್ಕಂತೆ ಕಾಶ್ಮೀರಿಗಳನ್ನು ವರ್ಗೀಕರಿಸಲಾಗುತ್ತಿತ್ತು. ಹಿಂದೆ ಹೇಳಿದಂತೆ ಡಾಮರರು ಭೂಮಾಲಿಕರ ವರ್ಗ. ಕೈಗಾರಿಕೆ ಮತ್ತು ವಾಣಿಜ್ಯ ವರ್ತಕರ ಕೈಯಲ್ಲಿತ್ತು. ಅವರ ಕಾರ್ಯವಿಧಾನವನ್ನು ಹಿಂದೆ ವಿವರಿಸಿದ್ದಾಗಿದೆ. ಸಂಪತ್ತಿನ ವಿತರಣ ಪದ್ಧತಿಯಲ್ಲಿ ಸರ್ಕಾರಕ್ಕೆ ಅಧಿಕಾರವಿದ್ದರೂ ಪ್ರಾಚೀನ ಕಾಶ್ಮೀರದಲ್ಲಿ ವೈಯಕ್ತಿಕ ಸೊತ್ತುಗಳ ಮತ್ತು ಉದ್ಯಮಗಳ ಬಗೆಗೆ ಸರಕಾರ ಹಸ್ತಕ್ಷೇಪ ಮಾಡುತ್ತಿದ್ದುದು ತೀರ ವಿರಳ. ಆದರೆ ಬೆವರು ಸುರಿಸಿ ಮಣ್ಣಿನಲ್ಲಿ ಚಿನ್ನ ಬೆಳೆಸಿದವರಿಗೆ ತಮ್ಮ ಪರಿಶ್ರಮದ ಫಲವನ್ನು ಪೂರ್ತಿಯಾಗಿ ಸವಿಯಲು ಅವಕಾಶವಿರಲಿಲ್ಲ. ಕೆಲವೇ ಸವಲತ್ತಿನ ಮಂದಿ ಹೆಚ್ಚು ಕಡಿಮೆ ತಮ್ಮೊಳಗೆಯೇ ಇದನ್ನೆಲ್ಲ ಹಂಚಿಕೊಂಡು ಬಿಡುತ್ತಿದ್ದರು. ಆಗಿನ ಸಾಂಪತ್ತಿಕ ವಿತರಣ ವ್ಯವಸ್ಥೆ ಇದಕ್ಕೆ ಅನುಕೂಲವಾಗಿತ್ತು.

ಏಶಿಯನ್ನರು 'ಧರ್ಮಯುದ್ಧ' ಹೂಡಿದವರನ್ನು ಎದುರಿಸಬೇಕಾದ ಸಂದರ್ಭ. ಆಗ ಕಲ್ಹಣ ಬರೆಯುತ್ತ ಹಳೆಯ ರಾಜಧಾನಿ ಪ್ರವರಸೇನ ಪುರದ ಸಮೀಪ, ಅಶೋಕ ನಿರ್ಮಿಸಿದ ಶ್ರೀನಗರಕ್ಕೆ ರಾಜವಂಶೀಯರು ಮತ್ತು ಸ್ವತಂತ್ರಾಧಿಕಾರಿಗಳು ನೆರವಿ ಬಂದದ್ದನ್ನು ಚಿತ್ರಿಸುತ್ತಾನೆ. ಅವರ ಜತೆಗೆ ಬಂದ ಬ್ರಾಹ್ಮಣರನ್ನು, ದರ್ಬಾರಿಗಳನ್ನು, "ಚಂದ್ರಮುಖಿಯರಾದ" ಚೆಲು-ಹೆಂಗಳೆಯರ ಪರಿವಾರವನ್ನೂ ವರ್ಣಿಸುತ್ತಾನೆ. ಕಗ್ಗೊಲೆಯ ಕದನಗಳು, ಆಸ್ಥಾನದ ಒಳಸಂಚುಗಳಿಂದ ತುಂಬಿದ, ಗುಡಿಗೋಪುರಗಳ, ಧರ್ಮಸಂಸ್ಥೆಗಳ ನಿರ್ಮಾಣದಿಂದ ಮಾತ್ರವೆ ನೇರ್ಪುಗೊಂಡ ಆ ಹಳೆಯ ಯುಗದ ನೆನಪನ್ನು ನೀಡುತ್ತ ಈಗಲೂ ಉಳಿದಿರುವ, ಆ ನಗರದ ಹೆಗ್ಗುರುತುಗಳನ್ನು ಆತ ಉಲ್ಲೇಖಿಸುತ್ತಾನೆ. ನಗರದ ಗಡಿರೇಖೆಯಾಗಿ ನೆತ್ತಿಯಲ್ಲಿ ಜ್ಯೇಷ್ಠ ರುದ್ರನ ಹಳೆಯ ದೇವಾಲಯ (ಶಂಕರಾಚಾರ್ಯರ ದೇವಾಲಯ) ಹೊತ್ತ ಗೋಪಪರ್ವತ (ಈಗಣ ಹೆಸರು ಗುಪ್‌ಕಾರ್), ಶಾರಿಕಾ ಪರ್ವತ (ಹರಿ ಪರ್‌ಬತ್), ಮತ್ತು ಮುಂದಕ್ಕೆ ಹರವಿದ ಮೈದಾನಿನಲ್ಲಿ "ಅದ್ಭುತವಾದ ಮಾರ್ತಂಡದೇವಾಲಯ."

ಕಾಶ್ಮೀರಿ ಮಹಿಳೆಯರ ಜೀವನದ ಒಂದು ಒಳ್ಳೆಯ ಚಿತ್ರವನ್ನು ರಾಜತರಂಗಿಣಿಯು ನೀಡುತ್ತದೆ. ತಂದೆಯ ಮನೆಯಲ್ಲಿ ಕಳೆಯುವ ತಾರುಣ್ಯದ ದಿನಗಳಲ್ಲಿ ಅವರಿಗೆ ಧಾರಾಳವಾಗಿ ಸಾಂಸ್ಕೃತಿಕ ಶಿಕ್ಷಣ ನೀಡಲಾಗುತ್ತಿತ್ತು. ಅವರು ಸಂಸ್ಕೃತ ಮತ್ತು ಪ್ರಾಕೃತಗಳಲ್ಲಿ ನಿರರ್ಗಳವಾಗಿ ಮಾತನಾಡಬಲ್ಲವರಾಗಿದ್ದರು. ರಾಣಿಯರು ಮತ್ತು ಇತರ ಮಹಿಳೆಯರು ಸಾಮಾಜಿಕ ಕ್ಷೇತ್ರದಲ್ಲಿ ಸಾಧಿಸಿದ ಯಶಸ್ಸೆ ಅವರು ಆ ರಂಗಗಳಲ್ಲಿ ತಕ್ಕ ತರಬೇತಿ ಪಡೆದಿದ್ದರು ಎನ್ನುವುದಕ್ಕೆ ಗಮಕ. ಮುಕ್ತ ಸೌಂದರ್ಯೋಪಾಸಕನಾಗಿ ಕಲ್ಹಣ ತನ್ನದೇ ಆದ ರೀತಿಯಲ್ಲಿ ಮಹಿಳೆಯರ ಮೈಯಮಾಟದ ಆರಾಧಕನಾಗಿದ್ದ. ಅವರ ಒಟ್ಟಂದದ ಚಂದದ ಚೆಲುವನ್ನು, ಅದರಲ್ಲು ಅವರ ನೀಡಿದೋಳ ಚೆಲುವನ್ನು, ಕಾಳಿದಾಸನಂತೆ ಅವನೂ ಪ್ರೀತಿಸುತ್ತಿದ್ದ. ಮೊದಲನೆಯ ತರಂಗದಲ್ಲಿ (253), ಅವನು

'ನಾಗರಾಜ'ನ ಮಗಳನ್ನು "ಅಸಾಧಾರಣ ಸೌಂದರ್ಯದ ಮಹಿಳೆ" ಎಂದು ಹೇಳುತ್ತಾನೆ. ಅವಳ ಕೈ "ಕಮಲದ ಹೂವಿನಂತಿತ್ತು" ಎನ್ನುತ್ತಾನೆ.

"ಚೆಲುಗಣ್ಣಿನವಳಾದ" ಆ ಬ್ರಾಹ್ಮಣ ಗೃಹಿಣಿ, "ತನ್ನ ನೀಳವಾದ ಬೆರಳುಗಳ ಅಂಗೈಯ ಹೊಂಬಣ್ಣದ ಅಚ್ಚನಿಂದ" ರಾಜಾ ನರನನ್ನು ಹುಚ್ಚುಹಿಡಿಸಿದಳು. ಎಂಟ ನೆಯ ತರಂಗದಲ್ಲಿ (366), ಉಚ್ಚಲನ ರಾಣಿಯರನ್ನು ಬಣ್ಣಿಸುತ್ತ ಕಲ್ಹಣ ಹೇಳುತ್ತಾನೆ: "ಓಹ್, ಈ ಸ್ತ್ರೀಯರ ಹೃದಯ ಎಂಥ ನಿಗೂಢ! ಆ ಕುರುಳಿನ ಪೊದರಿನ ಕೊಂಕು, ಆ ಕುಡಿನೋಟದ ಕಡು ಚಪಲತೆ, ಆ ದುಂಡಗಿನ ಪೆರ್ಮೊಲೆಯ ಗಡಸು ಇವು ಮೂರು ಸೇರಿ ಅವರ ಹೃದಯದ ಒಳಬಗೆಯಲ್ಲಿ ಮಡುಗಟ್ಟಿವೆ. ಅವರ ಬಗೆಯನ್ನು ಯಾರಿಗೂ ಅರಿಯಲಳವಲ್ಲ!" ಹೆಂಗಸರ ದುರೂಹ್ಯತೆಯ ಬಗೆಗೆ ಬರೆದ ಇತರ ಮಹಾ ಕವಿಗಳಂತೆಯೇ ಕಲ್ಹಣನೂ ಆ ರಾಣಿಯರ ಬಗೆಗೆ ಬರೆಯುತ್ತ ಹೀಗೆ ಹೇಳುತ್ತಾನೆ: "ನಂಬಿಕೆಗೆ ದ್ರೋಹ ಬಗೆದ ನಡತೆಗೇಡಿಗಳು; ತಮ್ಮ ಗಂಡಂದಿರನ್ನೆ ಕೊಲ್ಲಿಸಲು ಹೇಸದವರು; ಆದರೂ ಆರಾಮವಾಗಿ ಬೆಂಕಿಗೆ ಹಾರಿ 'ಸತಿ' ಹೋಗುತ್ತಾರೆ! ಇಂಥ ಹೆಂಗಸರನ್ನು ಹೇಗೆಂದು ನಂಬಲಿ!"

ಸ್ತ್ರೀಯರ ಸೌಂದರ್ಯವೊಂದೇ ಮೆಚ್ಚಿಕೆಯನ್ನು ಸೆಳೆದದ್ದಲ್ಲ. ಅವರು ತಮ್ಮ ಕಾರ್ಯಗಳಲ್ಲಿ ಸ್ವತಂತ್ರರಿದ್ದರು — ಆರ್ಯ ಸಂಪ್ರದಾಯ ಒಪ್ಪಿಕೊಂಡಿದ್ದ ಸ್ತ್ರೀ ಸ್ವಾತಂತ್ರ್ಯ ಮತ್ತು ಸಮಾನತೆ ಕ್ರಿ.ಶ. 12 ನೆಯ ಶಕತದ ತನಕವೂ ಬಳಕೆಯಲ್ಲಿತ್ತು. ಕಾಶ್ಮೀ ರದ ಮಹಿಳೆಯರಿಗೆ ಬಹುಶಃ ಕೆಲವು ಆಸ್ತಿಯ ಹಕ್ಕುಗಳೂ ಕಾನೂನು ಬದ್ಧವಾದ ಸ್ವತಂತ್ರಸ್ಥಾನಮಾನಗಳೂ ಇದ್ದವು. ಗಮನಿಸಬೇಕಾದ ಮಾತೆಂದರೆ, (ಗಂಡಸರ ಕಣ್ಣು ಹರಿಯದಂತೆ ಹೆಂಗಸರನ್ನು ಮುಚ್ಚಿಡುವ) 'ಪರ್ದಾ' ಕ್ಕೆ ಸಂಸ್ಕೃತದಲ್ಲಿ ಪ್ರತಿಶಬ್ದವಿಲ್ಲ. ಇದರ ಕಲ್ಪನೆ ಮತ್ತು ಬಳಕೆ ಮುಸ್ಲಿಮರಿಂದ ಭಾರತಕ್ಕೆ ವಲಸೆ ಬಂದದ್ದು. ಸ್ತ್ರೀಯರ ಮುಚ್ಚುಮನೆ 'ಜನಾನಾ' ಕ್ಕೂ ಸಂಸ್ಕೃತದಲ್ಲಿ ಪ್ರತಿಪದವಿಲ್ಲ. ಕಾಶ್ಮೀರದ ಆಳರಸರು, ಭಾರತದ ಬೇರೆಡೆಗಳಂತೆ, ಬಹುಪತ್ನೀಕರಾಗಿದ್ದರು: ಆ ಸ್ತ್ರೀಯರು ಅಂತಃಪುರ (ಒಳ ಮನೆ) ಅಥವಾ ಶುದ್ಧಾಂತ (ಚೊಕ್ಕಟದ ಒಳಮನೆ) ಗಳಲ್ಲಿ ಇರುತ್ತಿದ್ದರು. ಸ್ತ್ರೀಯರಿಗೇ ಮೀಸಲಾದ ಒಂದು ಪ್ರತ್ಯೇಕತೆ ಎಂಬುದಿರಲಿಲ್ಲ. ಅಥವಾ ಅವರನ್ನು ಯಾವುದೇ ರೀತಿ ಯಿಂದ ಮುಚ್ಚಿಡುವ, ಬೇರ್ಪಡಿಸುವ ಸಂಪ್ರದಾಯವಿರಲಿಲ್ಲ ಎನ್ನುವುದನ್ನು ಕಲ್ಹಣನ ಈ ಗ್ರಂಥ ದೃಢಪಡಿಸುತ್ತದೆ. ಹಳೆಯ ಕಟ್ಟು-ಕಟ್ಟಳೆಗನುಸಾರವಾಗಿ, ಸಿಂಹಾಸನಾರೋ ಹಣದ ಸಮಯದಲ್ಲಿ ತಮ್ಮ ಗಂಡಂದಿರೊಡನೆ ರಾಣಿಯರಿಗೂ ಪವಿತ್ರ ಜಲದಿಂದ ಪಟ್ಟಾಭಿಷೇಕ ನಡೆಯುತ್ತಿದ್ದುದನ್ನು ಕಲ್ಹಣ ದಾಖಲೆ ಮಾಡಿದ್ದಾನೆ. ಹಾಗೆಯೇ, ರಾಣಿ ಯರಿಗೆ ತಮ್ಮದೇ ಆದ ಸಲಹೆಗಾರರಿದ್ದರು; ಅವರಿಗೇ ಮೀಸಲಾದ ಹಣದ ಖಾತೆ ಇತ್ತು; ಅವರದೇ ಪ್ರತ್ಯೇಕ ಕೋಶಾಧಿಕಾರಿಗಳಿದ್ದರು — ಎನ್ನುತ್ತಾನೆ ಕಲ್ಹಣ. ತನ್ನ ಸಲಹೆಗಾರರ ಸಹಾಯದಿಂದ ಸರಕಾರದ ಆಗುಹೋಗುಗಳಲ್ಲಿ ರಾಣಿಯೂ ಸಕ್ರಿಯವಾಗಿ ಭಾಗವಹಿಸಬಹುದಿತ್ತು. ಅದರಿಂದಲೆ ದಿದ್ದಾ, ಸುಗಂಧಾ, ಸೂರ್ಯಮತಿ ಮುಂತಾದ

ರಾಣಿಯರು ರಾಜತಂತ್ರದಲ್ಲಿ ಗಂಡಸರಿಗೆ ಸರಿಸಾಟಿಯಾಗಿದ್ದರೆ ಅಚ್ಚರಿಯೇನೂ ಇಲ್ಲ. ರಾಣಿಯರಿಗಿಂತ ಕೆಳಗಿನ ಸ್ಥಾನಮಾನದ ಹೆಣ್ಮಕ್ಕಳು ಕೂಡ ರಾಜಕೀಯ ವ್ಯವಹಾರದ ನೇತೃತ್ವ ವಹಿಸಿದ್ದನ್ನು ಕಲ್ಹಣ ನಮೂದಿಸಿದ್ದಾನೆ. ರಾಣಿಯರ ಆಯ್ಕೆಯಲ್ಲಿ ಜಾತಿಪರಿಗಣನೆಗೆ ಮಹತ್ವವಿರಲಿಲ್ಲ. ರಾಜಾ ಚಕ್ರವರ್ಮನು (ಕ್ರಿ.ಶ. 923 - 933) ಅಸ್ಪೃಶ್ಯಳಾದ ಡೊಂಬರ ಹುಡುಗಿಯನ್ನು ಮದುವೆಯಾಗಿದ್ದ; ಮಾತ್ರವಲ್ಲ, ಅವಳನ್ನು "ರಾಜಸ್ತ್ರೀಯರ ನಡುವೆ ಚಾಮರಸೇವೆ ಸೌಭಾಗ್ಯ ಪಡೆದ ಪಟ್ಟಮಹಿಷಿಯನ್ನಾಗಿ ಮಾಡಿದ್ದ" (V, 387). ಶ್ರೀನಗರದ ಸಮೀಪದಲ್ಲಿರುವ ವಿಷ್ಣುವಿನ ಪವಿತ್ರ ದೇವಾಲಯ ರಾಮ (ರಣ) ಸ್ವಾಮಿ ಮಂದಿರವನ್ನು ಆಕೆ ರಾಜೋಪಚಾರದೊಡನೆ ಪ್ರವೇಶಿಸಿದ್ದನ್ನು, ಆಕೆಯ ಸಂಬಂಧಿಕರೆಲ್ಲ ಮಂತ್ರಿ ಮಾಗಧರಾಗಿ ಮೆರೆದದ್ದನ್ನು ಕಲ್ಹಣ ಉಲ್ಲೇಖಿಸುತ್ತಾನೆ. ವಾಸ್ತವವಾಗಿ, ಈ ವಿವಾಹ ಸಂಬಂಧವನ್ನು ಬೆಂಬಲಿಸಿದವರು ಅನಂತರದ ರಾಜರ ಅವಧಿಯಲ್ಲು ಮಂತ್ರಿಗಳಾದರು. ಯಶಸ್ವೀ ದೊರೆಗಳಾದ ಲಲಿತಾದಿತ್ಯ ಮತ್ತು ಅವನ ಸೋದರ ಚಂದ್ರಪೀಡ ಇಂಥವರು — "ಗಂಡ ಬಿಟ್ಟವಳಿಂದ" — ಆಕೆ ದಿಲ್ಲಿಯ ಸಮೀಪದ ರೋಹಟಕ್ ನಗರದಿಂದ ಬಂದ ಒಬ್ಬ ಬನಿಯಾ ಮಹಿಳೆ — ರಾಜನಿಗೆ ಹುಟ್ಟಿದ ಮಕ್ಕಳಾದರೂ ಅವರ ಬಗ್ಗೆ ಕಲ್ಹಣನಿಗೆ ತಪ್ಪುಭಾವನೆಯಾಗಲಿ, ಆಕ್ಷೇಪಣೆಯಾಗಲಿ ಇಲ್ಲ.

ವಿಧವೆಯರು ಪವಿತ್ರವಾದ ನಿಸ್ಸಂಗ ಜೀವನವನ್ನು ಬದುಕಬೇಕಾಗಿತ್ತು. ಭೋಗ ವಿಲಾಸಗಳಿಗೆ ಎಡೆಯಿಲ್ಲ. ಆಭರಣಗಳನ್ನು, ಆಡಂಬರದ ಉಡುಗೆಗಳನ್ನು ತೊಡಲು ಅನುಮತಿ ಇರಲಿಲ್ಲ (VIII, 1969). ಒಂದು ಉಲ್ಲೇಖ - ವಿಧವೆಯೋ (ಮಕ್ಕಳ ಬದಲಿಗೆ) ಮೃತನಾದ ಪತಿಯ ಸ್ಥಿರಸೊತ್ತುಗಳ ಉತ್ತರಾಧಿಕಾರಿಣಿಯಾದದ್ದನ್ನು ದಾಖಲು ಮಾಡುತ್ತದೆ. ಇಂಥ ವಿಧವೆಯರು (ಗಂಡನ ಚಿತೆಯಲ್ಲಿ ತನ್ನನ್ನು ಸುಟ್ಟು ಕೊಂಡು) 'ಸತಿ' ಹೋದವರಲ್ಲ: ಇಂಥವರ ಬಗ್ಗೆ ಕಲ್ಹಣ ತನ್ನ ಅಭಿಪ್ರಾಯವನ್ನು ಹೊರಗೆಡಹುವುದಿಲ್ಲ. ಬಹಳ ಹಿಂದಿನಿಂದಲೂ ಬಳಕೆಯಲ್ಲಿದ್ದ 'ಸತಿ' ಪದ್ಧತಿಯನ್ನು ಅವನೂ ಉಲ್ಲೇಖಿಸುತ್ತಾನೆ. ಶಂಕರವರ್ಮ ಸತ್ತಾಗ ಸುರೇಂದ್ರಮತಿ ಮತ್ತು ಇತರ ಇಬ್ಬರು ರಾಣಿಯರು ಅವನ ಜತೆ ಸತಿಹೋದದ್ದು (V, 226); ಹಾಗೆಯೇ, ರಾಣಿಯರಾದ ತ್ರೈಲೋಕ್ಯವತಿ, ಸೂರ್ಯಮತಿ ಮತ್ತು ಕುಮುದಲೇಖೆ ಕ್ರಮವಾಗಿ ಚಿತೆಯ ಬೆಂಕಿಗೆ ಹಾರಿದ್ದು; ಉಚ್ಚಲನ ಮೃತದೇಹಕ್ಕೆ ಕೊಳ್ಳಿಯಿಟ್ಟ ಕೆಲವು ದಿನಗಳ ಮೇಲೆ ಜಯಮತಿ ಅಗ್ನಿಪ್ರವೇಶ ಮಾಡಿದ್ದು (VIII, 368) ಇಂಥ ಹಲವು ಘಟನೆಗಳನ್ನು ಅವನು ಉದಾಹರಿಸಿದ್ದಾನೆ. ಈ ಸತಿ ಹೋಗುವ ಪದ್ಧತಿ ರಾಜರುಗಳ ಮನೆತನಕ್ಕೆ ಮಾತ್ರವೇ ಸೀಮಿತವಾಗಿರಲಿಲ್ಲ. ರಾಜರ, ಮಂತ್ರಿಗಳ ಅಥವಾ ಉನ್ನತಾಧಿಕಾರಿಗಳ ಸೊಳೆಯರು, ಉಪಪತ್ನಿಯರು ಕೂಡ ತಮ್ಮ ಪ್ರೇಮಿಯ ಜತೆಗೆ ಸತಿ ಹೋದ ಕೆಲವು ಘಟನೆಗಳನ್ನು ಕಲ್ಹಣ ಉಲ್ಲೇಖಿಸಿದ್ದಾನೆ. ಎಂಟನೆಯ ತರಂಗದಲ್ಲಿ (448), ದಿಲ್ಲಿ ಭಟ್ಟಾರಕ ಮೃತನಾದಾಗ ಅವನ ಸೋದರಿ ತನ್ನನ್ನು ಸುಟ್ಟುಕೊಂಡು ಸತ್ತ ಘಟನೆಯ ಉಲ್ಲೇಖ ಉಂಟು.

ಈ ನಾಣ್ಯಕ್ಕೆ ಇನ್ನೂ ಒಂದು ಮುಖವುಂಟು: ಕೆಲವು ವರ್ಗದ ಹೆಂಗಸರಲ್ಲಿ

ಬೆಳೆದು ಬಂದ ಮಿತಿಮೀರಿದ ಅನೈತಿಕತೆಯ ಕತೆಗಳಿಂದ ರಾಜತರಂಗಿಣಿ ತುಂಬಿಹೋಗಿದೆ. ಹುಡುಗಿಯರನ್ನು ಹಾಡು - ನಾಟ್ಯಗಳ ಸೇವೆಗಾಗಿ ದೇವಾಲಯಗಳಿಗೆ ಅರ್ಪಿಸುವ, ಭಾರತದ (ದೇವದಾಸಿ) ಪದ್ಧತಿ ಕಾಶ್ಮೀರದಲ್ಲೂ ಇತ್ತು. ಇಂಥ ಯಾವಳೇ ದೇವದಾಸಿಯನ್ನು ತಮ್ಮ 'ಜನಾನಾ' ಕ್ಕೆ ಸೇರಿಸುವ ಹಕ್ಕು ರಾಜರಿಗಿತ್ತು ಎನ್ನುತ್ತಾನೆ ಕಲ್ಹಣ.

ಹೆಂಗಸರ ದುಶ್ಚಟಗಳನ್ನು ಸ್ಪಷ್ಟವಾಗಿ ಗಮನಿಸಿದ ಕಲ್ಹಣ — ಅವರನ್ನು ತಮ್ಮ ಹುಚ್ಚಾಟಗಳಿಗೆ ತಕ್ಕಂತೆ ಕುಣಿಯುವ ತಲೆಹಿಡುಕರಾದ ಸಮಯಸಾಧಕರು ಎಂದು ನಿರ್ದಯವಾಗಿ ಟೀಕಿಸುತ್ತಾನೆ. ಏರು ಜವ್ವನದ ಸುಗಂಧಾದಿತ್ಯ (ತರಂಗ V) ಅರಸನ ಇಬ್ಬರು ರಾಣಿಯರನ್ನು "ಹೆಣ್ಣು ಕುದುರೆಯ ಹಿಂಡನ್ನು ಬೀಜದ ಕುದುರೆ ತಣಿಸುವಂತೆ" ತಣಿಸಿದನಂತೆ:

ಪರ್ಯಾಯೇಣಾ ಭವದ್ ಭೃತ್ಯ: ಸ ತಯೋರ್ಭೋಗವೃದ್ಧಯೇ ।
ದರಿದ್ರ ಯೋಷಿತೋರೇಕಂ ಭುಕ್ತಿ ಪಾತ್ರ ಮಿವಾನ್ವಹಮ್ ।। 285

"ಪ್ರತಿದಿನವೂ ಅನುಕ್ರಮವಾಗಿ ಅವನು ಅವರಿಬ್ಬರ ಭೋಗಸುಖವನ್ನು ಹೆಚ್ಚಿಸುವ ಸಲಕರಣೆಯಾದನು; ಇಬ್ಬರು ಬಡವಿಯರು ಹಂಚಿಕೊಂಡ ಒಂದೇ ಊಟದ ತಟ್ಟೆಯಂತೆ."

ಪುತ್ರಯೋ ರಾಜ್ಯಲಾಭಾಯ ಸ್ಪರ್ಧಯಾಽಭ್ಯಾಂ ಸ್ವಮಂತ್ರಿಣೇ ।
ದತ್ತಾ ನಿಧುವನಶ್ರದ್ಧಾ ಧನದಾನೈ: ಸದಕ್ಷಿಣಾ ।। 286

"ತನ್ನ ಮಗನಿಗೇ ಪಟ್ಟಸಿಗಬೇಕೆಂಬ ಸ್ಪರ್ಧೆಯಿಂದ ಇಬ್ಬರೂ ರಾಣಿಯರು ತಮ್ಮ ಮಂತ್ರಿಗೆ ಶ್ರದ್ಧೆಯಿಂದ ಮೈಯನ್ನೊಪ್ಪಿಸಿದರು; ಜತೆಗೆ ಕೈತುಂಬ ದುಡ್ಡಿನ 'ದಕ್ಷಿಣೆ' ನೀಡಿದರು."

ರಾಣಿ ದಿದ್ದಾಳಂತು (ತರಂಗ VI) ವಿರೋಧಾಭಾಸಗಳ ವಿಚಿತ್ರ ಕಂತೆ: ಅವಳು ಹಲವು ವಿಹಾರಗಳನ್ನೇನೋ ಕಟ್ಟಿಸಿದ್ದಳು. ಆದರೆ ಈ ಧರ್ಮನಿಷ್ಠೆಯೆಲ್ಲ ಅವಳ ಸುಖದ ತೀಟೆ ಮತ್ತು ಅಧಿಕಾರ ಲಾಲಸೆಯ ಮುಂದೆ ವ್ಯರ್ಥವಾಯಿತು. ಇನ್ನೂ ಎಳೆಗೂಸಾದ ತನ್ನ ಮೊಮ್ಮಗನನ್ನೆ ಆಕೆ 'ಮಂತ್ರ ಮಾಟಗಳ ಮೂಲಕ' ಕೊಲ್ಲಿಸಿದ ಪ್ರಸಂಗವನ್ನು ಉಲ್ಲೇಖಿಸುವಾಗ ಕಲ್ಹಣ ಹೀಗೆ ಕಟುವಾಗಿ ಟೀಕಿಸುತ್ತಾನೆ:

ತೀರ್ಥಾಸೇವನ ಮೌನಭಾಗಪಿ ತಿಮಿ: ಸಕ್ತ: ಸ್ವಕುಲ್ಯಾಶನೇ
ವಾತಾಶಾನ್ ಗ್ರಸತೇ ಶಿಖೀ ಘನಪಯೋ ಮಾತ್ರಾಶನೋಽಪ್ಯನ್ವಹಮ್ ।
ವಿಶ್ವಸ್ತಾನ್ ಜಲಚಾರಿಣ: ಪ್ರಕಟತಧ್ಯಾನೋಽಪಿ ಭುಂಕ್ತೇ ಬಕ:
ಸತ್ ಕರ್ಮಾಚರಣೇಽಪಿ ದೋಷ ವಿರತೌ ನಪ್ರತ್ಯಯ: ಪಾಪಿನಾಮ್ ।। 309

"ಪವಿತ್ರ ತೀರ್ಥದಲ್ಲಿ ನೆಲಸಿ, ಅದನ್ನೇ ಸೇವಿಸಿ ಮೌನವಾಗಿದ್ದರೂ ಮೀನು ತನ್ನ ಜಾತಿಯ ಮರಿಗಳನ್ನೆ ತಿನ್ನುತ್ತದೆ. ದಿನವೂ ಮಳೆನೀರ ಹನಿಯನ್ನಷ್ಟೆ ಕುಡಿದು ಬದುಕಿದರೂ ನವಿಲು ಹಾವುಗಳನ್ನು ಕಂಡಲ್ಲಿ ಕಬಳಿಸುತ್ತದೆ. ಧ್ಯಾನ ಭಂಗಿಯಲ್ಲಿ ನಿಂತಿದ್ದರೂ ಕೊಕ್ಕರೆ ನಂಬಿ ಬಳಿಬಂದ ಜಲಚರ ಜಂತುಗಳನ್ನು ಬಿಡದೆ ಭಕ್ಷಿಸುತ್ತದೆ. ಪಾಪಿಗಳು ಎಷ್ಟೇ ಪುಣ್ಯಕಾರ್ಯ ಮಾಡಿದರೂ ತಮ್ಮ ಕೆಟ್ಟತನವನ್ನು ಬಿಡುವ ಭರವಸೆಯಿಲ್ಲ."

ಕಲಶ ಸತ್ತಾಗ (ತರಂಗ VII) ಅವನ ನೆಚ್ಚಿನ ನಲ್ಲೆಯಾದ ಕಯ್ಯಾ ಒಬ್ಬ ಹಳ್ಳಿಗಮಾರನಿಗೆ ಮೈಯೊಪ್ಪಿಸಿದ್ದನ್ನು ನೆನೆದು "ನೀಚಬುದ್ಧಿಯ ಹೆಂಗಸರಿಗೆ ಧಿಕ್ಕಾರವಿರಲಿ" ಎನ್ನುತ್ತಾನೆ ಕಲ್ಹಣ:

ಭೂಪಾಲಭೋಗ್ಯಂ ಸ್ವವಪುಃ ಸಾ ಭೋಗಾಭ್ಯಾಸ ಭಾಸುರಮ್ |
ನಿನಾಯ ಗ್ರಾಮ್ಯಭೋಗ್ಯತ್ವಂ ಧಿಕ್ ನಾರೀರ್ನೀಚಚೇತಸಃ || 728

"ರಾಜಭೋಗಕ್ಕೆ ಯೋಗ್ಯವಾದ ತನ್ನ ಮೈಯನ್ನು, ನಿರಂತರ ಸುಖಭೋಗದಿಂದ ಚೆಲುಗೊಂಡ ತನ್ನ ಮೈಯನ್ನು ಒಬ್ಬ ಹಳ್ಳಿಯ ಗಾಂಪನಿಗೆ ಒಪ್ಪಿಸಿಬಿಟ್ಟಳು. ಇಂಥ ನೀಚಬುದ್ಧಿಯ ಹೆಂಗಸರಿಗೆ ಧಿಕ್ಕಾರವಿರಲಿ."

ತನ್ನ "ದರ್ಪಿಷ್ಠೆಯಾದ ಹೆಂಡತಿಯಿಂದ" ಹತ್ತು ಹಲವು ಹೂಟಗಳಿಗೆ ಪ್ರೇರಿತನಾದ ರಾಜಾ ಅನಂತ (ತರಂಗ VII) ಹೆಂಗಸರ ಬಗೆಗಿನ ತನ್ನ ಅನಿಸಿಕೆಯನ್ನು ಹೀಗೆ ವ್ಯಕ್ತಪಡಿಸಿದ್ದಾನೆ:

ಅಭಿಮಾನೋ ಯಶಃ ಶೌರ್ಯಂ ರಾಜ್ಯಮೋಚೋ ಮತಿರ್ಧನಮ್ |
ಮಯಾ ಜಾಯಾವಿಧೇಯೇನ ಹಂತ ಕಿಂಕಿಂ ನ ಹಾರಿತಮ್ || 423

"ಅಭಿಮಾನ, ಕೀರ್ತಿ, ಪರಾಕ್ರಮ, ರಾಜ್ಯ, ದೌಲತ್ತು, ವಿವೇಕ, ಸಂಪತ್ತು — ಓಹ್! ಹೆಂಡತಿಗೆ ವಿಧೇಯನಾಗಿ ನಾನು ಏನೆಲ್ಲ ಕಳೆದುಕೊಂಡಿಲ್ಲ!"

ಮಿಥ್ಯೋಪಕರಣಂ ನಾರೀರ್ಗಣಯಂತಿ ನೃಣಾಂ ಜನಾಃ |
ಪರಿಣಾಮೇ ತು ನಾರೀಣಾಂ ಕ್ರೀಡೋಪಕರಣಂ ನರಾಃ || 424

"ಜನರು ಸುಳ್ಳೇ ಹೇಳುತ್ತಾರೆ: ಗಂಡಿನ ಬದುಕಿಗೆ ಹೆಣ್ಣು ಒಂದು ಪೂರಕವಾದ ಉಪಕರಣ ಎಂದು. ಪರಿಣಾಮದಲ್ಲಿ ಗಂಡಸರೇ ಹೆಂಗಸರ ಕೈಯ ಆಟದ ಬೊಂಬೆಗಳು."

ರೂಪಂ ಕಾಶ್ಚಿದ್ ಬಲಂ ಕಾಶ್ಚಿತ್ ಪ್ರಜ್ಞಾಂ ಕಾಶ್ಚಿಚ್ಚ ಕಾರ್ಮಣೈಃ |
ಪುಂಸ್ತ್ವಂ ಕಾಶ್ಚಿದಸೂನ್ ಕಾಶ್ಚಿದ್ ಭರ್ತೄಣಾಂ ಜಹ್ರುರಂಗನಾಃ || 426

"ಕೆಲವು ಹೆಂಗಸರು ತಮ್ಮ ಗಂಡನ ಚೆಲುವನ್ನು ಹೀರಿದವರು; ಕೆಲವರು ಬಲವನ್ನು; ಕೆಲವರು ಮಂತ್ರಮಾಟಗಳಿಂದ ಬುದ್ಧಿಯನ್ನೆ ಕೆಡಿಸಿದವರು; ಕೆಲವರು

ಗಂಡಸುತವನ್ನೆ ಹೀರಿದವರು; ಇನ್ನು ಕೆಲವರು ಹರಣವನ್ನೆ ಹೀರಿದವರು."

ಮೇಲಿನ ವಿವರಣೆಯಿಂದ ಕಲ್ಹಣ ಸ್ತ್ರೀದ್ವೇಷಿ ಎಂದು ಭಾವಿಸಿದರೆ ಅದು ತಪ್ಪಾದೀತು. ಅದಕೆಂದೆ, ರಾಜಾ ಹರ್ಷನ ಆಸ್ಥಾನದಲ್ಲಿ ಬೆಳಗಿದ ಮಹಿಳೆಯರನ್ನು ಕಲ್ಹಣ ಬಣ್ಣಿಸಿದ ಬಗೆಯನ್ನು ನಾವಿಲ್ಲಿ ಉದ್ಧರಿಸುತ್ತಿದ್ದೇವೆ (ತರಂಗ VIII). ಅವನ ಈ ವರ್ಣನೆ ಕಾಳಿದಾಸನ ಶ್ರೇಷ್ಠ ವರ್ಣನೆಗಳಿಗೆ ಸಾಟಿಯಾಗಿದೆ:

ಸ್ವರ್ಣಕೇತಕ ಪತ್ರಾಂಕ ಜೂಟಲಂಬೋರ್ಜಿತ್ರಸ್ರಜಃ |
ಚಟುಲಾತಿಲ (?ಚಟುಲೋಲಾಲಿ) ಕಾಶ್ಲಿಷ್ಟ ವಿಲೋಲ ತಿಲಕಾಂಕುರಾಃ || 928

ಅಪಾಂಗಶ್ರೋತ್ರಯೋರ್ಬದ್ಧ ಸಂಧಯೋ ಅಂಜನರೇಖಯಾ |
ನಿರ್ನಿರಂಗಿಕ (?) ಕೇಶಾಂತ ಬದ್ಧಹೇಮೋಪವೀತಕಾಃ || 929

ಅಧರಾಂಬರ ಪ್ರಚ್ಛಾಂತ್ಯೈರ್ಲಂಬೈಶ್ಚುಂಬಿತ ಭೂತಲಾಃ |
ಪ್ರಚ್ಛಾದಿತಾರ್ಧದೋರ್ಲೇಖ — ಕುಂಚುಕಾಂಕ ಪಯೋಧರಾಃ || 930

ಕರ್ಪೂರೋದ್ಧೂಲನಸ್ಮೇರಾ ಭ್ರಮಂತ್ಯಸ್ತರಲಭ್ರುವಃ |
ಬಭ್ರುರಾಶ್ರಿತ ಪುಂವೇಷಾ ಝುಂಪಾಂಕಚ್ಛಲದಂಕತಾಮ್ || 931

ಬಂಗಾರದ ಕೇದಗೆಯೆಲೆ (ಆಭರಣ) ಯನ್ನು ಮುಡಿದ ಜಡೆಯ ಮುಡಿಯಿಂದ ಇಳಿಬಿಟ್ಟ ಚೆಲು ಹೂ ಗೊಂಚಲು ತೊಟ್ಟವರು; ಮಿಂಚುವ ನೊಸಲಿನಲ್ಲಿ ಚಕಪಕಿಸುವ ಹಣೆಬೊಟ್ಟಿನ ಬಿಗುರಿಟ್ಟವರು; ಕಾಡಿಗೆಯ ಎಳೆಯಿಂದ ಕಡೆಗಣ್ಣನ್ನು ಕಿವಿಯೆಡೆಗೆ ಮುಟ್ಟಿಸಿದವರು; ನೆರಿಗೆ - ನೆರಿಗೆಯಾದ ಹೆಣೆದ ಹೆರಳ ತುದಿಯಲ್ಲಿ ಚಿನ್ನದ 'ತಿರುಪು' ಬಿಗಿದವರು; ಜೋಲಾದ ಕೆಳಬಟ್ಟೆಯ ಅಂಚು ನೆಲವನ್ನು ಮುತ್ತಿಡುವಂತೆ ಇಳಿಬಿಟ್ಟವರು; ನಿಡಿದೋಳನ್ನು ಆರೆಮುಚ್ಚಿದ ಕುಪ್ಪಸದಿಂದೊಪ್ಪುವ ಚೆಲುಮೊಲೆಯವರು; ಕರ್ಪೂರದ ಹುಡಿ ಚೆಲ್ಲಿದಂತೆ ಮೆಲುನಗುವವರು — ಹುಬ್ಬು ಕುಣಿಸುತ್ತ ನಡೆವ ಇಂಥ ಹುಡುಗಿಯರು ವೀರಗಚ್ಚೆಯ ಗಂಡುವೇಷ ತೊಟ್ಟರಂತು ಕಾಮದೇವನ ರೂಪಾಂತರ.

ಕಾಶ್ಮೀರಿಗಳು ಹಳೆಯ ಕಂದಾಚಾರಗಳನ್ನು — ಭಾರತದ ಇತರ ಭಾಗದ ಅನೇಕ ಜನರಿಗಿಂತಲು ಹೆಚ್ಚಾಗಿ — ಗಾಢವಾಗಿ ನಂಬಿದವರು ಎನ್ನುವುದು ಪ್ರಸಿದ್ಧ. ಮಂತ್ರಮಾಟ ಮತ್ತು ಇತರ ಕೃತ್ರಿಮ ಪ್ರಯೋಗಗಳಿಂದ ಮನುಷ್ಯನ ಬದುಕಿಗೆ ಕೇಡುಂಟುಮಾಡಬಹುದು ಎಂದು ಅವರು ನಂಬಿದ್ದರು. ಕಲ್ಹಣನ ವಿವರಣೆಯಿಂದ ಈ ಮಾಟಕೃತ್ಯ ಹಳೆಯ ಕಾಶ್ಮೀರದಲ್ಲಿ ಎಷ್ಟು ವ್ಯಾಪಕವಾಗಿ ಹಬ್ಬಿತ್ತು ಎನ್ನುವುದು ತಿಳಿಯುತ್ತದೆ. ಇಂಥ ಕೃತ್ರಿಮಕ್ಕೆ ಬಲಿಯಾದ ರಾಜರುಗಳ ಪಟ್ಟಿಯನ್ನೆ ಅವನು ಕೊಡುತ್ತಾನೆ. ಮಾಟಕೃತ್ಯದ ಸಾಮರ್ಥ್ಯದ ಬಗ್ಗೆ ಜನಸಾಮಾನ್ಯರಲ್ಲಿದ್ದ ನಂಬಿಕೆಯಲ್ಲಿ ಕಲ್ಹಣನೂ ಪಾಲುಗೊಂಡಂತೆ ಕಾಣುತ್ತದೆ. ಅದರಿಂದಲೆ ತಾನು ಒಕ್ಕಣಿಸಿದ ಘಟನೆಗಳ ಹಿಂದೆ ಕಾಣದ ಕೈಯ ಕೈವಾಡವನ್ನು ನಂಬುವ ನಿರ್ಧಾರಕ್ಕೆ ಅವನು ಬಂದಿರಬೇಕು.

ಕವಿಯಾಗಿ ಕಲ್ಹಣ

"ರಾಜತರಂಗಿಣಿ" ಪ್ರಾಚೀನ ಕಾಶ್ಮೀರದ ಬಗೆಗೆ ಅನೇಕಾನೇಕ ಮಾಹಿತಿಗಳನ್ನು ಒದಗಿಸುವ ಐತಿಹಾಸಿಕ ದಾಖಲೆಯಾಗಿ ಒಂದು ಮಹತ್ವದ ಕೃತಿ. ಆದರೆ ಕಲ್ಹಣನ ಈ ಕೃತಿ ವಾಲ್ಟೇರನ "ಹಿಸ್ಟೊರಿ ಆಫ್ ರಷ್ಯ" ಅಲ್ಲ; ಅಥವಾ ಗಿಬ್ಬನನ "ಡಿಕ್ಲೈನ್ ಅಂಡ್ ಫಾಲ್ ಆಫ್ ರೋಮನ್ ಎಂಪೈರ್" ಕೂಡ ಅಲ್ಲ. ಕಲ್ಹಣನದು ಇತಿಹಾಸಕ್ಕೊಂದು ಬೆಲೆಬಾಳುವ ಕೊಡುಗೆಯಷ್ಟೆ ಅಲ್ಲ; ಎಲ್ಲಕ್ಕಿಂತ ಹೆಚ್ಚು, ಅದೊಂದು ಕಾವ್ಯದ ಕಲಾಕೃತಿಯೂ ಹೌದು. ಅವನು ತನ್ನನ್ನು ಇತಿಹಾಸತಜ್ಞ ಎಂದಷ್ಟೆ ತಿಳಿದಿಲ್ಲ; ಕವಿ — ಕ್ರಾಂತದರ್ಶಿ ಎಂದೂ ಭಾವಿಸಿದ್ದ. ಗ್ರಂಥದ ಪ್ರಾರಂಭದಲ್ಲೆ ಪ್ರಸ್ತಾವನೆಯಲ್ಲಿ, ತನ್ನ ಈ ಕೃತಿಯ ರೂಪ - ರೇಖೆಗಳನ್ನು ಸ್ಪಷ್ಟಪಡಿಸುತ್ತ ಕಲ್ಹಣ ಹೇಳುತ್ತಾನೆ:

ವಂದ್ಯಃ ಕೋಽಪಿ ಸುಧಾಸ್ಯಂದಾಸ್ಕಂದೀ ಸ ಸುಕವೇರ್ಗುಣಃ |
ಯೇನಾಽಯಾತಿ ಯಶಃ ಕಾಯಃ ಸ್ಥೈರ್ಯಂ ಸ್ವಸ್ಯ ಪರಸ್ಯ ಚ ||

ಕೋಽನ್ಯಃ ಕಾಲಮತಿಕ್ರಾಂತಂ ನೇತುಂ ಪ್ರತ್ಯಕ್ಷತಾಂ ಕ್ಷಮಃ |
ಕವಿಪ್ರಜಾಪತೀಂಸ್ತ್ಯಕ್ತ್ವಾ ರಮ್ಯನಿರ್ಮಾಣಶಾಲಿನಃ || I, 3-4

"ಮಾತಿನಲ್ಲಿ ಮೂಡಿಸಲಾಗದ ನಿಜವಾದ ಕವಿಯ ಆ ಪ್ರತಿಭಾಗುಣ ಅಮೃತದ ಹೊನಲನ್ನೂ ಮೀರಿಸಿದ್ದು, ಅದಕ್ಕೆ ನಮ್ಮ ಮಣಿದ ತಲೆಯ ಮನ್ನಣೆ ಸಲ್ಲಬೇಕು. ಏಕೆಂದರೆ ಅದರಿಂದ ಕವಿಯ ಮತ್ತು (ಆತನಿಂದ ವರ್ಣಿತರಾದ) ಇತರರ ಕೀರ್ತಿಕಾಯ ಅಜರಾಮರವಾಗಿ ಬಿಡುತ್ತದೆ. ಸುಂದರವಾದ ಹೊಸ ಸೃಷ್ಟಿಯನ್ನೆ ನಿರ್ಮಿಸಬಲ್ಲ 'ಕವಿಬ್ರಹ್ಮ' ರನ್ನು ಬಿಟ್ಟರೆ ಭೂತಕಾಲವನ್ನು ನಮ್ಮ ಕಣ್ಣೆದುರು ತಂದು ನಿಲ್ಲಿಸಲು ಇನ್ನಾರಿಗೆ ಸಾಧ್ಯ?"

ಕಲ್ಹಣ ತನ್ನ ಗ್ರಂಥದ ಆರಂಭದಲ್ಲಿ ಕವಿಯ ಅರ್ಹತೆಗಳ ಬಗೆಗೆ ಬರೆಯುತ್ತಾನೆ. ಇದು ಕವಿಯಾಗಿ ತನ್ನ ಕಲಾಕೃತಿಯ ಮತ್ತು ದೀರ್ಘಕಥನ ಕಾವ್ಯದ ವಸ್ತುವಿನ ನಡುವೆ ಅವನು ಗುರುತಿಸಿದ ಸಂಬಂಧಗಳನ್ನು ಒತ್ತಿ ಹೇಳುತ್ತದೆ.

ಕಲ್ಹಣನಿಗೆ ಕಠಿಣವಾದ ಕಾವ್ಯಾಭ್ಯಾಸವಿತ್ತು; ಉನ್ನತ ದರ್ಜೆಯ ಶಾಸ್ತ್ರೀಯ ಸಾಹಿತ್ಯದ ಶಿಕ್ಷಣವಿತ್ತು. ವ್ಯಾಕರಣ — ಅಲಂಕಾರ ಶಾಸ್ತ್ರಗಳ ವಿಜ್ಞಾನದ ವಿಶಾಲ ಕ್ಷೇತ್ರದಲ್ಲಿ ಪ್ರಭುತ್ವವಿತ್ತು; ಮೇರುಕೃತಿಗಳಾದ ರಾಮಾಯಣ — ಮಹಾಭಾರತಗಳ ಬಗೆಗೆ, ಹಾಗೆಯೆ ಪ್ರಾಚೀನ ಐತಿಹಾಸಿಕ ಗ್ರಂಥಗಳ ಬಗೆಗೆ ಬಲವಾದ ಒಲವಿತ್ತು. ಅವನು ಮಹಾಭಾರತದಿಂದಂತು ಉಳಿದೆಲ್ಲ ಪುರಾಣಕಾವ್ಯಗಳಿಗಿಂತಲು ಹೆಚ್ಚು ಉದ್ಧರಿಸುತ್ತಾನೆ.

ಬಾಣನ 'ಹರ್ಷಚರಿತ' — ಕಾನೋಜದ ರಾಜ ಹರ್ಷವರ್ಧನನ ಸಾಹಸಗಳನ್ನು ವರ್ಣಿಸುವ ಸುಪ್ರಸಿದ್ಧವಾದ ಐತಿಹಾಸಿಕ ವೀರಕಾವ್ಯ — ಮತ್ತು ಬಿಲ್ಹಣನ 'ವಿಕ್ರಮಾಂಕದೇವ ಚರಿತ' ಕಲ್ಹಣನ ಮೇಲೆ ಸಾಕಷ್ಟು ಪ್ರಭಾವ ಬೀರಿದಂತೆ ಕಾಣುತ್ತದೆ. ತನ್ನ ಗ್ರಂಥದಲ್ಲಿ, ತಾನು ನೆರವು ಪಡೆದ, ತನ್ನಂತೆಯೇ ಕಾವ್ಯೋದ್ಯೋಗಿಗಳಾದ ಪೂರ್ವಕವಿಗಳನ್ನು ಅವನು ತುಂಬ ಕೃತಜ್ಞತೆಯಿಂದ ಸ್ಮರಿಸಿದ್ದಾನೆ. ಮಾತಿನಲ್ಲಿ ಮೂಡಿಸಲಾಗದ ನಿಜವಾದ ಕವಿಯ ಆ ಪ್ರತಿಭಾ ಗುಣ ಅಮೃತದ ಹೊನಲನ್ನೂ ಮೀರಿಸಿದ್ದು (ಸವಿಯಲ್ಲಿ ಮತ್ತು ಅಮರತ್ವದಲ್ಲಿ), ಅದಕ್ಕೆ ನಮ್ಮ ಮನ್ನಣೆ ಸಲ್ಲಬೇಕು. ಏಕೆಂದರೆ ಕವಿಯ ಮತ್ತು ಇತರರ ಕೀರ್ತಿಕಾಯ ಇದರಿಂದ ಅಜರಾಮರವಾಗಿ ಬಿಡುತ್ತದೆ.

ಕಲ್ಹಣನ ಸಮಕಾಲೀನ ಕವಿ ಮಂಖ ಹೇಳುತ್ತಾನೆ: "ಇತಿಹಾಸಗಳನ್ನು, ಐತಿಹ್ಯಗಳನ್ನು ಅರಿಯುವ ಬಗೆಗೆ ಕಲ್ಹಣ ತನ್ನನ್ನೆ ಅರ್ಪಿಸಿಕೊಂಡಿದ್ದ; ಅವನ ಈ ಆಸಕ್ತಿಗೆ ಪಾರವೆ ಇರಲಿಲ್ಲ." ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಗಣಿತ, ಮತ್ತು ಇತರ ವಿಜ್ಞಾನ ಮತ್ತು ಕಲೆಗಳ ಬಗೆಗೆ — ಕಾಮಶಾಸ್ತ್ರ, ಶೃಂಗಾರ ಸಾಹಿತ್ಯದ ಬಗೆಗೆ ಕೂಡ ಕಲ್ಹಣನಿಗೆ ಘನಿಷ್ಠವಾದ ಪರಿಚಯವಿತ್ತು. ಕಲ್ಹಣ, ಒಬ್ಬ ಇತಿಹಾಸತಜ್ಞನಾಗಿ, ಆರ್ಥಿಕ ಮುಖಕ್ಕಿಂತ ಹೆಚ್ಚು ಕಲೆ ಮತ್ತು ಮಾನವೀಯ ಅಧ್ಯಯನಗಳಿಗೆ ಒತ್ತು ಕೊಡುತ್ತಾನೆ. ಆದರೂ ಇಲ್ಲಿ ದವಸ-ಧಾನ್ಯಗಳ ಧಾರಣೆ, ನಾಣ್ಯ ಚಲಾವಣೆ, ಕಪ್ಪ - ಕಂದಾಯ ಮತ್ತು ಬರಗಾಲಗಳ ಕರಾರುವಾಕ್ಕಾದ ವಿವರಣೆಯುಂಟು. ಭಾರತದ ಪ್ರಾಚೀನ ಸಂಪ್ರದಾಯ ಮತ್ತು ಪುರಾಣ ಸಾಹಿತ್ಯಗಳ ಬಗೆಗೆ ಇಲ್ಲಿ ಹಲವು ಉಲ್ಲೇಖಗಳುಂಟು. ಉದಾ: ಗಂಗಾವತರಣ ಮತ್ತು ಸಮುದ್ರಮಥನದ ಆಖ್ಯಾಯಿಕೆಗಳು. ಆರ್.ಎಸ್. ಪಂಡಿತರ ಅಭಿಪ್ರಾಯದಂತೆ — ಅವನು ಉಲ್ಲೇಖಿಸಿದ, ಆದರೆ ಕಾಶ್ಮೀರದಲ್ಲಿ ಕಾಣಸಿಗದ ಸಸ್ಯ ಮತ್ತು ಪ್ರಾಣಿವರ್ಗ — ಉದಾ: ಮಾವು, ತಾಳೆಯ ಜಾತಿಯ ಮರಗಳು, ಸಿಂಹ ಮತ್ತು ಮೊಸಳೆ — ಅವನು ಭಾರತೀಯ ಸಾಂಪ್ರದಾಯಿಕ ಶಿಕ್ಷಣವನ್ನು ಆಳವಾಗಿ ಪಡೆದಿದ್ದ ಎನ್ನುವುದನ್ನು ಸೂಚಿಸುತ್ತದೆ.

ರೀತಿಯಲ್ಲಿ ರಚನೆಯಲ್ಲಿ ಕಾವ್ಯಾತ್ಮಕ (ಚರಿತ ಅಥವಾ ವೀರಕಾವ್ಯ) ವಾದ ರಾಜತರಂಗಿಣಿಯಲ್ಲಿ ಸುಮಾರು ಎಂಟು ಸಾವಿರ ಶ್ಲೋಕಗಳಿವೆ. ಇವು ಎಂಟು ತರಂಗ (ತೆರೆ)ಗಳಲ್ಲಿ ಹಂಚಿಕೊಂಡಿವೆ. ಏನಿದ್ದರೂ ಈ ಕೃತಿ ಇತರ ಚರಿತ್ರಗ್ರಂಥಗಳಿಂದ ಬೇರೆಯಾಗಿ ನಿಲ್ಲುತ್ತದೆ. ಏಕೆಂದರೆ, ಕಲ್ಹಣ ಇಲ್ಲಿ, ಪುರಾಣ ಕಾಲದಿಂದ ಅವನ ತನಕದ ಕಾಶ್ಮೀರದ ಆಳರಸರ ಅನುಸ್ಯೂತವಾದ ಸಮಗ್ರ ಚಿತ್ರವನ್ನು ನೀಡಿದ್ದಾನೆ. ಅವನಿಗೆ ಘನವಾದ ಪಾಂಡಿತ್ಯವಿತ್ತು. ವೀರಕಾವ್ಯಗಳ ಕವಿತೆಯ ಪೆಂಪು ಮತ್ತು ಮಾನವೀಯ ಆಸಕ್ತಿಗಳ ಬಗೆಗೆ ಅವನ ಬಗೆ ಒಲಿದಿತ್ತು. ಅದಕೆಂದೆ, ಅದರಿಂದ ಹುರುಪುಗೊಂಡ ಅವನು ತನ್ನ ನಾಡಿನ ಇತಿಹಾಸವನ್ನು ಬಿತ್ತರಿಸಲು ಖ್ಯಾತರಾದ ಕಾವ್ಯಾಚಾರ್ಯರ ಮಾರ್ಗವನ್ನೆ ಆಯ್ದುಕೊಂಡ. ಅವನು ಬೇಕೆಂದೆ ಪದ್ಯಮಾಧ್ಯಮವನ್ನು ಬಳಸಿದ. ಅಭಿವ್ಯಕ್ತಿಯ ಮಾಧ್ಯಮವಾಗಿ ಮಾತ್ರವಲ್ಲ; ತನ್ನ ಕಾಲದ ಸಾಹಿತ್ಯ ಮತ್ತು ಇತಿಹಾಸದ

ಒಂದು ಅವಶ್ಯಕ ಘಟಕವಾಗಿ. ಸಾಂದರ್ಭಿಕವಾಗಿ, ನಯನಾಜೂಕಿನ ಕಾವ್ಯಾಲಂಕಾರದ ಒಡವೆಗಳಿಂದಲೂ ಅವನು ತನ್ನೀ ಕೃತಿಯನ್ನು ಅಂದಗೊಳಿಸಿದ್ದಾನೆ.

ಏನಿದ್ದರೂ ರಾಜತರಂಗಿಣಿ ಮಹಾಕಾವ್ಯಗಳ ಮಾಮೂಲು 'ಕ್ಲೀಷೆ' ಯಾದ, ಬೇಸರ ಬರಿಸುವ ಋತು ವರ್ಣನೆ, ಪ್ರಕೃತಿ ವರ್ಣನೆ ಮತ್ತು ಉಪಮಾನಗಳ ಸರಮಾಲೆಯಿಂದ ಮುಕ್ತವಾಗಿದೆ. ಈ ಗ್ರಂಥದ ಬಹ್ವಂಶ ಇಂಥ ಅಲಂಕಾರದ ಅಂದಾದುಂದಿಂಯನ್ನು ಕೈಬಿಟ್ಟು ಚುರುಕಾದ ನೇರ ನಿರೂಪಣೆ ಸರಳವಾದ ಬರವಣಿಗೆಯಿಂದ ಕೂಡಿದೆ; ನಡೆದು ಬಂದ ಕಾವ್ಯಸಂಪ್ರದಾಯವನ್ನು ತಾನು ಬೇಕೆಂದೇ ತಳ್ಳಿಹಾಕುತ್ತಿಲ್ಲ ಎಂಬ ಮಾತನ್ನು ಕಲ್ಹಣ ಸ್ಪಷ್ಟಪಡಿಸಿದ್ದಾನೆ. ಕಾವ್ಯದ ವಿಪುಲ ಸಾಮಗ್ರಿಯನ್ನು ಬಳಸುವ ಕಲ್ಹಣನ ಸಾಮರ್ಥ್ಯವೂ ಕಮ್ಮಿಯದೇನಲ್ಲ. ನಡುವೆ ಅಲ್ಲಲ್ಲಿ ಸಾಂಪ್ರದಾಯಿಕ ಅಲಕಾಂರಿಕತೆಗಳನ್ನು ಅವನು ಬಳಸಿದ್ದುಂಟು ಎನ್ನುವುದನ್ನು ನಾವು ಈಗಾಗಲೆ ಗಮನಿಸಿದ್ದೇವೆ. ನೆನಪಿಡಬೇಕಾದ ಒಂದು ಮಾತೆಂದರೆ: ತನ್ನ ಕಥಾವಸ್ತುವಿನಲ್ಲಿ ಅದರ ಆಂತರಿಕ ಮೌಲ್ಯಕ್ಕಿಂತಲು ಹೆಚ್ಚು ಕಾವ್ಯದ ಸಾಂಪ್ರದಾಯಿಕ ರಚನೆಗೆ ಅದು ಒದಗಿಸುವ ಅವಕಾಶವನ್ನೆ ಅವನು ಮುಖ್ಯವಾಗಿ ಪರಿಗಣಿಸುತ್ತಾನೆ. "ಕಥೆಯ ದೀರ್ಘತೆಯಿಂದಾಗಿ ವೈಚಿತ್ರ್ಯ - ವೈವಿಧ್ಯಗಳನ್ನು ವಿಸ್ತಾರವಾಗಿ ನಿರೂಪಿಸಲಾಗಿಲ್ಲವಾದರೂ ಸಜ್ಜನರಿಗೆ ಪ್ರಿಯವಾಗುವ ಸಂಗತಿ ಕಿಂಚಿತ್ತಾದರೂ ಇಲ್ಲಿ ಇದ್ದೇ ಇದೆ" (I, 6). ಆದರೆ ಕಲ್ಹಣ ಮೂಲದಿಂದ ದೂರ ಸರಿದದ್ದು — ಹರ್ಷಚರಿತ ಮತ್ತು ವಿಕ್ರಮಾಂಕದೇವ ಚರಿತದೊಡನೆ ಹೋಲಿಸಿದಾಗ — ತೀರ ಕಡಿಮೆ. ಏಕೆಂದರೆ "ಕಥೆಯ ದೀರ್ಘತೆ" ಯಲ್ಲೆ ಅವನ ದೃಷ್ಟಿ ಕೇಂದ್ರಿತವಾಗಿತ್ತು. ರಾಜತರಂಗಿಣಿಯ ಬಗ್ಗೆ ಬರೆಯುತ್ತ ಡಾ.ಎಚ್. ಎಚ್. ವಿಲ್ಸನ್[1] ಹೀಗೆ ಹೇಳುತ್ತಾರೆ: "ಯಾವುದೇ ವಿಷಯವಿರಲಿ, ಪದ್ಯರೂಪದಲ್ಲಿ ಗ್ರಂಥ ಬರೆಯುವುದು ಭಾರತೀಯ ರೂಢಿ. ಅಂತೆಯೆ ರಾಜತರಂಗಿಣಿಯೂ ಪದ್ಯರೂಪದಲ್ಲಿದೆ. ಅದು ಕಾವ್ಯವಾಗಿ ಭಾವನೆಯಲ್ಲಿ ಮತ್ತು ಶೈಲಿಯಲ್ಲಿ ಅನೇಕ ಉತ್ತಮ ಭಾಗಗಳನ್ನು ಒಳಗೊಂಡಿದೆ." 1825 ರಷ್ಟು ಹಿಂದೆಯೆ, "ಏಶಿಯಾಟಿಕ್ ರಿಸರ್ಚಸ್" ನಲ್ಲಿ ಪ್ರಕಟವಾದ ಈ ಪ್ರಶಂಸಾಲೇಖದ ಪ್ರಸ್ತಾವನೆಯಲ್ಲಿ ಡಾ. ವಿಲ್ಸನ್ ಹೇಳಿದ್ದರು: "ಯಾವ ಔಚಿತ್ಯದ ಮಾನದಂಡದಿಂದಲೂ ಇತಿಹಾಸ ಎಂದು ಹೆಸರಿಸಬಹುದಾದ ಈ ತನಕ ದೊರಕಿದ ಏಕಮಾತ್ರ ಸಂಸ್ಕೃತ ಗ್ರಂಥ - ಕಾಶ್ಮೀರದ ಇತಿಹಾಸವಾದ "ರಾಜತರಂಗಿಣಿ." ಕವಿಯಾಗಿ ತನ್ನ ಮೇಲೆ ಈ ಕೃತಿಯ ಕಥಾವಸ್ತು ಪ್ರಭಾವ ಬೀರಿದೆ ಎಂದು ಕಲ್ಹಣ ಒಪ್ಪಿಕೊಳ್ಳುತ್ತಾನೆ. ಅಲಂಕಾರ ಶಾಸ್ತ್ರದ ನಿಯಮಗಳು ಕಾವ್ಯಾತ್ಮಕತೆಗಾಗಿ ಇದನ್ನು, ಅಥವಾ ಇದರ ಕೆಲವು ಪ್ರಮುಖ ಭಾಗಗಳನ್ನಾದರೂ ಒಂದು ವಿಶಿಷ್ಟ ರಸದೊಡನೆ ಚಿತ್ರಿಸುವುದನ್ನು ಅನಿವಾರ್ಯಗೊಳಿಸಿದವು. ಕಾಶ್ಮೀರಿ ಅಲಂಕಾರಶಾಸ್ತ್ರಕಾರ, ಕಾವ್ಯಪ್ರಕಾಶದ ಲೇಖಕ ಮಮ್ಮಟ ಹೇಳುತ್ತಾನೆ: "ಕಾವ್ಯದ ಉದ್ದೇಶಗಳಲ್ಲಿ ಒಂದು ಬದುಕುವ

---

[1] ವಿಲ್ಸನ್ ಎಚ್.ಎಚ್. "ದಿ ಹಿಂದು ಹಿಸ್ಟೊರಿ ಆಫ್ ಕಾಶ್ಮೀರ್" ಪುನರ್ಮುದ್ರಣ ಸುಶೀಲ್-ಗುಪ್ತ (ಇಂಡಿಯ) ಪ್ರೈ.ಲಿ. ಕಲ್ಕತ್ತ: 1960.

ಕಲೆಯನ್ನು ಕಲಿಸಿಕೊಡುವುದು" (ವ್ಯವಹಾರವಿದೇ). ಕಾವ್ಯ ಎಂದರೆ "ರಸಾತ್ಮಕವಾದ ವಾಕ್ಯ" ಎಂದು ಅದರ ಲಕ್ಷಣವನ್ನು ನಿರ್ಧರಿಸಲಾಗಿದೆ. ಕಾವ್ಯದಲ್ಲಿ ಬಳಸುವ ರಸಗಳು ಒಟ್ಟು ಎಂಟು ಬಗೆ: ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ ಮತ್ತು ಅದ್ಭುತ. ಇವು ಕಾವ್ಯದ ಮೂಲಸಾರವನ್ನು ಒಳಗೊಳ್ಳುತ್ತವೆ. ಈ ರಸಗಳ ಮಟ್ಟಿಗೆ ಕಲ್ಹಣ ಮಮ್ಮಟನನ್ನೆ ಅನುಸರಿಸುತ್ತಾನೆ. ಆದರೆ ಇದರ ಜತೆಗೆ ಇನ್ನೂ ಒಂದು ರಸವನ್ನು ಸೇರಿಸಿಕೊಂಡಿದ್ದಾನೆ: ಒಂಭತ್ತನೆಯ ರಸ ಶಾಂತ. ಅಂತರ್ಮುಖತೆಯ ನೆಮ್ಮದಿ ಅಥವಾ ನಿವೃತ್ತಿಮಾರ್ಗದ ಸಮದೃಷ್ಟಿಯ ಭಾವವೇ ಈ ಶಾಂತ ರಸ. ತನ್ನ ಕೃತಿಯಲ್ಲಿ ಪ್ರಮುಖಸ್ಥಾನ ಪಡೆದ ಈ ರಸದ ಬಗ್ಗೆ ಕಲ್ಹಣ ಹೇಳುತ್ತಾನೆ: "ಕವಿ ತಮ್ಮ ಪ್ರತಿಭಾ ಬಲದಿಂದ ಎಲ್ಲರ ಹೃದಯದ ಭಾವನೆಗಳನ್ನು ಓದಬಲ್ಲನಾದರೆ ಅವನ 'ದಿವ್ಯದೃಷ್ಟಿ' ಗೆ ಅದಕ್ಕಿಂತ ಬೇರೆ ಪುರಾವೆ ಎಂಥದು?" ಅದಕೆಂದೆ, ಅವಸರದಲ್ಲಿ ತೀರ್ಮಾನಿಸದೆ ತಾಳ್ಮೆಯಿಂದ ಪರಿಭಾವಿಸುವಂತೆ ಅವನು ಓದುಗರನ್ನು ವಿನಂತಿಸಿಕೊಂಡಿದ್ದಾನೆ.

ಕಲ್ಹಣ ಆರಿಸಿಕೊಂಡ ಕಾವ್ಯದ ಚೌಕಟ್ಟು ಅವನ ಕೃತಿಯ ಶೈಲಿಯನ್ನೂ ನಿರ್ಧರಿಸುತ್ತದೆ. ಕವಿಯ ಕಲಾ ಕೌಶಲವನ್ನು ಬೆಳಕಿಗೆ ತರುವ ರೂಪಕಗಳು, ಉಪಮಾನಗಳು, ಶ್ಲೇಷಗಳು ಮತ್ತು ಇತರ ಕಾವ್ಯಸಂಕೇತಗಳು ರಾಜತರಂಗಿಣಿಯುದ್ದಕ್ಕೂ ಸಮೃದ್ಧವಾಗಿ ಹರಡಿಕೊಂಡಿವೆ. ಕಥಾಘಟ್ಟಗಳ ಬದಲಾವಣೆಗೆ ಒಪ್ಪವಾಗುವಂತೆ ತರಂಗದ ಮೊದಲಲ್ಲಿ, ಕೊನೆಯಲ್ಲಿ ಪದ್ಯದ ಛಂದಸ್ಸುಗಳನ್ನು ಬದಲಾಯಿಸಲಾಗಿದೆ. ಕಲ್ಹಣನ ಅಲಂಕಾರಿಕ ನಿರೂಪಣೆಯ ಸತ್ವ — ಸಾಮರ್ಥ್ಯಗಳನ್ನು - ಯುಧಿಷ್ಠಿರನು ರಾಜ್ಯಭ್ರಷ್ಟನಾಗಿ ತೆರಳುವ ಪ್ರಸಂಗ, ಚಕ್ರವರ್ಮ ಮತ್ತು ಸುಸ್ಸಲ ಜಯಶೀಲರಾಗಿ ರಾಜಧಾನಿಯನ್ನು ಪ್ರವೇಶಿಸಿದ ಸಂಧರ್ಭ. ಭಿಕ್ಷಾಚರನ ಕೊನೆಯ ಹೋರಾಟ ಮತ್ತು ಹರ್ಷನ ಸಾವಿನ ಚಿತ್ರಣ - ಇಂಥ ಕಡೆಗಳಲ್ಲಿ ಕಾಣಬಹುದು. ಆರ್.ಎಸ್. ಪಂಡಿತರು ಕಲ್ಹಣನನ್ನು ಎಶ್ಕೈಲಸ್ ಮತ್ತು ಹೋಮರನಿಗೆ ಹೋಲಿಸಿ ಬರೆದ "ಸತ್ಯನಿಷ್ಠನಾದ ವಿಶ್ವಪ್ರಜ್ಞೆಯ ಕವಿ" ಎಂಬ ಪ್ರಶಂಸೆಗೆ ಅವನು ಅರ್ಹನಾಗಿದ್ದಾನೆ. ಕಲ್ಹಣನ ಲೇಖನಿಯಿಂದ ಕಾಶ್ಮೀರದ ಭೂತಕಾಲ ಪುನರ್ಜನ್ಮ ಪಡೆದು ವೈಭವ ಪೂರ್ಣವಾಗಿ ನಮ್ಮ ಕಣ್ಮುಂದೆ ನಿಲ್ಲುತ್ತದೆ. ಅವನ ಕಾವ್ಯಸತ್ವವೇ ಕಾವ್ಯರಚನೆಯಲ್ಲಿ ಅವನಿಗಿದ್ದ ಅತ್ಯುನ್ನತ ಪ್ರತಿಭೆಯೆ ಕಾಶ್ಮೀರದ ಪುರಾತನ ಇತಿಹಾಸವನ್ನು ಮರವೆಯ ಮುಸುಕಿನಿಂದ ಪಾರುಮಾಡಿತು.

ಕಲ್ಹಣನ ಸಾಟಿಯಿಲ್ಲದ ನಿರೂಪಣ ಕೌಶಲವನ್ನು ವಿವರಿಸುವುದಕ್ಕಾಗಿ, ಮೇಲೆ ಉಲ್ಲೇಖಿಸಿದ ಹೃದಯ ಸ್ಪರ್ಶಿ ಘಟನೆಗಳ ಬಗೆಗಿನ ಈ ಗ್ರಂಥದ ಕೆಲವು ಉದ್ಧರಣೆಗಳನ್ನು ನೋಡೋಣ.

ಸಿಂಹಾಸನ ಬಿಟ್ಟು ತೆರಳುವಂತೆ ತನ್ನ ಮಂತ್ರಿಗಳಿಂದಲೇ ಒತ್ತಡಕ್ಕೆ ಬಲಿಯಾದ ರಾಜಾ ಯುಧಿಷ್ಠಿರ (ಮೊದಲನೆಯವನು) "ತನ್ನದೇ ರಾಜ್ಯವನ್ನು ತೊರೆದು ತೆರಳಲು ಅವರಿಂದ ಅನುಮತಿ ಪಡೆದ" ರಾಜನ ಮತ್ತು ಅವನ ಪರಿವಾರದ ದೇಶ

ತ್ಯಾಗದ ಈ ಕಥೆ ಒಂದನೆಯ ತರಂಗದಲ್ಲಿ ವರ್ಣಿತವಾಗಿದೆ.

ರಮ್ಯೈಃ ಶೈಲಪಥೈರ್ವ್ರಜನ್ ಶ್ರಮವಶಾಚ್ಛಾಯಾಂ ಶ್ರಿತಃ ಶಾಖಿನಾ —
ಮಾಸೀನಪ್ರಚಲಾಯಿತೇನ ಸುಮಹದ್ ದುಃಖಂ ವಿಸಸ್ಮಾರ ಸಃ ।
ದೂರಾತ್ ಪಾಮರಪೂತ್ಕೃತೈಃ ಶ್ರುತಿಪಥಾಪ್ರಾಪ್ತೈಃ ಪ್ರಬುದ್ಧಸ್ತ್ವಭೂದ
ದೃಷ್ಟ್ವೋ ನಿರ್ಝರವಾರಿಭಿಃ ಸಹ ಮಹಚ್ಛ್ವಭ್ರೇ ನಿಮಜ್ಜನ್ನಿವ ।। 369

"ರಮಣೀಯವಾದ ಬೆಟ್ಟದ ದಾರಿಗಳಲ್ಲಿ ಆತ ನಡೆದ. ನಡೆದು ಆಯಾಸ ಗೊಂಡು ಮರಗಳ ತಂಪು ನೆರಳಲ್ಲಿ ತಂಗಿದ. ಹೀಗೆ ಅಲ್ಲಲ್ಲಿ ಕೂತು ಕೂತು ಮುಂದೆ ನಡೆದ. ಹೀಗೆ ಸಾಗುತ್ತ ತನ್ನ ಮಹತ್ತಾದ ದುಃಖವನ್ನು ಮರೆತ. ಆಗಲೇ, ದೂರದಿಂದ ಕಿವಿಗೆ ಬಿದ್ದ ಅಸಭ್ಯ ಪೂತ್ಕಾರಗಳಿಂದ ಎಚ್ಚರಗೊಂಡ. ತಡಸಲಿನ ನೀರಿನ ಜತೆ ಪ್ರಪಾತಕ್ಕೆ ಬಿದ್ದೇಳುವವರಂತೆ ಅವನ ಪಾಡಾಯಿತು."

ನಾನಾವೀರುತ್ತೃಣಪರಿಮಲೈರುಗ್ರಗಂಧಾ ವನೋರ್ವೀ —
ರಂಭಃ ಕ್ಷೋದಪ್ರತಿಹತಶಿಲಾಃ ಪಿಚ್ಛಿಲಾಶ್ಚಾದ್ರಿಕುಲ್ಯಾಃ ।
ಕ್ರಾಂತ್ವಾ ಶಾಂತೈರ್ಬಿಸಕಿಸಲಯಚ್ಛಾಯಮುಗ್ಧಾಂಗಲೇಖೈ —
ರಭ್ಯುತ್ಸಂಗಂ ನಿಹಿತತನುಭಿರ್ಮೂರ್ಛಿತಂ ತಸ್ಯ ದಾರೈಃ ।। 270

"ಕಮಲನಾಳದಂತೆ ಚಿಗುರಿನಂತೆ ನಸೆ ಮೈಯವಳಾದ ಆತನ ರಾಣಿ ಬಗೆ ಬಗೆಯ ಗಿಡಬಳ್ಳಿಗಳ, ನಾರು, ಬೇರುಗಳ ಕಂಪುಗಿಡಿದ ಕಾಡುದಾರಿಗಳನ್ನು, ನೀರಿನ ವೇಗಕ್ಕೆ ಸಿಡಿದ ಬಂಡೆಗಳ, ಕೆಸರಿಡಿದ ಬೆಟ್ಟದ ತೊರೆಗಳನ್ನು ದಾಟಿ ಸಾಗುತ್ತ ಸೋತಳು. ಸೋತು ರಾಜನ ಮಡಿಲ ಮೇಲೆ ಮೈಕೆಡವಿದಳು; ಎಚ್ಚರದಪ್ಪಿ ಮಲಗಿ ದಳು."

ಪರ್ಯಸ್ತಾದ್ರಿತಟಾದ್ ವಿಲೋಕ್ಯ ಸುಚಿರಂ ದೂರೀಭವನ್ಮಂಡಲಂ
ದ್ರಾಗಾಮಂತ್ರಯಿತುಂ ಬಹತ್ಸು ನೃಪತೇರ್ದಾರೇಷು ಪುಷ್ಪಾಂಜಲೀನ್ ।
ಕೋಣೇಷ್ವಪ್ಯ ವಿಕೀರ್ಣಪಕ್ಷತಿ ನಮತ್ತುಂಡಂ ಸ್ವನೀಡಸ್ಥಿತೈಃ
ಸಾವೇಗಂ ಗಿರಿಕಂದರಾಸು ಪತತಾಂ ವೃಂದೈರಪಿ ಕ್ರಂದಿತಮ್ ।। 371

"ನಾಡಿನ ಗಡಿಯಾಚೆಯ ಬೆಟ್ಟದ ತುದಿಯಲ್ಲಿ ನಿಂತ ಅರಸಿಯರು ಕಣ್ಣಳ ತೆಯಿಂದ ದೂರಾಗುತ್ತಿರುವ ತಮ್ಮ ರಾಜ್ಯವನ್ನು ಬಹುಹೊತ್ತು ಕಣ್ತುಂಬ ಕಂಡು ಪುಷ್ಪಾಂಜಲಿಯನ್ನಿತ್ತು ಬೀಳ್ಕೊಂಡರು. ಇದನ್ನು ಕಂಡು, ಬೆಟ್ಟದ ಕಣಿವೆ - ಗವಿಗ ಳಲ್ಲಿ ಗೂಡುಕಟ್ಟಿಕೊಂಡಿದ್ದ ಹಕ್ಕಿಗಳು ಕೂಡ ಉದ್ವೇಗದಿಂದ ನೆಲದ ಮೇಲೆ ಪುಕ್ಕ ಅಗಲಿಸಿ, ಕೊಕ್ಕು ಬಗ್ಗಿಸಿ ಕಂಬನಿಗರೆದವು."

ಸ್ತನಯುಗತಲನದ್ಧಸ್ರಸ್ತಮೂರ್ಧಾಂಶುಕಾನಾಂ
ತ್ರಿಕವಲನವಿಲೋಲಂ ವೀಕ್ಷ್ಯ ದೂರಾತ್ ಸ್ವದೇಶಮ್ ।

ಅವಹತ ರುದತೀನಾಂ ಮೌಲಿವಿನ್ಯಸ್ತಹಸ್ತಂ
ಪಥಿ ಬಲಮಬಲಾನಾಮಶ್ರುಭಿರ್ನಿರ್ಝರಾಂಭಃ ।। 372

"ಅವರ ತಲೆಯ ಮೇಲುದ ಜಾರಿ ಮೊಲೆಗಳ ಮೇಲೆ ಬಿದ್ದಿತ್ತು. ಹಾಗೆಯೆ ಬೆನ್ನು ತಿರುಗಿಸಿ ದೂರದಿಂದಲೆ ತಮ್ಮ ನಾಡನ್ನು ಕಂಡು, ತಲೆಯ ಮೇಲೆ ಕೈಯಿಟ್ಟು ಕಣ್ಣೀರು ಗರೆದರು. ಈ ಕಂಬನಿಯ ಪೂರದಿಂದ ದಾರಿಯುದ್ದಕ್ಕೂ ತಡಸಲುತುಂಬಿ ಹರಿಯಿತು."

ಸೊಗಸಾದ ಪದಬಂಧದಿಂದ, ಮಾಧುರ್ಯದ ಮೇಲ್ಮೆಯಿಂದ ಗಮನಾರ್ಹವಾದ ಮೂಲದ ಸೊಬಗು ಗದ್ಯದ ಅನುವಾದದಲ್ಲಿ ಎಷ್ಟೆಂದರೂ ಅಷ್ಟಕ್ಕಷ್ಟೆ. ಆದರೂ ಇಲ್ಲಿಯ ಪ್ರಧಾನರಸವಾದ ಕರುಣದ ಚಿತ್ರಣದ ಬೆಡಗನ್ನು ಸಂಸ್ಕೃತದ ಶ್ರೇಷ್ಠ ಸಾಹಿತಿಗಳ — ನಾಟಕಕಾರರ ಅಥವಾ ಕವಿಗಳ — ಅಥವಾ ಶೇಕ್ಸ್‌ಪಿಯರನ ವರ್ಣನೆಯ ಜತೆಗೆ ಕೂಡ ಹೋಲಿಸಿ ನೋಡಬಹುದು. ಇದೇ ರೀತಿ ಮನಸೆಳೆವ ವರ್ಣನೆಯ ವೈಖರಿಯಿಂದ ನಮ್ಮ ಗಮನ ಸೆಳೆವ ಇನ್ನೊಂದು ಪ್ರಮುಖ ಸಂದರ್ಭ — ತಾನು ಮರೆ ಹೊಂದಿದ್ದ ಗುಡಿಸಲಿನಲ್ಲೆ ಡಾಮರರಿಂದ ಮೋಸದ ಕೊಲೆಗೆ ಬಲಿಯಾದ ಹರ್ಷನ ಸಾವಿನ ನಿರೂಪಣೆ (ತರಂಗ VII).

ರಾಜ್ಞಃ ಪ್ರಹರತಃ ಶಸ್ತ್ರಂ ವಂಚಯಿತ್ವಾ ಸ ಶಸ್ತ್ರಭೃತ್ ।
ವಕ್ಷಸಿ ಕ್ಷುರಿಕಾಘಾತದ್ವಯಂ ಪ್ರಾದಾತ್ ಕೃತತ್ವರಃ ।। 1711

"ರಾಜನು ಬೀಸಿದ ಆಯುಧದ ಪೆಟ್ಟನ್ನು ತಪ್ಪಿಸಿಕೊಂಡು ಕತ್ತಿಹಿಡಿದ ಆ ಭಟ ಅವಸರವಸರವಾಗಿ ರಾಜನ ಎದೆಗೆ ಎರಡು ಬಾರಿ ಕತ್ತಿಯಿಂದ ಇರಿದನು."

ವರ್ಣಾನ್ ಮಹೇಶ್ವರೇತ್ಯೇತಾನ್ ದ್ವಿರುಕ್ತ್ವಾ ಗತಜೀವಿತಃ ।
ಪಪಾತ ನಿಹತೋ ಭೂಮೌ ಛಿನ್ನಮೂಲ ಇವದ್ರುಮಃ ।। 1712

" 'ಓ ಮಹೇಶ್ವರ' ಎಂಬಕ್ಷರಗಳನ್ನು ಎರಡುಬಾರಿ ಉಚ್ಚರಿಸಿ ಅಸುತೊರೆದ ರಾಜ ಬುಡತರಿದ ಮರದಂತೆ ನೆಲದ ಮೇಲೆ ಕೆಡವಿ ಬಿದ್ದ."

ಪಲಾಯ್ಯ ಸಂಪ್ರವಿಶತೋ ಯೋಗ್ಯಶ್ಚಾರಸ್ಯ ಯಾದೃಶಃ ।
ಚಕ್ರವರ್ತ್ಯಪಿ ಸ ಪ್ರಾಪ ವಧಂ ವೇಶ್ಮನಿ ತಾದೃಶಮ್ ।। 1713

"ತಪ್ಪಿಸಿಕೊಂಡು ಓಡಿಹೋಗಿ ಎಲ್ಲೋ ಮರೆಹೊಕ್ಕ ಕಳ್ಳಕಾಕರಿಗೆ ಮಾತ್ರ ಯೋಗ್ಯವಾದಂಥ ಸಾವನ್ನು ಚಕ್ರವರ್ತಿಯಾಗಿಯೂ ಅವನು ಆ ಮನೆಯಲ್ಲಿ ಪಡೆಯುವಂತಾಯಿತು."

ಸಾಸ್ಯಃ ಸ ಇವ ಕಾಲೇಽಸ್ಮಿನ್ ದದೃಶೇ ಭೂತಿಮಾನ್ ನೃಪಃ ।
ಗರ್ಹ್ಯನಿರ್ಹರಣತ್ವಂ ಚ ತಸ್ಯೇವಾನ್ಯಸ್ಯ ನೇಕ್ಷಿತಮ್ ।। 1714

"ಅವನಂತೆ ಸಮೃದ್ಧಿಯ ಪರಾಕಾಷ್ಠೆಯನ್ನೇರಿದ ಇನ್ನೊಬ್ಬನನ್ನು ಈ ಕಾಲದಲ್ಲಿ ಕಂಡವರಿಲ್ಲ. ಅವನಂತೆ ಅವಮಾನಕರವಾದ ಚರಮಯಾತ್ರೆಗೀಡಾದ ಇನ್ನೊಬ್ಬನನ್ನೂ ಕಂಡವರಿಲ್ಲ."

ಯದ್ವೈಕೇನ್ಯೈವ ಸಂಗ್ರಾಮವ್ಯೆಮುಖ್ಯೇನೋಜ್ಞತಾತ್ಮನಃ ।
ಸರ್ವಪ್ರಕಾರಸುಭಗಂ ಮಾಹಾತ್ಮ್ಯಂ ತಸ್ಯ ಖಂಡಿತಮ್ ।। 1715

"ಅವನು ಎಲ್ಲ ಬಗೆಯಿಂದಲೂ ಸೌಭಾಗ್ಯಶಾಲಿಯಾಗಿದ್ದ; ಹಿರಿಯ ಚೇತನ ವಾಗಿದ್ದ. ಪ್ರಾಯಃ ಯುದ್ಧವನ್ನು ಪ್ರೀತಿಸದಿದ್ದುದೊಂದೇ ಅವನ ಹಿರಿಮೆಗೆ ಮುಳುವಾಯಿತು."

ಭೃತ್ಯತ್ಯಕ್ತೋ ನಷ್ಟವಂಶೋ ಗೌರಕಾಖ್ಯೇನ ಕೇನಚಿತ್ ।
ಸ ಕಾಷ್ಠಾಗಾರಿಣಾ ಚಕ್ರೇ ನಗ್ನೋऽನಾಥ ಇವಾಗ್ನಿಸಾತ್ ।। 1727

"ಕೊನೆಯ ಕಾಲದಲ್ಲಿ, ಭೃತ್ಯರಿಲ್ಲ; ಬಂಧು - ಬಳಗವಿಲ್ಲ, ಕಟ್ಟಿಗೆ ಅಂಗಡಿಯ ಯಾರೋ ಒಬ್ಬ ಗೌರಕ ಎನ್ನುವವ ಗತಿಗೇಡಿಯಂತೆ ಬಿದ್ದಿದ್ದ ಅವನ ಬತ್ತಲೆ ಹೆಣಕ್ಕೆ ಬೆಂಕಿ ಕಾಣಿಸಿದ."

"ಅಷ್ಟು ಮಂದಿ ಅಂತಃಪುರದ ಮಹಿಳಾಪರಿವಾರವಿದ್ದೂ ಒಬ್ಬಳೂ ಹರ್ಷನಿಗಾಗಿ ಕಣ್ಣೀರು ಮಿಡಿಯಲಿಲ್ಲ. ಮತ್ತು ಅವನ ಅನುಯಾಯಿಗಳಲ್ಲಿ ಒಬ್ಬ ಕೂಡ "ಕೊನೆಯ ಕಾಲದಲ್ಲಿ ಅವನ ಬೆಂಬತ್ತಲಿಲ್ಲ ಅಥವಾ ಪುಣ್ಯ ತೀರ್ಥದಲ್ಲಿ ನಿವೃತ್ತಿ ಜೀವನವನ್ನು ನಡೆಸಲಿಲ್ಲ." ಎನ್ನುವ ಕಲ್ಹಣ ಈ ತರಂಗದ ಉಪಾಂತ್ಯಶ್ಲೋಕದಲ್ಲಿ — ಮಾನವಾನುಭೂತಿಗಳ ಕ್ಷಣಿಕತೆಯ ಬಗ್ಗೆ ತತ್ವಜ್ಞಾನಿಯಂತೆ ಉದ್ಗರಿಸುತ್ತಾನೆ;

ನಾऽದೌ ಕಿಂಚಿದ್ ಭವತಿ ನಿಯತಂ ಯಚ್ಚ ಪಶ್ಚಾನ್ನ ಕಿಂಚಿತ್
ದುಧ್ಯೇऽಕಸ್ಮಾತ್ ಸಪದಿ ಘಟಯನ್ ಸ್ವಾಸ್ಥ್ಯದೌಃಸ್ಥ್ಯಾನುರೋಧಮ್, ।
ನೀಶೀರ್ಷಾಂಘ್ರಿರ್ನಟ ಇವ ಮುಹುಃ ಕೋ ಪಿ ಜಂತುರ್ನಟಿತ್ವಾ
ನೋ ಜಾನೀಮೋ ಭವಜವನಿಕಾಂತರ್ಹಿತಃ ಕ್ವ ಪ್ರಯಾತಿ ।। 1731

"ಬರುವಾಗ ಏನೂ ಇರಲಿಲ್ಲ, ಮತ್ತೆ ಮರಳಿ ಹೋಗುವಾಗಲೂ ಏನೂ ಇಲ್ಲ. ನಡುವಿನ ಅಂತರದಲ್ಲಿ, ಏನೋ ಎಂತೋ, ಒಮ್ಮಿಂದೊಮ್ಮೆಲೆ ಸುಖದುಃಖಗಳ ಬದುಕಿನ ಏರು ಪೇರುಗಳಿಗೆ ಈಡಾಗುತ್ತಾನೆ. ಅಷ್ಟು ಹೊತ್ತು ಈ ಜೀವ ತಲೆ-ಕಾಲು ಇಲ್ಲದ ನಟನಂತೆ ಈ ರಂಗಸ್ಥಳದಲ್ಲಿ ಏನೇನೋ ಆಡಿ ಮರೆಯಾಗುತ್ತಾನೆ. ಈ ಸಂಸಾರದ ತೆರೆಯ ಮರೆಯಾಚೆ ಅವನ ಪಯಣವೆತ್ತವೋ ನಮಗೆ ಗೊತ್ತಿಲ್ಲ!"

'ತಂತ್ರಿ' ಸಿಪಾಯಿಗಳನ್ನು ಸೋಲಿಸಿ ಜಯಶಾಲಿಯಾದ ಚಕ್ರವರ್ಮ ರಾಜಧಾನಿ ಶ್ರೀನಗರವನ್ನು ಪ್ರವೇಶಿಸಿದ ಮತ್ತು ಭಟ್ಟಂಗಿಯೊಬ್ಬ ವೀರನಾದ ಶಂಭುವರ್ಧನನ ಕೊಲೆ

ಗೈದ ಸಂದರ್ಭದ ವರ್ಣನೆ (ತರಂಗ V) ಯಲ್ಲಿ ಮೂಡಿಬಂದ ವೀರರಸದ ಸೊಬಗು ಕೂಡ ಕಲ್ಹಣ ರಸಕವಿಯಾಗಿ ಪಡೆದ ಕಲಾತ್ಮಕತೆಯ ಸಿದ್ಧಿಗೆ ಇನ್ನೊಂದು ನಿದರ್ಶನ:

ಅಥ ದ್ವಿತೀಯೇ ದಿವಸೇ ಭಗ್ನಾನಾಮಪಿ ತಂತ್ರಿಣಾಮ್ ।
ವೀರಃ ಸಂಘಟನಾಂ ಯಾವದಕರೋಚ್ಛಂಭುವರ್ಧನಃ ॥ 341

ತಾವನ್ಮಿಲಿತ ಸಾಮಂತ ಸಚಿವೈಕಾಂಗಲಾಲಿತಃ ।
ಸೈನ್ಯೈರ್ನಾನಾಪಥಾಯಾತೈರ್ನದದ್ಭಿರ್ವ್ಯಾಪ್ತದಿಕ್‌ಪಥಃ ॥ 342

ವಲ್ಗನ್ ಮಧ್ಯೇಽಶ್ವವಾರಾಣಾಂ ನೃತ್ಯತೇವಾಗ್ರ್ಯವಾಜಿನಾ ।
ವಲ್ಗಾಂಕೇನೋದ್ವಹನ್ ಲಂಬಂ ಶಿರಸ್ತ್ರಂ ವಾಮಪಾಣಿನಾ ॥ 343

ಸಸ್ವೇದೇತರ ಹಸ್ತಾಗ್ರವೇಷ್ಟನೋಲ್ಲಾಸನಸ್ಪೃಶಃ ।
ಖಡ್ಗಸ್ಯ ಬಿಂಬಿತಾರ್ಕಸ್ಯ ಭಾಭಿರ್ದ್ಯೋತಿತಕುಂಡಲಃ ॥ 344

ಕವಚೋತ್ಸೇಧಸಂರಬ್ಧಕಂಠಾಯಾಸೇನ ತಾಮ್ಯತಾ ।
ಬದ್ಧಭ್ರುಕುಟಿ ಬಂಧೇನ ವದನೇನ ಭಯಾವಹಃ ॥ 345

ತರ್ಜಯನ್ ಕೃತಹುಂಕಾರಾಲ್ಲುಂಠಕಾನ್ ಲುಂಠಿತಾಪಣಾನ್ ।
ಶಿರೋಽಕ್ಷಿಸಂಜ್ಞಯಾ ತ್ರಸ್ತ ವಾಸ್ತವ್ಯ ಕೃತಸಾಂತ್ವನಃ ॥ 346

ಭೇರೀರವೈಃ ಶ್ರುತಿಂ ಭಿಂದನ್ ಪೌರಾಶೀರ್ಘೋಷ ರೋಧಿಭಿಃ ।
ಸಂಗ್ರಾಮಜಯಶೋಭಾಂಕಶ್ಚಕ್ರವರ್ಮಾಽವಿಶತ್ ಪುರಮ್ ॥ 347

"ಅನಂತರ, ಎರಡನೆಯ ದಿನ, ಸೋತು ಚದರಿ ಹೋದ ಸೈನಿಕರನ್ನು ವೀರ ನಾದ ಶಂಭುವರ್ಧನ ಮತ್ತೆ ಸಂಘಟಿಸುವಷ್ಟರಲ್ಲಿ, ಜತೆಗೂಡಿದ ಸಾಮಂತರು — ಮಂತ್ರಿಗಳು ಮತ್ತು ಅಂಗರಕ್ಷಕರಿಂದ ಹುರುಪುಗೊಳ್ಳುತ್ತಾ, ನಾನಾ ಕಡೆಗಳಿಂದ ಬಂದು ಹುಯಿಲಿಡುವ ಸೈನಿಕರನ್ನು ಎಲ್ಲೆಡೆ ತೂರಿಸುತ್ತ ರಾವುತರ ಪಡೆಯ ನಡುವೆ ನಾಟ್ಯದ ನಡೆಯ ಹೆಜ್ಜೆಯಿಡುವ ಜಾತಿಕುದುರೆಯ ಮೇಲೆ ಒಲೆಯುತ್ತ, ಜಾರಿದ ತಲೆ ಗಾಪನ್ನು ಜೀನು ಹಿಡಿದ ಎಡಗೈಯಿಂದ ಸರಿಪಡಿಸುತ್ತ, ಬೆವರ ಹನಿ ತುಂಬಿದ ಇನ್ನೊಂದು ಕೈಯ ಮುಷ್ಟಿಯಲ್ಲಿ ಬಿಗಿ ಹಿಡಿದು ಝಳಪಿಸಿದ ಖಡ್ಗದಲ್ಲಿ ಪಡಿಮೂಡಿದ ಸೂರ್ಯನ ಸುಡುಬೆಳಕಿಗೆ ತಳತಳಿಸುವ ಕುಂಡಲಗಳಿಂದ ತೊಳಗುತ್ತ, ಕವಚದ ಬಿಗಿಗೆ ಸೋತ ಕೊರಳ ಬೇಗೆಗೆ ಬಳಲಿ ಹುಬ್ಬುಗಂಟಿಕ್ಕಿದ ಮೋರೆಯಿಂದ ದಿಗಿಲು ಬರಿಸುತ್ತ, ಗಾಬರಿಗೊಂಡ ನಗರವಾಸಿಗಳನ್ನು ತಲೆಯಾಡಿಸಿ ಕಣ್ಣು ಮಿಟುಕಿಸಿ ಸಂತೈಸುತ್ತ, ಪುರಜನರ ಹರಕೆಯ ನುಡಿಯನ್ನು ಮೀರಿ ನಿಂತ ಜಯಭೇರಿ ನಿನಾದದಿಂದ ಕಿವಿ ಕಿವುಡಾಗಿಸುತ್ತ, ಯುದ್ಧವನ್ನು ಗೆದ್ದ ಗೆಲುವಿನ ಕಳೆಹೊತ್ತ ಚಕ್ರವರ್ಮ ನಗರವನ್ನು ಪ್ರವೇಶಿಸಿದನು."

ತಸ್ಮಿನ್ ಸಿಂಹಾಸನಂ ಪ್ರಾಜ್ಯಮಾಕ್ರಾಮತಿ ಜಯೋರ್ಜಿತೇ |
ಬದ್ಧ್ವಾ ಕುತಶ್ಚಿದಾನಿನ್ಯೇ ಭೂಭಟಃ ಶಂಭುವರ್ಧನಮ್ || 348

"ಜಯದಿಂದ ಹುರುಪುಗೊಂಡ ಅವನು ಸಂಪದ್‌ಭರಿತವಾದ ಸಿಂಹಾಸನವನ್ನೇರಿ ಕುಳಿತಾಗ ಒಬ್ಬ ಕಾಲಾಳು ಎತ್ತಣಿಂದಲೋ ಶಂಭುವರ್ಧನನನ್ನು ಸೆರೆ ಹಿಡಿದುತಂದನು."

ರಾಜ್ಞಃ ಪುರಸ್ತಾತ್ ತಂ ಶಸ್ತ್ರಪಾತಭೀಮಾಲಿತೇಕ್ಷಣಮ್ |
ಭಕ್ತಂ ಪ್ರದರ್ಶಯನ್ ಪಾಪಶ್ಚಂಡಾಲ ಇವ ಸೋಽವಧೀತ್ || 349

"ರಾಜನ ಎದುರುಗಡೆ, ಕತ್ತಿಯ ಪೆಟ್ಟಿಗೆ ಹೆದರಿ ಕಣ್ಮುಚ್ಚಿ ನಿಂತ ಶಂಭುವರ್ಧನನನ್ನು ಆ ಪಾಪಿ ತನ್ನ ರಾಜನಿಷ್ಠೆಯನ್ನು ಪ್ರದರ್ಶಿಸಲೋಸುಗ ಚಂಡಾಲನಂತೆ ಕಡಿದು ಕೊಂದನು."

ಕರುಣ ಮತ್ತು ವೀರ ಎರಡೂ ರಸಗಳು ಭಿಕ್ಷಾಚರನ ಕೊನೆಯ ಕಾಳಗದ ಭವ್ಯ ನಿರೂಪಣೆಯಲ್ಲಿ (ತರಂಗ VIII) ಮೇಳವಿಸಿವೆ. ಕೆಳಗಿನ ಕೆಲವು ಪದ್ಯಗಳು ಪೂರ್ವದ ಅಥವಾ ಪಶ್ಚಿಮದ ಯಾವುದೇ ವೀರಕಾವ್ಯದೊಡನೆ ಸರಿಸಾಟಿಯಾಗಿ ನಿಲ್ಲಬಲ್ಲವು:

ಭಿಕ್ಷಾಚರಮೃಗೇಂದ್ರಸ್ಯ ಭಂಜತಃ ಶರಪಂಜರಾನ್ |
ತತೋ ಹರ್ಮ್ಯಾತ್ ಖಶೈರ್ಮುಕ್ತಾಃ ಪುಪ್ಲುಃ ಪಾಷಾಣ ವೃಷ್ಟಯಃ || 1762

"ಭಿಕ್ಷಾಚರನೆಂಬ ಸಿಂಹ ಬಿಗಿದ ಬಾಣಗಳ ಪಂಜರವನ್ನೆ ಪುಡಿಗುಟ್ಟಿದಾಗ (ಗುಡ್ಡಗಾಡು ಜನಾಂಗದ) ಖಶರು ಮನೆ ಮಹಡಿಗಳಿಂದ ಕಲ್ಲಿನ ಬಿರುಮಳೆಗರೆದರು."

ಧಾವತಸ್ತಸ್ಯ ಘೋರಾಶ್ಮ ವೃಷ್ಟಿಕುಂಠಿತವರ್ಷ್ಮಣಃ |
ನಿಮಮಜ್ಜ ಯಕೃತ್‌ಪಿಂಡಂ ಭಂಜನ್ ಪಾರ್ಶ್ವೇ ಶಿಲೀಮುಖಃ || 1763

"ಭೀಕರವಾದ ಕಲ್ಲಿನ ಮಳೆಯಿಂದ ಮೈಜರ್ಜರಗೊಂಡ ಆತ ಅದನ್ನು ತಪ್ಪಿಸಿಕೊಂಡು ಮುಂದೋಡುತ್ತಿದ್ದಂತೆ ಪಕ್ಕಗೆ ತಗಲಿದ ಒಂದು ಬಾಣ ಅವನ ಪಿತ್ತಕೋಶವನ್ನೇ ಬಗಿಯಿತು."

ಕ್ರಾಂತ್ವಾ ತ್ರೀಣಿ ಪದಾನ್ಯಾಶು ಸ ಪಪಾತ ದಿಶನ್ ಕ್ಷಿತೇಃ |
ತತಶ್ಚಿರಪ್ರರೂಢಂ ತು ಕಂಪಂ ವಿದ್ವಿಷತಾಂ ಪರನ್ || 1764

"ಅವನು ಸಾವರಿಸಿ ಮೂರು ಹೆಜ್ಜೆ ನಡೆದು ಒಡನೆ ನೆಲಕ್ಕೆ ದಿಂಡುರುಳಿದನು. ಆಗ ನೆಲ ನಡುಗಿತು; ಆದರೆ ಬಹುದಿನಗಳಿಂದ ಬೆಳೆದು ಬಂದಿದ್ದ ವೈರಿಗಳ ಎದೆ-ನಡುಕ ನಿಂತಿತು."

ಮಹಾಕುಲೀನೈಃ ಸಹಿತೋ ಹತೋ ಭಿಕ್ಷುರಶೋಭತ |
ವಜ್ರಾವಭಗ್ನಃ ಶಿಖರೀ ಮುಷ್ಪಿತೈರಿವ ಪಾದಪೈಃ || 1767

"ಕುಲೀನರಾದ ಒಡನಾಡಿಗಳ ಜತೆಗೆ ಸಾವನ್ನಪ್ಪಿದ ಭಿಕ್ಷಾಚರ ಹೂಬಿಟ್ಟ ಮರಗಳ ಜತೆಗೆ ಸಿಡಿಲು ಬಡಿದು ಕೆಡೆದುರುಳಿದ ಬೆಟ್ಟದಂತೆ ಸಾವಿನಲ್ಲು ಕಂಗೊಳಿಸಿದ."

ಇಯತೋ ರಾಜಜಕ್ರಸ್ಯ ಮಧ್ಯೇ ಹರ್ವನೃಪಾತ್ಮನಃ (?) |
ಸಾವಮಾನಸ್ಯ ಮಾನಸ್ಯ ತ್ವಭೂದ್ ಭಿಕ್ಷೋಃ ಪರಂ ಪದಮ್ || 1768

"ಇಷ್ಟು ಮಂದಿ ರಾಜವಂಶೀಯರ ಗುಂಪಿನಲ್ಲಿ ಭಿಕ್ಷಾಚರನ ಈ ಪಾಡು ಅವಮಾನ ತರಲಿಲ್ಲ. ಬದಲಾಗಿ ಅವನು ಗೌರವದ ಅತ್ಯುನ್ನತಿಗೇರಿದನು."

ವಿಧಾತಾ ನಿತ್ಯವಿಧುರಸ್ತೇಜೋಧೈರ್ಯಾಭಿಮಾನಿತಃ |
ಅಕುಂಠೇನ ಧ್ರುವಂ ಚಕ್ರೇ ಗೃಹೀತಾತ್ಮಪರಾಜಯಃ || 1769

"ಅವನ ಸಾಹಸ - ಧೈರ್ಯಗಳಿಂದ ಕಿಚ್ಚುಗೊಂಡ ದೈವ ಎಂದೂ ಅವನಿಗೆ ಅನುಕೂಲವಾಗಿರಲಿಲ್ಲ. ಆದರೂ ಅವನು ವಿಧಿನಿಯಮಕ್ಕೆ ಮಣಿಯಲಿಲ್ಲ. ನಿಶ್ಚಯವಾಗಿಯೂ ಕೊನೆಗೆ ವಿಧಿಯೆ ಅವನಿಂದ ಸೋಲೊಪ್ಪಿತು."

ಕೋ ವರಾಕೋ ಮಹರ್ಧೀನಾಂ ಸೋ ಗ್ರೇ ಪೂರ್ವಮಹೀಭೃತಾಮ್ |
ಉದಾತ್ತೇನಾಂತಕೃತ್ಯೇನ ತೇ ತ್ವಸ್ಯಾಗ್ರೇ ನ ಕಿಂಚನ || 1770

"ಸಂಪತ್ತಿನ ಸೆಲೆಯಾದ ಹಿಂದಿನ ರಾಜರ ಮುಂದೆ ಈ ಬಡಪಾಯಿ ಏತರವನು ? ಆದರೆ ಅವನ ಉಜ್ವಲವಾದ ಕೊನೆಕಾಲದ ಸಾಹಸದ ಮುಂದೆ ಅವರು ಏನೂ ಅಲ್ಲ!"

ನೇತ್ರಸ್ಪಂದಂ ಭ್ರುವೋಃ ಕಂಪಂ ಸ್ಮೇರಾಸ್ಯತ್ವಂ ಚ ನಾಮುಚತ್ |
ಸಜೀವಮಿವ ತನ್ಮುಂಡಂ ಕಿಯತೀರಪಿ ನಾಳಿಕಾಃ || 1777

"ಕಣ್ಣಿನ ಚಲನೆಯಿಂದ, ಹುಬ್ಬಿನ ಕುಣಿತದಿಂದ, ಮೋರೆಯ ಮೆಲುನಗೆಯಿಂದ ಸತ್ತು ಹಲವುಗಳಿಗೆಗಳ ತನಕವೂ ಆ ರುಂಡ ಜೀವಕಳೆ ತುಂಬಿದಂತಿತ್ತು."

ಏಕಂ ವ್ಯೋಮ್ನಿ ವಿಶಚ್ಚತ್ರ ಭಾನುಂ ಭೂಮೌ ಪುನಃ ಪರಮ್ |
ತದ್ದೇಹಮಪ್ಸರಃ ಸಂಗಂ ಧರಾಂಬುಜ ಏವ (?)ಜ್ಜಡಮ್ || 1778

"ಅವನ ದೇಹದ ಒಂದು ಭಾಗ ಮುಗಿಲಿಗೇರಿ ಸೂರ್ಯನನ್ನು ಸೇರಿತು. ಇನ್ನೊಂದು ಭಾಗ ನೆಲದಲ್ಲಿ ಬೆಂಕಿ ಸೇರಿತು. ಆ ಪುಣ್ಯದೇಹ ಅಪ್ಸರೆಯರ ಒಡನಾಡಿಯಾಯಿತು. ಈ ಜಡದೇಹ ನೆಲ - ನೀರು ಸೇರಿ ಮಣ್ಣುಪಾಲಾಯಿತು."

ಇದಕ್ಕಿಂತ ಪೂರ್ವದ ಒಂದು ಪ್ರಸಂಗ: ಭಿಕ್ಷಾಚರನ ಅನುಯಾಯಿಗಳಾಗಿದ್ದ ಸಾಮಂತ ಜಹಗೀರುದಾರರು, ಮಂತ್ರಿಗಳು, ಸೈನಿಕರು ಟೊಪ್ಪಿತಿರುಗಿಸಿದ್ದರು. ಭಿಕ್ಷಾಚರ ಸಮಯ ನಿರೀಕ್ಷಿಸುತ್ತ ಲತ್ತೆಯಾಡುತ್ತ ಕಾಲಹರಣ ಮಾಡುತ್ತಿದ್ದ. ಅವನು "ಕೊಲೆಗಡುಕರ ನೆರವಿನ ವಿಲಂಬದಿಂದ ತಾಳ್ಮೆಗೆಟ್ಟಿದ್ದ; ಕದನಕ್ಕಾಗಿ ತುದಿಗಾಲಲ್ಲಿ ಕಾಯುತ್ತಿದ್ದ." ತನಗೆ ಸೋಲು ಖಚಿತವೆಂದು ತಿಳಿದಿದ್ದರೂ ಎದೆಗುಂದದ ಈ ಹೋರಾಟಗಾರನ ಚಿತ್ರ ನೆನಪಿಡುವಂಥದು:

ಸುದೀರ್ಘ ಚಿಂತಾಗಲಿತಾಯಾಮಶ್ಯಾಮಲಿಭಿಃ ಕಚೈಃ ।
ಚಂಚಚ್ಚಿತ್ರ ಪತಾಕಾಂಕಮಿವ ವೀರಪಟಾಂಚಲೈಃ ।। 1744

ಗಂಡತಾಂಡವಿನಾಽಚ್ಛಿದ್ರಶಂಖತಾಟಂಕರೋಚಿಷಾ ।
ಚಂದನೋಲ್ಲೇಖಕಾಂತ್ಯಾ ಚ ದ್ಯೋತಿತಾಹಂ ಕ್ರಿಯಾನ್ವಿತಮ್ ।। 1745

ವಿ (?ವ) ತೀರ್ಣಂ ಚಿತ್ರಚರ್ಯಾಂತೇ ವಿಪರ್ಯಸ್ತಾಂಘ್ರಿತಾಡನಮ್ ।
ದ್ಯೋತಯಂತಮಿವಾಲಾತೈಃ ಶಸ್ತ್ರೀನೇತ್ರಾಧರಾಂಶುಕೈಃ ।। 1746

ಕೌಸುಂಭಾಧರವಾಸೋಗ್ರಬದ್ಧದೌತಾಧರಾಂಚಲೈಃ ।
ಲೋಲೈರ್ವೀರಹರಿಂ ಬದ್ಧಸಟಾಟೋಪಮಿವಾಂಸಯೋಃ ।। 1747

ದೃಜ್ಮನಃ ಪಾಣಿಪಾದೈಕ್ಯ ಚಾರುಪ್ರಚುರ ಚಾರಿಭಿಃ ।
ಚರಂತಂ ಮಂಡಲೈಶ್ಚಿತ್ರೈರ್ಲಘುಚಿತ್ರಸ್ಥಿರಕ್ರಮೈಃ ।। 1748

ಔಚಿತ್ಯಸ್ಯೋಚಿತಾಂ ಚರ್ಯಾಮಲಂಕಾರಮಹಂಕೃತೇಃ ।
ಅಭಿಮಾನವಿಭೂತೀನಾಂ ನಿತ್ಯೋತ್ಸೇಕಮನತ್ಯಯಮ್ ।। 1749

ಅಲಕ್ಷಿತಕ್ಷಿಪ್ರಪಾತಂ ಸ ಸರ್ವೋಽಪ್ಯುನ್ಮುಖೋ ಜನಃ ।
ವಿಚರಂತಂ ತಮೈಕ್ಷಿಷ್ಟ ಭಿಕ್ಷುಮಗ್ರೇ ವಿರೋಧಿನಾಮ್ ।। 1750

"ಮನದಳಲಿನಿಂದ ಸಡಿಲುಬಿಟ್ಟು ಕೆದರಿದ ನೀಳಾದ ಕಪ್ಪು ತಲೆಗೂದಲಿಂದ, ವೀರವೇಷದ ಬಟ್ಟೆಯ ಹಾರಂಚುಗಳಿಂದ ಗಾಳಿಗೆ ತೊನೆಯುವ ವಿಚಿತ್ರ ಪತಾಕೆಗಳನ್ನು ಹೊತ್ತಂತೆ ಅವನು ಕಂಡನು. ಕೆನ್ನೆಯಲ್ಲಿ ಮುತ್ತುಚಿಪ್ಪಿನ ಕಿವಿಯೋಲೆಯ ಹೊಂಬೆಳಕಿನಿಂದ, ಪೂಸಿದ ಚಂದನದ ಚಲುಕಾಂತಿಯಿಂದ ಕಳೆಗೊಂಡ ಹಮ್ಮಿನ ಹುಸಿನಗೆ ಮುಖದಲ್ಲಿ ಮಿನುಗಿತ್ತು. ವಿಚಿತ್ರವಾದ ವೀರನಡೆಯ ಅನಂತರ ದಿಟ್ಟವಾಗಿ ನೆಲವನ್ನು ಕುಟ್ಟಿ ನಡೆಯುತ್ತ ಎದುರು ಕಾಣಿಸಿಕೊಂಡ ಅವನ ಕತ್ತಿಯ ಝಳಪಿನಿಂದ, ಕಣ್ಣಿನ ಹೊಳಪಿನಿಂದ, ಉಟ್ಟಬಟ್ಟೆಯ ತಳಕಿನಿಂದ ಕೊಳ್ಳಿ ಉರಿಸಿದಂತೆ ಎಲ್ಲೆಡೆ ಬೆಳಕು ಚೆಲ್ಲಿತ್ತು. ಆತ ಪನ್ನತಿಕೆಯ ಸಿಂಹದಂತೆ ನಡೆದು ಬಂದಾಗ ಕೆಂಬಣ್ಣದ ಕೆಳ ಬಟ್ಟೆಯ ಮೇಲೆ ಬಿಗಿದ ಬಿಳಿದೋತರದಂಚು ಸಿಂಹದ ಹೆಗಲ ಮೇಲೆ ಇಳಿಬಿದ್ದ ಕೇಸರದಂತೆ

ಸೂಗಯಿಸಿತು. ಚುರುಕಾದ, ಚಮತ್ಕಾರಿಯಾದ ಅಷ್ಟೇ ಸ್ಥಿರವಾದ ಹೆಜ್ಜೆಗಳಿಂದ ಆತ ಬಗೆ ಬಗೆಯ ಯುದ್ಧದ ನಡೆಗಳಲ್ಲಿ ಚರಿಸುತ್ತಿರಲು ಆತನ ಕಣ್ಣು, ಮನಸ್ಸು, ಕೈ ಮತ್ತು ಕಾಲುಗಳು ಒಂದಕ್ಕೊಂದು ಹೊಂದಿಕೊಂಡು ಒಗ್ಗಟ್ಟಿನಿಂದ ಚೆಲುಗೊಂಡು ಚುರುಕಾಗಿ ಜತೆಯಲ್ಲಿ ಹೆಜ್ಜೆಯಿಟ್ಟವು. ಔಚಿತ್ಯದ ನೇರ್ಪೇ ಮೈವೆತ್ತು ಬಂದಂತೆ, ಗರ್ವಕ್ಕೆ ತೊಡಿಸಿದ ಆಭರಣದಂತೆ, ಅಭಿಮಾನದ ಐಸಿರಿಯೆ ಮಿಗಿಲಿಲ್ಲದೆ, ಅಳಿವಿಲ್ಲದೆ ಉಕ್ಕಿ ಬಂದಂತೆ ಆತ ನಡೆದು ಬಂದ. ಕಣ್ಣು ಹರಿಯದಷ್ಟು ಚುರುಕಾಗಿ ಹೆಜ್ಜೆ ಹರಿಸುತ್ತ ಹೀಗೆ ಶತ್ರುಗಳ ಎದುರೆ ನಿರ್ಭಿಡೆಯಿಂದ ನಡೆದಾಡುತ್ತಿದ್ದ ಭಿಕ್ಷಾಚರನನ್ನು ಜನರೆಲ್ಲ ಅಚ್ಚರಿಗೊಂಡು ಕತ್ತೆತ್ತಿ ನೋಡಿದರು."

ಕ್ರಿ.ಶ. 1121ರಲ್ಲಿ, ಕಾಶ್ಮೀರದ ಸಿಂಹಾಸನವನ್ನು ಮರಳಿ ಸ್ವಾಧೀನ ಪಡಿಸಿಕೊಂಡ ಸುಸ್ಸಲ "ವಿರೋಧಿಗಳಿಗೆ ಸುಳಿವು ಹತ್ತದಂತೆ ಒಮ್ಮಿಂದೊಮ್ಮೆಲೆ ರಾಜಧಾನಿಯಲ್ಲಿ ಕಾಣಿಸಿಕೊಂಡನು" (ತರಂಗ VIII 946). ಅವನ ವಿಜಯಾ ನಗರ ಪ್ರವೇಶ ವೀರರಸಚಿತ್ರಣದ ಇನ್ನೊಂದು ಅವಕಾಶ:

ನಗರಾಪಣವೀಥ್ಯಂತರ್ಹರ್ಯಾರೋಹಮುಖಾನ್ ಪುರಃ ।
ದ್ರೋಹಯೋಧಾನುಪಾಯಾತಾನ್ ತದೈವೋಜ್ಝಿತ ಸಾಧ್ವಸಃ ॥ 947

ವೇಷ್ಟಿತಾಲಂಬಕೂರ್ಚೇನ ವಕ್ತ್ರೇಣ ಭ್ರುಕುಟೀಭೃತಾ ।
ಕೋಪಕಂಪಿತ ತಾರೇಣ ಫುಲ್ಲನಾಸಾಪುಟಸ್ಪೃಶಾ ॥ 948

ಕಾಂಶ್ಚಿತ್ ಸಂತರ್ಜಯನ್ ನಿಂದನ್ನನ್ಯಾನ್ ಮಗ್ನಾಂಸ್ತಥಾಽಪರಾನ್ ।
ತೀವ್ರಾತಪಶ್ಯಾಮವಪು ಸ್ತಾಮ್ಯತ್ಕಾಲ ಇವೋಲ್ಬಣಃ ॥ 949

ಆಶೀರ್ಘೋಷಕೃತಾಂ ಪುಷ್ಪವರ್ಷಿಣಾಂ ಪುರವಾಸಿನಾಮ್ ।
ಪೂರ್ವಾಪಕಾರಿಣಾಂ ಶ್ರೇಣೀಷ್ವವಜ್ಞಾನ್ಯಸ್ತಲೋಚನಃ ॥ 950

ಸ್ಕಂಧಮಾತ್ರೋಪರಿನ್ಯಸ್ತಂ ಕವಚಂ ಹೇಲಯಾ ದಧತ್ ।
ಕೇಶಾನಂತಶಿರಸ್ತ್ರಾಂತ ನಿಃಸೃತಾನ್ ಧೂಲಿ ಧೂಸರಾನ್ ॥ 951

ಪಕ್ಷ್ಮಮಾಲಾಂ ಚ ಬಿಭ್ರಾಣಃ ಸಕೋಶಾಸಿ ಸ್ಫುರಂಗಿಣಾಮ್ ।
ಅಕೃಷ್ಟ ಖಡ್ಗಮಾಲಾನಾಮಂತರ್ವಲ್ಗತ್ತುರಂಗಮಃ ॥ 952

ಸಸಿಂಹನಾದೈರುದ್ದಾಮೈರ್ಭೇರೀಭಾಂಕಾರ ನಿರ್ಭರೈಃ ।
ಬಲೈರ್ಭರಿತದಿಕ್ಕೋಶಃ ಸುಸ್ಸಲಃ ಪ್ರಾವಿಶತ್ ಪುರಮ್ ॥ 953

"ಸುಡುಬಿಸಿಲಿಗೆ ಮೈಗಂದಿದ ಸುಸ್ಸಲ ಖತಿಗೊಂಡ ಕಾಲ ಪುರುಷನಂತೆ ಭೀಕರನಾಗಿ ಕಂಡ. ಆತನಿಗೆ ದ್ರೋಹ ಬಗೆದಿದ್ದ ರಾವುತರೆ ಮುಂತಾದ ಸೈನಿಕರು ಪೇಟೆ, ಅಂಗಡಿ, ಬೀದಿಗಳಿಂದ ಹೊರಬಂದು ಮೆಲ್ಲನೆ ಬಳಿಸಾರಿದರು. ಭಯವರಿಯದ

ಸುಸ್ಸಲ ಅಲ್ಲಿ ಆಗಲೆ ಅವರನ್ನು ತರಾಟೆಗೆ ತೆಗೆದುಕೊಂಡ; ಮೋರೆ ತುಂಬ ಹರವಿದ ಉದ್ದನೆಯ ದಾಡಿಯಿಂದ, ಗಂಟಿಕ್ಕಿದ ಹುಬ್ಬಿನಿಂದ, ಕೋಪದಿಂದ ಕಂಪಿಸುವ ಕಣ್ಣಾಲಿಯಿಂದ ಭಯ ಬರಿಸುವ ಮುಖ ಭಂಗಿಯಿಂದ ಕೆಲವರನ್ನು ಗದರಿಸಿದ; ಕೆಲವರನ್ನು ಹಂಗಿಸಿದ; ಸೋತು ಮುಳುಗಿದ ಕೆಲವರನ್ನು ಹೀಯಾಳಿಸಿದ. ಮೊದಲು ತನಗೆ ಎದುರು ನಿಂತಿದ್ದ ಪೇಟೆಯ ಜನ ಈಗ ಆಶೀರ್ವಾದದ ಜಯಘೋಷಮಾಡಿ ಹೂಮಳೆಗರೆದು ಸಾಲುಗಟ್ಟಿ ನಿಂತು ಸ್ವಾಗತಿಸಿದಾಗ ಅವರತ್ತ ಅನಾಸ್ಥೆಯಿಂದ ಕಣ್ಣು ಹಾಯಿಸಿದ. ಹೆಗಲ ಮೇಲೆ ತೂಗುಹಾಕಿದ ಸಡಿಲು ಕವಚ ಮೈಮೇಲೆ ಹಾಯಾಗಿ ಕೂತಿತ್ತು. ತಲೆಗಾಪಿನ ತುದಿಯಿಂದ ಕೆಳಜಾರಿದ ತಲೆಗೂದಲು, ಕಣ್ಣರೆಪ್ಪೆಕೂಡ ಧೂಳಿನಿಂದ ಕೆಂಪಡರಿತ್ತು. ಕತ್ತಿ ಹೊರೆ ಸೇರಿತ್ತು. ಕತ್ತಿ ಹಿಡಿದು ಸಾಗುತ್ತಿರುವ ರಾವುತರ ಪಡೆಯ ನಡುವೆ ಗಂಭೀರವಾಗಿ ಹೆಜ್ಜೆಯಿಟ್ಟು ನಡೆದು ಬರುತ್ತಿರುವ ಕುದುರೆಯ ಮೇಲೆ ಸುಸ್ಸಲ ಕುಳಿತಿದ್ದ. ಮುಗಿಲು ಗಡಚಿಕ್ಕುವ ಸೈನಿಕರ ಸಿಂಹನಾದ ಮತ್ತು ಭೇರಿಯ ಧುಮುಧುಮುನಾದದ ಗದ್ದಲದಿಂದ ದಿಕ್ಕು ದೆಸೆಗಳನ್ನು ತುಂಬುತ್ತ ಸುಸ್ಸಲ ಶ್ರೀನಗರವನ್ನು ಪ್ರವೇಶಿಸಿದ.

ಕಲ್ಹಣ ಇನ್ನೊಂದು ಬಗೆಯ ಪೌರುಷವನ್ನು "ಗೌಡದೇಶ" (ಬಂಗಾಲ) ದ ವೀರಪುರುಷರ ಪೌರುಷವನ್ನು — ಮೆಚ್ಚಿ ಕೊಂಡಾಡುತ್ತಾನೆ, ಗೌಡದೇಶದ ಅರಸನ ಈ ಸ್ವಾಮಿನಿಷ್ಠ ಭೃತ್ಯರನ್ನು ಲಲಿತಾದಿತ್ಯನ ಆಜ್ಞೆಯಂತೆ ಕೊಲ್ಲಲಾಗಿತ್ತು. ಕಲ್ಹಣ ನಾಲ್ಕನೆಯ ತರಂಗದಲ್ಲಿ ನಿರೂಪಿಸುವಂತೆ ಈ ರಾಜನ ಅನುಚರರು ಜಾಮೀನು ಮಾಡಿದ್ದ ದೇವರ ಮಂದಿರಕ್ಕೆ ಗುಂಪುಕಟ್ಟಿ ಮುತ್ತಿಗೆ ಹಾಕಿದರು." ಪೂಜಾರಿಗಳು ಅವರನ್ನು ಒಳಬರದಂತೆ ತಡೆದರು.

> ತೇ ರಾಮಸ್ವಾಮಿನಂ ಪ್ರಾಪ್ಯ ರಾಜತಂ ವಿಕ್ರಮೋರ್ಜಿತಾಃ ।
> ಪರಿಹಾಸಪರಿಭ್ರಾಂತ್ಯಾ ಚಕ್ರುರುತ್ಪಾಟ್ಯ ರೇಣುಶಃ ।। 327

"ಪರಾಕ್ರಮಿಗಳಾದ ಆ ಬಂಗಾಲದ ಮಂದಿ ರಾಮಸ್ವಾಮಿ ಮಂದಿರವನ್ನು ಹೊಕ್ಕು ಅಲ್ಲಿದ್ದ ಬೆಳ್ಳಿಯ ವಿಗ್ರಹವನ್ನು, ಅದು ಪರಿಹಾಸಪುರದ ಕೇಶವ ವಿಗ್ರಹ ಎನ್ನುವ ಭ್ರಮೆಯಿಂದ, ಕಿತ್ತು ತೆಗೆದು ಪುಡಿಗುಟ್ಟಿದರು."

> ತಿಲಂತಿಲಂ ತಂ ಕೃತ್ವಾ ಚ ಚಿಕ್ಷಿಪುರ್ದಿಕ್ಷು ಸರ್ವತಃ ।
> ನಗರಾನ್ನಿರ್ಗತೈಃ ಸೈನ್ಯೈರ್ಹನ್ಯಮಾನಾಃ ಪದೇಪದೇ ।। 328

"ಅಷ್ಟರಲ್ಲಿ ಶ್ರೀನಗರದಿಂದ ಧಾವಿಸಿಬಂದ ಸೈನಿಕರ ಚಿತ್ರಹಿಂಸೆಯನ್ನು ಹೆಜ್ಜೆ ಹೆಜ್ಜೆಗೆ ಅನುಭವಿಸುತ್ತಲೇ ಅವರು ಆ ವಿಗ್ರಹವನ್ನು ಚೂರು ಚೂರು ಮಾಡಿ ದಿಕ್ಕು ದಿಕ್ಕುಗಳಿಗೆ ಚೆಲ್ಲಿದರು."

ಶ್ಯಾಮಲಾ ರಕ್ತಸಂಸಿಕ್ತಾ ಸ್ತೇऽಪತನ್ ನಿಹತಾ ಭುವಿ ।
ಅಂಜನಾದ್ರಿದೃಷತ್‌ಖಂಡಾ ಧಾತುಸ್ಯಂದೋಜ್ಜ್ವಲಾ ಇವ ।। 329

"ಈ ಕಪ್ಪು ಮೈಯ ಮಂದಿ ಮೈತುಂಬ ನೆತ್ತರು ಸುರಿಸುತ್ತ, ಕಾವಿ ಬಣ್ಣದ ಶಿಲಾರಸದಿಂದ ತೊಯ್ದ ಕಾಡಿಗೆಯ ಬೆಟ್ಟದ ಕಗ್ಗಲ್ಲ ತುಂಡುಗಳಂತೆ ಹರಣ ತೊರೆದು ನೆಲದಲ್ಲಿ ಮೈಕೆಡವಿದರು."

ತದೀಯರುಧಿರಾಸಾರೈಃ ಸಮಭೂದುಜ್ಜ್ವಲೀಕೃತಾ ।
ಸ್ವಾಮಿಭಕ್ತಿರಸಾಮಾನ್ಯಾ ಧನ್ಯಾ ಚೇಯಂ ವಸುಂಧರಾ ।। 330

"ಅವರು ಸುರಿಸಿದ ನೆತ್ತರಿನಿಂದ ಅವರ ಅಸಾಧಾರಣವಾದ ಸ್ವಾಮಿನಿಷ್ಠೆ ಬೆಳಗಿತು. ಈ ನೆಲ ಧನ್ಯವಾಯಿತು."

ತಮ್ಮ ದೊರೆಯ ಸಾವಿನ ಸೇಡು ತೀರಿಸಲು ಬಂಗಾಲದಿಂದ ಕಾಶ್ಮೀರದ ತನಕದ ನಿಡುದಾರಿಯನ್ನು ಸವೆಸಿದ್ದ ಈ ಸ್ವಾಮಿನಿಷ್ಠರ ಪ್ರಾಮಾಣಿಕತೆಯ ವೀರ ಬಲಿದಾನವನ್ನು ಬಣ್ಣಿಸಲು ಕಲ್ಹಣ ತಕ್ಕ ರೂಪಕಗಳಿಂದ ತುಂಬಿದ ಒಂದು ದೊಡ್ಡ ಶ್ಲೋಕವನ್ನೆ ಬಳಸಿದ್ದಾನೆ:

ವಜ್ರಾದ್ ವಜ್ರಾಕೃತಂ ಭಯಂ ವಿರಮತಿ ಶ್ರೀಃ ಪದ್ಮರಾಗಾದ್ ಭವೇತ್
ನಾನಾಕಾರಮಪಿ ಪ್ರಶಾಮ್ಯತಿ ವಿಷಂ ಗಾರುತ್ಮತಾದಶ್ಮನಃ ।
ಏಕೈಕಂ ಕ್ರಿಯತೇ ಪ್ರಭಾವನಿಯಮಾತ್ ಕರ್ಮೇತಿ ರತ್ನೈಃ ಪರಂ
ಪುಂರತ್ನೈಃ ಪುನರಪ್ರಮೇಯಮಹಿಮೋನ್ನದ್ಧೈರ್ನ ಕಿಂ ಸಾಧ್ಯತೇ ।। 331

"ಸಿಡಿಲಿನ ಭಯವನ್ನು ವಜ್ರ ಪರಿಹರಿಸುತ್ತದೆ; ಪದ್ಮರಾಗದಿಂದ ಸಂಪತ್ತು ಕೈಗೂಡುತ್ತದೆ; ನಾನಾಬಗೆಯ ವಿಷದೋಷವನ್ನು ಗರುಡ (ಪಚ್ಚೆ) ಮಣಿ ಪರಿಹರಿಸುತ್ತದೆ. ಹೀಗೆ ಒಂದೊಂದು ರತ್ನವೂ ತನ್ನ ಸಹಜ ಶಕ್ತಿಯಿಂದ ಒಂದೊಂದು ಕೆಲಸ ಸಾಧಿಸಬಲ್ಲುದು. ಆದರೆ ಅರಿವಿಗೆಟುಕದ ಹಿರಿಮೆಗೆ ನೆಲೆಯಾದ ಪುರುಷ ರತ್ನಗಳು ಸಾಧಿಸಲಾಗದ್ದು ಏನುಂಟು ?"

"ಆಪತ್ತು ಆಕಸ್ಮಿಕವಾಗಿ ಬಂದೆರಗಿದಾಗ ಕಂಗೆಡಿಸುತ್ತದೆ; ಆಪತ್ತಿನ ನಡುವೆಯೆ ಬಿದ್ದಿರುವವನಿಗೆ ಅದರ ಗೋಜಿರುವುದಿಲ್ಲ. ಹಿಮದ ನೀರು ಕೈಗೆ ಬಿದ್ದಾಗ ಮೈ ಜುಮ್ಮೆನ್ನುತ್ತದೆ; ಆದರೆ ನೀರಿನಲ್ಲಿ ಮುಳುಗಿದವನಿಗೆ ಚಳಿಯಿಲ್ಲ." ಇದು ಯುದ್ಧದ ಕಣದಲ್ಲು ಚಿತ್ತದ ಸಮತೋಲವನ್ನು ಕಳೆದುಕೊಳ್ಳದ ಸುಸ್ಸಲನನ್ನು ಕಲ್ಹಣ ಬಣ್ಣಿಸಿದ ಒಂದು ಬಗೆ (ತರಂಗ VIII, 1097). ಇತರ ಮೊದಲು ಬಂದ ಇನ್ನೊಂದು ಪದ್ಯ (1095): "ಅಲ್ಲಲ್ಲಿ ನಡೆದ ಯುದ್ಧಗಳಲ್ಲಿ ರಾಜಾ ಸುಸ್ಸಲ ಯಾವ ಉದ್ವೇಗವೂ ಇಲ್ಲದೆ ಆರಾಮವಾಗಿ ಓಡಾಡುತ್ತಿದ್ದ — ಮನೆಯಲ್ಲಿ ಏನಾದರೂ ಸಮಾರಂಭ ನಡೆದಾಗ ಮನೆಯ ಯಜಮಾನ ಮಂಟಪದಿಂದ ಮಂಟಪಕ್ಕೆ ಸಡಗರದಿಂದ ಓಡಾಡುವಂತೆ." ಈ ಮಾತು ಇಂದಿನ ದಿನದ ರಾಜಕೀಯ ಮುಖಂಡರಿಗು ಒಂದು ಆದರ್ಶ ಪಾಠವಾಗಬಲ್ಲುದು.

ಇತಿಹಾಸಕಾರನಾಗಿ ಕಲ್ಹಣ

ಬಡತನದಿಂದ ಮಹತ್ವಾಕಾಂಕ್ಷೆಯಿಂದ, ಒಣಜಂಭದ ಅರಸೊತ್ತಿಗೆಯ ಪಾದ ಪೀಠಕ್ಕೆ ತಮ್ಮ ಪ್ರತಿಭೆಯನ್ನು ಮಾರಿಕೊಂಡ ಬ್ರಾಹ್ಮಣ ಪಂಡಿತರುಂಟು; ಕವಿಗಳುಂಟು. ಕಲ್ಹಣ ಮಾತ್ರ ಈ ಗುಂಪಿನಿಂದ ಬೇರೆಯಾಗಿ ನಿಲ್ಲುತ್ತಾನೆ. ಭಾರತೀಯ ಲೇಖಕರು, ವಿಶೇಷತಃ ಆಸ್ಥಾನ ಕವಿಗಳು ತಮಗೆ ಆಸರೆ ನೀಡಿದ ದೊರೆಯನ್ನು ಹಾಡಿ ಹೊಗಳು ವುದನ್ನೆ ಕಾವ್ಯ ಪರಂಪರೆಯ ಒಂದು ಪದ್ಧತಿಯಾಗಿ ಮಾಡಿದ್ದುಂಟು. ಆದರೆ ರಾಜತರಂ ಗಿಣಿ ಇದಕ್ಕೆ ಅಪವಾದವಾಗಿ ನಿಲ್ಲುತ್ತದೆ. ಹಾಗೆಯೆ, ಕಲ್ಹಣನ ಈ ಕೃತಿ ಫಿರ್ದೋಸಿಯ "ಶಾಹ್‌ನಾಮಾ" ದಂತೆ ಬರಿಯ ಹಳೆಯ ದಂತಕಥೆಗಳ, ಐತಿಹ್ಯಗಳ ಕಲಬೆರಕೆಯೂ ಅಲ್ಲ.

ಒಬ್ಬ ಇತಿಹಾಸಲೇಖಕನ ಪಾತ್ರದ ಬಗ್ಗೆ ಕಲ್ಹಣ ಹೀಗೆ ಹೇಳುತ್ತಾನೆ: 'ಪಕ್ಷಪಾತ - ಪೂರ್ವಾಗ್ರಹಗಳಿಲ್ಲದೆ, ಒಬ್ಬ ನ್ಯಾಯಾಧೀಶನಂತೆ, ನಡೆದ ಸಂಗತಿಗಳನ್ನು ತಟಸ್ಥವಾದ ಭಾಷೆಯಲ್ಲಿ ಒಕ್ಕಣಿಸಬಲ್ಲವನೆ ಪ್ರಶಂಸೆಗೆ ಯೋಗ್ಯನಾದ ವ್ಯಕ್ತಿ.' ಕಲ್ಹಣ ಈ ಮಟ್ಟದಲ್ಲಿ ನಿಲ್ಲುವವನು, ಇತಿಹಾಸಕಾರನಾಗಿ ಅವನ ನಿಲುವು ಪಕ್ಷಪಾತರಹಿತವಾದದ್ದು.

"ಮ್ಯಾಂಚೆಸ್ಟೆರ್ ಗಾರ್ಡಿಯನ್" ಪ್ರಸಿದ್ಧಿಯ ಸಿ.ಪಿ.ಸ್ಕಾಟ್ ಹೇಳಿದ್ದುಂಟು: "ವಸ್ತುಸ್ಥಿತಿ ಪವಿತ್ರವಾದದ್ದು." ಆತ ಈ ಮಾತನ್ನು ಹೇಳಿದ್ದು ಪತ್ರಿಕೋದ್ಯಮದ ಕುರಿ ತಾಗಿ ನಿಜ. ಪತ್ರಿಕೋದ್ಯಮವೆಂದರೂ ನಿಜವಾಗಿ ವರ್ತಮಾನದ ಚರಿತ್ರೆಯೇ ಅಲ್ಲವೇ? ಆದರೆ ಇತಿಹಾಸದ ಮಟ್ಟಿಗೆ ಈ ಮಾತು ಹೆಚ್ಚು ಅರ್ಥಪೂರ್ಣ. ಕಲ್ಹಣನ ಸ್ವಂತ ಉದ್ಗಾರಗಳೆ ವಸ್ತುಸ್ಥಿತಿಯ ಬಗೆಗೆ ಆತನಿಗಿರುವ ಕಾಳಜಿಯನ್ನು ತೋರಿಸುತ್ತವೆ. "ರಾಗ - ದ್ವೇಷಗಳಿಂದ ಮುಕ್ತನಾದ, ಸತ್ಯದ ಆವಿಷ್ಕಾರಕ್ಕಷ್ಟೆ ತನ್ನ ಭಾಷೆಯನ್ನು ಸೀಮಿತಗೊ ಳಿಸಿದ ಗುಣವಂತನಾದ ಕವಿ ಮಾತ್ರವೆ ಪ್ರಶಂಸೆಗೆ ಅರ್ಹನಾಗುತ್ತಾನೆ."

ಸುಮಾರು 2330 ವರ್ಷಗಳ ಪ್ರಾಚೀನ ಇತಿಹಾಸದ ಕಲ್ಹಣನ ಕಾವ್ಯಸಾಮ ಗ್ರಿಯ ಬಗೆಗೆ ತನ್ನ ಅನಿಸಿಕೆಗಳನ್ನು ಅವನೇ ತನ್ನ ಪ್ರಾಸ್ತಾವಿಕ ಪದ್ಯಗಳಲ್ಲಿ ನಿರೂಪಿ ಸಿದ್ದಾನೆ:

ವಿಸ್ತೀರ್ಣಾಃ ಪ್ರಥಮೇ ಗ್ರಂಥಾಃ ಸ್ಮೃತ್ಯೈ ಸಂಕ್ಷಿಪತೋ ವಚಃ |
ಸುವ್ರತಸ್ಯ ಪ್ರಬಂಧೇನ ಛಿನ್ನಾ ರಾಜಕಥಾಶ್ರಯಾಃ || 11

ಯಾ ಪ್ರಥಾಮಗಮನ್ನೈತಿ ಸಾ ಪಿ ವಾಚ್ಯಪ್ರಕಾಶನೇ |
ಪಾಟವಂ ದುಷ್ಪದೈರುಷ್ಟ ಶೀವ್ರಾ ಸುವ್ರತಭಾರತೀ || 12

"ಪೂರ್ವರಾಜರ ಇತಿವೃತ್ತಗಳನ್ನು ವಿಸ್ತಾರವಾಗಿ ವಿವರಿಸಿ ಪ್ರಾಚೀನ ಗ್ರಂಥ ಗಳನ್ನು ನೆನಪಿಡುವುದು ಕಷ್ಟವೆಂದು ಸುವ್ರತ ಅವುಗಳನ್ನು ಸಂಕ್ಷೇಪಿಸಿ ಬರೆದಿಟ್ಟ. ಅದರಿಂದ ಆ ಹಳೆಯ ಗ್ರಂಥಗಳೆಲ್ಲ ನಾಶವಾಗಿ ಹೋದವು. ಸುವ್ರತನ ಗ್ರಂಥ ವೇನೋ ಪ್ರಸಿದ್ಧಿಗೆ ಬಂತು. ಆದರೆ ಅವನ ಶುಷ್ಕ ಪಾಂಡಿತ್ಯ ಪ್ರದರ್ಶನದ ಭರದಲ್ಲಿ ದುರ್ಗಮವಾದ ಈ ಗ್ರಂಥ ಇತಿಹಾಸವನ್ನು ಸ್ಫುಟಗೊಳಿಸಲು ಅಸಮರ್ಥವಾಯಿತು."

ಕೇನಾಪ್ಯನವಧಾನೇನ ಕವಿಕರ್ಮಣಿ ಸತ್ಯಪಿ |
ಅಂಶೋऽಪಿ ನಾಸ್ತಿ ನಿರ್ದೋಷಃ ಕ್ಷೇಮೇಂದ್ರಸ್ಯ ನೃಪಾವಲೌ || 13

"ಕ್ಷೇಮೇಂದ್ರನ ನೃಪಾವಲಿ ಕಾವ್ಯಸೌಂದರ್ಯದಿಂದ ಕೂಡಿದ್ದರೂ ಇತಿಹಾಸ ನಿರೂಪಣೆಯಲ್ಲಿ ಸೋತಿದೆ. ಎಂಥದೋ ಒಂದು ಪ್ರಮಾದದಿಂದ ಒಟ್ಟು ಅವನ ಕೃತಿ ಯಲ್ಲಿ ನಿರ್ದುಷ್ಟವಾದ ಒಂದೇ ಒಂದು ಅಂಶವೂ ಇಲ್ಲ."

ಕಲ್ಹಣನ ಹೇಳಿಕೆಯನ್ನು ನಾವು ಗಮನಿಸಿದರೆ ಅವನು ತನ್ನ ರಚನೆಗೆ ಎರಡು ಅಂಶಗಳನ್ನು ಆಧಾರವಾಗಿಟ್ಟುಕೊಂಡಿದ್ದಾನೆ. ಒಂದು: ಕಾಶ್ಮೀರದ ಪ್ರಾಚೀನ ಇತಿಹಾ ಸದ ಬಗೆಗಿನ ಅನೇಕ ಕೃತಿಗಳ ಪರಿಶೀಲನೆ ಮತ್ತು ತೌಲನಿಕ ಅಧ್ಯಯನ. ಎರಡು: ಹಳೆಯ ರಾಜಶಾಸನಗಳ, ವಂಶಾವಳಿಗಳ, ಪ್ರಸಿದ್ಧ ವ್ಯಕ್ತಿಗಳ ನೆನಪುಗಳನ್ನು ದಾಖಲು ಮಾಡಿದ ಗ್ರಂಥಗಳ ಬಳಕೆ;

ದೃಗ್ಗೋಚರಂ ಪೂರ್ವಸೂರಿಗ್ರಂಥಾ ರಾಜಕಥಾಶ್ರಯಾಃ |
ಮಮ ತ್ವೇಕಾದಶ ಗತಾ ಮತಂ ನೀಲಮುನೇರಪಿ || 14

"ರಾಜರ ಇತಿವೃತ್ತವನ್ನೊಳಗೊಂಡ, ಪ್ರಾಚೀನ ವಿದ್ವಾಂಸರ ಹನ್ನೊಂದು ಗ್ರಂಥಗಳು ನನ್ನ ಕಣ್ಣಿಗೆ ಬಿದ್ದಿವೆ. ಹಾಗೆಯೆ, ನೀಲಮುನಿಯ ಮತ (ನೀಲಮತಪು ರಾಣ) ವನ್ನೂ ನಾನು ಗಮನಿಸಿದ್ದೇನೆ."

ದೃಷ್ಟೈಶ್ಚ ಪೂರ್ವಭೂಭರ್ತೃ ಪ್ರತಿಷ್ಠಾ ವಸ್ತುಶಾಸನೈಃ |
ಪ್ರಶಸ್ತಿಪಟ್ಟೈಃ ಶಾಸ್ತ್ರೈಶ್ಚ ಶಾಂತೋऽಶೇಷಭ್ರಮಕ್ಲಮಃ || 15

"ಹಿಂದಿನ ರಾಜರ ಪಟ್ಟಾಭಿಷೇಕದ ಸಮಯದಲ್ಲಿ ಹೊರಡಿಸಿದ ಆಜ್ಞಾಪತ್ರಗ ಳನ್ನು, ಆ ರಾಜರಿಗೆ ಸಂಬಂಧಪಟ್ಟ ಹಳೆಯ ಸಂಗತಿಗಳ ಶಿಲಾಶಾಸನಗಳನ್ನು, (ವಂಶಾ ವಲಿಯನ್ನೊಳಗೊಂಡ) ಬಿರುದಾವಲಿಗಳ ಪಟ್ಟಿಕೆಗಳನ್ನು ಹಳೆಯ ಹಿರಿಯರ ನೆನಪಿನ ಬರವಣಿಗೆಗಳನ್ನು ಪರಿಶೀಲಿಸಿ ಎಡವಬಹುದಾದ ಎಲ್ಲ ತೊಡಕುಗಳನ್ನೂ ನಾನು ಪರಿ ಹರಿಸಿಕೊಂಡಿದ್ದೇನೆ."

ಕಲ್ಹಣ ಪ್ರಾಚೀನರ ಇತಿಹಾಸಗ್ರಂಥಗಳನ್ನು ಉಲ್ಲೇಖಿಸಿದ್ದಾನೆ; ವಿಮರ್ಶಿಸಿದ್ದಾನೆ. ಕಾಶ್ಮೀರದ ರಾಜರ ಇತಿವೃತ್ತವನ್ನೊಳಗೊಂಡ, ವಿಸ್ತೃತವಾದ ಪುರಾತನ ಗ್ರಂಥಗಳು

ಈಗ ಪೂರ್ಣರೂಪದಲ್ಲಿ ಉಳಿದೇ ಇಲ್ಲ. ಪುರಾತನರ ಕೃತಿಗಳ ಸಾರವನ್ನೆಲ್ಲ ಒಂದೇ ಕೈಪಿಡಿಯ ಸಂಪುಟದಲ್ಲಿ ಸಂಗ್ರಹಿಸಿದ ಸುವ್ರತನ ಮೇಲೆಯೆ ಅಂಶತಃ ಇದರ ಹೊಣೆಯನ್ನು ಕಲ್ಹಣ ಹೊರಿಸುತ್ತಾನೆ. ಅಂತು ಕಾಶ್ಮೀರದ ಪೂರ್ವರಾಜರ ಬಗೆಗೆ ಆಗಲೇ ಹನ್ನೊಂದಕ್ಕಿಂತಲು ಹೆಚ್ಚು ಗ್ರಂಥಗಳು ನಿರ್ಮಾಣಗೊಂಡಿರುವಾಗ ರಾಜತರಂಗಿಣಿಯನ್ನು ಬರೆಯಬೇಕಾದ ಜರೂರಾದರೂ ಏನಿತ್ತು? ಕಲ್ಹಣ ಇದಕ್ಕೆ ಉತ್ತರ ನೀಡಿದ್ದಾನೆ: ಮುಮ್ಮಡಿ ಗೋನಂದನ ಕಾಲದಿಂದ ಅವಿಚ್ಛಿನ್ನವಾದ ಮತ್ತು ಸಮಗ್ರವಾದ ಇತಿಹಾಸವನ್ನು ಇವು ಯಾವುವೂ ಒದಗಿಸುವುದಿಲ್ಲ. ಅದಕ್ಕಾಗಿ "ಹಳೆಯ ಕಥಾನಿರೂಪಣೆಯ ಅನೇಕ ಅಂಶಗಳಲ್ಲಿ ಕಡಿದುಹೋದ ಕೊಂಡಿಯನ್ನು ಕೂಡಿಸಿ ಸಮಗ್ರ ಇತಿಹಾಸವನ್ನು ನೀಡಲು" ಅವನು ಬಯಸಿದನು. ಸಂಗ್ರಹರೂಪವಾದ ಕೈಪಿಡಿಗಳು ಹೊರಬಂದಾಗ ಆ ಬಗೆಗಿನ ಪ್ರಾಚೀನ ಉದ್ಗ್ರಂಥಗಳು ಕಣ್ಮರೆಯಾಗುವುದು ಭಾರತದಲ್ಲಿ ಚಿರಪರಿಚಿತವಾದ ಸಂಗತಿ. ಹೀಗಾಗಿ, ಕಲ್ಹಣ ಈ ವೀರಗಾಥೆಯ ಅನೇಕ ಘಟನೆಗಳ ಹಿಂದಿರುವ ನೈತಿಕ ಸಂದೇಶವನ್ನು ರಾಜರಿಗಾಗಿ ಮತ್ತು ಸಾಮಾಜಿಕರಿಗಾಗಿ ಬೊಟ್ಟು ಮಾಡಿ ತೋರಿಸಬಯಸಿದನು. "ನಿರಂತರವಾದ ರಸಧಾರೆಯಿಂದ ಸುಂದರವಾದ ಈ ರಾಜತರಂಗಿಣಿಯನ್ನು ನಿಮ್ಮ ಕಿವಿಯ ಚಿಪ್ಪಿನಲ್ಲಿ ತುಂಬಿಕೊಂಡು ಆಸ್ವಾದಿಸಿರಿ."

ರಾಜತರಂಗಿಣಿ ಸಂಸ್ಕೃತ ಶ್ಲೋಕಬದ್ಧವಾದ ಎಂಟು ತರಂಗಗಳಲ್ಲಿ ಪ್ರಾರಂಭದಿಂದ ಹಿಡಿದು ಕಲ್ಹಣನ ಕಾಲದ ತನಕ ಕಾಶ್ಮೀರವನ್ನಾಳಿದ ವಿವಿಧ ರಾಜವಂಶಗಳ ಚರಿತ್ರೆಯನ್ನು ಒಳಗೊಂಡಿದೆ. ಕಲ್ಹಣ ಮೊದಲ ಮೂರು ತರಂಗಗಳಲ್ಲಿ, ತನ್ನ ಕಾಲದಲ್ಲಿ ಪ್ರಚಲಿತವಿದ್ದ ಐತಿಹ್ಯ - ಆಖ್ಯಾಯಿಕೆಗಳನ್ನೆ ಬರೆದಿದ್ದಾನೆ. ವಾಸ್ತವವಾಗಿ ಕಲ್ಹಣ ಕಾಶ್ಮೀರದ ಪ್ರಾಚೀನ ಸಂಪ್ರದಾಯವನ್ನು ಇದ್ದಕಿದ್ದಂತೆ ಪ್ರಾಮಾಣಿಕವಾಗಿ ನಮ್ಮ ಮುಂದಿರಿಸಿದ್ದಾನೆ. ಆದರೆ ಕಲ್ಹಣನ ಈ ಕೃತಿ ಕ್ರಿ.ಶ. 1835 ರಲ್ಲಿ ಬೆಳಕಿಗೆ ಬಂದಂದಿನಿಂದ, ಕಾಲದ ಪರೀಕ್ಷೆಯಲ್ಲಿ, ಇತಿಹಾಸ ವಿಮರ್ಶೆಯ ಸಾಣೆಯಲ್ಲಿ ಗೆದ್ದು ಬಂದಿದೆ. ಕಲ್ಹಣನ ಸಮಕಾಲೀನ ಇತಿವೃತ್ತವಂತು ವಿವರವಾಗಿ ನಿರೂಪಣೆಗೊಂಡಿದೆ. ಅದಕ್ಕೆ ಮುಖ್ಯವಾದ ಕಾರಣ — ಅವನ ಕಾಲದ ಪ್ರಮುಖ ವ್ಯಕ್ತಿಗಳ ಜತೆಗೆ ಅವನಿಗಿದ್ದ ನೇರ ಸಂಪರ್ಕ ಇದರಿಂದ ಎಂಟನೆಯ ತರಂಗ ತುಂಬ ದೀರ್ಘವಾಗಿ ಬೆಳೆದು ನಿಂತಿತು. ಅದರಿಂದಲೇ ಇದು ಇತಿಹಾಸದ ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾದ ಕೊಡುಗೆಯೂ ಆಯಿತು.

ಕಲ್ಹಣ ಒಬ್ಬ ಪ್ರಾಚ್ಯಸಂಶೋಧಕನಾಗಿ ಕಾಶ್ಮೀರದಲ್ಲಿ ಸಿಗಬಹುದಾದ ಅರಮನೆಯ ದತ್ತಿಗಳು, ಸನ್ನದುಗಳು ಇಂಥ ಅಧಿಕೃತವಾದ ಐತಿಹಾಸಿಕ ದಾಖಲೆಗಳನ್ನು ತನ್ನ ಕೃತಿರಚನೆಯಲ್ಲಿ ಬಳಸಿಕೊಂಡಿದ್ದಾನೆ. ದೇವಾಲಯಗಳ ದಾನಶಾಸನಗಳಿಂದ ದೇವಾಲಯದ ಸ್ಥಾಪನೆಯ ಕಾಲ, ಅಲ್ಲಿನ ಪವಿತ್ರ ವಿಗ್ರಹಗಳ ಮೂಲ ಮುಂತಾದ ಮಾಹಿತಿಗಳನ್ನು ಸಂಗ್ರಹಿಸಿದ್ದಾನೆ.

ಖ್ಯಾತ ಇತಿಹಾಸಕಾರ, ಪ್ರಾಧ್ಯಾಪಕ ಆರ್.ಸಿ. ಮಜುಮ್‌ದಾರ್[1] ಅವರು ಚಾರಿತ್ರಿಕ ಸಂಶೋಧನೆಯಲ್ಲಿ ಅತ್ಯಾಧುನಿಕ ವಿಮರ್ಶನವಿಧಾನಗಳನ್ನು ಮುಂದಾಲೋಚನೆಯಿಂದ ಕಂಡುಕೊಂಡ ಕೀರ್ತಿಯನ್ನು ಕಲ್ಹಣನಿಗೆ ಸಲ್ಲಿಸಿದ್ದಾರೆ: "ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ, ನಿಜವಾದ ಅರ್ಥದಲ್ಲಿ ಇತಿಹಾಸಗ್ರಂಥ ಎಂದು ಪರಿಗಣಿಸಬಹುದಾದ ಕೃತಿ ಇದೊಂದೇ. ಈ ಕೃತಿಕಾರ ಆಗ ಪ್ರಚಲಿತವಿದ್ದ ಚರಿತ್ರಗ್ರಂಥಗಳು ಮತ್ತು ಇತರ ಮೂಲಗಳಿಂದ ತುಂಬ ಶ್ರಮವಹಿಸಿ ತನ್ನ ಗ್ರಂಥದ ಸಾಮಗ್ರಿಯನ್ನು ಸಂಗ್ರಹಿಸಿದ್ದಾನೆ. ಮಾತ್ರವಲ್ಲ, ತನ್ನ ಗ್ರಂಥದ ಪ್ರಾರಂಭದಲ್ಲಿ, ಇತಿಹಾಸ ಲೇಖನಕ್ಕೆ ಅವಶ್ಯವಾದ ಕೆಲವು ಸಾಮಾನ್ಯ ಸೂತ್ರಗಳನ್ನೂ ಸೂಚಿಸಿದ್ದಾನೆ. ಅವನ ಕಾಲದಲ್ಲಿ ಅಜ್ಞಾತವಾಗಿದ್ದ ಈ ಮೂಲ ಸೂತ್ರಗಳನ್ನು ಅವನ ದೂರದೃಷ್ಟಿಯ ಮುಂದಾಲೋಚನೆ ಕಂಡುಕೊಂಡಿತ್ತು ಎನ್ನುವುದು ಗಮನಾರ್ಹ. ಐತಿಹಾಸಿಕ ಸಂಶೋಧನೆಯ ವಿಮರ್ಶಾತ್ಮಕ ವಿಧಾನದ ಬಗೆಗೆ ಇವು ಬಹ್ವಂಶ ಅವನ ಪುರೋಗಾಮಿತ್ವದ ಮುಂದಾಲೋಚನೆಗಳು ಎಂದು ಪರಿಗಣಿಸಬಹುದಾದರೂ ವಾಸ್ತವವಾಗಿ ಇಂಥ ಶಾಸ್ತ್ರೀಯ ವಿಧಾನ 19ನೆಯ ಶತಕದ ತನಕವೂ ಪೂರ್ಣವಾಗಿ ಬೆಳೆದು ಬಂದಿಲ್ಲ."

ರಾಜತರಂಗಿಣಿಯಲ್ಲಿ ಕೆಲವೆಡೆ ಕುಂದು ಕೊರತೆಗಳಿರಬಹುದಾದರೂ ಅದೊಂದು ಮಹತ್ವದ ಇತಿಹಾಸಗ್ರಂಥ. ಕಾಶ್ಮೀರ ಮತ್ತು ಭಾರತದ ಮಟ್ಟಿಗಂತು ವಿವಾದಾತೀತವಾದ ಮಹತ್ವದ ಗ್ರಂಥ. ಈ ಕೃತಿಯ ಅನುವಾದದ ಮುನ್ನುಡಿಯಲ್ಲಿ ಸ್ಟೈನ್ ಅವರು ಬರೆದ ಮಾತನ್ನು ನಾವಿಲ್ಲಿ ಉಲ್ಲೇಖಿಸಬಹುದು: "ಭಾರತೀಯ ಇತಿಹಾಸ ಮೀಮಾಂಸೆಯಲ್ಲಿ ಕಲ್ಹಣನ ರಾಜತರಂಗಿಣಿ ಆಸಕ್ತಿ ಕೆರಳಿಸಲು ಕಾರಣ: ಮಧ್ಯಯುಗದ ಯುರೋಪಿನ ಮತ್ತು ಪೌರಸ್ತ್ಯ ಮಹಮ್ಮದೀಯ ಚರಿತ್ರಗ್ರಂಥಗಳಿಗೆ ಅತ್ಯಂತ ಹತ್ತಿರವಾದ ಸಂಸ್ಕೃತ ಬರವಣಿಗೆಯನ್ನು ಇದು ಪ್ರತಿನಿಧಿಸುತ್ತದೆ ಎನ್ನುವುದು. ಕಲ್ಹಣನ ಕಥನ ಕ್ರಮವನ್ನೆ ಒಳಗೊಂಡ ಅನಂತರದ ಕಾಶ್ಮೀರಿ ಇತಿಹಾಸ ಗ್ರಂಥಗಳನ್ನು ಕೂಡಿಸಿಯೂ — ಇದೊಂದೇ ಪ್ರಾಯೋಗಿಕವಾಗಿ ಈಗಲೂ ಉಳಿದಿರುವ ಈ ಮಾದರಿಯ ಗ್ರಂಥ....... ತನ್ನ ಕೃತಿಯ ಯೋಜನೆಯ ಬಗೆಗೆ, ಚೌಕಟ್ಟು ರಚನೆಯ ಬಗೆಗೆ ಕಲ್ಹಣ ಎಂದೂ ಸ್ವಂತಿಕೆಯನ್ನು ಪ್ರಸ್ತಾಪಿಸಿರಲಿಲ್ಲ. ಬದಲಾಗಿ, ಆತ ತಾನು ಆಧಾರವಾಗಿ ಬಳಸಿದ, ಕಾಶ್ಮೀರಿ ರಾಜರ ಬಗೆಗಿನ ಅನೇಕ ಪ್ರಾಚೀನರ ಇತಿಹಾಸಗ್ರಂಥಗಳನ್ನು ಉಲ್ಲೇಖಿಸುತ್ತಾನೆ, ಆದರೆ ಈ ಯಾವ ಪ್ರಾಚೀನ ಗ್ರಂಥವೂ ಈಗ ಉಳಿದಿಲ್ಲ. ಬೇರೆ ಬೇರೆ ಕಡೆಗಳಲ್ಲಿ ಇಂಥ ಕೃತಿಗಳು ಇದ್ದ ಸುಳಿವಿದ್ದರೂ, ರಾಜತರಂಗಿಣಿಯ ಮಾದರಿಯ ಇತಿಹಾಸಗ್ರಂಥದ ಅವಶೇಷವನ್ನು ಭಾರತದ ಯಾವುದೇ ಭಾಗದ ಸಂಸ್ಕೃತ ಸಾಹಿತ್ಯವೂ ನಮಗಾಗಿ ಉಳಿಸಿಟ್ಟಿಲ್ಲ."

---

1 ಮಜುಮ್‌ದಾರ್, ಆರ್.ಸಿ., ಸಂ: ದಿ ವೇದಿಕ್ ಏಜ್. ಪುಟ: 49.

ಕಾಲಾನುಕ್ರಮಣಿಕೆ

ಕಾಲಾನುಕ್ರಮದ ಮಟ್ಟಿಗಂತು ರಾಜತರಂಗಿಣಿಯಲ್ಲಿ ತುಂಬ ಗಂಭೀರವಾದ ಕೊರತೆಗಳು ಉಳಿದುಬಿಟ್ಟಿವೆ. ಮೊದಲ ಮೂರು ತರಂಗಗಳಲ್ಲಿ ಪ್ರತಿಯೊಬ್ಬ ಅರಸನ ಆಳಿಕೆಯ ಕಾಲಾವಧಿಯನ್ನು ಹೇಳಿದ್ದರೂ ಯಾವಾಗ ಆಳಿದ್ದು ಎನ್ನುವುದನ್ನು ನಿಖರ ವಾಗಿ ಹೇಳಿಲ್ಲ. ಪ್ರತಿಯೊಬ್ಬ ರಾಜನೂ ಆಳಿದ್ದು ಎನ್ನಲಾದ ಕಾಲಕ್ಕೆ ಕಲ್ಹಣ ಸೇರಿಸಿದ ಸಂಖ್ಯೆ ಒಂದಕ್ಕೊಂದು ತಾಳೆಯಾಗುವುದಿಲ್ಲ.

ಚಿಪ್ಪಟ ಜಯಾಪೀಡನ (ಕ್ರಿ.ಶ. 813) ಸಾವಿನ ಅನಂತರ, 4 ನೆಯ ತರಂಗದ 703 ನೆಯ ಶ್ಲೋಕದಿಂದ ಮುಂದೆ ಕಲ್ಹಣ ಸರಿಯಾದ ಕಾಲಮಾನವನ್ನು ಸೂಚಿ ಸುತ್ತಾನೆ. ಇಲ್ಲಿ ಲೌಕಿಕಶಕದಿಂದ ಕಾಲವನ್ನು ನಮೂದಿಸಲಾಗಿದೆ. ಇದು ಪ್ರಾಚೀನ ಕಾಲದಿಂದಲು ಕಾಶ್ಮೀರದಲ್ಲಿ ಬಳಕೆಯಲ್ಲಿದ್ದ ಪದ್ಧತಿ (ಲೌಕಿಕ ಶಕವನ್ನು ಕ್ರಿಸ್ತಶಕಕ್ಕೆ ಹೊಂದಿಸಿ ಸರಿಯಾದ ವರ್ಷವನ್ನು ಕಂಡುಹುಡುಕಬಹುದು). ಆರ್.ಎಸ್. ಪಂಡಿತರು ತಮ್ಮ ರಾಜತರಂಗಿಣಿಯ ಅನುವಾದಕ್ಕೆ ಬರೆದ 'ಕರೆ' ಯಲ್ಲಿ ಹೀಗೆ ಹೇಳುತ್ತಾರೆ "........ ಮೊದಲನೆಯ ಕಾಲಮಾನ ಲೌಕಿಕಶಕದ 3889 ನೆಯ ವರ್ಷ (ಕ್ರಿ.ಶ. 813 - 814). ಇಲ್ಲಿಂದ ಮುಂದಕ್ಕೆ ಕಲ್ಹಣನ ಇತಿಹಾಸದ ದಾಖಲೆಯ ಪ್ರಾಮಾಣಿಕತೆ ಮತ್ತು ನಿಖರತೆಯ ಬಗ್ಗೆ ಸಂಶಯ ಪಡಬೇಕಾಗಿಲ್ಲ. ಅದಕ್ಕಿಂತ ಪೂರ್ವದ ಕಾಲಾನುಕ್ರಮದ ಕೊರತೆಗೆ ಪುರಾತನ ಇತಿಹಾಸಗ್ರಂಥಗಳಲ್ಲಿನ ತಪ್ಪುಗಳೇ ಕಾರಣ."

ಐದನೆಯ ತರಂಗದಲ್ಲಿ, ಉತ್ಪಲರಾಜವಂಶೀಯರ ಆಡಳಿತ ಬಂದ ಮೇಲೆ ಪ್ರತಿಯೊಂದು ಆಡಳಿತದ ಆರಂಭ ಮತ್ತು ಅವಸಾನದ ವರ್ಷ, ತಿಂಗಳು ಮತ್ತು ದಿನ ಗಳನ್ನು ಕೊಡಲಾಗಿದೆ. ಒಟ್ಟನಲ್ಲಿ ಈ ದಿನಾಂಕಗಳನ್ನು ವಿಶ್ವಸನೀಯವೆಂದು ಪರಿಗಣಿಸ ಬಹುದು. ಇವುಗಳೆನ್ನು ಸಮಕಾಲೀನ ದಾಖಲೆಗಳಿಂದಲೆ ಆತ ಸಂಗ್ರಹ ಮಾಡಿರಬೇಕು. ಆದರೆ ಇತರ ಸ್ವತಂತ್ರ ಮೂಲಗಳಿಂದ ಇವುಗಳ ಖಚಿತತೆಯನ್ನು ಸಮರ್ಥಿಸಲು ಇತಿಹಾಸತಜ್ಞರ ಬಳಿ ಯಾವ ಸಾಧನವೂ ಇಲ್ಲ.

ಕ್ರಿ.ಶ. 8ನೆಯ ಶತಕದ ಕೊನೆಗೆ ಬರುವ ತನಕವೂ ರಾಜರುಗಳ ಉತ್ತರಾಧಿ ಕಾರಿತ್ವದ ಕಾಲಾನುಕ್ರಮದ ಖಚಿತವಾದ ಸೂಚನೆ ನಮಗೆ ಸಿಗುವುದಿಲ್ಲ. ಕಲ್ಹಣ ತನ್ನ ಕಾಲದ ಘಟನೆಗಳನ್ನು ಬರೆಯುವಾಗಲೂ ಖಚಿತವಾದ ದಿನಾಂಕಗಳನ್ನು ಬರೆಯದೆ ಇರುವುದು ಎದ್ದು ಕಾಣುವ ಸಂಗತಿ. ಮಹತ್ವದವುಗಳೆಂದು ಕಲ್ಹಣನೇ ಬಗೆದಿರುವ, ಬಗೆದು ವಿಸ್ತಾರವಾಗಿ ಬಣ್ಣಿಸಿರುವ ಘಟನೆಗಳ ಬಗೆಗೆ ಕೂಡ ಕಾಲಮಾನ ಸೂಚಿತ ವಾಗಿಲ್ಲ. ಕೆಲವೊಮ್ಮೆ ಅವನು ಬರಿದೆ ಘಟನೆ ನಡೆದ ತಿಂಗಳನ್ನಷ್ಟೆ ಹೇಳಿ ವರ್ಷವನ್ನು

ಊಹಿಸುವ ಕೆಲಸವನ್ನು ಓದುಗರಿಗೇ ಬಿಟ್ಟುಬಿಡುತ್ತಾನೆ.

ಕಾಶ್ಮೀರದ ಭೂ ವಿನ್ಯಾಸದ ಬಗೆಗೆ ಗಾಢವಾದ ಪರಿಚಯವಿದ್ದ ಕಲ್ಹಣನ ಪ್ರಾದೇಶಿಕ ಉಲ್ಲೇಖಗಳು ಮಾತ್ರ ನಿರ್ದಿಷ್ಟ ಮತ್ತು ಸ್ಪಷ್ಟ. "ನಾವು ಪ್ರಾಯಃ ಭಾರತದ ಯಾವುದೇ ಭಾಗಕ್ಕಿಂತ ಹೆಚ್ಚು, ಪೂರ್ಣ ವಿವರಗಳೊಡನೆ ಕಾಶ್ಮೀರದ ಪ್ರಾಚೀನ ಭೂವಿನ್ಯಾಸವನ್ನು ರೂಪಿಸಲು ಸಾಧ್ಯವಾಗಿದ್ದರೆ ಅದರ ಕೀರ್ತಿ ಮುಖ್ಯವಾಗಿ ಕಲ್ಹಣನಿಗೆ ಸಲ್ಲಬೇಕು." (ಸ್ಟೇನ್). ಆದರಿಂದ ಕಾಶ್ಮೀರದ ಕಣಿವೆಯ ಪ್ರಾಚೀನ ಭೌಗೋಲಿಕಸ್ಥಿತಿಯ ಅಧ್ಯಯನಕ್ಕು ರಾಜತರಂಗಿಣಿಯ ಅಧ್ಯಯನಕ್ಕು ನಿಕಟ ಬಾಂಧವ್ಯ ಏರ್ಪಟ್ಟಿದೆ.

ವಂಶಾವಳಿಯ ಬಗೆಗೂ ಕಲ್ಹಣ ಹೆಚ್ಚಿನ ಗಮನ ನೀಡುತ್ತಾನೆ. ತನ್ನ ಕಾಲದ ಆಗುಹೋಗುಗಳ ಮೇಲೆ ಪ್ರಭಾವ ಬೀರಿದ ಪ್ರತಿಯೊಬ್ಬ ಪ್ರಮುಖ ವ್ಯಕ್ತಿಯ ವಂಶ ಮೂಲವನ್ನು ಕೊಡುವುದರ ಮಹತ್ವವನ್ನು ಅವನು ಅರಿತಿದ್ದ. ಇದರಿಂದ ಕೊನೆಯ ಎರಡು ತರಂಗಗಳಲ್ಲಿ ಬಂದ ಸಮಸ್ಯಾಮಯ ರಾಜಕೀಯ ಪರಿಸ್ಥಿತಿಯ ಕ್ರೋಡೀಕರಣ ಸುಲಭಸಾಧ್ಯವಾಯಿತು. ತುಂಬ ಮಹತ್ವದ ಪ್ರಸಿದ್ಧ ಪುರುಷರ ವ್ಯವಸ್ಥಿತ ವಂಶಾವಳಿಯನ್ನು ಇಲ್ಲಿ ಒದಗಿಸಲಾಗಿದೆ.

ಭಾರತದ ಬೇರೆ ಬೇರೆ ಭಾಗಗಳನ್ನು ಒಂದರ ನಂತರ ಒಂದು ಗೆದ್ದು ಹೆಸರಾದ, ಕರ್ಕೋಟರಾಜವಂಶದ ಅತ್ಯಂತ ವರ್ಣರಂಜಿತ ದೊರೆಯಾದ ಲಲಿತಾದಿತ್ಯನ ವಂಶಾವಳಿ ನಮಗೆ ತಿಳಿದಿದೆ. ಲಲಿತಾದಿತ್ಯನ ಆಡಳಿತದ ಅವಧಿ (ಕ್ರಿ.ಶ. 724 - 761) ಯ ಬಗೆಗೆ ಕಲ್ಹಣನ ಹೇಳಿಕೆ ಸರಿಯೆಂದು ಒಪ್ಪಲಾಗಿದ್ದರೂ ಅವನು ಕೊಟ್ಟ ದಿನಾಂಕದ ಬಗೆಗೆ ಕೆಲ ವಿದ್ವಾಂಸರು ಸಂಶಯ ವ್ಯಕ್ತಪಡಿಸುತ್ತಾರೆ. ವಾಸ್ತವವಾಗಿ ಕಲ್ಹಣ ಖಚಿತವಾದ ದಿನಾಂಕವನ್ನೇನೂ ಕೊಟ್ಟಿಲ್ಲ. ಅವನ ವಿವರಣೆಯ ಲೆಕ್ಕಾಚಾರದ ಮೇಲೆ ದಿನಾಂಕವನ್ನು ನಿರ್ಧರಿಸಲಾಗಿದೆ. ಈ ದಿನಾಂಕವನ್ನು ಊಹಿಸಲು ಬಳಸಿದ ಸಾಮಗ್ರಿಗಳನ್ನು ಗಮನಿಸಿದರೆ ಈ ಲೆಕ್ಕಾಚಾರದ ತೊಡಕು ಸ್ಫುಟವಾಗುತ್ತದೆ. ಊಹೆಯ ಮೂಲ ಸಾಮಗ್ರಿಗಳು ಇವು: ಕಲ್ಹಣನ ಕಾಲ, ಶಕವರ್ಷ 1070 (ಕ್ರಿ.ಶ. 1148); ಈ ಶಕವರ್ಷಕ್ಕಿಂತ 2330 ವರ್ಷಗಳ ಮೊದಲು ಆಳಿದ ಮುಮ್ಮಡಿ ಗೋನಂದನ ಕಾಲ; ಮತ್ತು ಕೊನೆಯದಾಗಿ, ಈ ಎರಡು ಕಾಲಮಾನದ ನಡುವೆ ಆಳಿದ ರಾಜರ ಹೆಸರುಗಳು ಮತ್ತು ಅವರ ಆಡಳಿತದ ಕಾಲಾವಧಿಗಳು, ಕಲ್ಹಣನ ಕಾಲ (ಅರ್ಥಾತ್ ರಾಜತರಂಗಿಣಿ ಬರೆದ ಕಾಲ) ಸರಿಯಾದದ್ದೆಂದು ತಿಳಿಯಬಹುದು. ಆದರೆ ಮುಮ್ಮಡಿ ಗೋನಂದ ಮತ್ತು ಕಲ್ಹಣನ ನಡುವಿನ ಕಾಲದ ಅಂತರವನ್ನು ಅಷ್ಟೇ ಸರಿಯಾದದ್ದೆಂದು ಹೇಳಲಾಗುವುದಿಲ್ಲ. ಹಾಗೆಯೆ, ಲಲಿತಾದಿತ್ಯನ ತನಕದ ಅರಸರ ಆಡಳಿತಾವಧಿಯ ಕಾಲಮಾನವನ್ನೂ ಖಚಿತವಾದದ್ದೆಂದು ಹೇಳಬರುವುದಿಲ್ಲ.

ಟ್ಯಾಂಗ್ ರಾಜವಂಶದ ಚೀನೀ ಇತಿಹಾಸದ ದಾಖಲೆಗಳಲ್ಲಿ ತೀರ ವಿರುದ್ಧವಾದ ಉಲ್ಲೇಖಗಳಿದ್ದರೂ ಸತ್ಯದ ಮಟ್ಟಿಗೆ ಲಲಿತಾದಿತ್ಯ ಮತ್ತು ಇತರ ಕಾರ್ಕೋ

ಟವಂಶೀಯರ ಕಾಲಾನುಕ್ರಮವನ್ನು ಒಪ್ಪಿಕೊಳ್ಳಲಾಗಿದೆ. ಇಲ್ಲಿ ಕನಿಷ್ಠ 25 ವರ್ಷಗಳ ಅಂತರ ಕಂಡುಬರುತ್ತದೆ. ಅದರಿಂದ ಈ ರಾಜವಂಶೀಯರ ಕಾಲಮಾನವನ್ನು ಅಷ್ಟು ವರ್ಷ ಮುಂದಕ್ಕೆ ಹಾಕಿ ಪರಿಗಣಿಸಬೇಕು ಎಂಬ ನಿರ್ಧಾರಕ್ಕೆ ಸ್ಟೈನ್ ಬಂದಿದ್ದಾರೆ. ಇದರಿಂದ ಇನ್ನೊಂದು ತೊಡಕು ಹುಟ್ಟಿಕೊಂಡಿದೆ. ಈ ಲೆಕ್ಕಾಚಾರದಂತೆ ಕರ್ಕೋಟ ವಂಶೀಯರ ಆಡಳಿತ ಕ್ರಿ.ಶ. 1880ರ ವರೆಗೂ ಮುಂದುವರಿದಿತ್ತು ಎನ್ನಬೇಕಾಗುತ್ತದೆ. ಆದರೆ ನಮಗೆ ಖಚಿತವಾಗಿ ತಿಳಿದಂತೆ ಆಗ ಕಾಶ್ಮೀರವನ್ನು ಆಳುತಿದ್ದವನು ಅವಂತಿ ವರ್ಮ. ಉಳಿದಿರುವ ಒಂದೇ ಒಂದು ಪರಿಹಾರಮಾರ್ಗ ಎಂದರೆ, ಕರ್ಕೋಟವಂ ಶದ ಕೆಲ ರಾಜರ ಆಡಳಿತಾವಧಿಯನ್ನು ಹೇಳುವಾಗ ಕಲ್ಹಣ ಹೆಚ್ಚು ವರ್ಷಗಳನ್ನು ಕೊಟ್ಟಿರಬೇಕು — ಎನ್ನುವುದು. ಅದರಿಂದಲೆ ಈ ಸಮಸ್ಯೆ ಕಗ್ಗಂಟಾಯಿತು.

ಏನಿದ್ದರೂ ಇಷ್ಟಂಶದಲ್ಲಿ ಇತಿಹಾಸತಜ್ಞರಲ್ಲಿ ಒಮ್ಮತವಿದೆ: ರಾಜತರಂಗಿಣಿ ಯಲ್ಲಿ ಬಂದ ಕರ್ಕೋಟ ವಂಶಕ್ಕಿಂತ ಪೂರ್ವದ ಇತಿಹಾಸದ ಕೆಲವಂಶ ಪೂರ್ತಿ ವಿಶ್ವಾಸಾರ್ಹವಲ್ಲ; ಕೆಲವು ರಾಜರು ಆಳಿದರೆನ್ನಲಾದ ಕಾಲಾವಧಿಯನ್ನಂತೂ ಸರ್ವಥಾ ಒಪ್ಪಲಾಗುವುದಿಲ್ಲ. (ಉದಾ: 300 ವರ್ಷಗಳ ಕಾಲದ ರಣಾದಿತ್ಯನ ಆಡಳಿತ); ಸರ್ವಥಾ ನಂಬಲಾಗದ ಕೆಲವು ಪವಾಡದ ಕಥೆಗಳೂ ಇಲ್ಲಿ ಬಂದಿವೆ; ಆದರೆ ಆರ್. ಎಸ್. ಪಂಡಿತರು[1] ಹೇಳಿದಂತೆ: " ಕಲ್ಹಣನ ಆಖ್ಯಾನದ ಯಾವುದೇ ಭಾಗ, ಪ್ರಾಯಃ ಹಲವು ನ್ಯೂನತೆಗಳನ್ನೊಳಗೊಂಡಿದ್ದರೂ, ಖಚಿತವಾಗಿ ತಪ್ಪು ಎಂದು ಸಾಧಿಸಬಲ್ಲ ಶಾಸ ನಗಳಾಗಲಿ, ನಾಣ್ಯಗಳಾಗಲಿ, ಇತಿಹಾಸಗ್ರಂಥಗಳಾಗಲಿ, ಅಥವಾ ಇತರ ಯಾವುದೇ ಬಗೆಯ ಸ್ವತಂತ್ರ ಪುರಾವೆಗಳಾಗಲಿ ದೊರಕಿಲ್ಲ .... ಅಥವಾ ಈ ತಪ್ಪುಗಳು — ತನ್ನ ಪೂರ್ವದ ಸಮಕಾಲೀನ ಚರಿತ್ರೆಗಳನ್ನು ಮತ್ತು ಇತರ ದಾಖಲೆಗಳನ್ನು ಬಳಸಿ ಕೊಳ್ಳುವಾಗ ಕಲ್ಹಣನಿಂದ ಸಂಭವಿಸಿದ ಪ್ರಮಾದಗಳು ಎಂದು ಯಾವ ಪುರಾವೆಯೂ ಸಿದ್ಧಪಡಿಸಿಲ್ಲ."

ಇದರಿಂದ ಸಮರ್ಥಿತವಾಗುವ ಮಾತು ಇದು: ತನ್ನ ಪೂರ್ವದ ಲೇಖಕರು ಬರೆದ ಪ್ರಾಚೀನ ಇತಿಹಾಸ ಗ್ರಂಥಗಳನ್ನು ಕಲ್ಹಣ ತುಂಬ ವಿವೇಚನೆಯಿಂದ ಬಳ ಸಿದ್ದಾನೆ ಎನ್ನುವುದು ನಮಗೆ ತಿಳಿದಿರುವುದರಿಂದ ಅವನು ನಮೂದಿಸಿದ ಎಲ್ಲ ರಾಜರ ಕಾಲಮಾನವನ್ನು ಅನೂರ್ಜಿತಗೊಳಿಸಬೇಕಾದ ಕಾರಣವಿಲ್ಲ. ವಿವರವಾದ ದಾಖಲೆ ದೊರಕದೆ ಇದ್ದಾಗ ಕೆಲವು ರಾಜರ ಕಾಲಮಾನವನ್ನು ಅವನು ಊಹೆಯಿಂದ ಎಣಿಸಿ ಬರೆದಿರುವುದು ತೀರ ಸಂಭಾವಿತ. ಮುಂದಿನ ತರಂಗಗಳಲ್ಲಿ — ವಿಶೇಷತಃ ಐದು, ಆರು, ಏಳು ಮತ್ತು ಎಂಟು — ಕಲ್ಹಣ ನಮೂದಿಸಿದ ಕಾಲಮಾನ ಸರಿಯಾದ ದ್ದೆಂದು ಸ್ವತಂತ್ರ ದಾಖಲೆಗಳು ಸ್ಥಿರಪಡಿಸಿವೆ. ಪ್ರಾಚೀನ ರಾಜರ ಆಳಿಕೆಯ ಕಾಲದ ಮಟ್ಟಿಗೆ ಅವನು ಪ್ರಾಚೀನ ಇತಿಹಾಸಗ್ರಂಥಗಳನ್ನು ಮತ್ತು ಪ್ರಚಲಿತ ಶಾಸನಗಳನ್ನು,

---

[1] ಪಂಡಿತ್ ಆರ್.ಎಸ್. ಅನು: ರಾಜತರಂಗಿಣಿ, ಸಾಹಿತ್ಯ ಅಕಾದೆಮಿ, 1968 ಮುದ್ರಣ, ಪರಿ-ಶಿಷ್ಟ ಎ. ಪುಟ: 720 - 721 .

ನಾಣ್ಯಗಳನ್ನು ಪರಿಶೀಲಿಸಿ, ಸಾಧ್ಯವಾದಷ್ಟು ಪ್ರಾಮಾಣಿಕವಾಗಿ, ಕಾಶ್ಮೀರದ ಪ್ರಾಚೀನ ಸಂಪ್ರದಾಯಗಳನ್ನಷ್ಟೆ ನಮ್ಮ ಮುಂದಿರಿಸಿದ್ದಾನೆ. ಗೋನಂದ ವಂಶೀಯರ ಅನಂತರ ಕ್ರಿ.ಶ. 596 ರಲ್ಲಿ ಕರ್ಕೋಟವಂಶೀಯರು ಅಧಿಕಾರಕ್ಕೆ ಬಂದರು ಎಂಬ ಅವನ ಹೇಳಿಕೆ ಹ್ಯುಯೆನ್ ತ್ಸಾಂಗನ ದಾಖಲೆಯಿಂದ ಸಮರ್ಥಿಸಲ್ಪಟ್ಟಿದೆ (ಜನರಲ್ ಕನ್ನಿಂಗ್‌ಹ್ಯಾಮ್ ಸಮರ್ಥಿಸಿದಂತೆ ಈತ ಕ್ರಿ.ಶ. 631 ರಲ್ಲಿ ಕಾಶ್ಮೀರವನ್ನು ಸಂದರ್ಶಿಸಿದ್ದ). ಹ್ಯೂಯೆನ್ ತ್ಸಾಂಗನ ಹೇಳಿಕೆಯಂತೆ ಕಿಲಿಟ್ಟೋ (ಕರ್ಕೋಟವಂಶೀಯರು ಚೀನಿಯರಿಗೆ ಪರಿಚಿತರಾದದ್ದು ಈ ಹೆಸರಿನಿಂದ) ವಂಶೀಯರು ಹಲವು ಶತಕಗಳ ಕಾಲದ ಗೋನಂದ ವಂಶೀಯರ ಆಡಳಿತದ ಅನಂತರ ಕಾಶ್ಮೀರದ ಕಣಿವೆಯನ್ನಾಳಿದರು. ಅವನು ಇನ್ನೂ ಒಂದು ಮಾತನ್ನು ವಿಶೇಷತಃ ಸೇರಿಸುತ್ತಾನೆ: ಆ ರಾಜನಿಗೆ ಬೌದ್ಧಧರ್ಮದ ಮೇಲೆ ವಿಶೇಷವಾದ ನಂಬಿಕೆಯಿರಲಿಲ್ಲ.

ಕಲ್ಹಣನ ಕೃತಿಯ ಹಸ್ತಪ್ರತಿಯೆ ತೃಪ್ತಿಕರವಾದ ಸ್ಥಿತಿಯಲ್ಲಿರಲಿಲ್ಲ ಎಂದು ಹಿರಿಯ ಇಂಡಾಲಜಿಸ್ಟ್ ಬ್ಯೂಲರ್ ಹೇಳುತ್ತಾರೆ. ಆದರೆ ಆರ್. ಎಸ್. ಪಂಡಿತರು ಇದನ್ನು ಒಪ್ಪುವುದಿಲ್ಲ. ಪಂಡಿತರ[2] ವಿಮರ್ಶೆ ಕಲ್ಹಣನ ಕಾಲಾನುಕ್ರಮಣಿಕೆಯ ಬಗೆಗಿನ ವಿವಾದಕ್ಕೆ ಒಂದು ನಿಷ್ಕರ್ಷೆಯ ಪರಿಹಾರ ನೀಡಿದೆ.

ಅದರಿಂದ ಅದನ್ನು ಇಲ್ಲಿ ಉದ್ಧರಿಸುವುದು ಅವಶ್ಯ. "........ ಈ ತನಕ ಬೆಳಕಿಗೆ ಬಂದ ಏಕಮಾತ್ರ ಇತಿಹಾಸ ಸಂಕಲನವೆಂದು ವಿವಾದಾತೀತವಾಗಿ ಮಹತ್ವದ ಕೃತಿಯಾದ ಈ ಗ್ರಂಥದ ಪಾಠವನ್ನು ಜಾಗರೂಕತೆಯಿಂದ ಸಂಪಾದಿಸಿ, ಅದು ಸಮರ್ಥರೂ ಸಹನಶೀಲರೂ ಆದ ವಿದ್ವಾಂಸರ ಕೈಯಲ್ಲಿ ಶೋಧಗೊಂಡು ಮೌಲಿಕ ಶುದ್ಧರೂಪವನ್ನು ಮರಳಿ ಪಡೆಯುವ ತನಕ ಇಷ್ಟು ಮಾತ್ರವನ್ನೆ ನಾವು ನಿರೀಕ್ಷಿಸುವುದು ನ್ಯಾಯ: ಹಲವು ಹಿರಿಯ ವಿದ್ವಾಂಸರು ಇದರ ಕುರಿತು ಬರೆದ ಮೇಲೂ ನಾವು ಅದರ ಐತಿಹಾಸಿಕ ಮೌಲಿಕತೆಯ ಬಗೆಗೆ, ಅದರ ಪ್ರಾರಂಭದ ತರಂಗಗಳ ಮೌಲಿಕತೆಯ ಬಗೆಗೆ ಕೂಡ, ನಮ್ಮ ತೀರ್ಮಾನವನ್ನು ತಡೆಹಿಡಿಯಬೇಕಾಗಿದೆ. ಸ್ವತಂತ್ರವಾದ ಬೇರೆ ಪುರಾವೆಗಳು ದೊರಕದ್ದರಿಂದ ಅದರ ಕೆಲವು ಭಾಗದ ಸತ್ಯತೆಯ ಬಗೆಗೆ ನಾವು ಶಂಕಿಸಬಹುದು; ಕೆಲವು ಕಥೆಗಳನ್ನು ಬರಿಯ ಕಾಲ್ಪನಿಕ ಎಂದು ಅಲಕ್ಷಿಸಲೂ ಬಹುದು. ಆದರೆ ಅದರಲ್ಲಿ ಇರುವುದೆಲ್ಲ ನಿರಾಧಾರ ಎನ್ನುವುದಕ್ಕೆ ಸ್ವತಂತ್ರವಾದ ಪುರಾವೆಗಳು ದೊರಕುವ ತನಕ ನಾವು ಅದು ಹೇಳಿದ್ದನ್ನೆಲ್ಲ, ಅದರ ಪ್ರಾರಂಭದ ತರಂಗಗಳಲ್ಲಿ ಬಂದಮಾತುಗಳನ್ನು ಕೂಡ, ತಳ್ಳಿಹಾಕುವುದು ಸಾಧ್ಯವಿಲ್ಲ." ಕಾಲತಃ ಹಿಂದೆ ಸರಿದಂತೆ ಇತಿಹಾಸದ ಕಥೆ ಬಹ್ವಂಶ ಐತಿಹ್ಯವಾಗಿಬಿಡುತ್ತದೆ ಮತ್ತು ಸಮಕಾಲೀನ ಘಟನೆಗಳಲ್ಲಿ ಐತಿಹಾಸಿಕ ಸತ್ಯವನ್ನು ಪಡೆಯುತ್ತದೆ ಎನ್ನುವ ಬಗ್ಗೆ ಸ್ವತಃ ಕಲ್ಹಣನೇ ಖಚಿತವಾದ ಸೂಚನೆಗಳನ್ನು ನೀಡಿದ್ದಾನೆ.

---

[2] ಅದೇ ಗ್ರಂಥದಲ್ಲಿ.

ಕಲ್ಹಣನ ಕಥನ ಕಲೆ

ಇತಿಹಾಸದಲ್ಲಿ ಮುಖ್ಯವಾಗಿ ಎರಡು ಘಟಕಗಳು: ಭೂತಕಾಲ ಅಥವಾ ಪಳೆಯುಳಿಕೆ (ಮೂರ್ತ ಮತ್ತು ಅಮೂರ್ತ ರೂಪದಲ್ಲಿ), ಮತ್ತು — ಬರೆಯುವ ಕಾಲದಲ್ಲಿ — ಇತಿಹಾಸದ ಪುನಾರಚನೆಗೆ ಉದ್ಯುಕ್ತವಾದ ಕಲ್ಪನಾಶಕ್ತಿಯ ಚಾತುರ್ಯ. ಇತಿಹಾಸಕಾರ ಅನಿವಾರ್ಯವಾಗಿ ಬಾಹ್ಯ ಆಕರಗಳನ್ನು ಅವಲಂಬಿಸಬೇಕಾಗುತ್ತದೆ. ಕೃತಕ ಸೇರ್ಪಡೆಯ ವಿಧಾನಗಳನ್ನು ಬಿಟ್ಟರೆ, ಸಹಜವಾಗಿ ಅವನು ಆ ಆಕರಗಳನ್ನು ಬದಲಿಸಲೂ ಆರನು; ಇಲ್ಲದ್ದನ್ನು ಸೇರಿಸಲೂ ಆರನು. ಕಲ್ಹಣನ ಆಕರಗಳ ಬಗೆಗೆ ನಾವು ಅವನ ಗ್ರಂಥದ ಪ್ರಸ್ತಾವನೆಯಿಂದಲೇ ತಿಳಿಯುತ್ತೇವೆ. ಅವನು ಅಲ್ಲಿ ಆ ಆಕರಗಳಿಗೆ ನೀಡಿದ ಮಹತ್ವ ಸಾಪೇಕ್ಷವಾದದ್ದೇ ಹೊರತು ಎಂದೂ ತಾನು ಅವುಗಳಿಗೆ ಕಟ್ಟು ಬೀಳಲಿಲ್ಲ. ತಾಳೆ ಮಾಡಿ ನೋಡುವ ಎಂದರೆ ಕಲ್ಹಣ ಉಲ್ಲೇಖಿಸಿದ ಯಾವ ಪ್ರಾಚೀನ ಇತಿಹಾಸಗ್ರಂಥವೂ ಈಗ ಉಪಲಬ್ಧವಿಲ್ಲ. ಕಲ್ಹಣನ ಕಥನ ಕೌಶಲವನ್ನು, ಅವನ ಇತಿಹಾಸಪ್ರಜ್ಞೆಯನ್ನು ಅಳೆದು ನೊಡಲು ನಾವು ಆಂತರಿಕ ಸಾಕ್ಷ್ಯಗಳನ್ನೇ ಅವಲಂಬಿಸಬೇಕಾಗಿದೆ.

ಕಲ್ಹಣನ ಕಾಲದ ಸಂಪ್ರದಾಯದಲ್ಲಿ ಸೇರಿಹೋಗಿದ್ದ ಪವಾಡದ ಕಥೆಗಳನ್ನು, ಐತಿಹ್ಯಗಳನ್ನು ಅವನು ತನ್ನ ಗ್ರಂಥದಲ್ಲಿ ನಿರೂಪಿಸಿದ ರೀತಿ ನೋಡಿದರೆ ನಮಗನ್ನಿಸುವ ಮಾತು ಇದು: ಇಂಥ ಕಟ್ಟುಕಥೆಗಳನ್ನು ಹುಟ್ಟುಹಾಕಿದ ವಿಚಾರಹೀನವಾದ ಮುಗ್ಧ ನಂಬಿಕೆಗಳಲ್ಲಿ ಕಲ್ಹಣನೂ ಪಾಲುಗೊಂಡಿದ್ದ. "ವಾಡಿಕೆಯ ಪದ್ಧತಿಯಲ್ಲಿ ಚಾರಿತ್ರಿಕ ಸ್ಮೃತಿಗಳ ಜತೆಗೆ ತೀರ. ಅಸಂಭಾವ್ಯತೆಗಳು, ಅತ್ಯುಕ್ತಿಗಳು ಮತ್ತು ಮೂಢನಂಬಿಕೆಗಳು ಬೆರೆತುಕೊಂಡಿರುವುದನ್ನು ನಾವು ನಿರೀಕ್ಷಿಸುವುದು ಸಹಜ. ಅಂಥ ನಂಬಿಕೆಗಳು ಕೂಡ ಇಲ್ಲಿ ನಿಶ್ಶಂಕೆಯಿಂದ, ನಿಷ್ಕಾಳಜಿಯಿಂದ ಯಥಾವತ್ತಾಗಿ ಉಲ್ಲೇಖಗೊಂಡಿವೆ." ಸ್ಟೈನರ ಈ ಅಂದಾಜು ಸರಿಯಾಗಿರಬಹುದೇನೋ. ಆದರೆ ಕಲ್ಹಣನ ವಿಶ್ವಾಸಾರ್ಹತೆಗೆ ಸಾಕ್ಷಿಯಾಗಿ ಈ ಮಾತನ್ನು ನಾವು ಹೇಳಬೇಕು: ಮೇಘವಾಹನ ಮುಂತಾದ ಪ್ರಾಚೀನ ರಾಜರ ಪವಾಡಸದೃಶ ಕೃತ್ಯಗಳ ಬಗೆಗೆ ನಂಬಿಕೆಯಿರದ ತನ್ನ ಕಾಲದ ಕೆಲವು 'ಸಂಶಯಗ್ರಸ್ತ' ರನ್ನೂ ಅವನು ಉಲ್ಲೇಖಿಸುತ್ತಾನೆ. (VII, 1137). ಕಲ್ಹಣ ಮೂಢನಂಬಿಕೆಯ ಮಂದಿಯ ಗುಂಪಿನಲ್ಲೊಬ್ಬ ಅಲ್ಲದಿದ್ದರೂ ಚಾರಿತ್ರಿಕ ಸಂಗತಿಗಳ ಬಗೆಗೆ ಅವನ ನಿಲುವು ಅರ್ವಾಚೀನ ಇತಿಹಾಸಕಾರರಲ್ಲಿ ಕಾಣುವಂಥ ವಿಮರ್ಶಾತ್ಮಕ ಪ್ರಕೃತಿಯದಲ್ಲ ಎನ್ನುವುದು ನಿಜ. ಪಾಶ್ಚಾತ್ಯ ಲೇಖಕರು ಪ್ರಾಯಿಕವಾಗಿ ಹೇಳುವಂತೆ — ಭಾರತೀಯ ಬುದ್ಧಿ ಪುರಾಣ — ಐತಿಹ್ಯ ಸಂಪ್ರದಾಯಗಳು ಮತ್ತು ಇತಿಹಾಸದ

ನಡುವೆ ಗೆರೆಯೆಳೆದು ಬೇರ್ಪಡಿಸದು.

ವಾಸ್ತವ ಇತಿಹಾಸದ ಬಗೆಗೆ ಸಾಂಪ್ರದಾಯಿಕವಾದ ಭಾರತೀಯ ನಿಲುವು ಪೌರಸ್ತ್ಯ ಸಂಸ್ಕೃತಿಗೇ ಮಿಾಸಲಾದುದು. ಮಧ್ಯಕಾಲದ ಭಾರತೀಯ ಇತಿಹಾಸಕಾರ ವೀರಯುಗದ ಪುರಾಣ ಕಥೆಗಳನ್ನು, ಕಿಂವದಂತಿಗಳನ್ನು, ದಂತಕಥೆಗಳನ್ನು ಗ್ರಹಿಸುವಾಗ ತನ್ನೆಲ್ಲ ಅಪನಂಬಿಕೆಗಳನ್ನು ತಡೆಹಿಡಿದಿಡುತ್ತಾನೆ. ಅವನಿಗೆ ಈ ಪವಾಡಗಳೆಲ್ಲ ಮೊನ್ನೆ ಮೊನ್ನೆ ನಡೆದ ಘಟನೆಗಳಷ್ಟೆ ಸತ್ಯವಾಗಿರುತ್ತವೆ. ಪರಿಣಾಮವಾಗಿ, ಪಾಶ್ಚಾತ್ಯರ ಅರ್ಥದಲ್ಲಿ ರಾಜಕೀಯ ಇತಿಹಾಸ ಎನ್ನಬಹುದಾದಂಥ ಇತಿಹಾಸ ರಚನೆ ಭಾರತದಲ್ಲಿ ನಡೆಯಲಿಲ್ಲ. ನಮ್ಮ ಇತಿಹಾಸವೆಲ್ಲ ಮತಧರ್ಮದ ನಂಬಿಕೆ, ಕಾವ್ಯದ ಸತ್ಯಾಂಶ ಮತ್ತು ಕಟ್ಟುಕತೆಯ ಕಲಬೆರಕೆ. ಐತಿಹಾಸಿಕ ಸತ್ಯದಿಂದ ಸಂಪ್ರದಾಯ ಮತ್ತು ಕಟ್ಟುಕಥೆಗಳನ್ನು ಬೇರ್ಪಡಿಸುವ ಪ್ರಯತ್ನ ನಮ್ಮಲ್ಲಿ ನಡೆದೇ ಇಲ್ಲ ಎನ್ನಬಹುದು. ಪುರಾತನದ ಪವಾಡಗಳನ್ನು ದಂತಕಥೆಗಳನ್ನು ಕಣ್ಮುಚ್ಚಿ ನಂಬುವ ಕಲ್ಹಣನ ಮುಗ್ಧತೆಗೆ ಕಾರಣ ಇಲ್ಲಿದೆ. ಮೊದಲ ಗೋನಂದ ಅರಸರಿಗೆ ಮಹಾಭಾರತದ ಯುದ್ಧದ ಜತೆಗೆ ಇದ್ದಿರಬಹುದಾದ ಸಂಶಯಾಸ್ಪದ ಸಂಬಂಧದ ಬಗೆಗೆ ಬರೆಯುವಾಗಾಗಲಿ, ಅದಕ್ಕಿಂತ ಕಾಲತಃ ಅವನಿಗೆ ಹತ್ತಿರದವರಾದ ಲಲಿತಾದಿತ್ಯ ಅಥವಾ ಜಯಾಪಿಡನ ಸಾಹಸದ ಐತಿಹ್ಯದ ವಿವರಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವಾಗಾಗಲಿ ಅವನು ಏಕರೀತಿಯ ಆವೇಶದಿಂದ ಬರೆಯುತ್ತಾನೆ.

ಹಿಮಾಲಯದ ಮಡಿಲಲ್ಲಿರುವ ಈ ಕಾಶ್ಮೀರ ಕಣಿವೆ ಚಾರಿತ್ರಿಕವಾಗಿ ಬೇರ್ಪಟ್ಟು ಒಂಟಿಯಾಗಿ ಉಳಿದ ಭೂಭಾಗ ಎನ್ನುವುದು ಗಮನಿಸಬೇಕಾದ ಇನ್ನೊಂದು ಅಂಶ. ಭಾರಿ ಬೆಟ್ಟಗಳ ಬಲವಾದ ಕೋಟೆ ಈ ನೆಲಕ್ಕೆ ವಿದೇಶೀ ಆಕ್ರಮಣದಿಂದ ನಿರಂತರ ರಕ್ಷಣೆ ನೀಡಿತ್ತು; ಮಾತ್ರವಲ್ಲ ಐತಿಹಾಸಿಕವಾಗಿ ವಿಶಿಷ್ಟವಾದ ಸ್ವಂತಿಕೆಯನ್ನು ಕಾಪಾಡಿ ಉಳಿಸಲು ಸಹಕರಿಸಿತ್ತು. ಕಾಶ್ಮೀರದ ಇತಿಹಾಸದ ಆ ನೆಲಕ್ಕೇ ಮೀಸಲಾದ 'ಮಣ್ಣಿನ ವಾಸನೆ' ಈ ಕೃತಿಯಲ್ಲಿ ಪ್ರಾಮಾಣಿಕವಾಗಿ ನಿಚ್ಚಳವಾಗಿ ಮೂಡಿಬಂದಿದೆ. ಕಾಶ್ಮೀರ, ಪ್ರಾಕೃತಿಕವಾದ ಗಡಿರೇಖೆಗಳಿಂದ ಗುರುತಿಸಲ್ಪಟ್ಟ ಒಂದು ಪುಟ್ಟ ಪರ್ವತೀಯ ಪ್ರಾಂತ. ಅದರಿಂದ ಕಲ್ಹಣನಿಗೆ ಅಲ್ಲಿನ ಭೂ ವಿನ್ಯಾಸದ, ಅಲ್ಲಿನ ಜನರ ನಡೆನುಡಿಗಳ ಗಾಢವಾದ ಪರಿಚಯ ಸಂಪಾದಿಸುವುದು ಬಹುಮಟ್ಟಿಗೆ ಸುಲಭವಾಗಿತ್ತು. ಈ ಗಾಢವಾದ ಪರಿಚಯವೆ, ಅವನ ಕೆಲವು ಸೀಮಿತ ಪರಿಮಿತಿಯಿಂದಾಗಿ ಉಂಟಾದ ಕೊರತೆಗಳನ್ನೂ ಮೀರಿ, ಈ ಕೃತಿಯನ್ನು ಹೆಚ್ಚು ಮೌಲಿಕವನ್ನಾಗಿ ಮಾಡಿದೆ.

ಒಬ್ಬ ಇತಿಹಾಸಕಾರನಾಗಿ ಕಲ್ಹಣ ಒಪ್ಪುತಪ್ಪುಗಳ ವಿವೇಚನೆಯ ಸ್ವಾತಂತ್ರ್ಯವನ್ನು ಉಳಿಸಿಕೊಂಡಿದ್ದಾನೆ. ತಾನು ಯಾರ ಆಳಿಕೆಯಲ್ಲಿ ಬದುಕಿದ್ದನೋ ಅಂಥ ಆಳರಸರ ಬೀಳು — ಗೀಳುಗಳನ್ನೂ ಬೊಟ್ಟು ಮಾಡಿ ತೋರಿಸಲು ಅವನು ಹಿಂಜರಿದಿಲ್ಲ. ಗಂಡು — ಹೆಣ್ಣುಗಳ ಹೂಟ — ಹವಣುಗಳ, ಒಳಬಗೆಗೆ ಹೊಕ್ಕು ಅಂತರಂಗದ ಕದವನ್ನು ಬಿಚ್ಚಿ ತೋರುವ ಅವನ ವಿಚಿಕಿತ್ಸಕ ದೃಷ್ಟಿ ಅವನನ್ನು ಅರ್ವಾಚೀನ ವಿಮರ್ಶಕರ ಮಟ್ಟಕ್ಕೇರಿಸಿದೆ. ರಾಜಾ ಹರ್ಷನ ದುರಂತದ ಹೃದಯಸ್ಪರ್ಶಿ ಚಿತ್ರಣದಲ್ಲಿ ಭಾವನೆಯ

ಪರವಶತೆ ಕಂಡರೂ ಈ 'ಕಾಶ್ಮೀರಿ ಇತಿಹಾಸದ ನೀರೋ'ನ ಬದುಕಿನಲ್ಲಿ ಅದೃಷ್ಟದ ಮೇಲಾಟವನ್ನು ಕಲ್ಹಣ ನಮ್ಮ ಬಗೆ ಕದಕುವಂತೆ ಚಿತ್ರಿಸಿದ್ದಾನೆ. ತುಂಗ, ಸುಸ್ಸಲ, ಅನಂತ ಮುಂತಾದ ಐತಿಹಾಸಿಕ ವ್ಯಕ್ತಿಗಳು ಗುಂಪಿನಲ್ಲೊಬ್ಬರಾಗಿ ಬರದೆ ವೈಯಕ್ತಿಕ ಶೀಲಸ್ವಭಾವಗಳೊಡನೆ ಅವರ ವ್ಯಕ್ತಿತ್ವ ಅಚ್ಚೊತ್ತುವಂತೆ ನಿರೂಪಿಸಲಾಗಿದೆ. ಇತಿಹಾಸದ ನಾಟಕದ ಸಣ್ಣಪಾತ್ರ ಕೂಡ ಇಲ್ಲಿ ಪೂರ್ಣ ಪ್ರಮಾಣದಲ್ಲಿ ಚಿತ್ರಿತವಾಗಿ ಮೈತುಂಬಿ ನಿಲ್ಲುತ್ತದೆ. ಕಾವ್ಯಗಳಲ್ಲಿ ಮತ್ತು ಐತಿಹಾಸಿಕ 'ಚರಿತ್ರೆ' ಗಳಲ್ಲಿ ತುಂಬಿಕೊಂಡಿರುವ ನಿರ್ಜೀವ ಕಲ್ಪನಾ ಪ್ರಪಂಚದ ಎದುರು ಕಲ್ಹಣನ ಈ ವಾಸ್ತವವಾದ ವ್ಯಕ್ತಿ ಚಿತ್ರಣ ಗಳು ಪ್ರತ್ಯೇಕವಾಗಿ ನಿಲ್ಲುತ್ತವೆ. ಇದೊಂದು ಚಿರಸ್ಮರಣೀಯವಾದ ಎದ್ದು ಕಾಣುವಂಥ ವೈಶಿಷ್ಟ್ಯ.

ಈ ಇಂಥ ವ್ಯಕ್ತಿಚಿತ್ರಣಗಳಲ್ಲಿ ನೈಜತೆಯ ಭಾವವನ್ನು ಬಿಂಬಿಸುವ, ಕಲ್ಹಣನ ಇತಿಹಾಸ ನಿಷ್ಠವಾದ ಪ್ರಾಮಾಣಿಕತೆಯನ್ನು ರಾಜತರಂಗಿಣಿಯ ಇತರ ಭಾಗಗಳ ಅನೇಕ ಚಿತ್ರಣಗಳಲ್ಲಿ ಕೂಡ ವ್ಯಾಪಕವಾಗಿ ಕಾಣಬಹುದು. ಆಧುನಿಕ ಇತಿಹಾಸಕಾರನ ನಿಟ್ಟಿನಿಂದ, 'ವಾಸ್ತವ ಇತಿಹಾಸ' (ಅಥವಾ 'ಗಣನಾರ್ಹ ಇತಿಹಾಸ) ದ ಜತೆಗೆ ಬಳಕೆಯಿರುವ ವಿವೇಚನಾಶೀಲನಾದ ಓದುಗ — ಈ ಗ್ರಂಥದ ಉತ್ತರಾರ್ಧದ ಕೆಲವು ನಿರ್ದಿಷ್ಟ ಘಟನೆಗಳ ನಿರೂಪಣೆಯ ಮಟ್ಟಿಗೆ ಮಾತ್ರ — ಅಳತೆ ಮೀರಿ ಗ್ರಂಥವನ್ನು ಬೆಳೆಸುವ ಕಲ್ಹಣನ ಕ್ರಮದಲ್ಲಿ ಕುಂದು ಕಾಣಬಹುದು. ಆದರೆ ಕಲ್ಹಣನ ದೃಷ್ಟಿಯಲ್ಲಿ 'ಅರಸರ ತೊರೆ'ಯ ಚರಿತೆಯ ತಿರುಳು ಎನ್ನಿಸಿದ ಇಂಥ ಘಟನೆಗಳ ವಿಸ್ತಾರವಾದ ವಿವರಣೆ ಅವಶ್ಯವಾಗಿತ್ತು. ಕೆಲವೊಮ್ಮೆ ಇಂಥ ಘಟನೆಗಳ ಜತೆಗೆ ಕಲ್ಹಣನಿಗೆ ವೈಯಕ್ತಿಕ ಸಂಪರ್ಕವೂ ಇದ್ದಿರಬೇಕು ಎನ್ನಿಸುತ್ತದೆ. ಅಂಥಲ್ಲಿ ಅವನು ಕಣ್ಣಾರೆ ಕಂಡ ಎಲ್ಲ ವಿವರಗಳನ್ನು ನಮಗೆ ನೀಡುತ್ತಾನೆ. ಉದಾ: ಕಲಶನ ಸಾವು, ರಾಣಿ ಸೂರ್ಯಮತಿ 'ಸತಿ' ಹೋಗುವುದು, ಸುಸ್ಸಲನ ಕಗ್ಗೊಲೆ — ಇಂಥ ಎದೆಕರಗಿಸುವ ಘಟನೆಗಳು. ಅದರಿಂದಾಗಿ ಇಂಥ ಘಟನಾವಳಿಗಳು ಸಮೃದ್ಧವಾದ ವಿವರಣೆಗಳಿಂದ ಪ್ರತ್ಯೇಕವಾಗಿ ನಿಲ್ಲುತ್ತವೆ. ಸ್ಟೈನ್ ಅವರ ಮಾತಿನಲ್ಲಿ ಹೇಳುವುದಾದರೆ, "ರಾಜಾ ಹರ್ಷನ ಕೊನೆಯ ಹೋರಾಟ, ಅವನ ಪಲಾಯನ ಮತ್ತು ಸಾವು, ಭಿಕ್ಷಾಚರನ ದುರಂತ ಮರಣ ಮತ್ತು ಲೋಹರನ ಪತನ — ಇಂಥ ನಿರೂಪಣೆಗಳು ವಾಸ್ತವ ಚಿತ್ರಣದಂತೆ ನಮ್ಮನ್ನು ಆಕರ್ಷಿಸಲು ಕಾರಣ ಕರಾರುವಾಕ್ಕಾದ ವಿವರಣೆಗಳ ಜಾಲದಿಂದ ಅವನ್ನು ನಮ್ಮ ಮುಂದಿರಿಸಿದ್ದಷ್ಟೇ ಅಲ್ಲ." ಮಾದರಿ ಕಾವ್ಯಗಳಂತೆ ಅತ್ಯುಕ್ತಿ — ಅಲಂಕಾರಿಕ ತೊಡಿಗೆಗಳಿಂದ ಮುಕ್ತವಾಗಿ ಆಖ್ಯಾಯಿಕೆಗಳನ್ನು ನೇರವಾಗಿ ತಟ್ಟುವಂತೆ ಹೇಳುವ ರೀತಿ ಕೂಡ ಅದರ ಅಧಿಕೃತತೆಗೆ ಬಲ ನೀಡುತ್ತದೆ. ಕಾಶ್ಮೀರದ ಗಮನಾರ್ಹ ಘಟನೆಗಳನ್ನು ಮಹಾಭಾರತ — ರಾಮಾಯಣಗಳಲ್ಲಿ ಬಂದ ಸಂವಾದಿ ಘಟನೆಗಳ ಉಲ್ಲೇಖದಿಂದ ಕಲ್ಹಣ ಒತ್ತು ನೀಡಿ ಸಮರ್ಥಿಸುತ್ತಾನೆ. ಅದೇ ಸಮಯದಲ್ಲಿ ಪ್ರಕೃತಿಯ ನಿಗೂಢ ಚೆಲುವಿನ ಚಿಲುಮೆಯಾದ, ಸ್ವರ್ಗ ಸುಂದರವಾದ ಹಳ್ಳಿಗಾಡಿನ ಕಾಶ್ಮೀರದ ಕಣಿವೆಯ ಮೇಲಣ ಪ್ರೀತಿಯನ್ನು ಸ್ಫೂರ್ತಿ ಚಿಮ್ಮುವ ನುಡಿಗಳಿಂದ ಹಲವು ಭಾಗಗಳಲ್ಲಿ ವ್ಯಕ್ತಪಡಿಸಿದ್ದಾನೆ.

ಎಲ್ಲಕ್ಕಿಂತ ಹೆಚ್ಚು ನಾವು ತಿಳಿಯಬಯಸುವುದನ್ನೇ ಕಲ್ಹಣ ನಮ್ಮ ಮುಂದಿಡುತ್ತಾನೆ: ಅವನ ಕಾಲದ ಹೆಣ್ಣು - ಗಂಡುಗಳ ನಿಟ್ಟು — ನಿಲುವುಗಳು, ಅವರ ತಿಂಡಿ, — ತಿನಿಸುಗಳ, ಉಡಿಗೆ — ತೊಡಿಗೆಗಳ ಹವ್ಯಾಸಗಳು, ಅವರ ನಂಬಿಕೆಗಳು ಮತ್ತು ಹೆಣ್ಣು - ಗಂಡಿನ ಬಗೆಯ ಬಂಧ — ಸಂಬಂಧಗಳ ನಿರಂತರ ಸಮಸ್ಯೆಗೆ ಅವರು ಕಂಡುಕೊಂಡ ಪರಿಹಾರಗಳು. ಅದರಿಂದ ನಾವು ಕಲ್ಹಣನ ಕಾಲದ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಕರಾರುವಾಕ್ಕಾಗಿ ತಿಳಿಯಲು ಸಮರ್ಥರಾಗುತ್ತೇವೆ. ಭಾರತದ ಯಾವ ಪ್ರಾಚೀನ ಲೇಖಕನೂ ನಿರೂಪಣೆಯಲ್ಲಿ ಇಂಥ ಖಚಿತತೆಯನ್ನು ಪ್ರಾಯಃ ಸಾಧಿಸಿದ್ದಿಲ್ಲ.

ಕಾಶ್ಮೀರಿಗಳ ವಿಶಿಷ್ಟ ಸ್ವಭಾವವಾದ ಹಾಸ್ಯಪ್ರಜ್ಞೆ — ಮತ್ತು ಮಾನವ ದೌರ್ಬಲ್ಯಗಳನ್ನು ಗುರುತಿಸುವ ಚುರುಕು ಕಣ್ಣು — ಕಲ್ಹಣನಲ್ಲಿ ಸಮೃದ್ಧವಾಗಿದೆ. ವ್ಯಕ್ತಿಚಿತ್ರಣದಲ್ಲಿ ಅವನು ತುಂಬ ಪರಿಣತ; ಅದರಲ್ಲು ಕಪಟ — ಕುತಂತ್ರಗಳಿಂದ ಸಾಮಾಜಿಕವಾಗಿ ಎತ್ತರಕ್ಕೇರಿನಿಂತ ಕೆಳದರ್ಜೆಯ ಅಲ್ಪೋದ್ಧತರ ಚಿತ್ರಣದಲ್ಲಿ ಅವನದು ಎತ್ತಿದ ಕೈ. ಕೆಲವೊಮ್ಮೆ ಅವನು ಇಂಥ ಚಿತ್ರಣಗಳನ್ನು ನಗೆ ಲೇಪನದಿಂದ ನಮ್ಮ ಮುಂದಿಟ್ಟಾಗ ಫ್ರೇಂಚ್ ನಗೆಬರೆಹಗಾರ ರ್‍ಯಾಬೆಲೆಯನ್ನು ನೆನಪಿಗೆ ತರುತ್ತಾನೆ. ನಗೆಚಾಟಿಕೆಯಿಂದ ಕುಟುಕುವ ಕಟಕಿನುಡಿಗಳಿಂದ ಅವನು ಕಾಶ್ಮೀರಿ ಸೈನಿಕರ ಹುಟ್ಟು ಹೇಡಿತನವನ್ನು ಮತ್ತು ಪೊಳ್ಳು ಬಡಾಯಿಯನ್ನು ಬಯಲಿಗೆಳೆಯುತ್ತಾನೆ.

ನಿರ್ಧಾರದಿಂದ ಮುನ್ನುಗ್ಗುವ ಶತ್ರುಸೇನೆಯನ್ನು ಕಂಡ ಮಾತ್ರಕ್ಕೆಯೇ, ಅಥವಾ ಸುದ್ದಿ ಕೇಳಿಯೆ, ಯುದ್ಧರಂಗದಿಂದ ಕಾಲು ಕೀಳುವ ಸೈನಿಕರನ್ನು ಅವನು ನಮಗೆ ಪರಿಚಯಿಸುತ್ತಾನೆ. ಸ್ವದೇಶಿ ಸೈನಿಕರ "ಕಲಿತನ"ದ ಈ ಬುದ್ಧಿಗೆ ಪ್ರತಿಯಾಗಿ "ರಾಜಪುತ್ರ"ರ ಮತ್ತು ಕಲ್ಹಣನ ಕಾಲದಲ್ಲಿ ರಾಜರುಗಳಿಗೆ ಬೆಂಬಲವಾಗಿ ನಿಂತ ಬಯಲು ಸೀಮೆಯ ಕೂಲಿ ಸಿಪಾಯಿಗಳ ಪೌರುಷವನ್ನು ಬಣ್ಣಿಸುತ್ತಾನೆ. ಕೆಲವು ರಾಜರು ಮತ್ತು ಪುರೋಹಿತರನ್ನು ವಿಡಂಬಿಸುತ್ತಾನೆ; ಅವರ ದೋಷಗಳನ್ನು ಎತ್ತಿ ತೋರಿಸುತ್ತಾನೆ. ಅವರ ನೀತಿ — ನಡಾವಳಿಗಳನ್ನು ಅವರ ಬದುಕಿನ ರೀತಿ ರಿವಾಜುಗಳನ್ನು ಬಯಲಿಗೆಳೆಯುತ್ತಾನೆ.

ತಮ್ಮ ಅಜ್ಞಾನದಷ್ಟೆ ಗಾಢವಾದ ಸೊಕ್ಕಿನಿಂದ ಬೀಗಿದ ಪುರೋಹಿತವರ್ಗದ ಬಗೆಗೆ ತನ್ನಲ್ಲಿದ್ದ ತಿರಸ್ಕಾರವನ್ನು ಕಲ್ಹಣ ಮುಚ್ಚಿಡಲಿಲ್ಲ. ರಾಜಕೀಯ ವ್ಯವಹಾರಗಳಲ್ಲಿ ಮೂಗು ತೂರಿ ಪ್ರಭಾವ ಬೀರುವ ಅವರ ಅಪಾಯಕಾರಿ ಪ್ರವೃತ್ತಿಯನ್ನು ಅವನು ತೀಕ್ಷ್ಣವಾಗಿ ಆಕ್ಷೇಪಿಸುತ್ತಾನೆ. ಹಾಸ್ಯತುಂಬಿದ ವಿವರಣೆಗಳಲ್ಲಿ ಅವನು ಅವರ ಆತ್ಮಪ್ರತಿಷ್ಠೆ ಮತ್ತು ಹಂದಿತನಗಳನ್ನು ಮುಕ್ತವಾಗಿ ಗೇಲಿ ಮಾಡುತ್ತಾನೆ. ಅವರ ಪವಿತ್ರ ಪೂಜಾ ಮಂದಿರಗಳ ಬಗೆಗೆ ಅವನು ತೋರುವ ಗೌರವವಾದರೂ ಅಷ್ಟರಲ್ಲೆ ಇದೆ.

ವಿಡಂಬನಾತ್ಮಕವಾದ ಟೀಕೆಗಳಲ್ಲಿ ಕಲ್ಹಣ ನಿಪುಣನಾದರೂ ಅವನ ಪೂರ್ಣ ಪ್ರತಿಭೆ ವ್ಯಕ್ತವಾಗುವುದು ಐತಿಹಾಸಿಕ ಪ್ರಸಂಗಗಳ ನಿರೂಪಣದಲ್ಲಿ. ರಾಜಾ ಹರ್ಷನ

ದುರಂತ ಮರಣವನ್ನು ಚಿತ್ರಿಸುವಾಗ ಅಥವಾ ರಾಜಾ ಅನಂತನ ಶವಯಾತ್ರೆಯನ್ನು ಮತ್ತು ಅವನ ರಾಣಿ ಸೂರ್ಯಮತಿಯ ಸಹಗಮನವನ್ನು ವರ್ಣಿಸುವಾಗ ಅವನ ಕಾವ್ಯ ಪ್ರತಿಭೆ ಉನ್ನತಿಯ ಶಿಖರವನ್ನೇರುತ್ತದೆ. ಕೆಲವೊಮ್ಮೆ ಅವನ ನಿರೂಪಣೆ ಶ್ರೇಷ್ಠ ನಾಟಕಗಳಂತೆ ಕಣ್ಣಿಗೆ ಕಟ್ಟುವಂತಿರುತ್ತದೆ. ಉದಾ: ಬಲವಾದ ಪ್ರತಿರೋಧ ಎದುರಾದಾಗ ಹತಾಶನಾದ ಹರ್ಷನ ಅಸಹಾಯಕತೆ, ಇದ್ದಕಿದ್ದಂತೆ ಅವನ ಸಹಾಯಕರೆ ಅವನಿಗೆ ದ್ರೋಹ ಬಗೆದು ಕೈ ಬಿಟ್ಟ ಪ್ರಸಂಗ, ಪರಿಣಾಮವಾಗಿ ಮರಳಿ ಅವನು ತೋರಿದ ಕೊನೆಯ ಹೋರಾಟದ ಕಲಿತನ — ಈ ಎಲ್ಲ ಚಿತ್ರಣಗಳಲ್ಲಿ ಮೂಡಿಬಂದ ನಾಟಕೀಯತೆ ಉನ್ನತ ಮಟ್ಟದ್ದು. ಹಾಗೆಯೇ ನೊಂದ ಬ್ರಾಹ್ಮಣರ ಭೀಕರ ಶಾಪ ಜಯಾಪೀಡನ ಸಾವಿನಲ್ಲಿ ಕೊನೆಗೊಳ್ಳುವ ಕರುಣಾಜನಕ ಘಟನಾವಳಿಗಳು ತುಂಬ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ. ಶೈಲಿಯ ಅಲಂಕಾರದ ಸರಳತೆ ಮತ್ತು ನೇರತನದಿಂದ ನಾಟಕೀಯ ಗುಣಮಟ್ಟ ಅತ್ಯುನ್ನತಿಗೇರಿದೆ.

ಭಾರತದ ಉದ್ದಗಲಕ್ಕೆ ತನ್ನ ವಿಜಯದ ದುಬಾರಿ ದಂಡಯಾತ್ರೆಯ ಅನಂತರ ರಾಜಾ ಜಯಾಪೀಡನ ವಿವೇಕವನ್ನು "ದುರಾಸೆ ಕಬಳಿಸಿತು" (ತರಂಗ: 4). ಅವನು ದೇವಾಲಯದ ಸೊತ್ತುಗಳನ್ನು ಮತ್ತು ಬೆಳೆ ಉತ್ಪನ್ನಗಳನ್ನು ಸಂಪೂರ್ಣ ಮುಟ್ಟುಗೋಲು ಹಾಕಿ ಕಿತ್ತುಕೊಂಡ. ಆಗ ಅದರ ವಿರುದ್ಧ ಬ್ರಾಹ್ಮಣರು ಸಾಮೂಹಿಕವಾಗಿ, "ಆಮರಣ ಸತ್ಯಾಗ್ರಹದ ಪ್ರತಿಭಟನೆ" ಯನ್ನು ಸಲ್ಲಿಸಿದರು. ಈ ಸಂದರ್ಭದ ಕೆಲವು ನಾಟಕೀಯ ಘಟನಾವಳಿಗಳ ಪರಿಣಾಮಕಾರಿ ಚಿತ್ರಣದ ಉದ್ಧರಣಗಳನ್ನು ಕೆಳಗೆ ಕೊಡಲಾಗಿದೆ. ಏಶ್ಚಿಲಸನ ಶೈಲಿಗೆ ಹೋಲುವ ಕಲ್ಹಣನ ಸರಳ ಶೈಲಿಗೆ ಇವು ನಿದರ್ಶನಗಳಾಗಬಲ್ಲವು:

ಸರ್ವಕಾಲಂ ಬ್ರಾಹ್ಮಣಾನಾಮಹೋ ಧೈರ್ಯಮಖಂಡಿತಮ್
.... 631

ಓಹ್, ಎಂದಿಗೂ ಕುಂದದ ಈ ಬ್ರಾಹ್ಮಣರ ಧೈರ್ಯ ಅಚ್ಚರಿತರುವಂಥದು....................

ದೇಶಾಂತರ ಪ್ರಯಾತೇಭ್ಯೋ ಯೇ ಶೇಷಾಸ್ತೇ ವ್ಯರಂಸಿಷುಃ|
ವಿಕ್ರೋಶಂತೋ ನ ಮರಣಾತ್............. 632

ಬಹುಮಂದಿ ಊರುಬಿಟ್ಟು ದೇಶಾಂತರಕ್ಕೆ ಹೋದ ಮೇಲೆ ಉಳಿದವರು ಅರಸನ ಮೇಲಣ ಆಕ್ರೋಶದಿಂದ ತಮ್ಮ ಸಾವಿನ ನಿರ್ಧಾರವನ್ನು ಬಿಟ್ಟು ಕೊಡಲಿಲ್ಲ............

ವಿಪ್ರಾಣಾಂ ಶತಮೇಕೋನಮೇಕಾಹೇನ ವಿಪದ್ಯತೇ |
ನಿರ್ವೇದ್ಯಮೇತದಿತ್ಯೂಚೇ ಕ್ರೌರ್ಯಾಕ್ರಾಂತೋಽಥ ಪಾರ್ಥಿವಃ || 633

ಆಗ ಕ್ರೌರ್ಯಕ್ಕೆ ಹೆಸರಾದ ರಾಜ ಹೀಗೆ ಆಜ್ಞಾಪಿಸಿದ: "ಈ ತೊಂಭ ತ್ತೊಂಭತ್ತು ಮಂದಿ ಬ್ರಾಹ್ಮಣರು ಒಂದು ದಿನ ಸಾಯುತ್ತಾರಲ್ಲ; ಆಗ ನನಗೆ ಸುದ್ದಿ ಮುಟ್ಟಿಸಿ."

ವಿಹಸ್ಯೋವಾಚ ತಂ ರಾಜಾ ವಿಶ್ವಾಮಿತ್ರಾದಿ ಕೋಪತಃ ।
ಹರಿಶ್ಚಂದ್ರಾದಯೋ ನಷ್ಟಾಸ್ತ್ವಯಿ ಕ್ರುದ್ಧೇ ತು ಕಿಂ ಭವೇತ್ ॥ 650

"ಅವಜ್ಞೆಯ ನಗು ಬೀರುತ್ತ ರಾಜ ಆತ (ಬ್ರಹ್ಮವರ್ಚಸ್ಸಿನ ನೆಲೆಯಾದ ಇತ್ತಿಲ ಎಂಬ ಹೆಸರಿನ ಬ್ರಾಹ್ಮಣ)ನ ಬಳಿ ಹೀಗೆ ಹೇಳಿದ: 'ವಿಶ್ವಾಮಿತ್ರಾದಿಗಳ ಕೋಪದಿಂದ ಹರಿಶ್ಚಂದ್ರಾದಿಗಳು ನಾಶವಾದರು. ನಿನ್ನ ಕೋಪ ಏನು ಮಾಡಬ ಲ್ಲುದು?'"

ಪಾಣಿನಾ ತಾಡಯನ್ನುರ್ವೀಂ ತತಃ ಕ್ರುದ್ಧೋಽಭ್ಯಧಾದ್ ದ್ವಿಜಃ ।
ಮಯಿ ಕ್ರುದ್ಧೇ ಕ್ಷಣಾದೇವ ಬ್ರಹ್ಮದಂಡಃ ಪತೇನ್ನ ಕಿಮ್ ॥ 651

"ಆಗ ಕೋಪಗೊಂಡ ಬ್ರಾಹ್ಮಣ ನೆಲಕ್ಕೆ ಕೈ ಬಡಿಯುತ್ತ ನುಡಿದ: 'ನನ್ನ ಕೋಪದ ಫಲವಾಗಿ ತಕ್ಷಣವೆ ನಿನಗೆ ಬ್ರಹ್ಮಶಾಪ ಏಕೆ ತಟ್ಟಲಾರದು?' "

ತಚ್ಛ್ರುತ್ವಾ ವಿಹಸನ್ ರಾಜಾ ಕೋಪಾದ್ ಬ್ರಾಹ್ಮಣಮಬ್ರವೀತ್ ।
ಪತತು ಬ್ರಹ್ಮದಂಡೋಽಸೌ ಕಿಮದ್ಯಾಪಿ ವಿಲಂಬತೇ ॥ 652

"ಅದನ್ನಾಲಿಸಿದ ರಾಜ ಮುನಿಸಿನಿಂದ ನಂಜಿನ ನಗೆ ಬೀರುತ್ತ ಆ ಬ್ರಾಹ್ಮಣ ನನ್ನು ಕುರಿತು ಹೇಳಿದ: ಬೀಳಲಿ ನೋಡೋಣ ನಿನ್ನ ಬ್ರಹ್ಮದಂಡ, ಏಕೆ ಇನ್ನೂ ತಡಮಾಡುತ್ತಿದೆ?"

ನನ್ವಯಂ ಪತಿತೋ ಜಾಲ್ಮೇತ್ಯಥ ವಿಪ್ರೇಣ ಭಾಷಿತೇ ।
ರಾಜ್ಞಃ ಕನಕದಂಡೋಽಂಗೇ ವಿತಾನಸ್ಖಲಿತೋಽಪತತ್ ॥ 653

"ನೀಚನೆ, ಬೀಳುತ್ತದೆ ನೋಡು" ಎಂದು ಬ್ರಾಹ್ಮಣ "ಹೇಳುತ್ತಿರುವಷ್ಟರಲ್ಲಿ ಮೇಲ್ಕಟ್ಟಿಗೆ ಬಿಗಿದ ಬಂಗಾರದ ತೊಲೆ ಮುರಿದು ರಾಜನ ಮೈಯ ಮೇಲೆ ಬಿತ್ತು."

ಕೃತವ್ರಣಃ ಸ ತೇನಾಂಗೇ ವಿಸರ್ಪಕ್ಲಿನ್ನವಿಗ್ರಹಃ ।
ಕೀರ್ಯಮಾಣಕ್ರಿಮಿಕುಲಃ ಕ್ರಕಚೈಶ್ಚಾರಿತೈರಭೂತ್ ॥ 654

"ಅದರಿಂದ ಅವನ ಮೈಯಲ್ಲಿ ಹುಣ್ಣಾಯಿತು. ಹುಣ್ಣು ಮೈತುಂಬ ಹರಡಿ ಕೀವು ತುಂಬಿತು, ಹುಣ್ಣಿನ ತುಂಬ ಹುಳ ಹರಿದಾಡಿದವು. ಕೈ ಗರಗಸ, ಚಿಮಟಿಗ ಳಿಂದ ಕಿತ್ತು ತೆಗೆದಂತೆ ಮತ್ತೆ ತುಂಬಿಕೊಂಡವು."

ಅನುಭಾವ್ಯ ವ್ಯಥಾಂ ಭಾವಿನಿರಯಕ್ಲೇಶ ವರ್ಣಿತಾಮ್ |
ಗಣರಾತ್ರೇಣ ತಂ ಪ್ರಾಣಾಃ ಕಾಂಕ್ಷಿತಾಪಗಮಾ ಜಹುಃ || 655

"ಮುಂದೆ ನರಕದಲ್ಲಿ ಅನುಭವಿಸಬೇಕಾದ ದುಃಖದ ಹರಿಕಾರನಂತಿರುವ ಈ ಯಮಯಾತನೆಯನ್ನು ನೀಡಿ ಹಲವು ಇರುಳು ಕಾಡಿ, ಕೊನೆಗೊಮ್ಮೆ — ಎಂದು ಹೋದೀತು ಎಂದು ಹಾದಿ ಕಾಯುತ್ತಿದ್ದ ಅವನ ಪ್ರಾಣಪಕ್ಷಿ ಅವನನ್ನು ಬಿಟ್ಟಗಲಿತು."

ಈ ಕಥೆಯ ನೀತಿಯನ್ನು ಸಾರುವ ಒಂದು ಪದ್ಯ ಹೀಗಿದೆ:

ತಥಾ ಭೂಭೃನ್ಮತ್ಸ್ಯಾ ದ್ರವಿಣಕಲುಷಾಂಭಃ ಕೃತತೃಷಾಃ
ಸ್ಥಿತಿಂ ಸ್ವಾಮುಜ್ಜಂತೋ ವಿದಧತಿ ಕುಮಾರ್ಗಾನುಸರಣಮ್ |
ಕ್ರಿಯಂತೇ ಕಾರ್ತಾಂತಾನುಗ ವಿಕೃತ ಕೈವರ್ತನಿವಹೈಃ
ಯಥಾ ಹ್ಯೇತೇಽ ಕಸ್ಮಾತ್ ಸ್ಥಿರನಿರಯಜಾಲ ಪ್ರಣಯಿನಃ || 658

"ಈ ದುಡ್ಡಿನ ದಾಹ ಹತ್ತಿದ ಅರಸರು ಕೊಳಕು ನೀರಿನ ಬೆಂಬತ್ತುವ ಮೀನುಗಳಂತಿರುತ್ತಾರೆ. ಅವರು ದುಡ್ಡಿಗಾಗಿ ತಮ್ಮ ನೆಲೆ ಬಿಟ್ಟು ದಾರಿ ತಪ್ಪಿ ನಡೆಯುತ್ತಾರೆ. ಅವು ಕೊಳಚೆ ನೀರನ್ನರಸುತ್ತ ಎತ್ತೆತ್ತಲೊ ಅಲೆಯುತ್ತವೆ. ಪರಿಣಾಮಃ ಇವರು ಯಮಭಟರ ಕೈಗೆ ಸೆರೆಸಿಕ್ಕಿ ನರಕ ಸೇರುತ್ತಾರೆ. ಅವುಗಳು ಆಕಸ್ಮಿಕವಾಗಿ ಕ್ರೂರ ಬೆಸ್ತರಿಗೆ ಸೆರೆಸಿಕ್ಕಿ ಬಲೆ ಸೇರುತ್ತವೆ."

ತನ್ನ ದಿಗ್ವಿಜಯ ಪೂರ್ಣವಾಗುವ ಮುನ್ನ ಕಾಶ್ಮೀರಕ್ಕೆ ಮರಳಲಾಗದ್ದಕ್ಕೆ ಲಲಿತಾದಿತ್ಯ ತನ್ನ ಮಂತ್ರಿಗಳಿಗೆ ಕಳಿಸಿದ ಪ್ರಖ್ಯಾತವಾದ ರಾಜ್ಯತಂತ್ರದ ಆಜ್ಞಾಸಂದೇಶವನ್ನು ಕಲ್ಹಣ ಅಲಂಕಾರಿಕವಾದ ಪದ್ಯಗಳಲ್ಲಿ ಹೀಗೆ ಒಡಮೂಡಿಸಿದ್ದಾನೆ (ತರಂಗ IV):

ವರ್ಷೋಪಭೋಗ್ಯಾನ್ಯನ್ನಾನಿ ಕ್ಷೇತ್ರಭೂಸಂಮಿತಾ ವೃಷಾಃ |
ಗ್ರಾಮ್ಯಾಣಾಂ ನಾತಿರಿಚ್ಯಂತೇ ಯಥಾ ಕಾರ್ಯಂ ತಥಾಽ ಸಕೃತ್ || 347

"ಹಳ್ಳಿಗಾಡಿನ ಜನರ ಬಳಿ ಒಂದು ವರ್ಷಕ್ಕೆ ಬೇಕಾಗುವುದಕ್ಕಿಂತ ಹೆಚ್ಚಿನ ಆಹಾರಧಾನ್ಯ, ಕೃಷಿಭೂಮಿಯ ಸಾಗುವಳಿಯ ಅಗತ್ಯಕ್ಕಿಂತ ಹೆಚ್ಚಿನ ಎತ್ತುಗಳು ಇರದಂತೆ ಪದೇ ಪದೇ ಎಚ್ಚರವಹಿಸುತ್ತಿರಬೇಕು."

ಅಧಿಕೀಭೂತವಿತ್ತಾ ಹಿ ವತ್ಸರೇಣೈವ ತೇ ಭೃಶಮ್ |
ಭವೇಯುರ್ಡಾಮರಾಃ ಕ್ರೂರಾ ನೃಪಾಜ್ಞಾತಿಕ್ರಮಕ್ಷಮಾಃ || 348

"ಅವರಲ್ಲಿ ಅಗತ್ಯಕ್ಕಿಂತ ಹೆಚ್ಚು ಸಂಪತ್ತು ಸೇರಿಕೊಂಡರೆ ಆ ಜನ ಒಂದೇ ವರ್ಷದಲ್ಲಿ ಅರಸನ, ಅಪ್ಪಣೆಯನ್ನೂ ಮೀರಬಲ್ಲ ಕ್ರೂರ ಜನಾಂಗವಾದ 'ಡಾಮರ'ರಾಗಿ ಬಿಡುತ್ತಾರೆ."

ವಸ್ತ್ರಂ ಸ್ತ್ರಿಯಃ ಕುಥಾ ಭೋಜ್ಯಮಲಂಕಾರಾ ಹಯಾ ಗೃಹಾಃ ।
ಆಸಾದ್ಯಂತೇ ಯದಾ ಜಾತು ಗ್ರಾಮೀಣೈರ್ನಗರೋಚಿತಾಃ ।। 349

ಮದಾದ್ ದುರ್ಗಾಣ್ಯುಪೇಕ್ಷ್ಯಂತೇ ಸಂರಕ್ಷ್ಯಾಣಿ ಯದಾ ನೃಪೈಃ ।
ಯದಾ ಚಾನಂತರಜ್ಞತ್ವಂ ತೇಷಾಂ ಭೃತ್ಯೇಷು ದೃಶ್ಯತೇ ।। 350

ಪ್ರದೇಶಾದೇಕತೋ ರೂಢಾ ಯದಾ ವೃತ್ತಿಶ್ಚ ಶಸ್ತ್ರಿಣಾಮ್ ।
ಅನ್ಯೋನ್ಯೋದ್ವಾಹ ಸಂಬಂಧೈಃ ಕಾಯಸ್ಥಾಃ ಸಂಹತಾ ಯದಾ ।। 351

ಕರ್ಮಸ್ಥಾನಾನಿ ವೀಕ್ಷಂತೇ ಕ್ಷ್ಮಾಪಾಃ ಕಾಯಸ್ಥವದ್ ಯದಾ ।
ತದಾ ನಿಃಸಂಶಯಂ ಜ್ಞೇಯಃ ಪ್ರಜಾಭಾಗ್ಯವಿಪರ್ಯಯಃ ।। 352

"ರಾಜಧಾನಿಯಂತೆಯೆ ಹಳ್ಳಿಗಾಡಿನ ಜನರಿಗೂ ವೈಭವದ ಬಟ್ಟೆಬರೆ, ಹೆಣ್ಣುಗಳು, ಹಾಸುಗಂಬಳಿಗಳು, ರಾಜಭೋಜನಗಳು, ಆಭರಣಗಳು, ಕುದುರೆಗಳು, ಮಹಡಿ ಮನೆಗಳು ದೊರಕಿದಾಗ; ಜೋಪಾನವಾಗಿ ಕಾಯಬೇಕಾದ ಕೋಟೆ ಕೊತ್ತಲಗಳನ್ನು ಅರಸರು ಸೊಕ್ಕಿನಿಂದ ಅಲಕ್ಷ್ಯ ಮಾಡಿದಾಗ; ಅರಮನೆಯ ಕೆಲಸದವರಲ್ಲಿ ಅಧಿಕಾರಿಗಳಲ್ಲಿ ಯಾರು ಯೋಗ್ಯರು ಯಾರು ಅಯೋಗ್ಯರು ಎನ್ನುವುದನ್ನು ಗುರುತಿಸಲು ಅರಸರು ಅಸಮರ್ಥರಾದಾಗ; ರಾಜ್ಯದ ಒಂದು ಭಾಗದಲ್ಲಿ ಮಾತ್ರವೆ ಸೈನಿಕರಿಗೆ ವೃತ್ತಿಕಲ್ಪಿಸಿ ನೆಲೆ ನಿಲ್ಲಿಸಿದಾಗ; ರಾಜ್ಯದ ಅಧಿಕಾರಿಗಳಾದ "ಕಾಯಸ್ಥರು" ತಮ್ಮೊಳಗೆಯೆ ಪರಸ್ಪರ ಮದುವೆಯ ಸಂಬಂಧ ಏರ್ಪಡಿಸಿ ತಮ್ಮದೇ ಗುಂಪುಗಾರಿಕೆ ನಡೆಸಲು ಸಾಧ್ಯವಾದಾಗ; ಸರಕಾರಿ ಅಧಿಕಾರಿಗಳ ಸಲಹೆಗೆ ಅರಸರು ಕಣ್ಮುಚ್ಚಿ ಸಹಿ ಹಾಕಿದಾಗ — ಇಂಥ ರಾಜ್ಯದ ಪ್ರಜೆಗಳ ಅದೃಷ್ಟ ಕೆಟ್ಟಿದೆ ಎನ್ನುವುದು ನಿಶ್ಚಿತ."

ಈ ಪ್ರಕರಣವನ್ನು ಮುಗಿಸುವ ಮುನ್ನ ಸೂಕ್ತ ಸಂದರ್ಭಗಳಲ್ಲಿ ಕಲ್ಹಣನ ಕಥನ ಕಲೆಗೆ ಚೆಲುವು ತುಂಬಿದ, ಅವನ ಅನುಭವಪೂರ್ಣವಾದ ನೀತಿಸಂಹಿತೆಗಳ (ಈ ನೀತಿಪಾಠ ಅವನ ಕಾಲದಷ್ಟೆ ಇವತ್ತಿಗೂ ಅನುಸರಣೀಯವಾದದ್ದು) ಜತೆಗೆ ಪಾಲುಗೊಳ್ಳೋಣ:

ಚಿತ್ರಂ ನೃಪದ್ವಿಪಾಃ ಪೂತಮೂರ್ತಯಃ ಕೀರ್ತಿನಿರ್ಝರೈಃ ।
ಭವಂತಿ ವ್ಯಸನಾಸಕ್ತಿ ಪಾಂಸುಸ್ನಾನಮಲೀಮಸಾಃ ।। V. 124

"ಈ ಅರಸರು ಆನೆಗಳಂತೆಯೆ ಯಶಸ್ಸಿನ ಜಲಪಾತದಲ್ಲಿ ಮಿಂದು ಮೈತೊಳೆದುಕೊಂಡರೂ ಮತ್ತೆ ದುಶ್ಚಟಗಳೆಂಬ ಧೂಳನ್ನು ಮೈಗೆಲ್ಲ ಚೆಲ್ಲಿಕೊಂಡು ಕೊಳೆಯಾಗುತ್ತಾರೆ, ಎಂಥ ಅಚ್ಚರಿ!"

ವಿಶ್ವಾಸೋಜ್ಝಿತಧೀಃ ಶಿಶೂನ್ ಕಲಯತೇ ಕಾಕೋಽನ್ಯದೀಯಾನ್ ನಿಜಾನ್,
ಹಂಸಃ ಕ್ಷೀರಪಯೋ ವಿಭಾಗಕುಶಲಸ್ತ್ವಸ್ಯತ್ಯಸಾರಾದ್ ಘನಾತ್ ।

ಲೋಕಾವೇಕ್ಷಣತೀಕ್ಷ್ಣಧೀಃ ಖಲಗಿರಂ ಜಾನಾತಿ ಸತ್ಯಂ ನೃಪೋ
ಧಿಗ್ ವೈದಗ್ಧವಿಮುಗ್ಧತಾವ್ಯತಿಕರಸ್ಪೃಷ್ಟಂ ವಿಧಾನಂ ವಿಧೇಃ || VI, 275

"ಯಾರನ್ನೂ ನಂಬದ ಕಾಗೆ ಕೂಡ ಬೇರೆ ಹಕ್ಕಿ (ಕೋಗಿಲೆ)ಯ ಮರಿಯನ್ನು ತನ್ನದೆಂದೇ ಭ್ರಮಿಸಿ ನಂಬುತ್ತದೆ; ಹಾಲು-ನೀರನ್ನು ಬೇರ್ಪಡಿಸಬಲ್ಲ ಹಂಸ ಕೂಡ. ನೀರಿರದ ಟೊಳ್ಳು ಮೋಡಕ್ಕೆ ಹೆದರುತ್ತದೆ; ವಿಶ್ವವನ್ನೆ ಆಳಬಲ್ಲ ಚುರುಕು ಬುದ್ಧಿಯ ರಾಜ ಕೂಡ ಚಾಡಿಕೋರರ ಮಾತನ್ನು ನಿಜವೆಂದು ನಂಬುತ್ತಾನೆ; ಜಾಣ್ಮೆ ಮತ್ತು ಮೊದ್ದುತನಗಳ | ಕಲಬೆರಕೆಯಾದ ಈ ವಿಧಿಯ ನಿರ್ಮಾಣಕ್ಕೆ ಧಿಕ್ಕಾರವಿರಲಿ."

ಶೂರಸ್ಯ ಲಭ್ಯಂ ಶೌರ್ಯೇಣ ಭೀರೋರ್ಭೀಶರುತಯಾ ಯಥಾ |
ಕಾರ್ಯಂ ಹಿ ಪ್ರತಿಭಾತ್ಯಂತರ್ನಭವೇಚ್ಚ ತದನ್ಯಥಾ || VI, 363

"ವೀರರಿಗೆ ತನ್ನ ಕಾರ್ಯ ಸಾಧಿಸಲು ಪೌರುಷವೆ ಸ್ಫೂರ್ತಿ ನೀಡಿದರೆ ಹೇಡಿಗಳಿಗೆ ಹೇಡಿತನವೆ ಕಾರ್ಯಸಾಧಕವಾಗುತ್ತದೆ. ಸ್ವಭಾವದ ಒಳಬಗೆಯಲ್ಲಿ ಕಾರ್ಯ ರೂಪುಗೊಳ್ಳುತ್ತದೆ. ಎಂದೂ ಇದಕ್ಕೆ ಬದಲಾವಣೆಯಿಲ್ಲ."

ಕಾಷ್ಠಂ ವಹ್ನುಜ್ಝಿತಮಪಿ ಭವೇಚ್ಛೀತಶಾಂತ್ಯೈ ಕಪೀನಾಂ
ಲೋಮ್ನಾಂ ಶುದ್ಧ್ಯೈ ಸಲಿಲಮನಿಲಶ್ಚಾಗ್ನಿಶೌಚೈಣಕಾನಾಮ್ |
ಜಂತೋರ್ಭಾವಾ ವಿದಧತಿ ಯಥಾಭಾವಿನಃ ಕಾರ್ಯಸಿದ್ಧಿಂ
ತತ್ವಂ ತೇಷಾಂ ಕ್ವಚನ ಸಹಜಂ ವಸ್ತುತೋ ನಾಸ್ತಿ ಕಿಂಚಿತ್ || VI, 364

"ಬೆಂಕಿಯಿರದಿದ್ದರೂ ಬರಿಯ ಮರದ ತುಂಡು ಮಂಗಗಳನ್ನು ಮರಗಟ್ಟುವ ಚಳಿಯಿಂದ ಪಾರುಮಾಡಿ ಬೆಚ್ಚಗಿಡಬಲ್ಲುದು. ಬೆಂಕಿಯಂತೆ ಶುಚಿಯಾದ ಜಿಂಕೆಯ ಚರ್ಮದ ತುಪ್ಪುಳ ನೀರಿನಲ್ಲದ್ದಿ ಗಾಳಿಯಲ್ಲಿಟ್ಟರೆ ಮಡಿಯಾಯಿತು, ಆಯಾ ಪ್ರಾಣಿಗಳಿಗೆ ಸಹಜವಾದ ಗುಣ - ಧರ್ಮ - ಸ್ವಭಾವಗಳಿಗೆ ಅನುಗುಣವಾಗಿ ಆಯಾ ಕಾರ್ಯಗಳು ನಡೆಯುತ್ತವೆ. ವಾಸ್ತವವಾಗಿ ಇವಕ್ಕೆಲ್ಲ ಸರ್ವವ್ಯಾಪಿಯಾದ ಸಹಜ ಸೂತ್ರವೇನೂ ಇಲ್ಲ."

ಪ್ರಾಣಾನ್ ಧಾರಯತೇ ನಿಪೀಯ ಮರುತಃ ಶೇತೇ ತಮೋಂಧೇ ಬಿಲೇ
ಸಂಭೋಗೇ ಪರದತ್ತಮಿಚ್ಛತಿ ಪಟಂ ನಗ್ನಸ್ತ್ರಪಾಶಾಂತಯೇ |
ವಿಸ್ತಾರ್ಯೇತಿ ಕದರ್ಯತಾಮಹಿರವತ್ಯನ್ಯಸ್ಯ ಹೇತೋರ್ನಿಧೀನ್
ನಾನ್ಯಃ ಕೋಽಪಿ ಪರಂ ಪರೋಪಕೃತಿಷು ಪ್ರೌಢೋಽಸ್ತಿ ಲುಬ್ಧಂ ವಿನಾ ||

VII, 502

"ಹಾವು ಬರಿಯ ಗಾಳಿ ಕುಡಿದು ಬದುಕುತ್ತದೆ. ಕಗ್ಗತ್ತಲೆಯ ಬಿಲದಲ್ಲಿ ಮಲಗುತ್ತದೆ. ಹೆಣ್ಣಿನೊಡನೆ ಎಣೆಯಾಗುವಾಗ ತನ್ನ ಬೆತ್ತಲೆತನದ ನಾಚಿಕೆಯನ್ನು ಕಳೆದುಕೊಳ್ಳಲು ಬೇರೆಯವರಿತ್ತ ತೆರಮರೆಯನ್ನು ಬಯಸುತ್ತದೆ(?) ಹೀಗೆ ಆಸೆಬುರುಕತನ

ಮಾಡಿ ಇನ್ನೊಬ್ಬರಿಗಾಗಿ ಕೊಪ್ಪರಿಗೆಯನ್ನು ಕಾಯುತ್ತದೆ. ಪರೋಪಕಾರದಲ್ಲಿ ಪ್ರಾಯಃ ಜಿಪುಣನಂಥ ನಿಪುಣ ಇನ್ನೊಬ್ಬನಿಲ್ಲ."

ಸ್ರೋತಾಂಸಿ ಪ್ರಬಲತ್ವಮೇತ್ಯ ವಸುಧಾಂ ಮೂಲೇಷು ಪುಷ್ಣಂತ್ಯಧೋ
ವ್ಯೋಮ್ನೋಽಭಃ ಪತತಿ ತ್ಯಜಂತಿ ಪರಿತೋ ವಾರಿ ಪ್ರಣಾಲೀಮುಖೈಃ ।
ಇತ್ಥಂ ಶುಷ್ಕಸರಃ ಪಯೋದಸಮಯೇ ಸಂಪೂರ್ಯತೇ ಸರ್ವತೋ
ಭಾಗ್ಯಾನಾಮುದಯೇ ವಿಶಂತಿ ಶತಶೋ ದ್ವಾರೈರ್ನ ಕೈಃ ಸಂಪದಃ ।। VII, 505

"ನದೀ ಪಾತ್ರಗಳು ಮೂಲದಲ್ಲಿ ತುಂಬಿಕೊಂಡು ಹೊನಲಾಗಿ ಹರಿದು ನೆಲವನ್ನು ಹಸನುಗೊಳಿಸುತ್ತವೆ. ಮುಗಿಲಿನಿಂದ ನೀರು ಕೆಳಕ್ಕೆ ಸುರಿಯುತ್ತದೆ. ತೋಡು - ಕಾಲುವೆಗಳ ಮೂಲಕ ದಿಕ್ಕು - ದಿಕ್ಕುಗಳಿಗೆ ನೀರು ಹರಿಯುತ್ತದೆ. ಹೀಗೆ ಮಳೆಗಾಲದಲ್ಲಿ ಎಲ್ಲೆಡೆಯಿಂದಲೂ ಬತ್ತಿದ ಕೆರೆ ತುಂಬಿಕೊಳ್ಳುತ್ತದೆ. ಅದೃಷ್ಟ ಕಣ್ಣು ತೆರೆದಾಗ ಸಂಪತ್ತು ಹರಿದು ಬರಲು ನೂರಾರು ಬಾಗಿಲುಗಳು."

ದಗ್ಧ್ವಾ ತೃಣಂ ತನು ಘನಂ ಪ್ರತನೋತಿ ಶಷ್ಪಂ
ವೃಷ್ಟಿಂ ಸೃಜತ್ಯುಪಚಿತೋಷ್ಮ ದಿನಂ ಪ್ರದರ್ಶ್ಯ ।
ವೈಚಿತ್ರ್ಯ ಸಂಸ್ಪೃಶಿ ವಿಧೇರ್ನಿಯಮೇನ ಕೃತ್ಯೇ
ನ ಪ್ರತ್ಯಯಃ ಕ್ವಚನ ಚಂಚಲ ನಿಶ್ಚಯಸ್ಯ ।। VIII, 1790

"ವಿಧಿ ಸಣ್ಣ ಹುಲ್ಲುಗರಿಗಳನ್ನು ಸುಟ್ಟು ಹಾಕಿ ಪುಷ್ಕಲವಾದ ಹುಲ್ಲರಾಶಿಯನ್ನು ಸೃಷ್ಟಿಸುತ್ತದೆ; ಬಿಸಿಲ ಬೇಗೆಯ ಹೆಚ್ಚಳವನ್ನು ತೋರಿಸಿ ಮಳೆ ಬರಿಸುತ್ತದೆ; ನಿಶ್ಚಿತವಾದ ನಿಲುವಿಲ್ಲದ ವಿಧಿಯ ಗಳಿಗೆಗೊಂದು ಬಗೆಯ ಈ ಹೂಟದಲ್ಲಿ ಯಾವ ನಂಬಿಕೆಯನ್ನೂ ತಳೆಯುವಂತಿಲ್ಲ."

ಭವ್ಯಾತ್ಮತ್ವಂ ಪ್ರಶಮಮಹಿಮೋಲ್ಲಾಸನೇ ಹಂತ ಹೇತುಃ
ಭಾವಾನಾಂ ತು ಧ್ರುವಮಪರಥಾ ಮಾರ್ದವಂ ಕ್ರೂರತಾ ವಾ,
ಸ್ಪೃಷ್ಟಂ ಪಾದೈರಮೃತಮಹಸಃ ಸ್ಯಾತ್ ಕಠೋರಂ ಹಿಮಾಂಶೋಃ
ಯಾತಿ ಗ್ರಾಮಾ ಷ್ಯಹಹ ರಭಸಾದಾರ್ದ್ರತಾಂ ಚಂದ್ರಕಾಂತಃ ।। VIII, 3030

"ಶಾಂತಿಯ ಹಿರಿಮೆಯನ್ನು ಬೆಳಗಲು ತುಂಬ ಭವ್ಯವಾದ ವ್ಯಕ್ತಿತ್ವ ಮಾತ್ರವೆ ಕಾರಣವಾಗಬಲ್ಲುದು. ಅದು ಇಲ್ಲದಾಗ ಸ್ವಭಾವದ ಮಾರ್ದವವೋ ಕ್ರೌರ್ಯವೋ ಕೆಲಸ ಮಾಡುತ್ತದೆ. ಅಮೃತದ ಕಾಂತಿ ಸೂಸುವ ತಂಗದಿರನ ಪಾದದ ಸ್ಪರ್ಶವಾದ ಮಾತ್ರಕ್ಕೆಯೆ ಕಠಿನ ಶಿಲೆಯಾದ ಚಂದ್ರಕಾಂತ ಕೂಡ, ಓಹ್, ಒಡನೆ ಕರಗಿ ಬಿಡುತ್ತದೆ."

ಭಾಂಡಸ್ತಾಂಡವಮಂಡಪೇ ಕಟುಕಥಾವೀಚೀಷು ಕಂಠಾಕವಿಃ
ಗೋಷ್ಠ ಶ್ವಾ ಸ್ವಗೃಹಾಂಗಣೇ ಶಿಖರಿಭೂಗರ್ಭೇ ಖಟಾಕುಃ ಸ್ಫುಟಮ್ ।

ಪಿಂಡೀಶೂರತಯಾ ವಿಟಶ್ವ ಪಟುತಾಂ ಭೂಭೃದ್‍ಗೃಹೇ ಗಾಹತೇ
ಗಚ್ಛಂತಿ ಪ್ರದಕೃಷ್ಣಕಚ್ಛಪತುಲಾಂ ಚಿತ್ರಂ ತತೋಽನ್ಯತ್ರ ತೇ || VIII, 3139

"ನಾಟ್ಯಮಂಟಪದಲ್ಲಿ ಬಿನ್ನಾಣದ ಬಣ್ಣದ ತೊಡಿಗೆಯ ಧಿಮಾಕು; ಒರಟು ಬಂಡುಮಾತಿನ ಕೂಟಗಳಲ್ಲಿ ಕಂತ್ರಿ ಕವಿಗಳ ಧಿಮಾಕು; ತಮ್ಮ ಮನೆಯಂಗಳದಲ್ಲಿ ಬಿಕನಾಸಿ ನಾಯಿಗೆ ಧಿಮಾಕು; ಬೆಟ್ಟದ ಬಿಲದ ಗೂಡಿನೊಳಗೆ ಕಾನಾಡಿ ಹಕ್ಕಿಯ ಧಿಮಾಕು; ಅರಮನೆಗಳಲ್ಲಿ ಬಡಾಯಿಕೋರನಾದ ಬಜಾರಿಭಟ್ಟಂಗಿಯ ಧಿಮಾಕು; ಅಚ್ಚರಿಯೆಂದರೆ ಇವುಗಳನ್ನು ಅಲ್ಲಿಂದ ತಪ್ಪಿಸಿ ಬಿಟ್ಟರೆ, ನೀರಿನಿಂದ ಎಳೆದುಹಾಕಿದ ಆಮೆಯಂತೆ ಚಿಪ್ಪಿನೊಳಗೆ ಮುದುಡಿಕೊಳ್ಳುತ್ತವೆ."

ಏನೇ ಆದರೂ — ರಾಜತರಂಗಿಣಿಯ ಅಧ್ಯಯನ ಪೂರ್ತಿ ಸಲೀಸಾದ ಸಂಗತಿಯೇನೂ ಅಲ್ಲ. ಈ ಗ್ರಂಥದ ಅತ್ಯಂತ ದೊಡ್ಡ ಅಧ್ಯಾಯವಾದ (3449 ಪದ್ಯಗಳು) ಎಂಟನೆಯ ತರಂಗದಲ್ಲಿ ತನ್ನ ಸಮಕಾಲೀನ ವೈಚಿತ್ರ್ಯಮಯ ಘಟನೆಗಳನ್ನು ತದ್ವತ್ತಾಗಿ ನಿರೂಪಿಸುವ ಕಲ್ಹಣನ ನುಡಿಯ ನಡೆ ತೊಡಕು ಕಗ್ಗಂಟಿನ ರಚನೆಯಿಂದಾಗಿ ಮತ್ತು ಕಾವ್ಯಸಹಜವಾದ ಇಮ್ಮುಖತೆಯಿಂದಾಗಿ ನಮ್ಮನ್ನು ಗೊಂದಲಗೆಡಿಸುತ್ತದೆ. ಇಂದಿನ ಇತಿಹಾಸಕಾರನನ್ನು ಇನ್ನಷ್ಟು ಗೊಂದಲಗೊಳಿಸುವ ಸಂಗತಿಯೆಂದರೆ, ಅವನ ಸಮಕಾಲದ ಕಾಶ್ಮೀರಿ ಇತಿಹಾಸವನ್ನು ಚೆನ್ನಾಗಿ ಬಲ್ಲ ಆ ಕಾಲದ ಓದುಗರನ್ನು ಕುರಿತು ಬರೆದಂತೆ ಇರುವ ಕಲ್ಹಣನ ಕಥಾ ನಿರೂಪಣೆ. ಅವನ ಕಾಲದ ಅಷ್ಟೊಂದು ಮಹತ್ವವಿಲ್ಲದ ಸಾಮಾನ್ಯ ಪಾತ್ರಗಳ ವೈಯಕ್ತಿಕ ಹಿನ್ನೆಲೆ ಕೂಡ ಓದುಗರಿಗೆ ತಿಳಿದಿರುತ್ತದೆ ಎನ್ನುವಂತೆ ಅವನು ಬರೆಯುತ್ತಾನೆ. ಹಲವೆಡೆ ಕೆಲವು ವ್ಯಕ್ತಿಗಳನ್ನು ಅವರ ಹುದ್ದೆಯ ಹೆಸರಿನಿಂದಷ್ಟೇ ಉಲ್ಲೇಖಿಸಿದ್ದಾನೆ. ಈ ಕೊರತೆಗಳು — ಬರವಣಿಗೆಯಲ್ಲಿ ಉದ್ದೇಶಪೂರ್ವಕವಾಗಿ ಬಂದವುಗಳಲ್ಲದಿದ್ದರೂ ಕೂಡ — ಅವನ ಕಥನದ ಅತ್ಯಂತ ಅಧಿಕೃತವಾದ ಮತ್ತು ವಿವರವಾದ ಭಾಗದ ಮೌಲ್ಯವನ್ನು ಕುಗ್ಗಿಸಿವೆ.

ಈ ಗ್ರಂಥದ ಬಹುಭಾಗ, ಸಾಮಾನ್ಯ ಜೀವನದ ಘಟನೆಗಳ ನಿರೂಪಣೆಯಿರಲಿ, ಅಥವಾ ಸೇನಾಮುಖಂಡರ, ಸಿಂಹಾಸನದ ಹೊಂಚುಗಾರರ ಒಳಸಂಚು — ದಂಗೆಗಳಿಂದ ತುಂಬಿದ ಅರಮನೆಯ ಕಥೆಯಿರಲಿ, ಜನತೆಯ ಮುಗಿಯದ ಗೋಳಿನ ಕಥೆಯೆ ಇರಲಿ, ಅದು ನಾಟಕೀಯ ಕೃತಕತೆಯ ಸೋಗು ತಾಳದೆ ಸಹಜವಾಗಿಯೆ ಗದ್ಯದ ಸೊಬಗು ಹೊತ್ತ ಪದ್ಯದಲ್ಲಿ ಮೂಡಿಬಂದಿದೆ. ಓದುಗರಿಗೆ ಬೇಸರ ಬರದಿರಲೆಂದು ಕಲ್ಹಣ ಕಾವ್ಯಮಯವಾದ ಉಪಮಾನಗಳನ್ನು, ಎದ್ದುಕಾಣುವ ವಿರೋಧಾಲಂಕರಗಳನ್ನು, ಶ್ಲೇಷದಂಥ ಇತರ ಅಲಂಕಾರಗಳನ್ನು ಕೂಡ ಬಳಸುತ್ತಾನೆ. ಆದರೆ ಅಲಂಕಾರದ ಮೋಡಿಯಿಂದಲೆ ಓದುಗರನ್ನು ಸೆಳೆಯುವ ಕೆಲಸವನ್ನು ಅವನು ಮಾಡಿಲ್ಲ. ನೀರಸ ಕಥನಗಳ ಬೇಸರ ಬರಿಸುವ ಏಕರೂಪತೆಯನ್ನು ನಿವಾರಿಸಲು ಚುಟುಕಾದ ಆದರೆ ಚುರುಕಾದ ಭಾಷಣಗಳನ್ನು, ಆಸಕ್ತಿ ಕೆರಳಿಸುವ ಸಂಭಾಷಣಗಳನ್ನು ಕಲ್ಹಣ ಅಲ್ಲಲ್ಲಿ ನಡುವೆ ಸೇರಿಸುತ್ತಾನೆ. ಅದರಿಂದ ಓದುಗ ನಾಟಕದ 'ಪಾತ್ರಧಾರಿ' ಗಳ

ಉದ್ದೇಶವನ್ನೂ ಪ್ರೇಕ್ಷಕರ ವಿಭಿನ್ನ ಪ್ರತಿಕ್ರಿಯೆಯನ್ನೂ ಹೆಚ್ಚು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಾಗಿದೆ. ಇದೇ ಕಾರಣಕ್ಕಾಗಿ ನಿರೂಪಣೆಯ ನಡುವೆ ಅಲ್ಲಲ್ಲಿ ನೀತಿ ನಡವಳಿಗಳನ್ನು, ರಾಜತಂತ್ರದ ಘೋಷಣೆಗಳನ್ನು ನಿರೂಪಿಸುವ ಸಾರ್ವತ್ರಿಕವಾದ ಸಂದೇಶವನ್ನೊಳಗೊಂಡ ದೊಡ್ಡ ವೃತ್ತದ ಪದ್ಯಗಳನ್ನೂ ಕಲ್ಹಣ ಸೇರಿಸಿದ್ದಾನೆ. ಅದರಿಂದಲೇ ಈ ಪದ್ಯಗಳು ಈ ಗ್ರಂಥದ ಇತರ ಮಾಮೂಲಿ ಶ್ಲೋಕಗಳಿಗಿಂತ ಬೇರೆಯಾಗಿ ನಿಲ್ಲುತ್ತವೆ. ಸುಂದರವಾದ ಚೇತೋಹಾರಿ ಭಾಷೆಯಲ್ಲಿ ನಿರೂಪಣೆಗೊಂಡ ಒಬ್ಬ ಪಾದಚಾರಿಯ ವಿವರಣೆ, ಒಂದು ದಿನನಿತ್ಯದ ಮಾಮೂಲು ಸಂಗತಿಯ ಚಿತ್ರಣದಲ್ಲಿ ಕೂಡ ಕಲ್ಹಣ ತನ್ನ ಕಾವ್ಯಕಲ್ಪನಾಲಹರಿಯ ಚುರುಕುತನವನ್ನು ತೋರಿಸುತ್ತಾನೆ. ಅದರಿಂದ ಭಾರತೀಯ ಅಥವಾ ವಿದೇಶೀಯರ ಹಳೆಯ ಮತ್ತು ಈಚಿನ ಕಾವ್ಯಪ್ರಕಾರಗಳಲ್ಲಿ ಕಲ್ಹಣನಿಗೆ ಎತ್ತರವಾದ ಸ್ಥಾನವುಂಟು. ಕಥನಕಲೆಯಲ್ಲಿ ಅವನಿಗಿರುವ ಅಮಿತಕೌಶಲಕ್ಕಾಗಿ ಅವನಿಗೆ ಸಂದ ಗೌರವ ಇದು. ಕಲ್ಹಣ ಉದ್ಧರಿಸಿದ ಅನೇಕ ಜನಪ್ರಿಯ ನಾಣ್ನುಡಿಗಳು ಇಂದೂ ಕಾಶ್ಮೀರದಲ್ಲಿ ಜನಪ್ರಿಯವಾಗಿ ಬಳಕೆಯಲ್ಲಿವೆ.

ಪ್ರಾಗೈತಿಹಾಸಿಕ ಮತ್ತು ಇತಿಹಾಸದ ಆರಂಭದ ದಿನಗಳು

ಕಲ್ಹಣ ಈ ಗ್ರಂಥವನ್ನು ಬರೆಯತೊಡಗಿದ ವರ್ಷವನ್ನು ಹೇಳಿದ್ದಾನೆ. ಅದು ಶಕವರ್ಷ 1070. ಇದಕ್ಕೆ ತಾಳೆಯಾಗುವ ಲೌಕಿಕವರ್ಷ 4224 (ಕ್ರಿ.ಶ. 1148). ಅವನು ಇದನ್ನು ಬರೆದು ಮುಗಿಸಿದ ವರ್ಷ 4225 (ಕ್ರಿ.ಶ. 1150). ಮೊದಲ ಮೂರು ತರಂಗಗಳಲ್ಲಿ ಒಟ್ಟು 3050 ವರ್ಷಗಳ ವೃತ್ತಾಂತ ಒಳಗೊಂಡಿದೆ. ಹೆಚ್ಚಿನ ಭಾಗದ ನಿರೂಪಣೆ 52 ಮಂದಿ ರಾಜರ ವಂಶಾವಳಿಯ ಪಟ್ಟಿಯನ್ನಷ್ಟೇ ನಮ್ಮ ಮುಂದಿಡುತ್ತದೆ. ನಡುನಡುವೆ, ಹೆಚ್ಚುಕಡಿಮೆ, ಸಂಪ್ರದಾಯದ ಐತಿಹ್ಯಗಳು ಮತ್ತು ದಂತಕಥೆಗಳು.

ಶಿವಸ್ತುತಿಯೊಡನೆ ಗ್ರಂಥವನ್ನು ಪ್ರಾರಂಭಿಸಿದ ಕಲ್ಹಣ ಓದುಗನನ್ನು 'ಅಂಗ' (ಪ್ರಿಯಮಿತ್ರ) ಎಂದು ಸಂಬೋಧಿಸುತ್ತಾನೆ. "ನಿರಂತರವಾದ ರಸಧಾರೆಯಿಂದ ಸುಂದರವಾದ ಈ 'ರಾಜತರಂಗಿಣಿ' ಯನ್ನು ಸವಿಯಿರಿ" ಎಂದು ಕರೆಯಾಯುತ್ತಾನೆ. ಅಲ್ಲಿಂದ ಅವನು ಕಾಶ್ಮೀರದ ಮೂಲಕ್ಕೆ ಬರುತ್ತಾನೆ. ಈ ಕಣಿವೆ ಮೊದಲು ನೀರು ತುಂಬಿದ ದೊಡ್ಡ ಕೆರೆ 'ಸತೀಸರಸ್' ಆಗಿತ್ತಂತೆ. ಕಶ್ಯಪ ಪ್ರಜಾಪತಿ ಬಂದು ಆ ಕೆರೆಯಲ್ಲಿದ್ದ ರಕ್ಕಸ ಜಲೋದ್ಭವನನ್ನು ಕೊಂದು ಅಲ್ಲಿ ಕಶ್ಮೀರಮಂಡಲವನ್ನು ಸ್ಥಾಪಿಸಿದನಂತೆ. "ನಾಗರಾಜನಾದ ನೀಲನ ರಕ್ಷಣೆಯಲ್ಲಿ", ಈ ಪ್ರಾಂತ - "ಪುಣ್ಯ ಬಲದಿಂದಲ್ಲದೆ ಶಸ್ತ್ರಬಲದಿಂದ ಗೆಲ್ಲಲಾಗದ ದೇಶ" - ವಾಗಿತ್ತಂತೆ. "ಸುಡುವ ಕಿರಣದ ಸೂರ್ಯ ಕೂಡ ಇಲ್ಲಿ ಬೇಸಗೆಯಲ್ಲು ಗೌರವದಿಂದ ತಂಪುಸೂಸುತಿದ್ದ" ನಂತೆ. ಈ ಕಣಿವೆಯ ವಿಶಿಷ್ಟಗಣಗಳನ್ನು ಕಲ್ಹಣ ಹೀಗೆ ಪಟ್ಟಿಮಾಡುತ್ತಾನೆ. "ಪಾಂಡಿತ್ಯ[1], ಎತ್ತರದ ಮಹಡಿ ಮನೆಗಳು, ಕೇಸರಿ, ಮಂಜು ಬೆರೆತ ನೀರು, ದ್ರಾಕ್ಷಿ — ಇಂಥ ಸ್ವರ್ಗದಲ್ಲು ದುರ್ಲಭವಾದ ವಸ್ತುಗಳು ಇಲ್ಲಿ ತೀರ ಸಾಮಾನ್ಯ."

ರಾಜತರಂಗಿಣಿಯ ಪ್ರಾರಂಭದ ಭಾಗದಲ್ಲಿ ಪದೇಪದೇ ಬರುವ ಐತಿಹ್ಯಗಳನ್ನು,

---

[1] ಪ್ರಾಚೀನ ಕಾಲದಿಂದಲೂ ಕಾಶ್ಮೀರ ಸಂಸ್ಕೃತ ಶಿಕ್ಷಣದ, ಪಾಂಡಿತ್ಯದ ಕೇಂದ್ರವಾಗಿತ್ತು ಎನ್ನುವ ವಸ್ತುಸ್ಥಿತಿಯನ್ನು ಉಲ್ಲೇಖಿಸಿದ ಇತರರಲ್ಲಿ ಕಲ್ಹಣನ ಕಾಲಕ್ಕಿಂತಲು 5 ಶತಕ ಮೊದಲೆ ಕಾಶ್ಮೀರವನ್ನು ಸಂದರ್ಶಿಸಿದ್ದ ಹ್ಯೂಯನ್‌ತ್ಸಾಂಗನೂ ಒಬ್ಬ. ಅವನು ಒಂದು ಪ್ರಸಂಗದಲ್ಲಿ ಹೀಗೆ ಬರೆದಿದ್ದಾನೆ. "ಕಾಶ್ಮೀರದ ಜನರು ವಿದ್ಯಾಪ್ರೇಮಿಗಳು ಮತ್ತು ಸುಸಂಸ್ಕೃತರು. ಶತಮಾನಗಳಿಂದ ಕಾಶ್ಮೀರದಲ್ಲಿ ಪಾಂಡಿತ್ಯವನ್ನು ತುಂಬ ಗೌರವದಿಂದ ಕಾಣಲಾಗುತ್ತದೆ."

ದಂತಕಥೆಗಳನ್ನು ಕಲ್ಹಣ ತನ್ನ ಕಾಲದಲ್ಲಿ ಪ್ರಚಲಿತವಾಗಿದ್ದ ಸಾಂಪ್ರದಾಯಿಕ ಆಖ್ಯಾಯಿಕೆಗಳಿಂದ ಆಯ್ದುಕೊಂಡಿದ್ದಾನೆ. ಸ್ಟೈಯ್ನ್ ಹೇಳುತ್ತಾರೆ, "ಕೆಲವು ಸಂದರ್ಭಗಳಲ್ಲಿ ತಾನು ಒಪ್ಪಿಕೊಂಡ ದಾಖಲೆಗಳು ಅಥವಾ ತಾನು ಅನುಸರಿಸಿದ ಪ್ರಮಾಣಗಳಿಗಿಂತ ತೀರ ವಿಲಕ್ಷಣವಾದ ಜನಪ್ರಿಯ ಸಂಪ್ರದಾಯ ಗಾಥೆಗಳನ್ನು ಕಲ್ಹಣ ಒತ್ತಿ ಹೇಳುವುದನ್ನು ನಾವು ಕಾಣುತ್ತೇವೆ."

ಕಲ್ಹಣನ ಪ್ರಕಾರ, ಪ್ರಾರಂಭದ ಪುರಾತನ ಕಾಲದಲ್ಲಿ 52 ಮಂದಿ ರಾಜರು ಕಾಶ್ಮೀರವನ್ನಾಳಿದರು. ಇವರಲ್ಲಿ ಕೇವಲ ನಾಲ್ಕು ಮಂದಿ — ಮೊದಲನೆಯ ಗೋನಂದ, ಅವನ ಮಗ ದಾಮೋದರ, ದಾಮೋದರನ ಹೆಂಡತಿ ಯಶೋವತಿ, ಅವಳ ಮಗ ಇಮ್ಮಡಿ ಗೋನಂದ — ಮಾತ್ರವೆ ನೀಲಮತ ಪುರಾಣದಲ್ಲಿ ಉಲ್ಲೇಖಿಸಲ್ಪಟ್ಟಿದ್ದಾರೆ. ತನ್ನ ಕಾಲದಲ್ಲಿ ಬಳಕೆಯಲ್ಲಿದ್ದ ಸಾಂಪ್ರದಾಯಿಕ ಐತಿಹ್ಯಗಳನ್ನು ಎರವಲು ಪಡೆದು ಈ ರಾಜರನ್ನು ಮಹಾಭಾರತದ ಕೆಲವು ಆಖ್ಯಾನಗಳ ಜತೆಗೆ ಕಲ್ಹಣ ಸಂಪರ್ಕಗೊಳಿಸುತ್ತಾನೆ. ಕಲ್ಹಣ ಹೇಳುತ್ತಾನೆ: ಮೊದಲನೆಯ ಗೋನಂದ ಮಗಧದ ರಾಜ ಜರಾಸಂಧನ ಸಂಬಂಧಿಯಾಗಿದ್ದ. ಜರಾಸಂಧ ಕೃಷ್ಣನ ವಿರುದ್ಧ ಯುದ್ಧಹೂಡಿದ್ದಾ, ಅವನ ಬೆಂಬಲಕ್ಕೆ ಈ ಗೋನಂದನೂ ಹೋಗಿದ್ದ, ಮತ್ತು ಆ ಯುದ್ಧದಲ್ಲಿ ಸತ್ತಿದ್ದ. ಅವನ ಮಗ ಮೊದಲನೆಯ ದಾಮೋದರ ಅವನ ಅನಂತರ ಕಾಶ್ಮೀರದ ರಾಜನಾದ. ಅವನು ತನ್ನ ತಂದೆಗಾದ ಅವಮಾನಕ್ಕೆ ಪ್ರತಿಯಾಗಿ ಸೇಡು ತೀರಿಸಲು ಸಮಯ ಕಾಯುತ್ತಿದ್ದ. ಹೀಗೆ ಅವನೂ ಒಮ್ಮೆ ಗಾಂಧಾರದಲ್ಲಿ ಕೃಷ್ಣನ ವಿರುದ್ಧ ಹೋರಾಟಕ್ಕಿಳಿದು ತೀರಿಕೊಂಡ. ಆಗ ಕಾಶ್ಮೀರದ ಹಿರಿಯರು ಕೃಷ್ಣನ ಸಲಹೆಯಂತೆ ದಾಮೋದರನ ಗರ್ಭಿಣಿ ಮಡದಿ ಯಶೋವತಿಯನ್ನು ಸಿಂಹಾಸನಕ್ಕೇರಿಸಿದರು. ಅನಂತರ ಅವಳ ಮಗ ಇಮ್ಮಡಿ ಗೋನಂದನನ್ನು ಪುಟ್ಟ ಮಗುವಾಗಿದ್ದಾಗಲೆ ಪಟ್ಟಕ್ಕೇರಿಸಲಾಯಿತು. ಮಹಾಭಾರತ ಯುದ್ಧ ನಡೆದಾಗ ಈತ ಇನ್ನೂ ಚಿಕ್ಕ ಹುಡುಗ — ಪ್ರಾಯಃ ಮಹಾಭಾರತದಲ್ಲಿ ಕಾಶ್ಮೀರದ ಅಥವಾ ಅದರ ರಾಜರ ಉಲ್ಲೇಖ ಬಾರದೆ ಇರಲು ಇದೇ ಕಾರಣವಿರಬೇಕು.

ಐತಿಹ್ಯದ ಸುಳಿವು ಇಲ್ಲಿಗೆ ನಿಂತು-ಬಿಡುತ್ತದೆ. ಮುಂದೆ ಕಲ್ಹಣ ಹೇಳುತ್ತಾನೆ (1 - 83); ಇಮ್ಮಡಿ ಗೋನಂದನ ಅನಂತರ "ಅವನ ಉತ್ತರಾಧಿಕಾರಿಗಳಾಗಿ ಆಳಿದ 35 ಮಂದಿ ರಾಜರ ಇತಿಹಾಸ ಮರವೆಯ ಕಡಲಲ್ಲಿ ಮುಳುಗಿಹೋಗಿದೆ. ಅವರ ಹೆಸರಾಗಲಿ, ಅವರು ಸಾಧಿಸಿದ ಕೃತ್ಯಗಳಾಗಲಿ — ಯಾವುದೇ ದಾಖಲೆ ಉಳಿದಿಲ್ಲವಾಗಿ — ಪೂರ್ತಿ ನಷ್ಟಗೊಂಡಿವೆ."

(ಭಾರತದಲ್ಲೆ ಬೃಹತ್ತಾದ ಸಿಹಿನೀರಿನ ಕೆರೆಯಾದ) ವೂಲಾರ್ ಸರೋವರದ ತೊರೆಯಲ್ಲಿ ಒಂದುಪಟ್ಟಣವೆ ಮುಳುಗಿಹೋದ[2] ಐತಿಹ್ಯ ಇಂದಿಗೂ ಪ್ರಚಲಿತ

---

[2] ಕೆಲವು ಮುಸ್ಲಿಂ ಚರಿತ್ರಗಾರರು ಒದಗಿಸಿದ ಹಲವಾರು ಮಾಹಿತಿಗಳು ವಿಶ್ವಸನೀಯಗಳಲ್ಲ ಎಂದು ತಿಳಿದುಬಂದಿದೆ.

ವಿದೆ. ಹಾಗೆಯೆ ಈ ಕೊನೆಯ ರಾಜರ ಕಥೆಗೆ ಸಂಬಂಧಪಟ್ಟ ಹಿಮಾಲ್, ನಾಗರೇ, ಬೊಂಬೂರ್ ಮತ್ತು ಲೋಲಾರ್‌ನ ಜಾನಪದ ಕಥೆಗಳಲ್ಲು ಇದರ ಉಲ್ಲೇಖ ಉಂಟು.

ಪಾಂಡವರ ಸಂತತಿಯವರೂ[3] ಒಮ್ಮೆ ಈ ಕಣಿವೆಯನ್ನು ಆಳಿದ್ದರು ಎಂಬ ಒಂದು ನಂಬಿಕೆಯೂ ಕಾಶ್ಮೀರಿಗಳಲ್ಲಿ ಪ್ರಚಲಿತವಾಗಿದೆ. ಈ ಮರೆತುಹೋದ ರಾಜರಲ್ಲಿ ಕನಿಷ್ಠ 23 ಮಂದಿ ಪಾಂಡವರ ವಂಶಕ್ಕೆ ಸೇರಿದವರು. ಅರ್ಜುನನ ಒಬ್ಬ ಮೊಮ್ಮಗ ಹರಣ ದೇವ — ಈ ರಾಜರಲ್ಲಿ ಮೊದಲಿಗ. ಇವನು ಇಮ್ಮಡಿ ಗೋನಂದನನ್ನು ಕೊಂದು ಇಲ್ಲಿ ಪಾಂಡವರ ವಂಶದ ಅರಸೊತ್ತಿಗೆ ಸ್ಥಾಪಿಸಿದ ಎನ್ನಲಾಗುತ್ತಿದೆ.

ಈ ರಾಜರುಗಳ ಅನಂತರದವರು ಎಂಟುಮಂದಿ ರಾಜರು: ಲವ, ಕುಶ, ಖಗೇಂದ್ರ, ಸುರೇಂದ್ರ, ಗೋಧರ, ಸುವರ್ಣ, ಜನಕ ಮತ್ತು ಶಚೀನರ. ಮೊದಲ ನಾಲ್ಕು ಮಂದಿ ಒಂದು ರಾಜವಂಶದವರಾದರೆ ಮತ್ತಿನ ನಾಲ್ವರು ಬೇರೊಂದು ವಂಶಕ್ಕೆ ಸೇರಿದವರು. ಈ ರಾಜರು ನಿರ್ಮಿಸಿದವುಗಳೆನ್ನಲಾದ ಕೆಲವು ನಗರಗಳನ್ನು ಗುರುತಿಸಲಾಗಿದೆ. ಆದರೆ ಇವುಗಳ ಚಾರಿತ್ರಕತೆಯ ಬಗ್ಗೆ ಅಧಿಕೃತವಾಗಿ ಏನೂ ಸಿದ್ಧವಾಗಿಲ್ಲ.

ಕಲ್ಹಣನ ಗ್ರಂಥದಲ್ಲಿ ಬಂದ ಮೊದಲನೆಯ ಚಾರಿತ್ರಿಕ ಹೆಸರು ರಾಜಾ ಅಶೋಕನದು. ಕಲ್ಹಣನ ಪ್ರಕಾರ ಅಶೋಕ ಜಿನಧರ್ಮ (ಅರ್ಥಾತ್ ಬುದ್ಧಧರ್ಮ)ದ ಅನುಯಾಯಿಯಾಗಿದ್ದ. ಅವನೂ ಸ್ತೂಪಗಳನ್ನು, ವಿಹಾರಗಳನ್ನು ಕಟ್ಟಿಸಿದ್ದಲ್ಲದೆ ಶ್ರೀನಗರಿ ಎಂಬ ಪಟ್ಟಣವನ್ನೂ ನಿರ್ಮಿಸಿದ. ಅಶೋಕೇಶ್ವರ ಎಂದು ಹೆಸರಾದ ಒಂದು ಶಿವಾಲಯವನ್ನೂ ಅವನು ಕಟ್ಟಿಸಿದ್ದ. ಕಲ್ಹಣ ಅಶೋಕನನ್ನು ಕಾಶ್ಮೀರದ ರಾಜ ಎನ್ನುತ್ತಾನೆ. ಆದರೆ ಇತಿಹಾಸಜ್ಞರು (ಕಲ್ಹಣನ ಕಾಲಾನುಕ್ರಮಣಿಕೆಯ ದಿನಾಂಕದಲ್ಲಿ ವ್ಯತ್ಯಾಸವಿದ್ದರೂ) ಈತ ಮಗಧದ ಅಶೋಕ ಚಕ್ರವರ್ತಿಯೇ ಎಂದು ಅಭಿಪ್ರಾಯ ಪಡುತ್ತಾರೆ. ಅಶೋಕನ ರಾಜ್ಯ ಪೂರ್ವದಲ್ಲಿ ಬಂಗಾಲದ ತನಕವೂ ಪಶ್ಚಿಮದಲ್ಲಿ ಹಿಂದೂಕುಶ್ ತನಕವೂ ಹರಡಿಕೊಂಡಿತ್ತು.

ಕಾಶ್ಮೀರದ ಹರಮುಕುಟಗಂಗಾದ ದೇವಾಲಯದಲ್ಲಿರುವ ಭೂತೇಶ ಶಿವನನ್ನು ಆರಾಧಿಸಿದ ಅಶೋಕ "ತನ್ನ ತಪಃಸಾಧನೆಗೆ ಒಲಿದ ಶಿವನಿಂದ ಒಬ್ಬ ಮಗನನ್ನು ಪಡೆದ" ಎನ್ನುತ್ತಾನೆ ಕಲ್ಹಣ. ಅವನ ಮಗ ಜಲೌಕ ಅಶೋಕನ ಉತ್ತರಾಧಿಕಾರಿಯಾಗಿ ಸ್ವತಂತ್ರ ರಾಜನಾದ. ಈತ, ಕಲ್ಹಣ ದಾಖಲಿಸಿದಂತೆ, ಅನೇಕ ಕಟ್ಟುಪಾಡುಗಳ ಮೂಲಪುರುಷ. ಅವನು ದಿನವೂ ಭೂತೇಶ ಮತ್ತು ವಿಜಯೇಶ್ವರ ದೇವಾಲಯಗಳಲ್ಲಿ ಶಿವನನ್ನು ಆರಾಧಿಸುತ್ತಿದ್ದ. ಹಿರಿಯ ಯೋದ್ಧನಾದ ಜಲೌಕ [4] ಮ್ಲೇಚ್ಛರ ಕೈಯಿಂದ

---

[3] ಪ್ರಸಿದ್ಧವಾದ ಮಾರ್ತಂಡ ದೇವಾಲಯ ಮತ್ತು ಇತರ ಕೆಲವು ಹಳೆಯ ದೇವಾಲಯಗಳ ಭಗ್ನಾವಶೇಷಗಳನ್ನು ಈಗಲೂ 'ಪಾಂಡವಲರಿ' (ಪಾಂಡವರು ಕಟ್ಟಿಸಿದವುಗಳು) ಎಂದೇ ಕರೆಯುತ್ತಾರೆ.

[4] ಪುಟ............. ರ ಅಡಿ ಟಿಪ್ಪಣಿ ನೋಡಿ

ನಾಡನ್ನು ಬಿಡುಗಡೆಗೊಳಿಸಿದ. ಈ ಮ್ಲೇಚ್ಛರೆಂದರೆ ಪ್ರಾಯಃ ಕಾಶ್ಮೀರದ ಸರಹದ್ದಿನ ಪ್ರಾಂತಗಳನ್ನು ಗೆದೆಯಲು ಹವಣಿಸುತಿದ್ದ ಇಂಡೋ-ಗ್ರೀಕ್ ದಾಳಿಕೋರರಿರಬೇಕು. 60 ವರ್ಷಗಳ ಆಳಿಕೆಯ ಅನಂತರ, ಜಲೌಕ ತನ್ನ ರಾಣಿಯ ಜತೆಗೆ ಕೊನೆಯ ದಿನಗಳನ್ನು ಧ್ಯಾನದಲ್ಲಿ ಕಳೆಯಲು ಚೀರಮೋಚನಕ್ಕೆ ತೆರಳಿದ.

ಜಲೌಕನ ಅನಂತರ ಕಾಶ್ಮೀರದ ಸಿಂಹಾಸನವನ್ನೇರಿದವನು ಇಮ್ಮಡಿ ದಾಮೋದರ. ಪ್ರಾಯಃ ಇವನು ಅಶೋಕನ ವಂಶದವನೆ ಇರಬೇಕು. ಇವನು - ಪ್ರಸ್ಥಭೂಮಿಯಲ್ಲಿ ದಾಮೊದರ ಉದಾರ್ ಎಂಬ ನಗರವನ್ನು ನಿರ್ಮಿಸಿದನು. ಇದೇ ಈಗಣ ಶ್ರೀನಗರದ ವಿಮಾನ ನಿಲುದಾಣದ ಪ್ರದೇಶ; ಈಗಲೂ ಇದೇ ಹೆಸರಿನಿಂದ ಇದು ಪ್ರಸಿದ್ಧವಾಗಿದೆ.

ಮೌರ್ಯಸಾಮ್ರಾಜ್ಯ ಕಳೆಗುಂದಿದ ಮೇಲೆ ವಾಯವ್ಯ ಭಾರತ ವಿದೇಶೀ ಆಕ್ರಮಣಕ್ಕೆ ಬಲಿಯಾಯಿತು. ಕಾಶ್ಮೀರದ ಕಣಿವೆ ಈ ಆಕ್ರಮಣದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಆದರೆ ಕುಶಾನ್ (ತುರುಷ್ಕ) ರಾಜರ ಆಗಮನ ಮತ್ತು ಇಮ್ಮಡಿ ದಾಮೋದರನ ಸಾವಿನ ನಡುವೆ ರಾಜತರಂಗಿಣಿಯಲ್ಲಿ ಸುಮಾರು 200 ವರ್ಷಗಳ ಅಂತರವಿದೆ. ಮೂವರು ಕುಶಾನ್ ರಾಜರು — ಹುಷ್ಕ, ಬುಷ್ಕ ಮತ್ತು ಕನಿಷ್ಕ — (ಶಾಸನಗಳ ಆಧಾರದಿಂದ ನಿರ್ಧರಿಸಿದಂತೆ) ಇವರೇ ಹುವಿಷ್ಕ, ವಶಿಷ್ಕ ಮತ್ತು ಮೊದಲನೆಯ ಅಥವಾ ಇಮ್ಮಡಿ ಕನಿಷ್ಕ (ಹೆಚ್ಚು ಕರಾರುವಾಕ್ಕಾಗಿ ಮೊದಲಿನವನೆ ಇರಬೇಕು). ಕಲ್ಹಣನು ಉಲ್ಲೇಖಿಸಿದ ಇವರ ಮೂಲಕ ನಾವು ಅಧಿಕೃತವಾದ ಇತಿಹಾಸದ ಗಟ್ಟಿನೆಲದಲ್ಲಿ ಬಂದು ನಿಲ್ಲುತ್ತೇವೆ. ಇವರು ಮೂವರೂ ಏಕಕಾಲದಲ್ಲಿ ರಾಜ್ಯವಾಳಿದರು ಎಂದು ತಿಳಿಯಲಾಗಿದೆ. ಇವರಲ್ಲಿ ಪ್ರತಿಯೊಬ್ಬನೂ ಒಂದೊಂದು ಪಟ್ಟಣವನ್ನು ನಿರ್ಮಿಸಿದನು. ಅವು ಈಗಲೂ ಅವರ ಹೆಸರನ್ನೆ ಹೊತ್ತಿವೆ: ಹುಷ್ಕಪುರ, ಬುಷ್ಕಪುರ ಮತ್ತು ಕನಿಷ್ಕಪುರ.

ತುರುಷ್ಕರಾಜರ ಬಗೆಗಿನ ಕಲ್ಹಣನ ಹೇಳಿಕೆ ಕಾಶ್ಮೀರದ ಕಣಿವೆಯಲ್ಲಿ ಕುಶಾನರ ಆಳಿಕೆಯನ್ನು ದೃಢಪಡಿಸುತ್ತದೆ (ಅವರು ಕಾಶ್ಮೀರದಲ್ಲಿ ಬುದ್ಧಧರ್ಮವನ್ನು ಸ್ಥಾಪಿಸಿದರು ಎನ್ನುವುದು ಬೇರೆ ಆಧಾರಗಳಿಂದಲೂ — ಮುಖ್ಯವಾಗಿ ಹ್ಯೂಯನ್‌ತ್ಸಾಂಗ್ ಮತ್ತು ಅಲ್‌ಬೆರೂನಿ ಇವರಿಂದ — ಸಮರ್ಥಿಸಲ್ಪಟ್ಟಿದೆ). ಬೌದ್ಧಸಂಪ್ರದಾಯದ ಐತಿಹ್ಯದಂತೆ ಕನಿಷ್ಕನು ಬೌದ್ಧಧರ್ಮದ ಮೂರನೆಯ ಅಧಿವೇಶನವನ್ನು ಕಾಶ್ಮೀರದಲ್ಲಿ ನಡೆಸಿದನು. ಈಗ ಯಾವುದೂ ಉಳಿದಿರದಿದ್ದರೂ ಕುಶಾನರು ಹಲವು ಮಠಗಳನ್ನು, ಚೈತ್ಯಗಳನ್ನು ಕಟ್ಟಿಸಿದ್ದರು ಎನ್ನುವುದು ನಿಜವೆಂದು ತೋರುತ್ತದೆ. ಚಾರಿತ್ರಿಕವಾದ ಬೌದ್ಧಧರ್ಮಾಧಿವೇಶನ ಬುದ್ಧಧರ್ಮದ ಇತಿಹಾಸದಲ್ಲಿ ಒಂದು ಮಹತ್ವದ ಘಟನೆ. ಈ ಅಧಿವೇಶನ ಮಹಾಯಾನ ಪಂಥಕ್ಕೆ ಹಿರಿಯ ಸ್ಥಾನವನ್ನು ನೀಡಿತು. ಕಾಶ್ಮೀರ ಅದನ್ನು ಸ್ವೀಕರಿಸಿ ಬೆಳೆಸಿತು.

ಮಹಾಯಾನ ಪಂಥದ ಮಹೋನ್ನತ ಪ್ರತಿಪಾದಕನಾದ ನಾಗಾರ್ಜುನ[5] — ಅಶ್ವಘೋಷನ ಅನಂತರ ಎರಡನೆಯ ಧರ್ಮಸ್ಥಾಪಕ ಎಂದು ಗೌರವಿಸಲ್ಪಟ್ಟವ - ಕಲ್ಹಣನ ಪ್ರಕಾರ (I. 173), ತನ್ನ ಜೀವನದ ಹೆಚ್ಚಿನ ಕಾಲವನ್ನು, ಷಡರ್ಹದ್ವನ (ಈಗಣ ಹರ್‌ವಾನ್) ದ ವಿಶ್ವವಿದ್ಯಾಲಯದಲ್ಲಿ ಕಳೆದಿದ್ದ (ಇಲ್ಲಿ ಬುದ್ಧಧರ್ಮೀಯ ಅವಶೇಷಗಳು ಉತ್ಖನನದಲ್ಲಿ ದೊರೆತಿವೆ).

ಪ್ರಖ್ಯಾತವಾದ ಕುಶಾನರ ಆಳಿಕೆ ಪತನಗೊಂಡ ಮೇಲೆ, ಮೊದಲನೆಯ ಅಭಿಮನ್ಯು ಮುಂತಾದ ಪ್ರಾಂತೀಯ ರಾಜರು ರಾಜ್ಯವಾಳಿದರು ಎಂದು ತಿಳಿದು ಬರುತ್ತದೆ. ಆದರೆ, ಅವರು ಕುಶಾನರ ಜತೆ ಸಂಪರ್ಕವಿರಿಸಿಕೊಂಡಿದ್ದರೂ, ಬೌದ್ಧವಿರೋಧಿ ವಾತಾವರಣವನ್ನು ತಡೆಯುವುದು ಅವರಿಂದ ಸಾಧ್ಯವಾಗಲಿಲ್ಲ. ಅನಂತರದ ರಾಜ ಮುಮ್ಮಡಿ ಗೋನಂದ — ಮತ್ತು ಅನಂತರದ ನಾಲ್ವರು ರಾಜರು ಕಾಶ್ಮೀರದ ಸಾಂಪ್ರದಾಯಿಕ ಧರ್ಮವಾದ ಶೈವಧರ್ಮವನ್ನೆ ಪುರಸ್ಕರಿಸಿದರು. ಇದೇ ಸಾಲಿನಲ್ಲಿ ಇನ್ನೂ ಐವರು ರಾಜರು ಉಲ್ಲೇಖಿಸಲ್ಪಟ್ಟಿದ್ದಾರೆ.

ಕಲ್ಹಣ ಉಲ್ಲೇಖಿಸಿದ ಅನಂತರದ ಗಮನಾರ್ಹರಾಜ ಮಿಹಿರಕುಲ. ಇವನು ವಸುಕುಲನ ಮಗ; ಅವನ ಉತ್ತರಾಧಿಕಾರಿಯಾಗಿ ಪಟ್ಟಕ್ಕೆ ಬಂದವನು. ಇವನು ಖಚಿತವಾಗಿಯೂ, ಗುಪ್ತಸಾಮ್ರಾಜ್ಯದ ಪತನದ ಅನಂತರ ಉತ್ತರಭಾರತದ ವಿಸ್ತಾರವಾದ ಭೂಭಾಗವನ್ನಾಳಿದ ಶ್ವೇತ ಹೂಣರಾಜನೇ ಸರಿ. ಇವನು ಕಾಶ್ಮೀರವನ್ನು ಸ್ವಾಧೀನಪಡಿಸಿಕೊಂಡಿದ್ದ ಎನ್ನುವುದು. ಹ್ಯೂಯನ್‌ತ್ಸಾಂಗ [6] ನಿಂದಲು ಸಮರ್ಥಿತವಾಗಿದೆ. ಶಾಸನಗಳು ಮತ್ತು ಇತರ ಆಧಾರಗಳೂ ಇದಕ್ಕೆ ಸಂವಾದಿಯಾಗಿವೆ. ಮಿಹಿರಕುಲ, ಕಲ್ಹಣನ ಹೇಳಿಕೆಯಂತೆ, ಕ್ರೂರಿಯಾಗಿದ್ದ; ಆಕ್ರಮಣ ಶೀಲನಾದ ಸುಲಿಗೆಕೋರನಾಗಿದ್ದ. ಬೌದ್ಧರು, ಅವರ ಸ್ತೂಪಗಳ ಮತ್ತು ಸನ್ಯಾಸಿ ಮಠಗಳ ವಿರುದ್ಧ ವಿಧ್ವಂಸಕ ಕೃತ್ಯ ನಡೆಸುವುದರಲ್ಲಿ ಅವನಿಗೊಂದು ಪೈಶಾಚಿಕ ಆನಂದ. ಅವನು ಸಿಂಹಳದ ರಾಜನನ್ನು ಸಬೆಬಡಿದನೆಂದು ಹೇಳಲಾಗಿದೆ. ಶ್ರೀನಗರದ ಬಳಿ ಒಂದು ಶಿವಾಲಯವನ್ನೂ[7] ಅವನು ಕಟ್ಟಿಸಿದ್ದನೆಂದು ಕಲ್ಹಣ ಹೇಳುತ್ತಾನೆ. ಹಾಗೆಯೆ — ತನ್ನ ಹೆಸರಿನಿಂದ — ಮಿಹಿರಪುರ ಎಂಬ ಒಂದು ನಗರವನ್ನು ನಿರ್ಮಿಸಿದನಂತೆ. ಈತ ಕೊನೆಗೆ ಮನೋರೋಗ ಗ್ರಸ್ತನಾಗಿ (ಬೆಂಕಿಗೆ ಹಾರಿ) ಆತ್ಮಹತ್ಯೆ ಮಾಡಿಕೊಂಡು ಸತ್ತ.

ಮಿಹಿರಕುಲನ ಮರಣದ ಮೇಲಣ ಒಂದು ಶತಕಕಾಲದ ಕಾಶ್ಮೀರದ ಇತಿ

---

[5] ನಾಗಾರ್ಜುನನ ತತ್ವಜ್ಞಾನದ ವಿಮರ್ಶಾತ್ಮಕವಾದ ಮತ್ತು ನಿಖರವಾದ ಅಧ್ಯಯನದ ಆಸಕ್ತಿ ಜಾಪಾನೀ ವಿದ್ವಾಂಸರ ಇತ್ತೀಚಿನ ವ್ಯಾಖ್ಯಾನಗಳಿಂದ ಮತ್ತೆ ಚೇತರಿಸಿಕೊಂಡಿದೆ.

[6] ಸಿ ...... ಯು ..... ಕಿ (ಬೀಲರ ಅನುವಾದ) I ಪುಟ 167.

[7] ವಿ.ಸ್ಮಿತ್ ತನ್ನ 'ಕ್ಯಾಟಲಾಗ್ ಆಫ್ ಕಾಯಿನ್ಸ್ ಇನ್ ದಿ ಇಂಡಿಯನ್ ಮ್ಯೂಸಿಯಮ್' ಎಂಬ ಬರವಣಿಗೆಯಲ್ಲಿ, ಈ ರಾಜನ ನಾಣ್ಯಗಳ ಆಧಾರದ ಮೇಲೆ, ಮಿಹಿರಕುಲ ಶಿವಭಕ್ತನಾಗಿದ್ದ ಎಂಬ ಕಲ್ಹಣನ ಹೇಳಿಕೆಯನ್ನು ಸಮರ್ಥಿಸಿದ್ದಾನೆ.

ಹಾಸ ಮತ್ತೆ ಮರವೆಯ ಮರೆಯಲ್ಲಿ ಸೇರಿಹೋಗಿದೆ. ಇವನ ಉತ್ತರಾಧಿಕಾರಿಗಳಲ್ಲಿ ಒಬ್ಬ ಗೋಪಾದಿತ್ಯ. ರಾಜತರಂಗಿಣಿಯಲ್ಲಿ ಉಲ್ಲೇಖಗೊಂಡ ಈ ಸಾಲಿನ ರಾಜರ ಮಾಲಿಕೆಯಲ್ಲೆ ಇವನು ಹೆಚ್ಚು ಐತಿಹಾಸಿಕ ವ್ಯಕ್ತಿ. ಇವನೇ ಶ್ರೀನಗರದ ಗೋಪಪರ್ವತದಲ್ಲಿ — ಈಗಣ ಶಂಕರಾಚಾರ್ಯ ಪರ್ವತ — ಜ್ಯೇಷ್ಠೇಶ್ವರ ಎಂಬ ದೇವಾಲಯ ಕಟ್ಟಿಸಿದ್ದ. ಇವನ ಮೊಮ್ಮಗನೆ ಖಿಂಖಿಲ. ಈ ಹೂಣ ದೊರೆ ತನ್ನ ನಾಣ್ಯಗಳಲ್ಲಿ ತನ್ನನ್ನು 'ದೇವಸಾಹಿ ಕಿಹಿಂಗಿಲ' ಎಂದು ಕರೆದುಕೊಂಡಿದ್ದಾನೆ.

ರಾಜತರಂಗಿಣಿಯ ಎರಡನೆಯ ತರಂಗ ಬೇರೆಬೇರೆ ವಂಶದಿಂದ ಬಂದ ಆರು ಮಂದಿ ರಾಜರ ಆಳಿಕೆಯ ಅವಧಿಯನ್ನು ಸಂಗ್ರಹಿಸುತ್ತದೆ. ಕಾಶ್ಮೀರದ ರಾಜಕೀಯ ಮುಖಂಡರು ಮೊದಲನೆಯ ಯುಧಿಷ್ಠರನನ್ನು ಸಿಂಹಾಸನದಿಂದ ಇಳಿಸಿ ರಾಜ್ಯಭ್ರಷ್ಟಗೊಳಿಸಿದ ಮೇಲೆ ರಾಜಾ ವಿಕ್ರಮಾದಿತ್ಯನ ಸಂಬಂಧಿಯೊಬ್ಬನನ್ನು ಕಾಶ್ಮೀರದ ರಾಜನಾಗಿ ಪಟ್ಟಕ್ಕೇರಿಸಿದರು. ಅವನೇ ಮೊದಲನೆಯ ಪ್ರತಾಪಾದಿತ್ಯ.

ಒಳಜಗಳ ಕಚ್ಚಾಟಗಳಿಂದ ವಿಚ್ಛಿನ್ನವಾದ ಈ ಅರಸೊತ್ತಿಗೆ ಸ್ವಲ್ಪಕಾಲ "ಹರ್ಷ ಮತ್ತು ಇತರ ವಿದೇಶೀರಾಜರ" ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ. ಆರನೆಯ ಶತಕದ ಪೂರ್ವಾರ್ಧದಲ್ಲಿ ಖ್ಯಾತನಾದ ಉಜ್ಜಯಿನಿಯ ರಾಜಾ ಹರ್ಷವಿಕ್ರಮಾದಿತ್ಯನನ್ನೇ ಕಲ್ಹಣ ಇಲ್ಲಿ ಉಲ್ಲೇಖಿಸಿರಬೇಕು ಎಂದು ತರ್ಕಿಸಲಾಗಿದೆ. ಆದರೆ ಕಲ್ಹಣನ ಕಾಲಾನುಕ್ರಮಣಿಕೆಯಲ್ಲಿ ಪ್ರಾಯಃ ಸ್ವಲ್ಪ ತಪ್ಪಾಗಿರಬೇಕು. ಮೊದಲನೆಯ ಪ್ರತಾಪಾದಿತ್ಯ ಮತ್ತು ಅವನ ಉತ್ತರಾಧಿಕಾರಿಯಾಗಿ ಪಟ್ಟವೇರಿದ ಅವನ ಮಗ ಜಲೌಕ ಇಬ್ಬರೂ 32 ವರ್ಷಗಳ ಕಾಲ ರಾಜ್ಯವಾಳಿದರು ಎಂದು ಕಲ್ಹಣ ಹೇಳುತ್ತಾನೆ.

ಆನಂತರ ಆಳಿದವನು ತುಂಜೀನ. ರಾಜ್ಯಭ್ರಷ್ಟನಾದ ಯುಧಿಷ್ಠಿರನ ವಂಶದವ. ಇವನ ಕಾಲದಲ್ಲಿ ಸಂಭವಿಸಿದ, ಪ್ರಜಾವರ್ಗವನ್ನೆ ಬಲಿತೆಗೆದುಕೊಂಡ ಭೀಕರಕ್ಷಾಮದ ವಿವರವನ್ನು ಕಣ್ಣಿಗೆ ಕಟ್ಟುವಂತೆ ಕಲ್ಹಣ ಚಿತ್ರಿಸಿದ್ದಾನೆ. ತುಂಜೀನನ ಸಾಧ್ವಿ ಮಡದಿ ವಾಕ್‌ಪುಷ್ಟಾ ಎಂಬವಳು ಕತೀಮುಷಾ (ಈಗಣ ಕ್ಯಾಮುಹ್) ಮತ್ತು ರಾಮುಷಾ (ಈಗಣ ರಾಮುಹ್) ನಗರಗಳನ್ನು ನಿರ್ಮಿಸಿದಳು. ರಾಜತರಂಗಿಣಿಯ ಎರಡನೆಯ ತರಂಗದ ಕೊನೆಯಲ್ಲಿ ಬರುವ ರಾಜ ಆರ್ಯರಾಜ. ಅವನು ಸಿಂಹಾಸನತ್ಯಾಗ ಮಾಡಿದ ಫಲವಾಗಿ ಮತ್ತೆ ಕಾಶ್ಮೀರದ ಆಡಳಿತ ಗೋನಂದರ ವಂಶಕ್ಕೆ ಮರಳಿತು.

ಈ ವಂಶದ ಮೊದಲನೆಯ ರಾಜ ಮೇಘವಾಹನ. ಗೋಪಾದಿತ್ಯನ ಮಗ. ಇವನು ಅಸ್ವಾಮಿನ ರಾಜಪುತ್ರಿಯ ಸ್ವಯಂವರದಲ್ಲಿ ಭಾಗವಹಿಸಿದ್ದ. ಆ ರಾಜಪುತ್ರಿ (ಅಮೃತಪ್ರಭೆ) ಇವನನ್ನೆ ಪತಿಯಾಗಿ ವರಿಸಿದ್ದಳು. ಬಹುಮುಖ ಸಾಮರ್ಥ್ಯದ, ಸಾತ್ವಿಕ ಸ್ವಭಾವದ ಈ ರಾಜ ಸಿಲೋನಿನ ತನಕವೂ ತನ್ನ ವಿಜಯ ಯಾತ್ರೆಗಳನ್ನು ವಿಸ್ತರಿಸಿದ್ದ. ಈತ ಮೇಘವನ ಎಂಬ ನಗರವನ್ನು ನಿರ್ಮಿಸಿದ್ದ. ಅವನ ರಾಣಿ ಅಮೃತಪ್ರಭೆ ವಿದೇಶದ ಭಿಕ್ಷುಗಳಿಗೆ ಇರುವುದಕ್ಕಾಗಿ (ಅಮೃತಭವನ ಎಂಬ ಹೆಸರಿನ) ಮಠವೊಂದನ್ನು

ಕಟ್ಟಿಸಿದ್ದಳು.

ಇನ್ನೊಬ್ಬ ಗಮನಾರ್ಹನಾದ ರಾಜನೆಂದರೆ ಕವಿ ಮಾತೃಗುಪ್ತ. [8] ಅವನು ಉಜ್ಜಯಿನಿಯ ರಾಜಾ ವಿಕ್ರಮಾದಿತ್ಯನಿಂದ ನೇಮಿಸಲ್ಪಟ್ಟು ರಾಜನಾದವ. ಈ ಕವಿ-ರಾಜ ವಿದ್ಯೆಗೆ, ವಿದ್ಯಾವಂತರಿಗೆ ಪ್ರೋತ್ಸಾಹ ನೀಡಿದ, ಆಶ್ರಯ ನೀಡಿದ ಎಂದು ಕಲ್ಹಣ ಹೇಳುತ್ತಾನೆ. ಇವನು ಮಹಾಕವಿ ಭರ್ತೃಮೇಂಠನಿಗೆ (ಇವನನ್ನು ಮೇಂಠ ಎಂದೂ ಕರೆಯುತ್ತಾರೆ) ಆಶ್ರಯ ನೀಡಿದ್ದನು. ಕವಿ ಭರ್ತೃಮೇಂಠ ಹಯಗ್ರೀವವಧ ಎಂಬ ಮಹಾಕಾವ್ಯವನ್ನು ಬರೆದಿದ್ದಾನೆ. ಈ ರಾಜ ವೈಷ್ಣವ ಸಂಪ್ರದಾಯದವನಾಗಿದ್ದು ಮಾತೃಗುಪ್ತಸ್ವಾಮಿ ಎಂಬ ಹೆಸರಿನಲ್ಲಿ ವಿಷ್ಣುವಿನ ದೇವಾಲಯವೊಂದನ್ನು ಕಟ್ಟಿಸಿದನು. ವಿಕ್ರಮಾದಿತ್ಯನ ಮರಣದಿಂದ ಅವನ ಪರಿಸ್ಥಿತಿ ಗಣನೀಯವಾಗಿ ದುರ್ಬಲವಾಯಿತು. ಮಾತೃಗುಪ್ತ ಸ್ವೇಚ್ಛೆಯಿಂದ ಸಿಂಹಾಸನವನ್ನು ತೆರವುಮಾಡಿ ಇಮ್ಮಡಿ[9] ಪ್ರವರಸೇನನಿಗೆ ಉತ್ತರಾಧಿಕಾರಿಯಾಗಲು ಅವಕಾಶ ಮಾಡಿಕೊಟ್ಟನು. ವೀರಯೋಧನಾದ ಪ್ರವರಸೇನ ಕಣಿವೆಯಿಂದಾಚೆಗೂ ದಂಡಯಾತ್ರೆ ಮಾಡಿ ಗಂಗಾ — ಯಮುನಾ ಕಣಿವೆಯ ಸೌರಾಷ್ಟ್ರವನ್ನೂ ತ್ರಿಗರ್ತದೇಶವನ್ನೂ ಗೆದ್ದನೆಂದು ಹೇಳಲಾಗಿದೆ. ಮುಂದುವರಿದು, ಉಜ್ಜಯಿನಿಯ ಸಾರ್ವಭೌಮ ರಾಜ್ಯವನ್ನು ನಡುಗಿಸಿದ. ಈಗಣ ಶ್ರೀನಗರ ಇರುವ ಜಾಗದಲ್ಲಿ ಪ್ರವರಪುರ ಎಂಬ ನಗರವನ್ನು ನಿರ್ಮಿಸಿದನು.

ಪ್ರವರಸೇನನಿಂದ ನಾಲ್ಕನೆಯವ ರಣಾದಿತ್ಯ ಇನ್ನೊಬ್ಬ ಗಮನಾರ್ಹ ರಾಜ. ಕಲ್ಹಣ ಉಲ್ಲೇಖಿಸಿದ ಐತಿಹ್ಯದಂತೆ ಇವನು 300 ವರ್ಷಗಳ ಕಾಲ ಭೂಮಿಯನ್ನಾಳಿದ. ಈ ಬಗ್ಗೆ [10] ಮಜುಮ್‌ದಾರರು ಹೀಗೆ ಅಭಿಪ್ರಾಯಪಡುತ್ತಾರೆ: "ರಾಜರುಗಳ ಆಳಿಕೆಯ ಇಂಥ ಅಸಾಮಾಮಾನ್ಯ ಕಾಲಮಾನ ನಿಸ್ಸಂಶಯವಾಗಿ ಆ ಕಾಲದ ವಾಸ್ತವ ಇತಿಹಾಸ ನಷ್ಟವಾಗಿದೆ ಎನ್ನುವುದನ್ನು ಸೂಚಿಸುತ್ತರೆ." ಇಂಥ ದೀರ್ಘಕಾಲದ ಬಾಳಿಕೆಯನ್ನು ಯೋಗಶಕ್ತಿಯಿಂದ ಕೂಡಿಸಬೇಕು ಎನ್ನುವ

---

[8] ಸಂಸ್ಕೃತದ ಮಹಾಕವಿ, ನಾಟಕಕಾರ ಕಾಳಿದಾಸನೇ ಈ ಮಾತೃಗುಪ್ತನಿರಬೇಕೆಂದು ಸಾಧಿಸಲು ವಿದ್ವಾಂಸರು ಪ್ರಯತ್ನಿಸಿದ್ದುಂಟು. ಮೊದಲು ಈ ಬಗೆಗೆ ಸಂಶೋಧನೆಗಿಳಿದವರು ಡಾ. ಬೌದಾಜಿ ಅವರು: "ಕಾಳಿದಾಸ ಉಜ್ಜಯಿನಿಯ ನಿವಾಸಿಯಾಗಿದ್ದರೂ..... ಬಹುಮಟ್ಟಿಗೆ ಅವನು ಕಾಶ್ಮೀರದವನಿರಬೇಕು.... ಅವನು ತನ್ನ ವರ್ಣನೆಯನ್ನು ಉತ್ತರಭಾರತದ, ವಿಶೇಷತಃ ಹಿಮಾಲಯದ ಪ್ರಾಕೃತಿಕ ಭೂವಿವರಣೆಗಳಿಂದ, ಇತಿಹಾಸದಿಂದ ಸಮೃದ್ಧಗೊಳಿಸಿದ್ದಾನೆ........" ಡಾ.ಎಲ್.ಡಿ. ಕಲ್ಲಾ ಅವರೂ ಈ ವಾದವನ್ನೆ ಸಮರ್ಥಿಸುತ್ತಾರೆ. ಅವರೂ ಕಾಳಿದಾಸನ ಜನ್ಮಭೂಮಿ ಕಾಶ್ಮೀರ ಎಂದೇ ಅಭಿಪ್ರಾಯಪಡುತ್ತಾರೆ.

[9] ಪ್ರವರಸೇನನ ನಾಣ್ಯಗಳು ಅವನ ಐತಿಹಾಸಿಕತೆಯನ್ನೂ ಕುಶಾನ್ ಮತ್ತು ಎಫ್ಥಲೈಟ್ ರಾಜರ ಜತೆ ಅವನಿಗಿದ್ದ ಸಂಬಂಧವನ್ನೂ ಸಮರ್ಥಿಸುತ್ತವೆ. ಕ್ರಿ.ಶ. ಏಳನೆಯ ಶತಕದ ಕೊನೆಯ ತನಕವೂ ಕಾಶ್ಮೀರದ ರಾಜರು ಕಿದಾರಕುಶಾನ್ (ಚಿಕ್ಕಕುಶಾನ್) ವಂಶದ ಶಾಖೆಯಿಂದ ಬಂದವರು.

[10] ಮಜುಮ್‌ದಾರ್ ಆರ್.ಸಿ. "ಕ್ಲಾಸಿಕಲ್ ಏಜ್" ಪು. 132.

ತ್ರಿವೇದ[11] ಅವರೂ ಮುಂದೆ ಹೀಗೆ ಹೇಳುತ್ತಾರೆ; "ಹೆಚ್ಚಿನ ವಿದ್ವಾಂಸರು ಈ ಅವಧಿಯಲ್ಲಿ ಪ್ರಜಾಧಿಪತ್ಯ ಇದ್ದಿರಬಹುದು ಎಂದು ಊಹೆ ಮಾಡುತ್ತಾರೆ." ಚೋಳರಾಜಕುಮಾರಿ, ರಾಜಾ ರತಿಸೇನನ ಮಗಳು ರಣಾರಂಭೆಯನ್ನು ರಣಾದಿತ್ಯ ಮದುವೆಯಾಗಿದ್ದ. ಅವನು ಕಟ್ಟಿಸಿದ ಶಿವಾಲಯ ಮತ್ತು ಇತರ ಸಂಸ್ಥೆಗಳ ಬಗೆಗೆ ಕಲ್ಹಣ ಸಮೃದ್ಧವಾಗಿ ವರ್ಣಿಸುತ್ತಾನೆ.

ರಣಾದಿತ್ಯನ ಮಗ ವಿಕ್ರಮಾದಿತ್ಯ 42 ವರ್ಷಗಳ ಕಾಲ ರಾಜ್ಯವನ್ನಾಳಿದ. ಅವನು ಕೆಲವು ಪವಿತ್ರ ಮಂದಿರಗಳನ್ನು ಸ್ಥಾಪಿಸಿದ್ದನ್ನು ಕಲ್ಹಣ ಉಲ್ಲೇಖಿಸುತ್ತಾನೆ. ರಾಜತರಂಗಿಣಿಯ ಮೂರನೆಯ ತರಂಗದಲ್ಲಿ ಬರುವ ಕೊನೆಯ ರಾಜ ದುರ್ಲಭ ವರ್ಧನ. ಈತ ತುಂಬ ಚುರುಕು ಬುದ್ಧಿಯ ದಕ್ಷ ರಾಜನಾಗಿದ್ದ. ಈತ ತನ್ನ ಮಂತ್ರಿ ಖಂಖನ ಜತೆಗೆ ತನ್ನ ಮಡದಿ ಅನೈತಿಕ ಸಂಬಂಧವಿರಿಸಿಕೊಂಡದ್ದನ್ನು ತಿಳಿದಾಗಲೂ ಪ್ರತೀಕಾರಕ್ಕೆಳಸದೆ ಕ್ಷಮಿಸಿಬಿಟ್ಟ. ಇವನ ಅವಸಾನದ ಜತೆಗೆಯೆ ಗೋನಂದವಂಶದ ರಾಜರ ಅವಸಾನವೂ ಆಯಿತು.

---

11 ತ್ರಿವೇದ, ಡಿ.ಎಸ್. 'ದಿ ಜರ್ನಲ್ ಆಫ್ ದಿ ಬಿಹಾರ್ ಅಂಡ್ ಒಡಿಸ್ಸಾ ರೀಸರ್ಚ್ ಸೊಸೈಟಿ' 1938, ಡಾ. ಕೆ.ಎಸ್. ಸಕ್ಸೇನ ಅವರಿಂದ 'ಪೊಲಿಟಿಕಲ್ ಹಿಸ್ಟೊರಿ ಆಫ್ ಕಶ್ಮೀರ್' (1974) ಕೃತಿಯಲ್ಲಿ ಉದ್ಧೃತ.

ಕರ್ಕೋಟರ ಆಳಿಕೆ ಮತ್ತು ಅನಂತರದ ಅವಧಿ

ಕಾಶ್ಮೀರದಲ್ಲಿ ಕರ್ಕೋಟವಂಶ ಅಧಿಕಾರಕ್ಕೇರಿದ್ದು ಒಂದು ಮಹತ್ವದ ಘಟನೆ. ಈ ಅರಸೊತ್ತಿಗೆ, ಕಾಶ್ಮೀರದ ಕಣಿವೆಗೆ, ಹಲವು ಶತಮಾನಗಳ ಕಾಲ, ನಿರಂತರವಾದ ಆಡಳಿತವನ್ನು ಒದಗಿಸಿತು. ಭಾರತದ ಇತರ ಕಡೆಗಳಲ್ಲಿ ಅನೇಕ ರಜಪೂತ ರಾಜ್ಯಗಳು ಏಳುಬೀಳನ್ನನುಭವಿಸುತಿದ್ದಾಗ ಕಾಶ್ಮೀರದ ಕಣಿವೆಯಲ್ಲಿ ಸ್ಥಿರ ಆಡಳಿತವನ್ನು ಒದಗಿಸಿದವರು ಕರ್ಕೋಟರು.

ಈ ರಾಜವಂಶಕ್ಕೆ 'ಕರ್ಕೋಟ' ಎಂಬ ಹೆಸರು ಮೂಲತಃ ದುರ್ಲಭ ವರ್ಧನನಿಂದ ಬಂದದ್ದು. ಅವನು ಕರ್ಕೋಟ ನಾಗನ ವಂಶದವನೆಂದು ಹೇಳಲಾಗುತ್ತಿದೆ (III, 529 - 30). ಕರ್ಕೋಟನಾಗ ವ್ಯಾಪಕವಾಗಿ ಪೂಜೆಗೊಂಡ ಸರ್ಪದೇವತೆ. ಇಂಥ ಈ ಐತಿಹ್ಯದ ನಾಗ (ಕರ್ಕೋಟ)ನ ವಂಶದಲ್ಲಿ ಬಂದವನು ಎಂಬ ಇಷ್ಟೊಂದು ಮಾಹಿತಿಯನ್ನು ಬಿಟ್ಟರೆ ದುರ್ಲಭವರ್ಧನ ವಂಶದ ಪೂರ್ವೇತಿಹಾಸವೆಲ್ಲ ಅಜ್ಞಾತವಾಗಿಯೆ ಉಳಿದಿದೆ.

ದುರ್ಲಭವರ್ಧನನ ಆಳಿಕೆಯ ಅವಧಿಯಲ್ಲೆ (ಕ್ರಿ.ಶ. 625 - 661) ಹ್ಯೂಯನ್ತ್ಸಾಂಗ್ ಈ ಕಣಿವೆಗೆ ಭೇಟಿ ನೀಡಿದ್ದು. ಆಗಣ ಕಾಶ್ಮೀರರಾಜ್ಯದ ಹರವನ್ನು ಅವನು ಉಲ್ಲೇಖಿಸಿದ್ದಾನೆ. ಅದು ಕಾಶ್ಮೀರದ ಕಣಿವೆಯನ್ನಷ್ಟೆ ಅಲ್ಲದೆ (ಇಂಡಸ್‌ನ ಪೂರ್ವ ಭಾಗದ) ತಕ್ಷಶಿಲೆ, ಉರಶಾ (ಹಝುರಾ) ಮತ್ತು (ಉಪ್ಪಿನ ನೆಲೆಯೆನಿಸಿದ ರಾಜಪುರಿ ಮತ್ತು ಪೂಂಛ್‌ನ ಪುಟ್ಟ ಪರ್ವತಪ್ರಾಂತ) ಸಿಂಹ ಪುರವನ್ನೂ ಒಳಗೊಂಡಿತ್ತು. ತನ್ನ ಸಮಕಾಲೀನ, ಕಾನೋಜದ ಖ್ಯಾತ ರಾಜ ಹರ್ಷವರ್ಧನನಂತೆ ದುರ್ಲಭವರ್ಧನನೂ ಬುದ್ಧಧರ್ಮಾಯನಾಗಿದ್ದ. ದುರ್ಲಭವರ್ಧನನ ಮಗ ಇಮ್ಮಡಿ ಪ್ರತಾಪಾದಿತ್ಯನೆಂದು ಹೆಸರಾದ ದುರ್ಲಭಕ (ಕ್ರಿ.ಶ. 661 - 711) ತಂದೆಯ ಮರಣದ ಅನಂತರ ರಾಜನಾದ. ದುರ್ಲಭಕನ ಹಿರಿಯ ಮಗ ಚಂದ್ರಾಪೀಡ ಅವನ ಉತ್ತರಾಧಿಕಾರಿಯಾದ. ಕ್ರಿ.ಶ. 715ರಿಂದ 720ರ ನಡುವೆ ಕಾಶ್ಮೀರವನ್ನು ಆಳುತಿದ್ದು, ಚೀನದ ಚರಿತ್ರೆಯಲ್ಲಿ ಉಲ್ಲೇಖಗೊಂಡ ಚಚೆನ್ - ತೋ - ಲೋ - ಪೀ - ಲಿ ಈ ಚಂದ್ರಾಪೀಡನೆ ಇರಬೇಕೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಧರ್ಮನಿಷ್ಠೆ ಮತ್ತು ನ್ಯಾಯಪರತೆಗಾಗಿ ಈತ ಪ್ರಖ್ಯಾತನಾಗಿದ್ದ. ಕಲ್ಹಣ ಅನೇಕ ಕಥೆಗಳ ಮೂಲಕ ಇದನ್ನು ವಿವರಿಸಿದ್ದಾನೆ.

ಕರ್ಕೋಟ ರಾಜರಲ್ಲಿ ಮುಕ್ತಾಪೀಡ ಲಲಿತಾದಿತ್ಯ (ಕ್ರಿ.ಶ. 699 - 736) ಅತ್ಯಂತ

ಸಮರ್ಥರಾಜನಾಗಿ ಬೆಳಗಿದವನು. ಅವನ ಪ್ರಭುತ್ವ ಕಾಶ್ಮೀರ ಮತ್ತು ಪರಿಸರದ ಗಡಿನಾಡುಗಳನ್ನು ದಾಟಿ ಬಹಳ ದೂರದ ತನಕ ವ್ಯಾಪಿಸಿತ್ತು. ಅವನು ವಿಜಯೋತ್ಸಾಹಿ ರಾಜನಾಗಿದ್ದು ತನ್ನ ಬಾಳಿನ ಬಹ್ವಂಶವನ್ನು ದಂಡಯಾತ್ರೆಯಲ್ಲೆ ಕಳೆದ. ಅವನ ಸಾಮಂತರು ಜಲಂಧರ (ಈಗಣ ಕಾಂಗಡಾ) ಮತ್ತು ಲೋಹರ (ಈಗಣ ಪೂಂಛ್) ಗಳನ್ನು ಸ್ವಾಧೀನಪಡಿಸಿಕೊಂಡಿದ್ದರು. ಅವನು ದೂರದ ರಾಜ್ಯಗಳಾದ ಕಾನೋಜ[1] ಬಂಗಾಲ, ಒರಿಸ್ಸಾ ಮತ್ತು ಕಾಂಬೋಜ (ಪೂರ್ವ ಅಫಘಾನಿಸ್ತಾನ) ಗಳನ್ನು ದಾಳಿ ಮಾಡಿದ್ದ ಎಂದು ಹೇಳಲಾಗಿದೆ. ಕಲ್ಹಣ ಅವನ ವಿಜಯ ಯಾತ್ರೆಯನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾನೆ. ಅದರ ಪ್ರಕಾರ ಲಲಿತಾದಿತ್ಯ ಒಡಿಸ್ಸಾ ಕಡಲತೀರದಿಂದ ಪಶ್ಚಿಮಕ್ಕೆ ತಿರುಗಿದ. ವಿಂಧ್ಯವನ್ನು ದಾಟಿಸಾಗಿದ. ಈ ಯಾತ್ರೆಯಲ್ಲಿ ರಾಣಿ ರಟ್ಟಾದೇವೀ ಅವನಿಗೆ ನೆರವಾದಳು. ಲಲಿತಾದಿತ್ಯನ ದಂಡಯಾತ್ರೆಯ ಸಂಚಾರ ಮಾರ್ಗವನ್ನು ಭೌಗೋಳಿಕ ಕ್ರಮದಿಂದ ಗುರುತಿಸಲಾಗಿದೆ. ಅವನ ವಿಜಯ ಮಾಲಿಕೆಯಲ್ಲಿ ಅತ್ಯಂತ ಮುಖ್ಯವಾದದ್ದು, ರಾಜಾ ಯಶೋವರ್ಮನ ಮೇಲೆ ನಡೆಸಿದ ದಂಡಯಾತ್ರೆ. ಯಶೋವರ್ಮನನ್ನು ಜಯಿಸುವ ಮೂಲಕ ಲಲಿತಾದಿತ್ಯ ಕಾನೋಜದ ದೊರೆಯಾದದ್ದಷ್ಟೆ ಅಲ್ಲ; ತನ್ನ ಸಾಮ್ರಾಜ್ಯದ ಹಕ್ಕನ್ನು ತುಂಬ ವಿಶಾಲವಾದ ಭೂಭಾಗದಲ್ಲಿ ಸ್ಥಾಪಿಸಲೂ ಸಮರ್ಥನಾದನು. ಅವನು ಮಾಲವ, ಗುಜರಾತುಗಳನ್ನು ಗೆದ್ದಂತೆಯೆ ಸಿಂಧ್ ರಾಜ್ಯದ ಅರಬರನ್ನು ಸೋಲಿಸಿದ್ದ ಎಂದು ಕಂಡುಬರುತ್ತದೆ.

ಕಾಶ್ಮೀರಿಗಳು ತುರುಕರ [2] ಮೇಲೂ ವಿಜಯವನ್ನು ಸಾಧಿಸಿದ ಕೀರ್ತಿಯನ್ನು ತಮ್ಮ ರಾಜನಿಗೆ ಸಲ್ಲಿಸುತ್ತಾರೆ. ಲಲಿತಾದಿತ್ಯ ತುಖಾರರ ದೇಶದಿಂದ ಚಂಕುಣನೆಂಬವನನ್ನು ಕರೆತಂದು ತನ್ನ ಮಂತ್ರಿಯನ್ನಾಗಿ ಮಾಡಿದ ಎಂದು ಹೇಳಲಾಗಿದೆ. ಈ ಚಂಕುಣ ಎರಡು ವಿಹಾರಗಳನ್ನು [3] ಒಂದು ಸ್ತೂಪವನ್ನು ಕಟ್ಟಿಸಿದನೆಂದು ಕಲ್ಹಣ ಹೇಳುತ್ತಾನೆ. ಈ ವ್ಯಾಪಕವಾದ ವಿಜಯದಿಂದಾಗಿ[4] ಲಲಿತಾದಿತ್ಯನ ಕಾಲದ ಕಾಶ್ಮೀರದ ರಾಜ್ಯ, ಗುಪ್ತರ ಕಾಲದ ಅನಂತರ ಭಾರತದ ಇತಿಹಾಸದಲ್ಲೆ ಅತ್ಯಂತ ಪ್ರಭಾವಿ ಸಾಮ್ರಾಜ್ಯವಾಗಿತ್ತು. ಲಲಿತಾದಿತ್ಯ ನಿರ್ಮಿಸಿದ ಮಾರ್ತಂಡದೇವಾಲಯದ ಅವಶೇಷಗಳು ಇವತ್ತಿಗೂ ಕಾಶ್ಮೀರದ ಅತ್ಯಂತ ವೈಶಿಷ್ಟ್ಯಪೂರ್ಣ ಪಳೆಯುಳಿಕೆಯಾಗಿ ಉಳಿದಿವೆ. "ಅವನ ಕಾಲದ

[1] ಲಲಿತಾದಿತ್ಯನ ನಾಣ್ಯಗಳು ಕಾನೋಜ, ಬಾಂದಾ, ಫೈರುಖಾಬಾದ್, ವಾರಣಾಸಿ (ರಾಜಘಾಟ್ ಮತ್ತು ಸಾರನಾಥ), ನಲಂದಾ ಮತ್ತು ಮಾಂಘೀರ್‌ಗಳಲ್ಲಿ ದೊರೆತಿವೆ. ಇವು, ಪ್ರಾಯಃ ಲಲಿತಾದಿತ್ಯ ಪೂರ್ವಭಾರತದತ್ತ ತನ್ನ ವಿಜಯಿಾದಂಡಯಾತ್ರೆಯಲ್ಲಿ ಸಾಗಿದ ದಾರಿಯನ್ನು ಸ್ಫುಟವಾಗಿ ತೋರಿಸುತ್ತವೆ.

[2] ಅಲ್‌ಬೆರೂನಿಯ ದಾಖಲೆಯಂತೆ, ಕಾಶ್ಮೀರದ ರಾಜ ಮುತ್ತಾಯಿ (ಅರ್ಥಾತ್ ಮುಕ್ತಾಪೀಡ) ತುರುಕರನ್ನು ಗೆದ್ದ ಸಂಗತಿಯನ್ನು ಸ್ಥಳೀಯ ಸಂಪ್ರದಾಯವೂ ಸಮರ್ಥಿಸುತ್ತದೆ.

[3] ಇವುಗಳಲ್ಲಿ ಒಂದನ್ನು ಚೀನೀ ಯಾತ್ರಿಕ ಊ - ಕಾಂಗ್ ಸಂದರ್ಶಿಸಿದ್ದ. ಕಲ್ಹಣನ ಕಾಲದಲ್ಲಿ ಚಂಕುಣ ವಿಹಾರವನ್ನು ಒಬ್ಬ ಮಂತ್ರಿಯ ಧಾರ್ಮಿಕ ಹೆಂಡತಿ ಸುಸ್ಸಲಾ ಜೀರ್ಣೋದ್ಧಾರ ಮಾಡಿಸಿದ್ದಳು.

[4] ಲಲಿತಾದಿತ್ಯನು ಅನಂತರ ಭೌಟ್ಟರನ್ನು ಟಿಬೇಟನ್ನರನ್ನೂ ಗೆದ್ದ ಘಟನೆ ಚೀನೀ (ಟಾಂಗ್) ಚರಿತ್ರೆಯಿಂದಲೂ ಸಮರ್ಥಿಸಲ್ಪಟ್ಟಿದೆ.

ಕೆಲವು ಸ್ತೂಪಗಳು, ವಿಹಾರಗಳು ಮತ್ತು ಚೈತ್ಯಗಳನ್ನು ಅಗೆದು ತೆಗೆಯಲಾಗಿದೆ. ಈ ಅವಶೇಷಗಳು ಅವುಗಳನ್ನು ನಿರ್ಮಿಸಿದ ದೊರೆಯ ಹಿರಿಯ ಖ್ಯಾತಿಯನ್ನು ಸಮರ್ಥಿಸುತ್ತವೆ. [5] ಲಲಿತಾದಿತ್ಯನೇ ನಿರ್ಮಿಸಿದ ಪರಿಹಾಸಪುರದಲ್ಲಿ ಬುದ್ಧವಿಹಾರಗಳೂ ಹಿಂದೂ ದೇವಾಲಯಗಳೂ ಅಕ್ಕಪಕ್ಕದಲ್ಲೆ ಇದ್ದವು. ಇವುಗಳ ಅವಶೇಷಗಳು ಇಂದಿಗೂ ಲಲಿತಾದಿತ್ಯನ ಮತ ಸಹಿಷ್ಣುತೆಗೆ ಸಾಕ್ಷಿಯಾಗಿ ಉಳಿದಿದೆ. ಯುದ್ಧಕುಶಲನಾಗಿ, ದಕ್ಷ ಆಡಳಿತಗಾರನಾಗಿ ಭಾರತೀಯ ಇತಿಹಾಸದ ಪುಟಗಳಲ್ಲಿ ಅಜರಾಮರನಾದ ಈ ಗೌರವಶಾಲೀ ರಾಜ ತಾನು ದಂಡಯಾತ್ರೆಯಲ್ಲಿದ್ದಾಗಲೆ ದಾರಿಯಲ್ಲಿ ತೀರಿಕೊಂಡ. ಇಂಥ ಸಂದರ್ಭ ಒದಗಿಬಂದರೆ ಹೇಗೆ ನಡೆದುಕೊಳ್ಳಬೇಕು ಎನ್ನುವುದರ ಬಗ್ಗೆ ಅವನು ಮೊದಲೆ ತನ್ನ ಮಂತ್ರಿಗಳಿಗೆ ಸಲಹೆ ನೀಡಿದ್ದ. ಮನು ಮತ್ತು ಇತರ ನ್ಯಾಯ ನಿಬಂಧನಕಾರರು, ಘೋಷಿಸಿದಂತೆ ರಾಜ್ಯತಂತ್ರದ ಸಪ್ತಾಂಗ ಆಡಳಿತದ ಹಿಂದೂ ಪದ್ಧತಿಯ ಬೆಳಕಿನಲ್ಲಿ ಹೇಗೆ ಆಡಳಿತಯಂತ್ರವನ್ನು ಮುಂದುವರಿಸಬೇಕು ಎಂದು ನಿರ್ದೇಶಿಸಿದ್ದ.

ಲಲಿತಾದಿತ್ಯ ಹಿರಿಯ ಹೋರಾಟಗಾರ, ಸೇನಾತಂತ್ರದಲ್ಲಿ ಅಸಾಧಾರಣ ಪ್ರತಿಭಾಶಾಲಿ ಮಾತ್ರವಲ್ಲ; ದಕ್ಷ ಆಡಳಿತಗಾರ, ಕಲೆ ಸಾಹಿತ್ಯಗಳ ಪೋಷಕ ಕೂಡ. ಕಲ್ಹಣನ ಹೇಳಿಕೆಯಂತೆ ಲಲಿತಾದಿತ್ಯನ ಕೈಯಲ್ಲಿ ಸೋಲುಂಡ ಯಶೋವರ್ಮನ ಆಸ್ಥಾನಕವಿಗಳಾಗಿದ್ದ ಭವಭೂತಿ ಮತ್ತು ವಾಕ್ಪತಿರಾಜರಿಗೆ ಇವನು ಆಸರೆ ನೀಡಿದ್ದ. ಕಾಶ್ಮೀರ ವಿದೇಶೀ ವಿದ್ವಾಂಸರ ಆರಾಧನ ಮಂದಿರವಾಯಿತು. ಹಲವು ವಿದೇಶೀ ಸಾಂಸ್ಕೃತಿಕ ನಿಯೋಗಗಳು ಕಾಶ್ಮೀರದಲ್ಲಿ ಗೌರವದ ಸ್ವಾಗತ ಪಡೆದವು. ಕಾಶ್ಮೀರೀ ಶೈಲಿಯ ಚಿತ್ರಕಲೆಯನ್ನು ಲಲಿತಾದಿತ್ಯನೇ ಪ್ರಾರಂಭಿಸಿದ. ಈ ಚಿತ್ರ ಪದ್ಧತಿಯಲ್ಲಿ ಗ್ರೀಕ್, ಗಾಂಧಾರ ಮತ್ತು ದೇಸಿ (ಗುಪ್ತ) ಗುಣಗಳ ಮಿಶ್ರಣವನ್ನು ಕಾಣಬಹುದು.

ಲಲಿತಾದಿತ್ಯನ ವಿಜಯವನ್ನು ಕಾಶ್ಮೀರಿಗಳು ಶತಮಾನಗಳಕಾಲ ಸಂಭ್ರಮದಿಂದ ಆಚರಿಸಿದರು. ಕ್ಷಮ್ಯವಾದ ಅತಿಶಯೋಕ್ತಿಯಿಂದ ಅವನನ್ನು ಜಗತ್ತಿನ ದೊರೆ - ಚಕ್ರವರ್ತಿ - ಎಂದು ಕರೆದರು. ಇಷ್ಟಾದರೂ ಲಲಿತಾದಿತ್ಯನಲ್ಲಿ ಕೊರತೆಗಳು ಇದ್ದಿಲ್ಲವೆಂದಲ್ಲ. ಕಲ್ಹಣ ಅವನ್ನು ಮುಚ್ಚಿಡಲೂ ಇಲ್ಲ. ಲಲಿತಾದಿತ್ಯ ಹೆಣ್ಣು ಮತ್ತು ಹೆಂಡದ ಹುಚ್ಚನಾಗಿದ್ದ ಎನ್ನುವುದು ರಾಜತರಂಗಿಣಿಯಲ್ಲಿ ಸ್ಫುಟವಾಗಿದೆ. 36 ವರ್ಷಗಳ ಆಳಿಕೆಯ ಅನಂತರ, ಲಲಿತಾದಿತ್ಯ ಸುಮಾರು ಕ್ರಿ.ಶ. 736ರಲ್ಲಿ ತೀರಿಕೊಂಡ. ಅವನ ಉತ್ತರಾಧಿಕಾರಿಗಳು ದುರ್ಬಲರು — ಸೋಮಾರಿಗಳು ಆಗಿದ್ದರು. ಅವರು ಕರ್ಕೋಟ ರಾಜವಂಶದ ಸತ್ವ-ಘನತೆಗಳನ್ನು ಉಳಿಸಿಕೊಳ್ಳಲಾರದಾದರು.

ಜಯಾಪೀಡ (ಕ್ರಿ.ಶ. 751 - 782) ಲಲಿತಾದಿತ್ಯನ ಮೊಮ್ಮಗ, ಅವನ ಅನಂತರ ಐದನೆಯವನಾಗಿ ಪಟ್ಟಕ್ಕೆ ಬಂದವ. ಇವನು ಕಾಶ್ಮೀರದ ಕಳೆದುಹೋದ ಹಿರಿಮೆಯನ್ನು ಮರಳಿ ಗಳಿಸಲು ಸಾಕಷ್ಟು ಪ್ರಯತ್ನಿಸಿದ. 80,000 ಸಂಖ್ಯೆಯ ಬೃಹದ್‌ಗಾತ್ರದ

---

[5] ರೇ.ಎಸ್.ಸಿ; "ಅರ್ಲಿ ಹಿಸ್ಟೊರಿ ಅಂಡ್ ಕಲ್ಚರ್ ಆಫ್ ಕಾಶ್ಮೀರ್" ಪು. 49.

ಸೇನೆಯ ನೇತೃತ್ವದಲ್ಲಿ ಪ್ರಯಾಗ (ಅಲಹಾಬಾದ್), ಕಾನೋಜ ಮತ್ತು ನೇಪಾಲಕ್ಕೆ ಹೋದ ಅವನ ವಿಜಯಿ ದಂಡಯಾತ್ರೆಯನ್ನು ಕಲ್ಹಣ ವಿವರವಾಗಿ ವರ್ಣಿಸಿದ್ದಾನೆ. ಅವನ ಅದ್ಭುತ ಸಾಹಸ ಪ್ರವೃತ್ತಿ ಅವನನ್ನು ಬಂಗಾಲಕ್ಕೂ ಕೊಂಡೊಯ್ದಿತ್ತು. ಅಲ್ಲಿ ಅವನು ಜಯಂತನೆಂಬ ಒಬ್ಬ ರಾಜನ ಮಗಳನ್ನು ಮದುವೆಯಾದ. ಲಲಿತಾದಿತ್ಯನಂತೆಯೆ ಜಯಾಪೀಡನೂ [6] "ಭೂ ಮಂಡಲದ ವಿಜಯಕ್ಕಾಗಿ" ಹೊರಟ. ಅವನೂ ಜಯಪುರ ಎಂಬ ಪಟ್ಟಣವನ್ನು ನಿರ್ಮಿಸಿದ. ಇದು ವೂಲಾರ್ ಸರೋವರದ ಪಕ್ಕದಲ್ಲಿದ್ದು ಈಗ ಅಂದರ್‌ಕೋಟ್ ಎಂದು ಹೆಸರಾಗಿದೆ. ಅವನ ಸುತ್ತಲೂ ವಿದ್ವಾಂಸರ ಪಡೆಯಿತ್ತು. ಅದರಲ್ಲಿ ಪ್ರಮುಖರಾದವರೆಂದರೆ ದಾಮೋದರ ಗುಪ್ತ, ಮನೋರಥ ಮತ್ತು ಶಂಖದಂತ. ಪಾಣಿನೀಯ ವ್ಯಾಕರಣದ ಪ್ರಖ್ಯಾತವಾದ ವ್ಯಾಖ್ಯಾನ 'ಕಾಶಿಕಾವೃತ್ತಿ'ಯ ಸಹಲೇಖಕನಾದ ವಾಮನ ಅವನ ಮಂತ್ರಿಗಳಲ್ಲಿ ಒಬ್ಬನಾಗಿದ್ದ. ಅವನ ದಂಡಯಾತ್ರೆಯ ಬಗೆಗೂ ಸಾಕಷ್ಟು ದಂತಕಥೆಗಳು ಬೆಳೆದುಬಂದಿವೆ.

ಅವನ ಆಳಿಕೆಯ ಕೊನೆಯ ಹಂತದಲ್ಲಿ, ಹದ್ದು ಮೀರಿದ ಮಹತ್ವಾಕಾಂಕ್ಷೆಯ ದಂಡಯಾತ್ರೆಗಳಿಂದಾಗಿ ರಾಜ್ಯದ ಬೊಕ್ಕಸ ಬರಿದಾಯಿತು. ಜಯಾಪೀಡನಿಗೆ ದುಡ್ಡಿನ ದುರಾಸೆ ತಲೆಗಡರಿತು. ಪ್ರಜೆಗಳ ಮೇಲೆ ದುಬಾರಿ ಕಂದಾಯ ಹೇರತೊಡಗಿದ. ವೂಲಾರ್ ಕೆರೆಯ ನಾಗದೇವತೆ ಸಮೀಪದ ತಾಮ್ರನಿಕ್ಷೇಪವನ್ನು ಆತನಿಗೆ ತೋರಿಸಿಕೊಟ್ಟ ಕಥೆ — ರಾಜ ತನ್ನ ಮೂಲ ಸಂಪತ್ತನ್ನು ಪುನಃ ಕೂಡಿಹಾಕಲು ಬಯಸಿ ನೆಡಸಿದ ಪ್ರಯತ್ನಗಳನ್ನೆ ಸ್ಪುಟಪಡಿಸುತ್ತದೆ. ಸೈನಿಕರ ಸಂಬಳ ಸಾಲವಾಗಿ ಬಾಕಿ ಉಳಿದಿತ್ತು. ಆಡಳಿತ ಅಸ್ತವ್ಯಸ್ತವಾಗಿತ್ತು. ಆರ್ಥಿಕ ಸಲಹೆಗಾರನಾದ ಶಿವದಾಸನ ನೆರವಿನಿಂದ, ಮುಂದಿನ ಮೂರು ವರ್ಷಗಳ ಕಾಲ ಬೇಸಾಯದ ಪೂರ್ಣ ಉತ್ಪನ್ನವನ್ನು ಕೃಷಿಕನ ಪಾಲನ್ನೂ ಸೇರಿ, ತನ್ನ ಸ್ವಾಧೀನ ಪಡಿಸಿಕೊಂಡ. ವಿಶೇಷತಃ ಬ್ರಾಹ್ಮಣರು ಅವನ ಪೀಡೆಗೆ ಬಲಿಯಾದರು. ಪರಿಣಾಮವಾಗಿ ಅವರು ದೊಡ್ಡ ಪ್ರಮಾಣದಲ್ಲಿ ದೇಶಾಂತರಕ್ಕೆ ವಲಸೆ ಹೋದರು. ಅವನ ಹೃದಯದ ಪರಿವರ್ತನೆಗಾಗಿ, ಅವನ ವರ್ತನೆಯಲ್ಲಿ ಬದಲಾವಣೆಗಾಗಿ ಕೆಲ ಬ್ರಾಹ್ಮಣರು ಆಮರಣ ಉಪವಾಸ (ಪ್ರಾಯೋಪವೇಶ)ದ ಸತ್ಯಾಗ್ರಹವನ್ನು ಮಾಡಿದರು. ಇದು ಅಹಿಂಸೆಯ ವಿಧಾನದ ರಾಜಕೀಯ ಹೋರಾಟಕ್ಕೆ ಭಾರತದಲ್ಲಿ ಅತ್ಯಂತ ಪ್ರಾಚೀನ ನಿದರ್ಶನಗಳಲ್ಲಿ ಒಂದು. ಇಂಥ ಒಂದು ಘಟನೆಯಲ್ಲಿ ತಾಳ್ಮೆಗೆಟ್ಟ ಬ್ರಾಹ್ಮಣರ ಕೋಪ ತಂದ ಅಪಘಾತ, ಅದರ ಪರಿಣಾಮವಾಗಿ ಮಣಿಯದ ರಾಜನ ಸಾವು — ಇವುಗಳನ್ನು ಕಲ್ಹಣ ತುಂಬ ಪ್ರಭಾವಿಯಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ. ಈ ಘಟನೆಯನ್ನು ವಿವರಿಸುವ ಕೆಲವು ಪದ್ಯಗಳನ್ನು "ಕಲ್ಹಣನ ಕಥನ ಕಲೆ" ಪರಿಚ್ಛೇದದಲ್ಲಿ (ಪು. 64 - 65) ಕೊಡಲಾಗಿದೆ.

---

[6] ಜಯಾಪೀಡ — ವಿನಯಾದಿತ್ಯನ ಹೆಸರು ಹೊತ್ತ, ಕರ್ಕೋಟರಾಜವಂಶೀಯರ ಬಿರಕಿ ಲೋಹದ ಹಲವು ನಾಣ್ಯಗಳು ದೊರಕಿವೆ. ಆದರೆ ಚರಿತ್ರಕಾರ ಕಲ್ಹಣ ವಿವರಿಸಿದಂತೆ ಅವನ ವಿಸ್ತಾರವಾದ ವಿಜಯಯಾತ್ರೆಗಳ ಬಗ್ಗೆ ಸಮಕಾಲೀನವಾದ ಪುರಾವೆಗಳೇನೂ ಅಲ್ಲಿ ದೊರೆತಿಲ್ಲ.

ಜಯಾಪೀಡನ ಮಗ ಲಲಿತಾಪೀಡ. ಅವನು ಹೆಣ್ಣು — ಕುಡಿತದ ಚಟಕ್ಕೆ ಬಲಿಯಾಗಿ ರಾಜ್ಯದ ಕರ್ತವ್ಯವನ್ನು ಅಲಕ್ಷಿಸಿದ. ಕಲ್ಹಣನ ಮಾತಿನಲ್ಲಿ ಹೇಳುವುದಾದರೆ, ಆ ರಾಜ್ಯ "ಅನೈತಿಕತೆಯಿಂದ ಹೊಲೆಗೆಟ್ಟಿತು." (ದುರ್ನಯದೂಷಿತಮ್). ಲಲಿತಾಪೀಡನ ಅನಂತರ ಅವನ ಸೋದರ ಇಮ್ಮಡಿ ಸಂಗ್ರಾಮಪೀಡ ಸಿಂಹಾಸನದ ಉತ್ತರಾಧಿಕಾರಿಯಾದ. ಅವನ 7 ವರ್ಷಗಳ ಆಳಿಕೆಯೂ ಅವ್ಯವಸ್ಥೆಯಲ್ಲೆ ಸಾಗಿತ್ತು. ಅವನ ಅನಂತರ ಸಿಂಹಾಸನ ಆಕ್ರಮಣಕಾರರ ದಬ್ಬಾಳಿಕೆಗೆ ಒಳಗಾಯಿತು. ಹೋರಾಟ ಮುಂದುವರಿಯಿತು. ಮೇಲಾಟಗಾರರ ಕೈಗೊಂಬೆಗಳು ಪಟ್ಟವನ್ನೇರಿದರು.

ಕರ್ಕೋಟ ರಾಜ್ಯದ ವೈಭವದ ಉಚ್ಛ್ರಾಯ ಕಾಲವೆಂದರೆ ಲಲಿತಾದಿತ್ಯನ ಯಶಸ್ವೀ ಆಡಳಿತದ ಕಾಲವೆ. ಆಗ ಕಾಶ್ಮೀರ ಒಂದು ಪುಟ್ಟ ರಾಜ್ಯದ ಮಟ್ಟದಿಂದ ಬೃಹದ್‌ಗಾತ್ರದ ಸಾಮ್ರಾಜ್ಯವಾಗಿ ಬೆಳೆದು ನಿಂತಿತ್ತು. ಏನಿದ್ದರೂ, ಒಟ್ಟಂದದಲ್ಲಿ, ಕರ್ಕೋಟರ ಆಡಳಿತದ ಕಾಲ ಕಾಶ್ಮೀರದ ಇತಿಹಾಸದಲ್ಲಿಯೆ ಅತ್ಯಂತ ವೈಭವದ ಅವಧಿ ಎಂದು ಪರಿಗಣಿಸಲ್ಪಡಬೇಕು. ಕರ್ಕೋಟ ವಂಶದ ಪೂರ್ವರಾಜರ ದಂಡಯಾತ್ರೆಗಳ ಬಗ್ಗೆ ಕಲ್ಹಣನ ಹೇಳಿಕೆ ಅತಿಶಯೋಕ್ತಿ ಎನಿಸಿದರೂ ಪಕ್ಕದ ಪ್ರಾಂತಗಳನ್ನು ಅವರು ತಮ್ಮ ಆಡಳಿತಕ್ಕೆ ಸೇರಿಸಿದ್ದಾಗಲಿ, ಉತ್ತರ ಭಾರತದ ಅನೇಕ ಪ್ರಾಂತಗಳನ್ನು ಗಣನೀಯವಾಗಿ ಗೆದ್ದು ಸ್ವಾಧೀನ ಪಡಿಸಿಕೊಂಡದ್ದಾಗಲಿ ವಿವಾದಾತೀತವಾದ ಸಂಗತಿ. ಈ ಖ್ಯಾತವಂಶದ ಆಡಳಿತ ಇಮ್ಮಡಿ ಸಂಗ್ರಾಮಪೀಡನ ಮಗ ಅನಂಗಾಪೀಡ ಪಟ್ಟವನ್ನೇರಿದ ಕಾಲದಲ್ಲಿ ಸಂಪೂರ್ಣ ನಿಸ್ಸತ್ವವಾಗಿ ಅವ್ಯವಸ್ಥೆಯಿಂದ ಬಳಲಿತ್ತು. ಒಳಸಂಚುಗಳ ಫಲವಾಗಿ ಉತ್ಪಲಾಪೀಡ ಅವನನ್ನು ಸ್ಥಾನಭ್ರಷ್ಟಗೊಳಿಸಿದ. ಕರ್ಕೋಟರ ವೈಭವ ಕುಂದತೊಡಗಿತ್ತು. ಕಾಶ್ಮೀರದ ಅರಸರು ಭಾರತೀಯ ಇತಿಹಾಸದಲ್ಲಿ ಇಷ್ಟರಲ್ಲೆ ಹಿನ್ನೆಲೆಗೆ ಸರಿದಾಗಿತ್ತು.

ಚುರುಕು ಬುದ್ಧಿಯ ಶೂರನೆಂಬ ಮಂತ್ರಿ ಉತ್ಪಲಾಪೀಡನನ್ನು ಸಿಂಹಾಸನದಿಂದ ಇಳಿಸಿ ಉತ್ಪಲಕನ ಮೊಮ್ಮಗ ಅವಂತಿವರ್ಮನನ್ನು ಗದ್ದುಗೆಯಲ್ಲಿ ಕೂಡಿಸಿದ. ಅವಂತಿವರ್ಮನ ಪ್ರವೇಶದಿಂದ (ಕ್ರಿ.ಶ. 855/6-883) ಕಾಶ್ಮೀರದ ಇತಿಹಾಸದಲ್ಲಿ ಒಂದು ಹೊಸ ಮಜಲು ಪ್ರಾರಂಭವಾಯಿತು. ಇಲ್ಲಿಂದ ಮುಂದೆ ಕಲ್ಹಣ ಯಥಾವತ್ತಾದ ಐತಿಹಾಸಿಕ ಚಿತ್ರವನ್ನು ದಾಖಲು ಮಾಡಿದ್ದಾನೆ. ಅವಂತಿವರ್ಮ ತಾನೇ ನಿರ್ಮಿಸಿದ ನಗರ ಅವಂತಿಪುರದಲ್ಲಿ ಕಟ್ಟಿಸಿದ ಎರಡು ದೇವಾಲಯಗಳ (ಅವಂತೀಶ್ವರ ಮತ್ತು ಅವಂತಿಸ್ವಾಮಿ) ಭಗ್ನಾವಶೇಷಗಳಿಂದ ಅವನ ನೆನಪು ಈಗಲೂ ಹಸಿರಾಗಿ ಉಳಿದಿದೆ. ಈ ದೇವಾಲಯಗಳು "ಲಲಿತಾದಿತ್ಯ ಕಟ್ಟಿಸಿದ ದೇವಾಲಯಗಳ ಗಾತ್ರಕ್ಕೆ ಸಾಟಿಯಲ್ಲದಿದ್ದರೂ ಕಾಶ್ಮೀರದ ಪ್ರಾಚೀನ ವಾಸ್ತುಶಿಲ್ಪದ ಅತ್ಯಂತ ಪ್ರಭಾವೀ ಸ್ಮಾರಕಗಳಲ್ಲಿ ಪ್ರಮುಖಸ್ಥಾನ ಪಡೆಯುತ್ತವೆ." ಅವನ ಮಂತ್ರಿ ಶೂರ, ಅವಂತಿವರ್ಮನನ್ನು ಪೀಠಕ್ಕೇರಿಸುವಲ್ಲಿ ವಹಿಸಿದ ಪಾತ್ರದಿಂದಾಗಿ ರಾಜ್ಯತಂತ್ರದಲ್ಲಿ ಹೆಚ್ಚಿನ ಪ್ರಭಾವವುಳ್ಳವನಾಗಿದ್ದ. ಹಿರಿಯ ಸಂಸ್ಥೆಗಳನ್ನು ಕಟ್ಟಿಸುವಲ್ಲಿ, ಧರ್ಮನಿಷ್ಠೆಯಲ್ಲಿ ಶೂರ ರಾಜನ ಜತೆ ಸ್ಪರ್ಧೆ

ಯನ್ನೆ ನಡೆಸಿದ್ದ; ಅವನು ರಾಜನ ಆಸ್ಥಾನದಲ್ಲಿ ಗೌರವದ ಮಣೆಯನ್ನೀಯುವ ಮೂಲಕ ವಿದ್ವಾಂಸರನ್ನು ಗೌರವಿಸಿದನು. ರಾಜಾಶ್ರಯ ಪಡೆದ ವಿದ್ವಾಂಸರಲ್ಲಿ ಪ್ರಮುಖರು - ಪ್ರಖ್ಯಾತನಾದ ಮುಕ್ತಾಕರ, ಕವಿಗಳಾದ ಶಿವಸ್ವಾಮಿ ಮತ್ತು ರತ್ನಾಕರ, ಮತ್ತು ವಿಶ್ವತೋಮುಖ ಪ್ರತಿಭೆಯ ತತ್ವಜ್ಞಾನಿ ಭಟ್ಟಕಲ್ಲಟ.

ಧನ್ವನ ನೇತೃತ್ವದಲ್ಲಿ ಡಾಮರರು ದೇವಾಲಯದ ಸೊತ್ತುಗಳನ್ನೆಲ್ಲ ಅಪಹರಿಸಿದಾಗ, ಶೂರ ದೃಢವಾಗಿ ಅದನ್ನು ದಮನಿಸಿದ. ಇದೊಂದು ಕಿರುಕುಳದ ಘಟನೆ ಬಿಟ್ಟರೆ ಮೊತ್ತದಲ್ಲಿ ಅವಂತಿವರ್ಮನ ಆಡಳಿತ ಶಾಂತವಾಗಿತ್ತು. ದೇಶದ ಆರ್ಥಿಕ ಸ್ಥಿತಿಯ ಪುನಾರಚನೆಗೆ ರಾಜ ಪ್ರಾಶಸ್ತ್ಯ ನೀಡಿದ್ದ. ಆಗಾಗ್ಗೆ ಕಣಿವೆಯ ಬದುಕನ್ನು ಬುಡಮೇಲು ಮಾಡುತ್ತಿದ್ದ ನೆರೆ ಮತ್ತು ಬರಗಾಲವನ್ನು ಪೂರ್ಣವಾಗಿ ನಿರ್ಮೂಲಮಾಡಲು ಬಯಸಿದ್ದ. ಅವನ ಇನ್ನೊಬ್ಬ ದಕ್ಷಮಂತ್ರಿ ಸುಯ್ಯನಿಗೆ ಈ ಕೆಲಸವನ್ನು ಒಪ್ಪಿಸಿದ್ದ. ಒಬ್ಬ ಖ್ಯಾತ ತಂತ್ರಜ್ಞ (ಎಂಜಿನಿಯರ್) ಆಗಿದ್ದ ಸುಯ್ಯ ಹಲವಾರು ನದೀಯೋಜನೆಗಳನ್ನು ಕಾರ್ಯರೂಪಕ್ಕೆ ತಂದ. ಕಣಿವೆಯ ನೀರನ್ನು ಹೊರಹಾಯಿಸುವ ಚರಂಡಿಗಳು ನಿರ್ಮಾಣಗೊಂಡವು. ವಿಸ್ತಾರವಾದ ಭೂಭಾಕ್ಕೆ ನೀರಾವರಿ ಒದಗಿಸುವ ಕಲುವಾಗಿ ಬಾರಾಮೂಲದ ಕೆಳಗಡೆ ವಿತಸ್ತಾ (ಝೀಲಂ) ನದಿಯ ಹರಿವಿನ ಪಥವನ್ನೇ ಬದಲಿಸಲಾಯಿತು. ಇದರ ಪರಿಣಾಮವಾಗಿ ನಾಡು ವಿನಾಶಕವಾದ ನೆರೆಯ ಪೀಡೆಯಿಂದ ಪಾರಾಯಿತು. ಜನರಿಗೆ ತುಂಬ ಅನುಕೂಲವಾಯಿತು. ಇದರ ಜತೆಗೆಯೆ ಸುಯ್ಯ ಇಷ್ಟೇ ಮುಖ್ಯವಾದ ಇನ್ನೊಂದು ಕಾರ್ಯ — ನೀರಾವರಿ ಪದ್ಧತಿಯನ್ನು ಅಭಿವೃದ್ಧಿಗೊಳಿಸುವ ಮೂಲಕ — ಮಾಡಿದ. ಕಶ್ಮೀರದ ಪ್ರಧಾನ ಆಹಾರವಾದ ಅಕ್ಕಿಯ ಬೆಳೆಗೆ ಇದೊಂದು ವರದಾನವಾಯಿತು. ಝೀಲಂ ನದಿಯ ತಡಿಯಲ್ಲಿ ನಿರ್ಮಾಣಗೊಂಡ ಸುಯ್ಯಾಪುರ — ಈಗಣ ಸೋಪೋರ್ — ಸುಯ್ಯನ ಹೆಸರನ್ನು ಇಂದಿಗೂ ಹಸಿರಾಗಿ ಉಳಿಸಿದೆ.

ತ್ರಿಪುರೇಶ್ವರ (ಈಗಣ ತ್ರಿಫಾರ್)ದ ಬೆಟ್ಟದ ಮೇಲೆ ಅವಂತಿವರ್ಮ ಸಾವುಕಂಡ ಬಗೆ ಅವನ ಬದುಕಿನ ಒಂದು ವಿಶಿಷ್ಟ ಘಟನೆ. ಅಂತತಃ ಆತ ವೈಷ್ಣವನಾಗಿದ್ದ. ಆದರೆ ಮಂತ್ರಿಯ ಮೇಲಣ ಗೌರವದಿಂದ ಹೊರನೋಟಕ್ಕೆ ಶೈವರಂತೆಯೆ ನಡೆದುಕೊಂಡ. ಈ ರಹಸ್ಯವನ್ನು ಅವನು ತನ್ನ ಮೃತ್ಯುಶಯ್ಯೆಯಲ್ಲಿ ಶೂರನಿಗೆ ಬಯಲು ಮಾಡಿದ. ಕಲ್ಹಣನ ಹೇಳಿಕೆಯಂತೆ (V, 125) "ಕೊನೆಯಲ್ಲಿ ಭಗವದ್ಗೀತೆಯನ್ನು ಆಲಿಸುತ್ತ,[7] ವಿಷ್ಣುವಿನ ತೇಜೋಮಯ ಮೂರ್ತಿಯನ್ನು ಧ್ಯಾನಿಸುತ್ತ ಆತ ಭಗವಂತನಲ್ಲೆ ಬಗೆ ನೆಟ್ಟು ದೇಹ ತೊರೆದ."

ಅವಂತಿವರ್ಮನ ಆಡಳಿತದಲ್ಲಿ ಪ್ರಾಂತೀಯ ದಿಗ್ವಿಜಯಗಳ ಥಳಕು ಇರದಿದ್ದರೂ ಆತ ಒಬ್ಬ ಸಮರ್ಥ ದೊರೆ ಮತ್ತು ಆಡಳಿತಗಾರ ಎನ್ನುವುದನ್ನು ಸಿದ್ಧಪಡಿಸಿ

---

[7] ಭಗವದ್ಗೀತೆಯನ್ನು ಧಾರ್ಮಿಕ ವಿಧಿಗೆ ಬಳಸಿದ ದಾಖಲೆಗೊಂಡ ಇತಿಹಾಸಗಳಲ್ಲಿ ಇದು ಮೊದಲನೆಯ ಘಟನೆ ಎಂದು ಅಭಿಪ್ರಾಯಪಡಲಾಗಿದೆ.

ದ್ದಾನೆ. ಉತ್ಪಲವಂಶದ ಕೀರ್ತಿವೈಭವಗಳು ಅವನಿಂದಲೆ ನೆಲೆಗೊಂಡವು.

ಅವಂತಿವರ್ಮನ ಮಗ ಶಂಕರವರ್ಮ (ಕ್ರಿ.ಶ. 883 - 902) ಅವನ ಉತ್ತರಾಧಿಕಾರಿಯಾದ. ಶಂಕರವರ್ಮನಿಂದ ಮುಂದಿನ ರಾಜಪರಂಪರೆಯ ಆಡಳಿತಕ್ಕೆ ಸಾಕ್ಷಿ ನುಡಿಯುವ ನಾಣ್ಯಗಳ ಅವಿಚ್ಛಿನ್ನ ಪರಂಪರೆ ಈ ಕೃತಿಯ ಐತಿಹಾಸಿಕ ಮೌಲ್ಯವನ್ನು ಹೆಚ್ಚಿಸಿದೆ. ದಿಗ್ವಿಜಯದಲ್ಲೆ ಪ್ರವರಸೇನ, ಲಲಿತಾದಿತ್ಯ ಮತ್ತು ಜಯಾಪೀಡನ ದಾರಿಯನ್ನೆ ತುಳಿದ ಶಂಕರವರ್ಮ ಬೃಹತ್‌ಸೇನೆಯ (ಕಲ್ಹಣ ನೀಡಿದ ಸಂಖ್ಯೆ, 9 ಲಕ್ಷ ಅತ್ಯುಕ್ತಿಯಂತೆ ಕಾಣುತ್ತದೆ) ಮುಂಚೂಣಿಯಲ್ಲಿ ತಾನೇ ಮುಂದಾಳಾಗಿ ವಿಜಯಯಾತ್ರೆ ನಡೆಸಿದ; ಅವನ ಸಾಮಂತರೂ ತಮ್ಮ ಸೇನೆಗಳೊಡನೆ ಅವನ ಜತೆ ಸೇರಿದ್ದರಿಂದ ಅವನ ಸೇನೆಯ ಸಂಖ್ಯೆ ಬೃಹತ್ತಾಗಿ ಬೀಗಿತ್ತು. ಕರ್ಕೋಟವಂಶೀಯ ಆಡಳಿತದ ಕೊನೆಯ ದಿನಗಳಲ್ಲಿ ಕೈತಪ್ಪಿ ಹೋಗಿದ್ದ ಕಾಶ್ಮೀರದ ದಕ್ಷಿಣ ಭಾಗದ ಪರ್ವತೀಯ ಪ್ರದೇಶಗಳನ್ನು ಅವನು ಗೆದ್ದು ಮರಳಿ ಸ್ವಾಧೀನಪಡಿಸಿಕೊಂಡ. ಗುರ್ಜರದ ದೊರೆ ಅಲಖಾನನ ವಿರುದ್ಧ (ಝೀಲಂ ಮತ್ತು ಜೀನಾಬ್ ನದಿಗಳ ನಡುವಣ) ಪಂಜಾಬದಲ್ಲಿ ಅವನು ಸಾಧಿಸಿದ ವಿಜಯ ಅವನ ವಿಜಯಮಾಲಿಕೆಗಳಲ್ಲೆ ಮಹತ್ವದ್ದು. ಆ ಮೂಲಕ ಅವನು ತನ್ನ ಆಧಿಪತ್ಯವನ್ನು ಆ ದಿಕ್ಕಿನೆಡೆಗೂ ವಿಸ್ತರಿಸಿದ.

ಸಿಂಧು ಕಣಿವೆಯಲ್ಲಿ ಅವನ ವಿಜಯಯಾತ್ರೆ ನಡೆದಾಗ ಬಹಳಷ್ಟು ರಾಜರು ಅವನಿಗೆ ಶರಣಾಗಿ ಗೌರವ ಸಲ್ಲಿಸಿದರೂ ಅಲ್ಲಿಂದ ಮರುಳುವಾಗ ಉರಶಾ (ಈಗಣ ಹಝರಾ ಜಿಲ್ಲೆ) ದಲ್ಲಿ ಆಕಸ್ಮಿಕವಾಗಿ ಬಾಣವೊಂದು ತಗಲಿ ತೀವ್ರ ಗಾಯಗೊಂಡ. ಶಂಕರವರ್ಮನ ವಿಜಯ ಕಾಶ್ಮೀರದ ಗಡಿನಾಡುಗಳಿಗೆ ಮಾತ್ರ ಸೀಮಿತವಾಗಿದ್ದರೂ ಅದರ ವೆಚ್ಚಕ್ಕಾಗಿ ಅರಮನೆಯ ಬೊಕ್ಕಸವೆಲ್ಲ ಬರಿದಾಗಿತ್ತು. ಪರಿಣಾಮವಾಗಿ ಶಂಕರವರ್ಮ " ಬುದ್ಧಿವಂತಿಕೆಯಿಂದ ಅಧಿಕಕರವನ್ನು ಹೇರುವ ಮೂಲಕ" ಪ್ರಜೆಗಳನ್ನು ಸುಲಿದು ದಮನ ಮಾಡಿದ. ಒಂದು ವ್ಯವಸ್ಥಿತ ನೆಲೆಯಲ್ಲಿ "ಬೇಗಾರ್" [8] (ಮುಖ್ಯವಾಗಿ ಸಾಗಾಟ ವ್ಯವಸ್ಥೆಯಲ್ಲಿ ವಿಧಿಸಲಾದ ಬಲವಂತ ಜೀತ) ಪದ್ಧತಿಯನ್ನು ಅನುಷ್ಠಾನಕ್ಕೆ ತಂದವನೆಂದು ಶಂಕರವರ್ಮನನ್ನು ನೆನಪಿಸಲಾಗುತ್ತಿದೆ. ಸಮಾಜವನ್ನು ದೋಚಿ ಸುಲಿಗೆ ಮಾಡುವ ಅಧಿಕಾರಿ (ಕಾಯಸ್ಥ)ಗಳಿಗೆ ಮಾತ್ರವೆ ಅನುಕೂಲವಾದ ಮತ್ತು "ಬುದ್ಧಿಜೀವಿಗಳನ್ನು ಆದಾಯವಿಲ್ಲದೆ ಅತಂತ್ರರನ್ನಾಗಿ ಮಾಡಿದ" ಇವನ ಈ ಆಡಳಿತದ ದುರಂತಗಳನ್ನು ಕಲ್ಹಣ ಕಟುವಾಗಿಯೆ ವಿವರಿಸಿದ್ದಾನೆ.

ಶಂಕರವರ್ಮನ ಆಡಳಿತದ ಅನಂತರ ಉತ್ತರಾಧಿಕಾರಕ್ಕಾಗಿ ನಡೆದ ಜಿದ್ದಾಟಗಳ ಪರಿಣಾಮವಾಗಿ ಜನಜೀವನದ ಒದ್ದಾಟಗಳು ಹೆಚ್ಚಿದವು. ಗೋಪಾಲವರ್ಮ (ಕ್ರಿ.ಶ. 902 - 904) ಇನ್ನೂ ಹದಿವರೆಯದಲ್ಲಿದ್ದಾಗಲೆ ಪಟ್ಟವನ್ನೇರಿದ. ಅವನ ತಾಯಿ

---

[8] ಈ "ಬೇಗಾರ್" ಕಾಶ್ಮೀರಿ ಆಡಳಿತದ ಒಂದು ವಿಶಿಷ್ಟ ಪದ್ಧತಿಯಾಗಿ ಈ ಶತಮಾನದ ಆದಿಯ ತನಕವೂ ನಡೆದುಕೊಂಡು ಬಂದಿತ್ತು.

ಸುಗಂಧಾ ತಾನೆ ರಾಜಪ್ರತಿನಿಧಿಯಾಗಿ ರಾಜಕಾರ್ಯದ ಹೊಣೆ ಹೊತ್ತಳು. ಹದಿವರೆಯದ ರಾಜ ಒಬ್ಬ ಮಂತ್ರಿಯ ಕೃತ್ರಿಮಕ್ಕೆ ಬಲಿಯಾಗಿ ಸತ್ತ. ಕ್ರಿ.ಶ. 904ರಲ್ಲಿ ಸುಗಂಧಾ ತಾನೆ ಪಟ್ಟವನ್ನೇರಿದಳು. ಆಕೆಯ ಅನೈತಿಕ ಜೀವನದಿಂದ ಹೇಸಿಗೆ ಪಟ್ಟ ಸೇನಾವರ್ಗದ "ತಂತ್ರಿಗಳು" 2 ವರ್ಷದ ಸೀಮಿತ ಅವಧಿಯಲ್ಲೆ ಆಕೆಯನ್ನು ಪಟ್ಟದಿಂದ ಇಳಿಸಿದರು. ಆಕೆ ನಿರ್ಮಿಸಿದ ಸುಗಂಧಾಪುರವೊಂದು ಆಕೆಯ ಸ್ಮಾರಕವಾಗಿ ಉಳಿದಿದೆ.

ಯಾವ ಮೂಲದವರೆಂದು ಸ್ಫುಟವಾಗದ, ಸೈನಿಕವರ್ಗಕ್ಕೆ ಸೇರಿದ ಈ ತಂತ್ರಿಗಳು ಕಾಶ್ಮೀರದ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಂಡರು. ವಾಸ್ತವವಾಗಿ ಹತ್ತನೆಯ ಶತಕದ ಮೊದಲ 25 ವರ್ಷಗಳ ಕಾಲ ಕಾಶ್ಮೀರ ಸೇನಾಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ. 917 - 18ರಲ್ಲಿ ನೆರೆಯಿಂದ ಕಾರ್ತಿಯ ಅಕ್ಕಿಯ ಬೆಳೆ ಪೂರ್ತಿ ಕೊಚ್ಚಿಹೋದಾಗ ಕಾಶ್ಮೀರ ಭೀಕರವಾದ ಕ್ಷಾಮಕ್ಕೆ ಬಲಿಯಾಯಿತು. ಮನುಷ್ಯನಿರ್ಮಿತ ಪ್ರಜಾದಮನಕ್ಕೆ ಈ ಪ್ರಕೃತಿಪ್ರಕೋಪವೂ ಜತೆಗೂಡಿ ಜನರ ಬದುಕು ದುರ್ಭರವಾಯಿತು. "ತಂತ್ರಿ"ಗಳು, ಇನ್ನೊಂದು ಜಗಳಗಂಟ ಸೇನಾವರ್ಗವಾದ 'ಏಕಾಂಗ'ರ ಜತೆಗೆ ಖುಶಿ ಕಂಡಂತೆ ರಾಜರನ್ನು ಪೀಠಕ್ಕೇರಿಸಿದರು; ಪೀಠದಿಂದ ಇಳಿಸಿದರು. ರಾಜಾಸ್ಥಾನ ನೀತಿಭ್ರಷ್ಟವಾಗಿ ಲಂಚಕೋರರ, ಪುಂಡಪೋಕರಿಗಳ ಸೂಳೆಗೇರಿಯಾಯಿತು. ಕೊನೆಗೆ ಚಕ್ರವರ್ಮ ತಂತ್ರಿಗಳನ್ನು ಸೋಲಿಸಿ ಮೂರನೆಯ ಬಾರಿ ರಾಜ್ಯವನ್ನು ಮರಳಿಪಡೆದ. ಅವನು ಕೆಳಜಾತಿಯ ಡೊಂಬರ ಹುಡುಗಿ ಹಂಸಿಯನ್ನು ಮದುವೆಯಾಗಿ ಆಕೆಯನ್ನು ಪಟ್ಟದ ರಾಣಿಯೆಂದು ಸಾರಿದ. ಸ್ವೇಚ್ಛಾಚಾರದಲ್ಲಿ ಅವನ ಆಸ್ಥಾನದ ಮಂದಿ ಅವನನ್ನು ಮೀರಿಸಿದರು. ಮೊದಲು ಅವನು ಪಟ್ಟವನ್ನೇರಲು ಸಹಾಯ ಮಾಡಿದ್ದ ಡಾಮರರೆ ಇದರಿಂದ ಬೇಸತ್ತು ಹಂಸಿಯ ಅಂತಃಪುರದಲ್ಲಿ ಅವನನ್ನು ಕೊಲೆಮಾಡಿದರು (ಕ್ರಿ.ಶ. 937).

ಅನಂತರದ ರಾಜ ಉನ್ಮತ್ತಾವಂತಿ; ಅಥವಾ 'ಹುಚ್ಚ ಅವಂತಿ'. ನೀತಿಭ್ರಷ್ಟತೆಯಲ್ಲಿ, ದಬ್ಬಾಳಿಕೆಯಲ್ಲಿ ಇವನೂ ಕಮ್ಮಿಯವನಾಗಿರಲಿಲ್ಲ. ತನ್ನ ಮಲಸೋದರರನನ್ನು ಉಪವಾಸಹಾಕಿ ಕೊಂದ. ತನ್ನ ತಂದೆ ಪಾರ್ಥನನ್ನು ನಿರ್ಭಯವಾಗಿ ಕೊಚ್ಚಿ ಕೊಲ್ಲಿಸಿದ. ಮುದುಕನಾದ ಪಾರ್ಥನನ್ನು ಅಳುತ್ತಿರುವ ಹೆಂಡತಿಯ ಕೈಯಿಂದ ಸೆಳೆದು, ಕೂದಲು ಹಿಡಿದು ಬೀದಿಯಲ್ಲಿ ಎಳೆದೊಯ್ಯಲಾಯಿತು. ಕಲ್ಹಣನ ಮಾತಿನಲ್ಲೆ ಹೇಳುವುದಾದರೆ (V. 432 - 34), "ನಿರಾಯುಧನಾದ, ಉಪವಾಸದಿಂದ ಕೃಶನಾಗಿ ಅಳುತ್ತಿರುವ, ತೊಡಲು ಬಟ್ಟೆಯೂ ಇಲ್ಲದೆ ಬತ್ತಲೆಯಾಗಿದ್ದ ಅವನನ್ನು ಅವರು ಕೊಂದರು." ಪಾರ್ಥನ ಹೆಣದ ಮೇಲೆ ಚೂರಿಯಿರಿದ ಒಬ್ಬ ಅಧಿಕಾರಿಯನ್ನು ಕಂಡು 'ಹುಚ್ಚ' ಅವಂತಿ ಖುಶಿಯಿಂದ ನಕ್ಕ. 2 ವರ್ಷಗಳ ಗೊಂದಲಮಯ ಆಡಳಿತದ ಅನಂತರ ಉನ್ಮತ್ತಾವಂತಿ ಕ್ರಿ.ಶ. 939 ರಲ್ಲಿ ಕ್ಷಯ ಹಿಡಿದು ಸತ್ತ.

'ಹುಚ್ಚ ಅವಂತಿ'ಯ ಪುಟ್ಟಮಗು ಉತ್ತರಾಧಿಕಾರಿಯಾಗುವುದನ್ನು ವಿರೋಧಿಸಿ ಸೇನಾಪತಿ ಕಮಲವರ್ಧನ ದಂಗೆಯೆದ್ದ ಪರಿಣಾಮವಾಗಿ, ಬ್ರಾಹ್ಮಣರ ಪರಿಷತ್ತು ಯಶ

ಸ್ಕರ ಎಂಬ ದಟ್ಟ ದರಿದ್ರನಾಗಿದ್ದ — ಆದರೆ ದೊಡ್ಡ ವಿದ್ವಾಂಸನಾಗಿದ್ದ — ವ್ಯಕ್ತಿಯೊಬ್ಬನ್ನು ಸಿಂಹಾಸನಕ್ಕೆ ಅರಿಸಿತು. ಯಶಸ್ಕರನ ಧರ್ಮಶೀಲವಾದ ಆಡಳಿತ (ಕ್ರಿ.ಶ. 939 -948) ಹಲವು ವರ್ಷಗಳ ಸಂಕಟಮಯ ಜೀವನದ ಅನಂತರ ಕಾಶ್ಮೀರಕ್ಕೆ ಬಂದು ವರಪ್ರಸಾದವಾಯಿತು. ಅವನು ವಿತಸ್ತಾ (ಝೀಲಂ) ನದಿಯ ತಡಿಯಲ್ಲಿ ವಿದ್ವಾಂಸರಾದ ವಿಪ್ರರಿಗೆ 55 ಗ್ರಾಮಗಳನ್ನು ಅಗ್ರಹಾರವಾಗಿ ನೀಡಿದನು, ಪರಿಹಾಸಪುರದಲ್ಲಿ, ಅವನ ಹಿರಿಯರ ಮನೆಯಿದ್ದ ಜಾಗದಲ್ಲಿ ಆರ್ಯದೇಶ (ಉತ್ತರಭಾರತ)ದ ವಿದ್ಯಾರ್ಥಿಗಳಿಗಾಗಿ ಒಂದು 'ಮಠ' (ವಿದ್ಯಾರ್ಥಿನಿಲಯ) ಕಟ್ಟಿಸಿದನು. ಯಶಸ್ಕರನ ಮರಣದ ಅನಂತರ, ಕ್ರಿ.ಶ. 948ರಲ್ಲಿ, ಅವನ ಚಿಕ್ಕವಯಸ್ಸಿನ ಮಗ ರಾಜನಾದ. ಆದರೆ ಮಂತ್ರಿ ಪ್ರವರಗುಪ್ತ ಕ್ರಿ.ಶ. 949 ರಲ್ಲಿ ಆ ಮಗುವನ್ನು ಕೊಲ್ಲಿಸಿ ತಾನೇ ಸಿಂಹಾಸನವನ್ನು ಕಸಿದುಕೊಂಡ. ಕ್ರಿ.ಶ. 950ರಲ್ಲಿ ಪ್ರವರಗುಪ್ತನೂ ತೀರಿಕೊಂಡಾಗ ಅವನ ಮಗ ಕ್ಷೇಮಗುಪ್ತ ರಾಜ್ಯದ ಉತ್ತರಾಧಿಕಾರಿಯಾದ. ಇನ್ನೊಮ್ಮೆ ಕಾಶ್ಮೀರಕ್ಕೆ ಸಮಾಜವನ್ನು ದೋಚುವ ವಿಷಯ ಲಂಪಟನಾದ ದೊರೆ ದೊರಕಿದಂತಾಯಿತು. ಅವನು ಲೋಹರ ಪ್ರಮುಖನಾದ ಸಿಂಹರಾಜನ ಮಗಳು ದಿದ್ದಾಳನ್ನು ಮದುವೆಯಾದ. ಈಕೆ ತಾಯಿಯ ಕಡೆಯಿಂದ ಖ್ಯಾತನಾದ ಶಾಹಿ ಅರಸು ಭೀಮಪಾಲನ ಮೊಮ್ಮಗಳು. ಈ ಮದುವೆಯ ಪರಿಣಾಮವಾಗಿ ಕಾಶ್ಮೀರದ ಇತಿಹಾಸದ ಗತಿಯೇ ಬದಲಾಯಿತು. ಕ್ಷೇಮಗುಪ್ತ - ದಿದ್ದಾರ ಸಮಾಗಮದ ಫಲವಾಗಿ ಕಾಶ್ಮೀರ ಲೋಹರ ವಂಶೀಯರ ಪ್ರಭುತ್ವಕ್ಕೆ ಒಳಪಟ್ಟಿತು. ತನ್ನ ಸ್ವಂತದ ಮೂಲ ಪ್ರಾಂತದಂತೆಯ ಈ ವಂಶ ಕಾಶ್ಮೀರದ ಮೇಲು ತನ್ನ ಹಿಡಿತವನ್ನು ಕಲ್ಹಣನ ಕಾಲದ ತನಕ, ಅನಂತರ ಕೂಡ ಮುಂದುವರಿಸಿತು. ರಾಜ ತನ್ನ ಹೆಂಡತಿಗೆ ಮಾರುಹೋಗಿದ್ದ. ಇದು ಎಷ್ಟು ಬಹಿರಂಗವಾಗಿತ್ತೆಂದರೆ ಜನ ಅವನನ್ನು 'ದಿದ್ದಾಕ್ಷೇಮ' ಎಂಬ ಅಡ್ಡ ಹೆಸರಿನಿಂದಲೇ ಕರೆಯುತಿದ್ದರು.[9]

ಕ್ಷೇಮಗುಪ್ತನ ಮರಣದ ಅನಂತರ ಮೊದಲು ರಾಜಪ್ರತಿನಿಧಿಯಾಗಿ ಅನಂತರ ಸ್ವತಃ ರಾಣಿಯಾಗಿ ದಿದ್ದಾ ಕಾಶ್ಮೀರವನ್ನಾಳಿದಳು. ಅಧಿಕಾರದ ಮೋಹಕ್ಕೆ ಒಳಗಾದ ಆಕೆ ಕಾಶ್ಮೀರವನ್ನು 23 ವರ್ಷಗಳ ಕಾಲ ಗಡಸುತನದಿಂದ ಆಳಿದಳು. ಕಠೋರಳಾಗಿದ್ದರೂ ಯಾವುದಕ್ಕೂ ಹೇಸದ ನೀತಿಗೆಟ್ಟವಳಾಗಿದ್ದರೂ ಆಕೆಯಲ್ಲಿ ರಾಜನೀತಿಯ ಚತುರ ಚಾಣಾಕ್ಷತೆಯಿತ್ತು; ಆಡಳಿತದ ದಕ್ಷತೆಯಿತ್ತು. ಆಕೆ ಚೆಲುವು ಮತ್ತು ಚಾಣಾಕ್ಷತೆಯ ಸಂಗಮವಾಗಿದ್ದಳು ಎನ್ನಬಹುದು. ಆಕೆಯ ಪ್ರಣಯಕ್ಕೆ ಪಾತ್ರನಾಗಿದ್ದ ಮಂತ್ರಿ ತುಂಗನನ್ನು — ಅವನೇನೂ ಆಕೆಯ ಪ್ರಥಮ ಪ್ರಣಯಿಯಲ್ಲವೆನ್ನಿ — ಒದ್ದೋಡಿಸಲು ಬ್ರಾಹ್ಮಣರೆಲ್ಲ ಪ್ರಾಯೋಪವೇಶ ಮಾಡಿದರು. ಆದರೆ ಆಕೆಯ ರಾಜಕೀಯ ತಂತ್ರಗಾರಿಕೆ, ಲಂಚದ ಆಮಿಷ, ತುಂಗನ ಎದೆಗಾರಿಕೆಗಳಿಂದ ಸಮಸ್ಯೆ ಕರಗಿ ಹೋಯಿತು. ಕಾಶ್ಮೀರದ ಪ್ರಭುತ್ವವನ್ನು ಪ್ರಶ್ನಿಸಿದ್ದಕ್ಕಾಗಿ ರಾಜಪುರಿಯ ರಾಜ ಪೃಥ್ವೀಪಾಲನನ್ನು

---

[9] ಕ್ಷೇಮಗುಪ್ತನ ಕಾಲದ ಕೆಲವು ನಾಣ್ಯಗಳಲ್ಲಿ ಕಾಣಬರುವ ಅಕ್ಷರ 'ದಿ' ಈ ಸಂಗತಿಯನ್ನು ಸಮರ್ಥಿಸುತ್ತದೆ.

ತುಂಗ ಸೋಲಿಸಿದ; ಬಲವಂತವಾಗಿ ಅವನಿಂದ ಕಪ್ಪ ವಸೂಲಿ ಮಾಡಿದ. ದಿದ್ದಾಳ ಆಡಳಿತದ ಕೊನೆಯ ದಿನಗಳಲ್ಲಿ ಡಾಮರರು ಬಲಿಷ್ಠರಾದಾಗ ತುಂಗ "ಈ ಡಾಮರರ ಪೀಡೆಯ ಹುಟ್ಟನ್ನೆ ಅಡಗಿಸಿದ."

ದಿದ್ದಾ ಕ್ರಿ.ಶ. 1003ರಲ್ಲಿ ಸಾಯುವ ಮುನ್ನ, ಅವಳ ಸೋದರ, ಲೋಹರದ ಅರಸ ಉದಯರಾಜನ ಮಗ ಸಂಗ್ರಾಮರಾಜನಿಗೆ ಅರಸೊತ್ತಿಗೆಯನ್ನು ಹಸ್ತಾಂತರಿಸಿದಳು. ಹೀಗೆ ಕಾಶ್ಮೀರದ ಆಡಳಿತ ಶಾಂತವಾಗಿಯೆ ಹೊಸ ರಾಜವಂಶದ ಕೈಸೇರಿತು.

ಲೋಹರವಂಶದ ಹೊಸ ಅರಸ ಸಂಗ್ರಮರಾಜನ ಆಳಿಕೆಯ ಅವಧಿಯಲ್ಲಿ ಪ್ರಧಾನಮಂತ್ರಿ ತುಂಗ ಆನಂದಪಾಲನ ಮಗ ಶಾಹಿ ರಾಜ ತ್ರಿಲೋಚನ ಪಾಲನಿಗೆ ಘಜನಿಯ ಸುಲ್ತಾನ್ ಮಹಮದನ ವಿರುದ್ಧ ಹೋರಾಟದಲ್ಲಿ ನೆರವೀಯಲು ದಂಡಯಾತ್ರೆಯ ನೇತೃತ್ವ ವಹಿಸಿದ್ದ. ತುಂಗ ಕೆಲವು ಸಣ್ಣ - ಪುಟ್ಟ ವಿಜಯಗಳನ್ನು ಸಾಧಿಸಿದರೂ ಅಂತತಃ ಸೋಲನ್ನನುಭವಿಸಿದ. ತುಂಗನ ಕೈ ಗೊಂಬೆಯಾಗಿರುವುದು ರಾಜನಿಗೂ ಅಪ್ರಿಯವಾಗಿತ್ತು. ಪರಿಣಾಮ ರಾಜ ಅವನನ್ನು ಕೊಲ್ಲಿಸಿದನು. ಅನಂತರ ಸ್ವತಃ ಸಂಗ್ರಾಮರಾಜನೂ ಬಹಳ ಕಾಲ ಬದುಕಲಿಲ್ಲ. ಡಾಮರರು ಮತ್ತು ದರದರು ಸ್ವಲ್ಪ ಮಟ್ಟಿಗೆ ಬಲಿಷ್ಠರಾಗಿ ತಲೆ ಎತ್ತಿ ನಿಂತಾಗ, 23 ವರ್ಷಗಳ ಆಡಳಿತದ ಅನಂತರ, ಕ್ರಿ.ಶ. 1025ರಲ್ಲಿ ಅವನೂ ಕಾಲವಶನಾದ.

ಕ್ರಿ.ಶ. 1028ರಲ್ಲಿ ಸಂಗ್ರಾಮರಾಜನ ಹಿರಿಯ ಮಗ ಅನಂತ ಪಟ್ಟವನ್ನೇರಿದ. ಇದಕ್ಕೆ ಮುನ್ನ ಇವನ ಅಣ್ಣ ಹರಿರಾಜ 22 ದಿನಗಳ ಕಾಲ ಕಾಶ್ಮೀರದ ರಾಜನಾಗಿದ್ದ. ಮಹತ್ವಾಕಾಂಕ್ಷೆಯ ವಿಷಯಲಂಪಟೆಯಾಗಿದ್ದ ಇವನ ತಾಯಿ, ರಾಣಿ ಶ್ರೀಲೇಖೆಯೆ ಮಗನನ್ನು ಕೊಲ್ಲಿಸಿದ್ದಳು. ಅನಂತ ದಂಗೆಯೆದ್ದ ಸೈನಿಕ ಸಾಮಂತರ ಸದ್ದಡಗಿಸಿದ; ಮಾತ್ರವಲ್ಲ, ದರದರ ಮತ್ತು ಮಹಮ್ಮದೀಯರ ಆಕ್ರಮಣವನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ. ಧರ್ಮನಿಷ್ಠಳಾದ ಆತನ ರಾಣಿ ಸೂರ್ಯಮತಿ ರಾಜ್ಯವ್ಯವಹಾರದಲ್ಲಿ ಪ್ರಮುಖ ಪಾತ್ರ ವಹಿಸಿದಳು. ಆಕೆಯ ಆಡಳಿತ ಬಲಿಷ್ಠವಾಗಿತ್ತು; ದಕ್ಷತೆಯಿಂದ ಕೂಡಿತ್ತು. ಹೆಂಡತಿಯ ಪ್ರಭಾವಕ್ಕೆ ಒಳಗಾದ ರಾಜ ಅನಂತ ತನ್ನ ಹೆಚ್ಚಿನ ಸಮಯವನ್ನು ಧ್ಯಾನ — ಉಪಾಸನೆಗಳಲ್ಲಿ ಕಳೆದ. ರಾಣಿ ಸೂರ್ಯಮತಿ ರಾಜನನ್ನು ಪೀಠತ್ಯಾಗ ಮಾಡುವಂತೆ ಒತ್ತಾಯಿಸಿ ತನ್ನ ಮಗ ಕಲಶನನ್ನು ಪಟ್ಟಕ್ಕೇರಿಸಿದಳು (ಕ್ರಿ.ಶ. 1063). ರಾಜ್ಯದಲ್ಲಿ ಇದ್ದ ಸಮೃದ್ಧಿಯಿಂದಾಗಿ ಕಲಶ ಗಡಿನಾಡುಗಳಲ್ಲಿ ದಂಡಯಾತ್ರೆ ನಡೆಸುವುದು ಸಾಧ್ಯವಾಯಿತು. ರಾಜಪುರಿ ಮತ್ತು ಉರಶಾ ಅವನ ಸ್ವಾಧೀನವಾಯಿತು. ಅವನು ಕಾಶ್ಮೀರರಾಜ್ಯವನ್ನು ವಿಸ್ತಾರಗೊಳಿಸಿ ಬಲಪಡಿಸಿದರೂ ಅವನ ಕೊನೆಯ ದಿನಗಳು ಅವನ ಮತ್ತು ಅವನ ಮಗ ಹರ್ಷನ ನಡುವೆ ಬೆಳೆದ ಅವಿಶ್ವಾಸದ ಫಲವಾಗಿ ವಿರಸಮಯವಾಗಿದ್ದವು. ತನ್ನ ಕಿರಿಮಗ ಉತ್ಕರ್ಷನನ್ನು ಪಟ್ಟಕ್ಕೇರಿಸಲು ಬಯಸಿ ಹರ್ಷನನ್ನು ಸೆರೆಯಲ್ಲಿರಿಸಿದ ಬಳಿಕ ಅವನು ಕ್ರಿ. ಶ. 1089 ರಲ್ಲಿ ಮೃತನಾದನು.

ಹರ್ಷ ಸೆರೆಯಿಂದ ತಪ್ಪಿಸಿಕೊಂಡು ತನ್ನ ಹಕ್ಕಿನದಾದ ಸಿಂಹಾಸನವನ್ನು ಸ್ವಾಧೀ ಪಡಿಸಿಕೊಂಡ. ರಾಜಾ ಹರ್ಷನ ಆಡಳಿತ (ಕ್ರಿ. ಶ. 1089 - 1101) ವನ್ನು ಕಲ್ಹಣ ತುಂಬ ವಿಸ್ತಾರವಾಗಿ ವರ್ಣಿಸಿದ್ದಾನೆ. ಅಸಾಧಾರಣ ಶೌರ್ಯದ ಯುವಕನಾಗಿದ್ದ ಹರ್ಷ ಹಲವು ವಿದ್ಯೆಗಳಲ್ಲಿ ಪರಿಣತನಾಗಿದ್ದ. ಅವನು ಬಹುಭಾಷಾತಜ್ಞನಾಗಿದ್ದ. ಬಹುಭಾಷೆಗಳಲ್ಲಿ ಕವಿಯೂ ಆಗಿದ್ದ. ತನ್ನ ಆಸ್ಥಾನದಲ್ಲಿ ಹೊಸ ರೀತಿ - ರಿವಾಜುಗಳನ್ನು ಉಡುಗೆತೊಡುಗೆಗಳನ್ನು ಆಚರಣೆಗೆ ತಂದ. ತನ್ನ ಸಭಾಮಂದಿರದಲ್ಲಿ ವಿದ್ವಾಂಸರ, ಕವಿಗಳ ಗೋಷ್ಠಿಯನ್ನೇರ್ಪಡಿಸಿ, ಅದರಲ್ಲಿ ತಾನೂ ಪಾಲುಗೊಂಡು ವಿದ್ಯೆಗೆ ಪ್ರೋತ್ಸಾಹ ನೀಡಿದ. ಅವನ ರಾಜಸಭೆ ಸಾವಿರ ದೀಪಗಳಿಂದ ಝಗ ಝಗಿಸುತ್ತಿತ್ತು. ಅಕ್ಕ ಪಕ್ಕದ ಮತ್ತು ದೂರ ನಾಡಿನ ವಿದ್ವಾಂಸರನ್ನು, ಕವಿಗಳನ್ನು ಸಂಗೀತಗಾರರನ್ನು ಆಕರ್ಷಿಸಿತ್ತು.[10] ಕರ್ನಾಟಕ ಸಂಗೀತದ ಧಾಟಿಗಳು ಮತ್ತು ವಾದ್ಯಗಳನ್ನು ಹರ್ಷ ಕಾಶ್ಮೀರದಲ್ಲಿ ಆಚರಣೆಗೆ ತಂದ ವಿಷಯವನ್ನು ಕಲ್ಹಣ ಉಲ್ಲೇಖಿಸಿದ್ದಾನೆ. ಕಲಶನ ಆಡಳಿತದ ಪ್ರಕುಬ್ಧ ದಿನಗಳಲ್ಲಿ ಕಾಶ್ಮೀರದಿಂದ ಕರ್ನಾಟಕಕ್ಕೆ ವಲಸೆ ಹೋಗಿ ಚಾಲುಕ್ಯರಾಜ ಪೆರ್ಮಾಡಿಯ ಆಸ್ಥಾನ ಕವಿಯಾಗಿ ಬದುಕಿದ ಬಿಲ್ಹಣ ಮತ್ತೆ ಹರ್ಷನ ಆಸ್ಥಾನದಲ್ಲಿ ಕವಿಗಳಿಗೆ, ವಿದ್ವಾಂಸರಿಗೆ ದೊರೆತ ಮನ್ನಣೆಯನ್ನು, ಹರ್ಷನ ಕೊಡುಗೈತನವನ್ನು ಕೇಳಿ, ತಾನು ಕಾಶ್ಮೀರ ತೊರೆದು ಬಂದದ್ದಕ್ಕಾಗಿ ಪಶ್ಚಾತ್ತಾಪ ಪಟ್ಟನಂತೆ.

ಹರ್ಷ ತುಂಬ ಚುರುಕುಬುದ್ಧಿಯ ದಕ್ಷ ಆಡಳಿತಗಾರನಾಗಿದ್ದ. ಎಲ್ಲ ಬಗೆಯ ವಿದ್ಯೆಗೂ ಮನ್ನಣೆ ನೀಡುವ ವಿಶಾಲಮನೋಭಾವದವನಾಗಿದ್ದ. ಪ್ರಾರಂಭದಲ್ಲೆ ತನ್ನ ಆಡಳಿತವನ್ನು ಸರಿಯಾದ ಜಾಡಿನಲ್ಲೆ ನಡೆಸಿದ್ದ. ತನ್ನ ಅಧಿಕಾರಿಗಳಲ್ಲಿ ಶಿಸ್ತಿನ ಪ್ರಜ್ಞೆ ಮೂಡಿಸಲು ಅವನು ತನ್ನದೇ ಆದರ್ಶವನ್ನು ಮುಂದಿಟ್ಟು ಮಾದರಿಯಾಗಿ ನಡೆದ. ರಾಜಕಾರ್ಯಗಳಿಗೆ ತಾನೇ ಖುದ್ದಾಗಿ ಗಮನವಿತ್ತ; ಅಧಿಕಾರಿಗಳ ಕಾರ್ಯಾಲಯದ ಕೆಲಸದ ಸಮಯವನ್ನು ನಿಗದಿಗೊಳಿಸಿ ಸ್ವತಃ ತಾನೂ ಆ ಕಾಲನಿಯಮವನ್ನು ಪಾಲಿಸಿದ; ಬ್ರಾಹ್ಮಣರಿಗೆ ಮಠ, ಮಾನ್ಯಗಳನ್ನು ಕಟ್ಟಿಸಿಕೊಟ್ಟ; ಆತನ ಪಟ್ಟದ ರಾಣಿ ವಸಂತಲೇಖೆ ಕೂಡ ಧಾರ್ಮಿಕ ಸಂಸ್ಥೆಗಳಿಗೆ ಧಾರಾಳವಾಗಿ ದಾನ - ದತ್ತಿಗಳನ್ನಿತ್ತಳು.

ಹರ್ಷನ ಉನ್ನತಿಕೆಯನ್ನು ಮೆಚ್ಚಿಕೊಂಡಾಡಿದಂತೆಯೆ ಕಲ್ಹಣ ಅವನ ದೌರ್ಬಲ್ಯ ಮತ್ತು ವೈಫಲ್ಯಗಳ ಬಗೆಗೂ ಬರೆಯುತ್ತಾನೆ. ಅಪೂರ್ವವಾದ ವಿರೋಧಾಭಾಸಗಳ ಕಲಬೆರಕೆಯಾಗಿದ್ದ ಹರ್ಷನನ್ನು ಕಲ್ಹಣ ಅಡಕವಾಗಿ ಹೀಗೆ, ವರ್ಣಿಸುತ್ತಾನೆ: "ಕ್ರೌರ್ಯ ಮತ್ತು ಹೃದಯವಂತಿಕೆ, ಔದಾರ್ಯ ಮತ್ತು ದುರಾಸೆ, ಉಗ್ರವಾದ ಹಠಮಾರಿತನ ಮತ್ತು ಎಚ್ಚರಗೇಡಿ ಸೋಮಾರಿತನ, ಜಾಣ್ಮೆ ಮತ್ತು ವಿಚಾರಹೀನತೆ — ಇವು ಮತ್ತು ಇಂಥ ತೋರಿಕೆಗೆ ಪರಸ್ಪರ ವಿರುದ್ಧವಾದ ಸ್ವಭಾವಗಳು ಹರ್ಷನ ವೈವಿಧ್ಯಮಯ ಜೀವನದಲ್ಲಿ ಮೇಳವಿಸಿ ಅನುಕ್ರಮವಾಗಿ ಕಾಣಿಸಿಕೊಳ್ಳುತಿದ್ದವು."

---

10 ಈಗ ದೊರಕುವ ಹರ್ಷನ ಕಾಲದ ನಾಣ್ಯಗಳಲ್ಲಿರುವ ಆನೆಯ ಚಿತ್ರದ ಕೆತ್ತನೆ ಕರ್ನಾಟಕದ ಸಮಕಾಲೀನ ನಾಣ್ಯಗಳ ಪರಿಚಯವನ್ನು ಸೂಚಿಸುತ್ತದೆ.

ಹರ್ಷ ತನ್ನ ದಕ್ಷ ಸೇನಾಪತಿ ಕಂದರ್ಪನನ್ನು ರಾಜಪುರಿ (ರಾಜೋರಿ)ಯ ಮುಖಂಡನನ್ನು ದಮನಿಸಲು ಕಳಿಸಿದ. ಕಂದರ್ಪ ಆ ಮುಖಂಡ ಸಂಗ್ರಾಮಪಾಲನನ್ನು ಬಗ್ಗುಬಡಿದು ಕಪ್ಪ ವಸೂಲಿ ಮಾಡಿದ; ಹೊಟ್ಟೆಕಿಚ್ಚಿಗೆ ಒಳಗಾದ ದುರ್ಬುದ್ಧಿಯ ಮಂತ್ರಿಗಳು ಕಿವಿಚುಚ್ಚಿ ಕಂದರ್ಪನನ್ನು ರಾಜನಿಂದ ದೂರಮಾಡಿದರು. ವಿಶ್ವಾಸದ್ರೋಹ ಅರಮನೆಯೊಳಗೆ, ರಾಜ್ಯದ ತುಂಬ ವ್ಯಾಪಕವಾಗಿ ಹಬ್ಬಿ ನಿಂತಿತು. ಸಿಂಹಾಸನಕ್ಕೆ ಹತ್ತಿರದ ಅನುಬಂಧಿಗಳು, ಹರ್ಷನಿಂದ ಪದಭ್ರಷ್ಟರಾದ ಸಿಂಹಾಸನಗೃಧ್ರಗಳು ಒಳಸಂಚಿನಲ್ಲಿ ತೊಡಗಿದರು. ಸೈನಿಕ ಚಟುವಟಿಕೆಗಳು ಸೇನಾದಳದ ಮಿತಿಮೀರಿದ ವೆಚ್ಚಕ್ಕೆ ಕಾರಣವಾದವು. ಅದರ ಜತೆಗೆ ಹರ್ಷನ ಭೋಗ ಜೀವನದ ಲೋಲುಪ್ತಿ (ಅವನ ಅಂತಃ ಪುರದಲ್ಲಿ ಡೊಂಬರು ಮತ್ತು ಚಂಡಾಲರನ್ನು ಬಿಟ್ಟು ಉಳಿದ ಎಲ್ಲ ಜಾತಿವರ್ಗಕ್ಕೆ ಸೇರಿದ 360 ಹೆಣ್ಣುಮಕ್ಕಳಿದ್ದರು), ಇವೆಲ್ಲ ಸೇರಿ ಹರ್ಷ ಆರ್ಥಿಕ ಬಿಕ್ಕಟ್ಟಿಗೆ ಬಲಿಯಾದ. ಪರಿಣಾಮವಾಗಿ ಹೊಸಬಗೆಯ ದಮನಕಾರಿ ಕಂದಾಯಗಳನ್ನು ಹೇರಲಾಯಿತು. ಕಲ್ಹಣ ಈ ಬಗೆಗೆ ಹೀಗೆ ಅಣಕವಾಡಿದ್ದಾನೆ; "ಪಾಯಿಖಾನೆಗೂ ವಿಶೇಷ ಕಂದಾಯವನ್ನು ತೆರಬೇಕಾಯಿತು." ದೇವಾಲಯಗಳಲ್ಲಿ ಕೂಡಿಟ್ಟ ಸಂಪತ್ತಿನ ಭಂಡಾರದ ತಳಕ್ಕೂ ಹರ್ಷ ಕೈ ತೂರಿತ. ಅವನ ಹಿಂದಿನ ಆ ಔದಾರ್ಯ ಈಗ ಲೋಭವಾಗಿ, ದುರಾಸೆಯಾಗಿ ಪರಿವರ್ತನಗೊಂಡಿತು. ಕಾಶ್ಮೀರದ ಕಣಿವೆಯ ಎಲ್ಲ ದೇವಾಲಯಗಳ — ದೇವರದೇವತೆಗಳ ಚಿನ್ನಬೆಳ್ಳಿಯ ವಿಗ್ರಹಗಳನ್ನೂ ಕಿತ್ತುಕರಗಿಸಿದನು. ಈ ಮೂರ್ತಿಭಂಜನೆಯ "ಅತಿರೇಕ ಮತ್ತು ತನ್ನ ತಂದೆಯ ವಿಧವೆಯ ಜತೆಗೂ ಆತನಿರಿಸಿಕೊಂಡ ಅನೈತಿಕ ಸಂಬಂಧಗಳು ಸಮತೋಲ ತಪ್ಪಿದ ಆತನ ಮನಸ್ಸಿನ ಅಸ್ವಸ್ಥತೆಯನ್ನು ಖಚಿತವಾಗಿ ಸೂಚಿಸುತ್ತಿದ್ದವು." ಮೊದಲೇ ತಾಪತ್ರಯದಲ್ಲಿದ್ದು ಅತೃಪ್ತರಾದ ಪ್ರಜೆಗಳ ಮೇಲೆ ಕ್ರಿ.ಶ. 1099ರಲ್ಲಿ ಪ್ಲೇಗು ಮತ್ತು ಭೀಕರ ನೆರೆಯ ರೂಪದಲ್ಲಿ ಹೊಸ ಆಪತ್ತುಗಳು ಬಂದೆರಗಿದವು. ಜನರ ಗಮನವನ್ನು ಬೇರೆಡೆ ತಿರುಗಿಸುವುದಕ್ಕಾಗಿ ಹರ್ಷ ಬಲಿಷ್ಠ ಜಮೀನ್ದಾರ ಸಾಮಂತರಾದ ಡಾಮರರ ಮೇಲೆ ದಾಳಿ ನಡೆಸಿದ. ಡಾಮರರ ಮೇಲೆ ಹೇರಲಾದ ಆ ಕ್ರೌರ್ಯದ ಅಸಹ್ಯ ಚಿತ್ರವನ್ನು ಕಲ್ಹಣ ತನ್ನ ಕೃತಿಯಲ್ಲಿ ಮೂಡಿಸಿದ್ದಾನೆ.

ಅವನ ದುಷ್ಕರ್ಮ ಕ್ಷಿಪ್ರದಲ್ಲೆ ಫಲಿಸಿತು. ಲೋಹರ ವಂಶದ ಇನ್ನೊಂದು ಶಾಖೆಗೆ ಸೇರಿದ ಇಬ್ಬರು ಸೋದರರು — ಉಚ್ಚಲ ಮತ್ತು ಸುಸ್ಸಲ — ಅವನಿಗೆ ಎದುರು ನಿಂತರು. ಈ ತಲೆಗೆಟ್ಟ ದೊರೆಯನ್ನು ಒದ್ದೋಡಿಸಲು ಡಾಮರರು ಮತ್ತು ಇತರ ದಂಗೆಯೆದ್ದ ಪಡೆಗಳು ಈ ಸೋದರರ ಜತೆಗೂಡಿದರು. ಹತಾಶನಾದ ಹರ್ಷನ ಪ್ರತಿಘಟನೆ ವ್ಯರ್ಥವಾಯಿತು. ಅವನನ್ನು ಕಡಿದು ಕೊಲ್ಲಲಾಯಿತು. ಅವನ ರುಂಡವನ್ನು ಉಚ್ಚಲನ ಬಳಿಗೆ ತಂದು ತೋರಿಸಲಾಯಿತು. ಅವನು ಅದನ್ನು ಬೆಂಕಿಯಲ್ಲಿ ಸುಡಿಸಿದ. ಭಿಕ್ಷುಕನಂತೆ ಅನಾಥವಾಗಿ, ಬತ್ತಲೆಯಾಗಿ ಬಿದ್ದಿದ್ದ ಅವನ ಮುಂಡಕ್ಕೆ ಒಬ್ಬ ಮರಕಡಿಯುವವ ಕರುಣೆಯಿಂದ ಬೆಂಕಿ ಕಾಣಿಸಿದ. (ಈ ಘಟನೆಯನ್ನು ಚಿತ್ರಿಸುವ ಕೆಲವು ಪದ್ಯಗಳನ್ನು "ಕವಿಯಾಗಿ ಕಲ್ಹಣ" ಪರಿಚ್ಛೇದದಲ್ಲಿ ಕೊಡಲಾಗಿದೆ........)

ಹರ್ಷನ ಸಾವು ರಾಜತರಂಗಿಣಿಯ ಏಳನೆಯ ತರಂಗದ ಕೊನೆಯ ಘಟನೆ. (ಅನಂತರದ, ಕಲ್ಹಣನ ಸ್ವಂತಕಾಲದ ತನಕದ ಘಟನೆಗಳು — "ಕಲ್ಹಣ ಮತ್ತು ಅವನ ಕಾಲ" ಎಂಬ ಪರಿಚ್ಛೇದದಲ್ಲಿ ವಿವರಿಸಲ್ಪಟ್ಟಿವೆ.)

ಕೊನೆಯ, ಎಂಟನೆಯ ತರಂಗವೊಂದೆ ಇಡಿಯ ಗ್ರಂಥದ ಅರ್ಧದಷ್ಟಿದೆ. ಹರ್ಷನ ಮರಣ ಮತ್ತು ರಾಜತರಂಗಿಣಿಯ ರಚನೆ ಕಾಲದ ನಡುವಿನ 12ನೆಯ ಶತಮಾನದ ಪೂರ್ವಾರ್ಧದ ಘಟನೆಗಳನ್ನು ವಿವರಿಸಲು ಈ ತರಂಗ ಮೀಸಲಾಗಿದೆ. ಈ ಸುದೀರ್ಘವಾದ ವಿವರಣೆ, ಕೆಲವೊಮ್ಮೆ ಗೊಂದಲಗೆಡಿಸಿದರೂ, ಆ ಕಾಲದ ಕಾಶ್ಮೀರದ ಸಾಮಾಜಿಕ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಯ ಅಧಿಕೃತ ಚಿತ್ರವನ್ನು ಕಾಯ್ದಿಡುವಲ್ಲಿ ಯಶಸ್ವಿಯಾಗಿದೆ.

ದಂಗೆಯೆದ್ದ ಡಾಮರರು ರಾಜ್ಯದ ಶಾಂತಿಯನ್ನು ಕದಡಿದರು. ಸಿಂಹಾಸನದ ಮೇಲಾಟದಲ್ಲಿ ಹಲವರು ಎದ್ದರು, ಬಿದ್ದರು. ಶ್ರೀನಗರದ ಪ್ರಜೆಗಳು ಹತಾಶವಾದ ಮುತ್ತಿಗೆಗಳಿಂದ ತತ್ತರಿಸಿದರು. ಸುಸ್ಸಲನ ಮಗ ಜಯಸಿಂಹ "ವಂಚನೆಯ ಚತುರೋಪಾಯ ಮತ್ತು ಹೊಣೆಗೇಡಿ ಒಳಸಂಚುಗಳ" ನಡುವೆ ಕಾಶ್ಮೀರವನ್ನಾಳಿದ. ರಾಜತರಂಗಿಣಿಯ ಉಪಸಂಹಾರದ ಪದ್ಯಗಳು ಜಯಸಿಂಹನ ರಾಣಿ ರತ್ನಾದೇವೀ ಮತ್ತವರ ಮಕ್ಕಳ ಪ್ರಶಂಸೆಯನ್ನೊಳಗೊಂಡಿದೆ. ಈ ಘಟನೆ ಜಯಸಿಂಹನ ಆಡಳಿತದ 22ನೆಯ ವರ್ಷಕ್ಕೆ (ಕ್ರಿ.ಶ. 1149 - 50) ನಮ್ಮನ್ನು ಕೊಂಡೊಯ್ಯುತ್ತದೆ. ಕಲ್ಹಣ ತನ್ನ ಈ ಕಾವ್ಯ ಕೃತಿ "ರಾಜತರಂಗಿಣಿ" ಯನ್ನು ದಕ್ಷಿಣಭಾರತದ ನದಿ ಗೋದಾವರಿಯ ತೆರೆತೊರೆಯ ಜತೆಗೆ ಹೋಲಿಸುವ ಪದ್ಯದೊಡನೆ ಮುಗಿಸುತ್ತಾನೆ.

ರಾಜತರಂಗಿಣಿಯಿಂದ ಕಲಿಯಬೇಕಾದ ಪಾಠ

ಇಲ್ಲಿ ಮತ್ತೆಮತ್ತೆ ಒತ್ತು ನೀಡಿ ಹೇಳಬೇಕಾದ ಮಾತೆಂದರೆ, ಭಾರತದ ಸಮಗ್ರ ಇತಿಹಾಸದ ದೃಷ್ಟಿಯಿಂದಲೂ ಕಲ್ಹಣನ ರಾಜತರಂಗಿಣಿ ಆಸಕ್ತಿ ಹುಟ್ಟಿಸುವಂಥ ಕೃತಿ ಎನ್ನುವುದು. ಭಾರತೀಯ ಇತಿಹಾಸದ ಮುಖ್ಯಾಂಶಗಳೆಲ್ಲ ಪ್ರಾಂತೀಯ ಇತಿಹಾಸಗಳಿಂದಲೆ ರೂಪುಗೊಂಡಂಥವು. ಯಾವುದೇ ಪ್ರಾಂತದ ಇತಿಹಾಸವೆ ಆಗಲಿ, ಈಗ ದೊರಕಿರುವ ಅಂಶ ಅತ್ಯಲ್ಪ. ಆದರೆ ಕಲ್ಹಣ ಒದಗಿಸಿದ ಇತಿಹಾಸ, ಭಾರತದ ರಾಜ್ಯವೊಂದರ ಸಂಪೂರ್ಣ ವಿವರವಾಥ ದಾಖಲೆಯಾಗಿದ್ದು, ಉಳಿದ ರಾಜ್ಯಗಳಿಗೂ ಅನ್ವಯಿಸಬಹುದಾದ ಒಂದು ಮಾದರಿ ಕೃತಿಯಾಗಿ ನಿಲ್ಲುತ್ತದೆ.

ಕಲ್ಹಣನ ಪ್ರಕಾರ, ಇತಿಹಾಸ ಬರಿಯ ಕಲಿಕೆಯ ಪಠ್ಯ ಅಲ್ಲ; ಅದು ಬದುಕನ್ನು ಅರ್ಥಮಾಡಿಕೊಳ್ಳಲು ಒಂದು ಸಾಧನ. ಏಕೆಂದರೆ ಅದು ಅತ್ಯಂತ ಸಂಕೀರ್ಣವಾದ ನಾನಾ ಬಗೆಯ ಮಾನವೀಯ ಸಂಬಂಧಗಳನ್ನು ನಮ್ಮ ಮುಂದಿಡುತ್ತದೆ. ಪ್ರಾಚೀನ ವೇದ ಕಾಲದಲ್ಲಿ ಅರಸೊತ್ತಿಗೆ ಎನ್ನುವುದು ಚುನಾಯಿತ ಅಧಿಕಾರವಾಗಿತ್ತು. ಅನಂತರ ಪಿತ್ರಾರ್ಜಿತವಾಯಿತು. ಅರಸೊತ್ತಿಗೆಯ ವರ್ತಮಾನ ಮತ್ತು ಭವಿಷ್ಯಗಳು ರಾಜನ ವ್ಯಕ್ತಿತ್ವವನ್ನೆ ಮುಖ್ಯವಾಗಿ ಅವಲಂಬಿಸಿದ್ದವು. ರಾಜ್ಯದ ಗತಿಯನ್ನೆ ಬದಲಿಸಬಲ್ಲ, ಒಗ್ಗಟ್ಟಿನಿಂದ ದೃಢವಾದ ಜನಾಂಗದ, ರಾಷ್ಟ್ರ ಶರೀರದ ಕಲ್ಪನೆಯೆ ಇರಲಿಲ್ಲ. ಆಳರಸರ ದಬ್ಬಾಳಿಕೆಯ ನಿರಂಕುಶ ವರ್ತನೆಗಳನ್ನು ಅನುಭವಿಸಿ ಮೆತ್ತಗಾದ, ಎಂದೂ ಕೆರಳದ, ಬಂಡೇಳದ ಪ್ರಜಾವರ್ಗ. ಬಂಡಾಯಗಾರರಿದ್ದರೆ, ಅದು ತಮ್ಮ ವರ್ಗೀಯ ಹಿತಾಸಕ್ತಿಯನ್ನು ಕಾಪಾಡಲು ತಿರುಗಿ ಬಿದ್ದ, ರಾಜಮನ್ನಣೆ ಪಡೆದ ಶ್ರೀಮಂತ ಸಾಮಂತರು. ಪ್ರಸಿದ್ಧ ದಂಗೆಗಳೆಲ್ಲ ಇಂಥ ಮೇಲಾಟದ ಬಂಡಾಯಗಳೆ, ಲಲಿತಾದಿತ್ಯ ಮತ್ತು ಅವನಂಥ ಸಮರ್ಥರಾಜರ ಆಡಳಿತ ಕಾಲದಲ್ಲಿ ಕೂಡ ಜನಸಾಮಾನ್ಯರ ಜೀವನ ಸ್ಥಿತಿ ಜೀತದ ಬದುಕಿಗಿಂತ ಬಹಳಷ್ಟು ಬೇರೆಯೇನೂ ಆಗಿರಲಿಲ್ಲ. ಶ್ರೀಮಂತವರ್ಗ ಮಾಂಸದ ತಿಂಡಿತಿನಿಸು ಮತ್ತು ಹೂವಿನ ಕಂಪು ಬೆರೆತ ತಂಪು ಮದ್ಯಗಳ ಮೋಜವಾನಿ ನಡೆಸಿದರೆ ಜನಸಾಮಾನ್ಯರಿಗೆ - ಎರಡುಹೊತ್ತಿನ ತುತ್ತನ್ನ, ಒಂದಿಷ್ಟು ತರಕಾರಿ ಪಲ್ಯ ದೊರೆತರೆ ದೊಡ್ಡ ಸಂಗತಿಯಾಗಿತ್ತು. "ಹಳೆಯಕಾಲದ ರೀತಿನೀತಿಗಳ ಅಪಾರ ಸಂಗ್ರಹವೆನ್ನಿಸಿದ" ಕಲ್ಹಣನ ರಾಜತರಂಗಿಣಿ ಇಂಥ ಹಲವಾರು ಗಮನಾರ್ಹ ಪ್ರಸಂಗಗಳನ್ನು ಬೆಳಕಿಗೆ ತಂದಿದೆ.

ರಾಜಕೀಯ ಅಧಿನಿಯಮಗಳು ಮತ್ತು ಸರಕಾರೀ ನೀತಿಸಂಹಿತೆಗಳನ್ನು ವಿವರಿಸುವಂಥ ಐತಿಹಾಸಿಕ ಘಟನೆಗಳನ್ನು ಕಲ್ಹಣ ಬರೆದಿಟ್ಟಿದ್ದಾನೆ. ಕಾಶ್ಮೀರದಲ್ಲಿ ಆಚರಣೆ

ಯಲ್ಲಿದ್ದ ಸರಕಾರದ ನೀತಿಸಂಹಿತೆಯನ್ನು ಕಲ್ಹಣ ಸಂಕ್ಷೇಪವಾಗಿ ಬರೆದಿಟ್ಟಿದ್ದು ಈ ಭಾಗ ವಿಶೇಷವಾಗಿ ನಮ್ಮ ಕುತೂಹಲವನ್ನು ಕೆರಳಿಸುತ್ತದೆ. "ರಾಜಾ ಲಲಿತಾದಿತ್ಯನ ಕಾಶ್ಮೀರಿ ರಾಜ್ಯತಂತ್ರದ ನೀತಿಸಂಹಿತೆ" ಎಂದು ಇದನ್ನು ನಮೂದಿಸಲಾಗಿದೆ. ಕಣಿಂಕನ ಕುಟಿಲ ನೀತಿಯ ಛಾಯೆಯುಳ್ಳ ಈ ನೀತಿಸೂತ್ರಗಳನ್ನು ಭಾರತದ ಕೆಲವು ರಾಜನೀತಿಗ್ರಂಥಗಳ ನೀತಿಸಂಹಿತೆಗೆ ಹೋಲಿಸಬಹುದು. ಕಲ್ಹಣ ಬರೆದಿಟ್ಟ ನೀತಿಸಂಹಿತೆಗಳಲ್ಲಿ ವಿಶಿಷ್ಟವಾದ ಕಾಶ್ಮೀರಿಮಣ್ಣಿನ ವಾಸನೆಯಿದೆ. ಅದರಿಂದ ಐತಿಹಾಸಿಕ ದೃಷ್ಟಿಯಿಂದ ಅವು ತುಂಬ ಮಹತ್ವದ್ದಾಗುತ್ತವೆ.

ಮೊದಲನೆಯ ಅಧಿನಿಯಮವೆ ಕಾಶ್ಮೀರಕ್ಕೆ ಮೀಸಲಾದ ವಿಶಿಷ್ಟತೆಯುಳ್ಳದ್ದು. ಕಾಶ್ಮೀರಕ್ಕೆ, ಅದರ ಇಕ್ಕಟ್ಟಾದ ಭೌಗೋಳಿಕ ಸೀಮೆಯಿಂದಾಗಿ, ವಿದೇಶಿಶತ್ರುಗಳ ಭಯ ವಿರಲಿಲ್ಲ. ಅದರಿಂದ ಅಂತಃಕಲಹವನ್ನು ತಪ್ಪಿಸುವ ಸಲುವಾಗಿ ವಿಧಾಯಕ ಹೆಜ್ಜೆಗಳನ್ನು ಇಡುವಂತೆ ಅಧಿಕಾರಿಗಳಿಗೆ ತಿಳಿಸಲಾಗಿತ್ತು. ಕಾಶ್ಮೀರದ ಕಣಿವೆಯನ್ನು ಸುತ್ತುವರಿದ ಗುಡ್ಡ ಗಾಡು ಪ್ರದೇಶದಲ್ಲಿ ವಾಸಿಸುವ ಜನರನ್ನು ಅವರು "ಕಿರುಕುಳ ಕೊಡದೆ ಇದ್ದರೂ ಶಿಕ್ಷಿಸುತ್ತಲೇ ಇರಬೇಕು." ದುರ್ಬಲ ಆಡಳಿತದ ಅವಧಿಯಲ್ಲಿ ಕಾಶ್ಮೀರಿಗಳನ್ನು ಕೊಳ್ಳೆ ಹೊಡೆಯುತಿದ್ದ ಖಶರು ಮತ್ತು ಇತರ ಗುಡ್ಡಗಾಡು ಜನಾಂಗಗಳನ್ನು ಕುರಿತೇ ಈ ಮಾತುಗಳು ಬಂದಿವೆ. ಹಾಗೆಯೆ, ಒಂದು ವರ್ಷದ ಅಗತ್ಯಕ್ಕಿಂತ ಹೆಚ್ಚು ಆಹಾರಧಾನ್ಯವನ್ನು ಹಳ್ಳಿಗರ ಬಳಿ ಬಿಡಬಾರದು ಎನ್ನುವ ಸಲಹೆಯೂ ಡಾಮರರಿಂದ ಪ್ರತಿನಿಧಿಸಲ್ಪಟ್ಟ ಜಮೀನುದಾರ ಶ್ರೀಮಂತ ವರ್ಗದ ಅಧಿಕಾರವನ್ನು ದಮನಿಸುವುದಕ್ಕಾಗಿಯೆ ಬಂದಿದೆ. ಪದೇಪದೇ ಮರುಕಳಿಸುತಿದ್ದ, ಈ ಊಳಿಗಮಾನ್ಯ ಜಹಗೀರುದಾರರ ದಂಗೆಗಳು ಕಲ್ಹಣನ ಕಾಲದಲ್ಲಿ, ಅದರ ಮೊದಲು ಕೂಡ, ಅಂತಃಕಲಹಕ್ಕೆ ಕಾರಣವಾಗಿದ್ದವು. ಇದರ ಬಗ್ಗೆ ಕಲ್ಹಣ ತನ್ನ ಅಸಮಾಧಾನವನ್ನು ಮುಚ್ಚಿಡಲಿಲ್ಲ. ಅದಕೆಂದೆ ಅವರನ್ನು ಅವನು ಬಾರಿಬಾರಿಗು ದಸ್ಯುಗಳು (ದೋಚುವ ಕಳ್ಳರು) ಎಂದು ಕರೆಯುತ್ತಾನೆ. ಪ್ರಜೆಗಳಲ್ಲಿ ರಾಜಕೀಯ ಬದ್ಧತೆ ಇರಲಿಲ್ಲ. ದೊಡ್ಡವರಿರಲಿ, ಸಣ್ಣವರಿರಲಿ, ರಾಜಕೀಯದ ಗಾಳಿ ಎತ್ತಬೀಸಿತೋ ಅತ್ತ ಕಡೆ ತಮ್ಮ ಕೊಡೆ ತಿರುಗಿಸಿಬಿಡುತ್ತಿದ್ದರು — ಎಂಬ ಸಂಗತಿಯನ್ನು ಕಲ್ಹಣ ಹಲವು ಕಡೆಗಳಲ್ಲಿ ಉಲ್ಲೇಖಿಸಿದ್ದಾನೆ. ಅರಸೊತ್ತಿಗೆಯ ಪರಿವರ್ತನಗಳಿಗೆ ಸ್ಪಂದಿಸದೆ ದಿವ್ಯ ತಾಟಸ್ಥ್ಯದಿಂದ ದೂರ ನಿಂತ, ಮೈ ಜಡ್ಡುಗಟ್ಟಿದ, ಯಾವ ಬದಲಾವಣೆಯೂ ತಟ್ಟದ ಈ ಪೇಟೆಯ ನಿರುಪಯುಕ್ತ ಮೈಗಳ್ಳ ಮಂದಿಯ ಚಿತ್ರಣವನ್ನು ಕಲ್ಹಣ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ. ಕಲ್ಹಣನ ಸತ್ವಪೂರ್ಣವಾದ ಈ ಟೀಕೆಗಳು — ಸೂಕ್ಷ್ಮವಾಗಿ ನಿರೀಕ್ಷಿಸುವ ಮತ್ತು ವಿಮರ್ಶಾತ್ಮಕವಾಗಿ ತೂಗಿ ನೋಡುವ ಪ್ರತಿಭಾವಂತ ಮಾತ್ರ ಮಾಡಬಹುದಾದ ಟೀಕೆಗಳು. ರಾಜತರಂಗಿಣಿಯ ನಡುವೆ ಅಲಲ್ಲಿ ಬರುವ ಇಂಥ ಟೀಕಾತ್ಮಕ ಉಲ್ಲೇಖಗಳಿಂದ ಕಲಿಯಬೇಕಾದ್ದು ಬಹಳಷ್ಟಿದೆ.

ಇಂಥ ಐತಿಹಾಸಿಕ ಘಟನೆಗಳಿಂದ ಮುಂದಿನ ತಲೆಮಾರಿನವರು ಪಾಠ ಕಲಿ

ಯಬೇಕು ಎನ್ನುವುದಕ್ಕಾಗಿ ಕಲ್ಹಣ ಇವುಗಳನ್ನು ಮೆಚ್ಚುತ್ತಾನೆ. ಜಯಸಿಂಹ ಕಿಷನ್‌ಗಂಗಾ ಕಣಿವೆಯ ಮೇಲ್ದಂಡೆಯ ಮೇಲೆ ದಂಡೆತ್ತಿ ಹೋದ ಬಗ್ಗೆ, ಕಲ್ಹಣನ ನಿರೀಕ್ಷಣೆ ಸರಿಯಾದ ನಿರ್ಧಾರವನ್ನೆ ಮಾಡುತ್ತದೆ. ಶತ್ರುಸೇನೆಯ ಸಾಮರ್ಥ್ಯದ ಸರಿಯಾದ ಅರಿವಿಲ್ಲದೆ ಮಾಡಿದ ಯೋಜನೆಯ ಫಲವಾಗಿ ಜಯಸಿಂಹನ ಸೋಲು ಅನಿವಾರ್ಯವಾಗಿತ್ತು. ಜಯಸಿಂಹನ ವಿರುದ್ಧ ದಂಗೆಯೆದ್ದ ಎದುರಾಳಿಗಳು ಹೂಡಿದ ತಂತ್ರದ ದೋಷಗಳ ಬಗೆಗೂ ಆತ ಟೀಕಿಸುತ್ತಾನೆ, ಮತ್ತು ರಾಜನ ವಿಜಯ ಅವರ ಈ ಪ್ರಮಾದದ ಫಲವಾಗಿಯೆ ಹೇಗೆ ಸಾಧ್ಯವಾಯಿತು ಎನ್ನುವುದನ್ನು ವಿವರಿಸುತ್ತಾನೆ.

ಕಾಶ್ಮೀರದ ಇತಿಹಾಸ ಕಲಿಸುವ ಇನ್ನೊಂದು ಪ್ರಮುಖ ಪಾಠ ಎಂದರೆ ಅರಮನೆಯ ಅಂತಃಕಲಹಗಳು ಮತ್ತು ಅಂತಃಪುರದ ಹೆಂಗಸರ ಪ್ರೇಮ ಪ್ರಕರಣದ ಅಸೂಯೆ - ಮೇಲಾಟಗಳು ಅರಸೊತ್ತಿಗೆಯ ಮೇಲೆ ಮತ್ತು ಪ್ರಜಾವರ್ಗದ ಮೇಲೆ ಬೀರಿದ ಅನಿಷ್ಟ ಪರಿಣಾಮಗಳು; ಕಲ್ಹಣ ತುಂಬ ಜಾಣ್ಮೆಯಿಂದ ಆಸ್ಥಾನದ ಆಗುಹೋಗುಗಳನ್ನು ಗಮನಿಸಿ, ತಾನು ಕಂಡದ್ದನ್ನೆ ಬರೆದಿಟ್ಟಂತೆ ಕಾಣಿಸುತ್ತದೆ. ತನ್ನ ಈ ಸಮೀಕ್ಷೆ ಮುಂದಿನ ಜನಾಂಗಕ್ಕೆ ಲಾಭದಾಯಕವಾಗಲಿ ಎನ್ನುವುದು ಅವನ ಆಸೆ. ಆರ್.ಸಿ. ಮಜುಮ್‌ದಾರರ[1] ಶಬ್ದಗಳಲ್ಲಿ ಹೇಳುವುದಾದರೆ: "ಪ್ರಜಾವರ್ಗದ ಮೇಲೆ ಆಗಣಿತವಾದ ಆಪತ್ತನ್ನು ತಂದ, ನಂಬಲಸಾಧ್ಯವಾದ, ಕಾಶ್ಮೀರದ ರಾಜರ ಮತ್ತು ರಾಣಿಯರ ಅತಿಲಂಪಟತನ ಆ ಕಾಲದ ಜನಜೀವನದ ರೀತಿ ರಿವಾಜುಗಳ ಬಗೆಗೆ ಭೀಕರವಾದ ಬೆಳಕು ಚೆಲ್ಲುತ್ತದೆ. ಹಾಗೆಯೆ ನಮ್ಮ ಪ್ರಾಚೀನ ಆಳರಸರ ಧರ್ಮಪರಾಯಣ ಪ್ರಭುತ್ವದ ಬಗೆಗೆ ನಮ್ಮಲ್ಲಿದ್ದ ಮೆಚ್ಚಿನ ಭ್ರಾಂತಿಗೆ ತೀವ್ರ ಆಘಾತವನ್ನೊಡ್ಡುತ್ತದೆ."

ಇದೇ ಲೇಖಕರ ಇನ್ನೊಂದು ಉದ್ಗಾರ, "ಕಾಶ್ಮೀರದ ಯಾವುದೇ ಅರಸರ ನಡವಳಿಕೆಯನ್ನು ನಿರೀಕ್ಷಿಸಿದರೆ ಅಲ್ಲಿ - ಭಾರತ ತಮ್ಮ ಮಾತೃಭೂಮಿ ಎನ್ನುವ ಕಲ್ಪನೆಯ ಸುಳಿವು ಕಾಣುವುದಿಲ್ಲ." ಈ ಅಭಿಪ್ರಾಯ ಮಾತ್ರ ವಿವಾದಾತೀತವಲ್ಲ. ಕಾಶ್ಮೀರದ ಪ್ರತ್ಯೇಕವಾದ ಭೌಗೋಳಿಕ ಸ್ಥಿತಿ, ಅಲ್ಲಿಯ ಜನಜೀವನದಲ್ಲಿ ಮತ್ತು ಆಡಳಿತದಲ್ಲಿ ಒಂದು ಪ್ರತ್ಯೇಕತೆಯನ್ನು, ಸಂಕುಚಿತತೆಯನ್ನು ನಿರ್ಮಿಸಿದೆ ಎನ್ನುವುದು ನಿಜ. ಆದರೆ, ಇಡಿಯ ದೇಶದ ಜೀವನ ಪ್ರವಾಹದಲ್ಲಿ ಅವರೂ ಸೇರಿಕೊಂಡಿದ್ದರು ಎನ್ನುವುದಕ್ಕೆ ಕಲ್ಹಣನ ರಾಜತರಂಗಿಣಿಯಲ್ಲಿ ಸಾಕಷ್ಟು ಪುರಾವೆಗಳಿವೆ. ಒಂದು ಉದಾಹರಣೆ: ಸತಿಪದ್ಧತಿ. ಈ ಸಂಪ್ರದಾಯ ಭಾರತದ ಇತರ ಕಡೆಗಳಂತೆಯೆ ಕಾಶ್ಮೀರದಲ್ಲು ಬಹುಕಾಲ ಆಚರಣೆಯಲ್ಲಿತ್ತು. ಇದರ ಬೆಳವಣಿಗೆಯನ್ನು ಅಧ್ಯಯನ ಮಾಡಹೊರಟ ಸಂಶೋಧಕರಿಗೆ ಕಲ್ಹಣನ ಈ ಕೃತಿ ನೆರವಾಗಬಲ್ಲುದು. ಸಿಥಿಯನ್ - ಟಾರ್ಟರ್ ಜನಾಂಗದ ಶ್ರೀಮಂತ ಯಜಮಾನ ಸತ್ತಾಗ ಅವನ ಸೇವಕರು ಆತ್ಮಹತ್ಯೆ ಮಾಡಿಕೊಳ್ಳುತಿದ್ದರು. ಧರ್ಮ ಶ್ರದ್ಧೆಯ ಆಡಳಿತ ಕಾಲದಲ್ಲಿ, ಭಾರತದ ಇತರ ಭಾಗಗಳಂತೆಯೆ ಕಾಶ್ಮೀರದಲ್ಲು ಈ ಪದ್ಧತಿ ಉಳಿದು ಬಂದಿತ್ತು. ಇದು ಬರಿಯ ಅರಸೊತ್ತಿಗೆಯ ಸಂತತಿಗೆ

1 "ಏನ್‌ಷೆಂಟ್ ಇಂಡಿಯ" ಪು. 386.

ಮಾತ್ರ ಸೀಮಿತವಾಗಿರಲಿಲ್ಲ. "ಸತಿ ಹೋಗುವ ಪದ್ಧತಿ ಈ ಕಣಿವೆಯಲ್ಲಿ ಗಾಢವಾಗಿ ಬೇರೂರಿತ್ತು. ತಾಯಂದಿರು, ಸೋದರಿಯರು, ಇತರ ಸಮೀಪದ ಬಂಧುಗಳು ಕೂಡ ತಮ್ಮ ಪ್ರೀತಿಮಾತ್ರ ವ್ಯಕ್ತಿ ಮೃತನಾದಾಗ ತಾವೂ ಬೆಂಕಿಯಲ್ಲಿ ಹಾರಿ ಆತ್ಮಾರ್ಪಣೆ ಮಾಡಿಕೊಂಡದ್ದುಂಟು" — ಎಸ್.ಸಿ. ರೇ [2] ಅವರು ಕಲ್ಹಣನ ಉಲ್ಲೇಖದ ಆಧಾರದ ಮೇಲೆ ಮಾಡಿದ ನಿರ್ಧಾರ ಇದು.

ಭಾರತದ ಎಲ್ಲ ಪ್ರಾಂತಗಳ ಅಖಂಡತೆಯನ್ನು ಸೂಚಿಸುವ ಚಿತ್ರ ವರ್ಣಮಯವಾಗಿ ಮೊಳೆಕೆಯೊಡೆದಿತ್ತು. ರಾಜಕೀಯವಾದ ಬೆಳವಣಿಗೆ ಇನ್ನೂ ಪ್ರಾರಂಭಿಕ ಹಂತದಲ್ಲೇ ಇದ್ದರೂ ಜನತೆ ಮತ್ತು ಅರಸೊತ್ತಿಗೆಗಳೂ, ಒಳ್ಳೆಯವರಿರಲಿ, ಕೆಟ್ಟವರಿರಲಿ, ಅಥವಾ ತಟಸ್ಥರೇ ಇರಲಿ, ಸಂಗೀತ — ನಾಟ್ಯದಂಥ ಲಲಿತ ಕಲೆಗಳನ್ನು ವಿಕಾಸಗೊಳಿಸಿ ಬೆಳಿಸಿದರು. ಕುಶಲಕಲೆ ಮತ್ತು ವಾಸ್ತುಶಿಲ್ಪ ಉನ್ನತ ಮಟ್ಟದಲ್ಲಿ ಬೆಳೆದು ಬಂತು. ಮತಧರ್ಮಗಳು, ವೇದಾಂತ ಮತ್ತು ವಿಜ್ಞಾನ ಕೂಡ, ತಮ್ಮ ಹಲವು ಶಾಖೆಗಳನ್ನು ಹರವಿ ಗಣನೀಯವಾದ ಪ್ರಗತಿಯನ್ನು ತೋರಿದವು. ಆದರೆ ಕಲ್ಹಣನ ಸಮೀಕ್ಷಣೆಯಿಂದ ನಮಗೆ ತಿಳಿದು ಬರುವ ಸಂಗತಿಯೆಂದರೆ — ದೊಡ್ಡದರ ಸಾಧನೆಗಳೆಲ್ಲ ಸಮಾಜದ ಅನಿವಾರ್ಯ ಅವಶ್ಯಕತೆಗಳಿಗೆ ಉತ್ತರವಾಗಿ ಮೂಡಿಬಂದವು. ಕಾಲ ಅಂಥದಕ್ಕೆ ಮಾಗಿತ್ತು ಎಂದೆ ವಿವಿಧಕ್ಷೇತ್ರಗಳಲ್ಲಿ ಮಾನವ ಪ್ರಯತ್ನಗಳು ಫಲಕಾರಿಯಾದವು — ಎನ್ನುವುದು.

ವಾಕ್‌ಪುಷ್ಪಾ, ದಿದ್ದಾ, ಸುಗಂಧಾ, ಸೂರ್ಯಮತಿ ಮುಂತಾದ ರಾಣಿಯರು ಮತ್ತು ಇತರ ಸಾಮಾನ್ಯ ಸ್ತ್ರೀಯರು ಕೂಡ — ಬದುಕಿದ ರೀತಿಯನ್ನು ಗಮನಿಸಿದರೆ ಸಾರ್ವಜನಿಕ ಜೀವನದಲ್ಲಿ ಸ್ತ್ರೀಯರಿಗೆ ಸಮಾನಾವಕಾಶವಿದ್ದದ್ದು ಕಾಣುತ್ತದೆ. ಪ್ರಾಚೀನ ಭಾರತದ ಸ್ತ್ರೀಯರ ಪಾಂಡಿತ್ಯ - ವೈದಗ್ಧ್ಯಗಳ ಬಗೆಗೆ ಕಲ್ಹಣ (ಮತ್ತು ಇತರ ಇತಿಹಾಸಕಾರರು) ಹಲವಾರು ಶಬ್ದಗಳಲ್ಲಿ ಉಲ್ಲೇಖಿಸಿದ್ದುಂಟು. ಹೆಂಗಸರನ್ನು ಪ್ರತ್ಯೇಕವಾಗಿ ಏಕಾಂತದಲ್ಲಿ ಪರದೆಯೊಳಗೆ ಮುಚ್ಚಿಡುವ ಸಂಪ್ರದಾಯ ಆಗ ಅಜ್ಞಾತವಾಗಿತ್ತು. ಮನೆವಾಳ್ತೆಯ ಕಾರ್ಯಕ್ಷೇತ್ರದಿಂದ ಮಹಿಳೆಯರು ರಾಜಕೀಯ ರಂಗಕ್ಕೆ ಧುಮುಕಿದ್ದುಂಟು. "ಕಲ್ಹಣನ ಕೃತಿಯಲ್ಲಿ" .. ಆರ್.ಎಸ್. ಪಂಡಿತರ 'ರಾಜತರಂಗಿಣಿಯ ಅನುವಾದ'ಕ್ಕೆ ಜವಾಹರ್‌ಲಾಲ್ ನೆಹರೂ ಬರೆದ ಮುನ್ನುಡಿಯಲ್ಲಿ ಹೇಳಿದಂತೆ — "ಮಹಿಳೆಯರೂ ಮಹತ್ವದ ಪಾತ್ರ ವಹಿಸುವುದನ್ನು ಕಾಣುತ್ತೇವೆ; ಪರದೆಯ ಹಿಂದೆ ಅಷ್ಟೇ ಅಲ್ಲ, ರಾಜಸಭೆಗಳಲ್ಲಿ, ಯುದ್ಧರಂಗದಲ್ಲಿ, ನಾಯಕಿಯರಾಗಿ, ಸೈನಿಕರಾಗಿ ಕೂಡ." ರಾಣಿಯರಿಗೆ ತಮ್ಮದೇ ಆದ ಸ್ವಂತ ಬೊಕ್ಕಸದ ಖಾತೆ ಇತ್ತು. ಆಡಳಿತ ರಂಗದಲ್ಲಿ ಅವರು ಸಕ್ರಿಯವಾಗಿ ಭಾಗವಹಿಸುತಿದ್ದರು. ಸಾಮಾಜಿಕ ಅಥವಾ ಸೈನಿಕ ಕ್ಷೇತ್ರದ ಯಾವುದೇ ಹುದ್ದೆಯನ್ನು ವಹಿಸಲು ಲಿಂಗಭೇದ, ಜಾತಿಭೇದ (ಅಥವಾ ಹುಟ್ಟು) ಅಡ್ಡಿಯಾಗಿರಲಿಲ್ಲ. ನರ್ತಕಿಯರು ಕೂಡ ರಾಜಕೀಯದಲ್ಲಿ ತಿರುಗಿ ಬಿದ್ದು ಸೆಣಸಾಟಕ್ಕೆ ಇಳಿದ

---

[2] "ಅರ್ಲಿ ಹಿಸ್ಟೊರಿ ಅಂಡ್ ಕಲ್ಚರ್ ಆಫ್ ಕಶ್ಮೀರ್", 1969; ಪು. 116.

ದ್ದುಂಟು. "ಪ್ರಭುತ್ವದ ಸ್ಥಾಪಿತಹಿತಾಸಕ್ತಿಯ ವಿರುದ್ಧ ದಂಗೆಯೇಳುವಲ್ಲಿ ಖುಶಿಕಂಡ ನಾಡು ಕಾಶ್ಮೀರ........" ಎನ್ನುತ್ತಾನೆ ಕಲ್ಹಣ. "ಈ ದೇಶದಲ್ಲಿ — ದೇವಾಲಯಗಳಲ್ಲಿ ನರ್ತನ ಸೇವೆ ಸಲ್ಲಿಸುವ ದೇವದಾಸಿಯರೂ ಆಳರಸರ ವಿರುದ್ಧ ಮೇಲೆದ್ದು ಬರುವಲ್ಲಿ ಸಂತಸಪಟ್ಟಿದ್ದಾರೆ."

ಕರ್ಕೋಟಕರ ಅನಂತರದ ಆಡಳಿತಾವಧಿಯಲ್ಲಿ ಬೇಸಾಯದ ಮಹತ್ವ ತೀರ ಹೆಚ್ಚಿತು. ಬೇಸಾಯಗಾರರ, ಕೃಷಿಕರ ಜೀವನ ಸ್ಥಿತಿಯ ಸ್ಪಷ್ಟ ಚಿತ್ರವನ್ನು ನೀಡುವಲ್ಲಿ ರಾಜತರಂಗಿಣಿ ಮೌನ ವಹಿಸುತ್ತದೆ. ಜಮೀನುದಾರಿಕೆಯ ಶ್ರೀಮಂತ ವರ್ಗವಾದ "ಡಾಮರರು" ಹುಟ್ಟುವಳಿಯನ್ನು ಸುಲಿಗೆ ಮಾಡುತ್ತಿದ್ದ ವಿವರಣೆಯಿಂದ ಇದನ್ನು ನಾವು ಊಹಿಸಬಹುದು. ಡಾಮರರ ಬಗೆಗೆ ಮತ್ತು ಸೈನಿಕವರ್ಗದ "ತಂತ್ರಿ" ಗಳ ಬಗೆಗೆ — ಈ ಎರಡು ವರ್ಗದವರೂ ರಾಜ್ಯದ ಗೊಂದಲದಲ್ಲಿ ತಮಗೆ ಬೇಕಾದವರನ್ನು ಪಟ್ಟದಲ್ಲಿ ಕೂಡಿಸಿ ಕುಣಿಸಿದ ಮಂದಿ - ತನ್ನ ಅಸಮಾಧಾನವನ್ನು ಕಲ್ಹಣ ಎಂದೂ ಮುಚ್ಚಿಟ್ಟವನಲ್ಲ.

ಕಾಶ್ಮೀರದಲ್ಲಿ ಅಸ್ಪೃಶ್ಯತೆಯ ಸುದ್ದಿಯೆ ಇರಲಿಲ್ಲ — ಬೌದ್ಧಧರ್ಮದ ಉಚ್ಛ್ರಾಯ ಕಾಲದಲ್ಲೆ ಪ್ರಾಯಃ ಈ ಪದ್ಧತಿ ಅಳಿಸಿ ಹೋಗಿರಬೇಕು. ರಾಜ ಚಕ್ರವರ್ಮ "ಅಸ್ಪೃಶ್ಯ ವರ್ಗ" ಕ್ಕೆ ಸೇರಿದ ಡೊಂಬರ ಹುಡುಗಿಯನ್ನು ಮದುವೆಯಾಗಿದ್ದ. ವಾಸ್ತವವಾಗಿ, ಡೊಂಬರು ಭಾರತದ ಇತರ ಭಾಗಗಳಂತೆ ಅಲ್ಲಿ ಅಸ್ಪೃಶ್ಯರಾಗಿರಲೇ ಇಲ್ಲ. ಡೊಂಬರು ಒಳ್ಳೆಯ ಹಾಡುಗಾರರಾಗಿದ್ದರು ಎಂದು ಕಲ್ಹಣ ಹೇಳುತ್ತಾನೆ. ಇಲ್ಲಿ ಉಲ್ಲೇಖಗೊಂಡ ಇನ್ನೊಂದು ಕೆಳವರ್ಗದ ಜನಾಂಗ ಚಂಡಾಲರು; ಇವರಲ್ಲಿ ಕೆಲವರು ರಾಜನ ಅಂಗ ರಕ್ಷಕರಾಗಿದ್ದರು. ರಾಜತರಂಗಿಣಿ ಬೆಳಕಿಗೆತಂದ ಇನ್ನೊಂದು ಸಂಗತಿಯೆಂದರೆ ಅತ್ಯಂತ ವೀರರಾದ ಕೆಲವು ಸೇನಾಮುಖಂಡರು ಬ್ರಾಹ್ಮಣರಾಗಿದ್ದರು — ಮುಂದೆ ಮರಾಠರು ಊರ್ಜಿತಗೊಳಿಸಿದ ಇಂಥ ಒಂದು ಆರೋಗ್ಯಕರವಾದ ಸಾಮಾಜಿಕ ನಡವಳಿ ಅಂದೇ ಕಾಶ್ಮೀರದಲ್ಲಿತ್ತು. ಇಲ್ಲಿ ಗಮನಿಸಬೇಕಾದ ಮಾತು ಇದು: ಭಾರತದ ಬೇರೆ ಭಾಗಗಳಲ್ಲಿ ಪ್ರಚಲಿತವಾಗಿದ್ದಂತೆ — ಬ್ರಾಹ್ಮಣರು ಮತ್ತು ಕೆಳವರ್ಗದ ಜನರ ನಡುವಣ ಮಧ್ಯಂತರ ಜಾತಿ ಪ್ರಭೇದಗಳು ಕಾಶ್ಮೀರದಲ್ಲಿ ಗೊತ್ತೇ ಇರಲಿಲ್ಲ.

ರಾಜತರಂಗಿಣಿ ಕಾಶ್ಮೀರದ ರಾಜರ ಆಳಿಕೆಯ ದಾಖಲೆಗಷ್ಟೇ ಸೀಮಿತವಾದ ಕೃತಿಯಲ್ಲ. ತನ್ನ ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ಜೀವನದ ಒಂದು ಅಧಿಕೃತ ಚಿತ್ರವನ್ನು ಕಲ್ಹಣ ನಮ್ಮ ಮುಂದಿಡುತ್ತಾನೆ. ಕಾಶ್ಮೀರದ ಮತ್ತು ಆಸುಪಾಸಿನ ಪ್ರಾಂತಗಳ ಗತಕಾಲದ ಬದುಕಿನ ಮಾಹಿತಿಗಳ ಒಂದು ಬೃಹತ್ ಗಣಿ ರಾಜತರಂಗಿಣಿ. ಕಲ್ಹಣನ ಅನಂತರ ಕಾಲದ ಕಾಶ್ಮೀರಿ ಇತಿಹಾಸದ ವೈವಿಧ್ಯಮಯವಾದ ಅವಸ್ಥಾಂತರಗಳ ಅರಿವಿಗೂ ಈ ಕೃತಿ ನೆರವು ನೀಡುತ್ತದೆ. ಕಲ್ಹಣನ ಅನಂತರ, ಮೊಗಲರ ಬಗಲಿಗೆ ಕಾಶ್ಮೀರ ಬೀಳುವ ತನಕದ (ಕ್ರಿ.ಶ. 1588) ಈ ನಡುವಿನ ಕಾಲ ರಾಜತರಂಗಿಣಿಯ ಕೊನೆಯ ಭಾಗದಲ್ಲಿ ಕಂಡುಬರುವ ಐತಿಹಾಸಿಕ ಸ್ಥಿತಿ-ಗತಿಗಳ ನಿರಂತರ ಅನುವೃತ್ತಿಯನ್ನೆ ಪ್ರದರ್ಶಿಸುತ್ತದೆ.

ರಾಜತರಂಗಿಣಿಯ ವಿವರಣಾತ್ಮಕವಾದ, ಬೋಧಪ್ರದವಾದ ಪದ್ಯಗಳು ಕಲ್ಹಣನ ಕಾವ್ಯ ಶೈಲಿಯಲ್ಲಿ ಒಂದು ಸ್ವಂತಿಕೆಯ ವೈಶಿಷ್ಟವನ್ನು, ಹಿರಿಮೆಯನ್ನು ನಿರ್ಮಿಸುತ್ತವೆ. ಕಲ್ಹಣ ತನ್ನ ಬಗ್ಗೆ ಏನೇ ಅಂದರೂ ಅವನು ಜಂಭದ ಕೋಳಿಯಲ್ಲ. ಅವನ ಆಕರ ಗ್ರಂಥಗಳು ಎಷ್ಟರ ಮಟ್ಟಿಗೆ ಸತ್ಯಕ್ಕೆ ಹತ್ತಿರವಾದವು ಎನ್ನುವುದು ಖಚಿತವಾಗದಿದ್ದರೂ ವಿನೀತವಾಗಿ ಆದರೂ ದೃಢವಾಗಿ ಕೆಳಗಣ ಪದ್ಯಗಳಲ್ಲಿ ಅವನು ತನ್ನ ಅನ್ನಿಸಿಕೆಗ ಳನ್ನು ಹೇಳಿಕೊಂಡಿದ್ದಾನೆ.

ಪೂರ್ವೈರ್ಬದ್ಧಂ ಕಥಾವಸ್ತು ಮಯಿ ಭೂಯೋ ನಿಬಧ್ನತಿ, ।
ಪ್ರಯೋಜನಮನಾಕರ್ಣ್ಯ ವೈಮುಖ್ಯಂ ನೋಚಿತಂ ಸತಾಮ್ ।। 1.8

“ಹಿಂದಿನವರು ಬರೆದಿಟ್ಟ ಕಥಾಸಾಮಗ್ರಿಯನ್ನೆ ನಾನು ಮತ್ತೆ ಬರೆಯುತಿದ್ದೇನೆ. ಆದರೂ ಈ ಪುನಾರಚನೆಯ ಪ್ರಯೋಜನವೇನು ಎನ್ನುವುದನ್ನು ಆಲಿಸದೆ ಸಜ್ಜನರು ಈ ಕೃತಿಯ ಬಗ್ಗೆ ಬೆನ್ನು ತಿರುಗಿಸುವುದು ತರವಲ್ಲ.”

ದೃಷ್ಟಂದೃಷ್ಟಂ ನೃಪೋದಂತಂ ಬದ್ಧ್ವಾ ಪ್ರಮಯಮಾಯುಷಾಮ್,
ಅರ್ವಾಕ್‌ಕಾಲಭವೈರ್ವಾರ್ತಾ ಯತ್ ಪ್ರಬಂಧೇಷು ಪೂರ್ಯತೇ ।
ದಾಕ್ಷ್ಯಂ ಕಿಯದಿದಂ ತಸ್ಮಾದಸ್ಮಿನ್ ಭೂತಾರ್ಥವರ್ಣನೇ,
ಸರ್ವಪ್ರಕಾರಂ ಸ್ಖಲಿತೇ ಯೋಜನಾಯ ಮಮೋದ್ಯಮಃ ।। (1.9 - 10)

“ರಾಜರ ಚರಿತೆಗಳನ್ನು ಕಣ್ಣಾರೆ ಕಂಡವರು ಅದನ್ನು ಬರೆದಿಟ್ಟು ಕಾಲವ ಶರಾದರು. ಆ ಸುದ್ದಿಯನ್ನೆ ಅರ್ವಾಚೀನರು ತಮ್ಮ ಪ್ರಬಂಧಗಳಲ್ಲಿ ತೂರಿದರು. ಭೂತಕಾಲದ ಸುದ್ದಿಯನ್ನು ಕಣ್ಮುಚ್ಚಿ ದಾಖಲಿಸುವ ಇಂಥ ಕೃತಿಯಲ್ಲಿ ದಕ್ಷತೆಯೇನು ಬಂತು? ಎಲ್ಲಿ ಎಲ್ಲ ಬಗೆಯಿಂದಲೂ ಪ್ರಾಚೀನರು ಎಡವಿದ್ದಾರೋ ಅಂಥಲ್ಲಿ ಅದನ್ನು ಸರಿಹೊದಿಸುವುದಕ್ಕಾಗಿ ನನ್ನ ಈ ಪ್ರಯತ್ನ.”

ಕಲ್ಹಣನ ಕೃತಿಯ ಉಪದೇಶದ ಸಾರ ಇದು: “ಈ ಐಹಿಕದ ಹಮ್ಮುಬಿಮ್ಮು ಗಳೆಲ್ಲ ಕ್ಷಣಿಕ. ನೀತಿ-ನಿಯಮಗಳನ್ನು ಮೀರಿ ನಡೆದವನು ತನ್ನ ಪಾಪದ ಫಲವನ್ನು ಅನುಭವಿಸಲೇಬೇಕು.” ಅವನ ಈ ಗ್ರಂಥದ ಎಂಟು ತರಂಗಗಳ ಪೈಕಿ ನಾಲ್ಕು ತರಂಗ ಗಳು ಈ ರೀತಿಯ ಉದ್ಗಾರಗಳೊಡನೆ ಉಪಸಂಹಾರಗೊಳ್ಳುತ್ತವೆ. ರಾಜತರಂಗಿಣಿಯ ಕೊನೆಯ ತರಂಗದಲ್ಲಿ ಬಂದ ಅವನ ಆಳವಾದ ಚಿಂತನಗಳಲ್ಲಿ ಒಂದು: “ಬೆಳಕಿಗೆ ಕತ್ತಲೆಯ ಕಡಿವಾಣ ಇಲ್ಲ. ಅದು ತಾನೇ ಸಹಜವಾಗಿ ಬೆಳಗ ಬಲ್ಲುದು. ಆದರೂ ಒಂದು ಬೆಳಕಿನ ಹಿಂದೆ ನೂರಾರು ಕತ್ತಲೆ-ನೆಳಲಿನ ಮಸುಕು, ಹಾಗೆಯೆ ಸುಖಕ್ಕೆ ದುಃಖದ ಅನುಬಂಧವಿಲ್ಲ, ನಿಜ. ಆದರೆ ಸುಖದ ಅನುಭೂತಿಗೆ ಎಣೆಯಿರದ ದುಃಖದ ಮಸುಕು” (VIII, 1913).

ಕಲ್ಹಣ ಅದೃಷ್ಟವಾದಿಯೇನೂ ಅಲ್ಲ. ಅವನು; ಥಾಮಸ್ ಹಾರ್ಡಿಯಂತೆ,

"ಪರಿಸ್ಥಿತಿಯ ಕೈಗೊಂಬೆತನ" ವನ್ನು ನಂಬುವವನಲ್ಲ. ಬೌದ್ಧಸಿದ್ಧಾಂತದಂತೆ ಅವನದೂ ಕರ್ಮವಾದದಲ್ಲಿ ದೃಢವಾದ ನಂಬಿಕೆ. ಇಡಿಯ ಗ್ರಂಥದ ಉದ್ದಗಲಕ್ಕು ಈ ಕರ್ಮಸಿದ್ಧಾಂತದ ನಂಬಿಕೆ ಮುಂಚೂಣಿಯಲ್ಲಿ ನಿಲ್ಲುತ್ತದೆ. ಇದೊಂದು ಗಮನಾರ್ಹ ಅಂಶ. ಏಕೆಂದರೆ ಕಲ್ಹಣನ ಕಾಲದ ಕಾಶ್ಮೀರದಲ್ಲಿ ಬೌದ್ಧಧರ್ಮದ ಸ್ಥಾನದಲ್ಲಿ ಆಗಲೇ ಶೈವಧರ್ಮ ಕಾಲೂರಿತ್ತು. "ಎಲ್ಲವೂ ಕಾಲದ ಜತೆಗೆ ಕ್ಷೀಣಿಸುತ್ತದೆ; ಮತ್ತು ಕ್ರಮಶಃ ನಶಿಸುತ್ತದೆ. ಒಬ್ಬ ಕಲಾವಿದ ಮಾತ್ರವೆ ಪರದೆಯ ಹಿಂದೆ ಸರಿಯುತ್ತಿರುವ ಈ ಭೂತ ಕಾಲದ ಚಿತ್ರವನ್ನು ಸೆರೆಹಿಡಿಯಬಲ್ಲ; ನಶ್ವರತೆಯನ್ನು ಎದುರಿಸಿ ಅದನ್ನು ಸ್ಥಿರವಾಗಿ ಅಚ್ಚೊತ್ತಿ ನಿಲ್ಲಿಸಬಲ್ಲ ಎನ್ನುವುದು ಕಲ್ಹಣನಿಗೆ ತಿಳಿದಿತ್ತು."

ಓದುಗರೂ ತನ್ನ ಜತೆಗೆ ತಾಳ್ಮೆಯಿಂದಿರಬೇಕೆಂದು ಕಲ್ಹಣ ನಿರೀಕ್ಷಿಸುತ್ತಾನೆ. ತಾನು ತನ್ನ ಕಾಲದ ಯಾವನೇ ದೊರೆಯ ಭಟ್ಟಂಗಿಯಲ್ಲ ಎನ್ನುವುದನ್ನು ಅವನು ಸ್ಪಷ್ಟಪಡಿಸಿದ್ದಾನೆ. ಬಹುಮಟ್ಟಿಗೆ, ಅವನ ಈ ಬರವಣಿಗೆ, ಈ ಸಂಕಲನ ತನ್ನ ವಸ್ತುನಿಷ್ಠತೆಗಾಗಿ ಅವಲಂಬನಾರ್ಹವಾಗಿದೆ. ಅದರಿಂದ ಇತಿಹಾಸದ ಗತಿಯಲ್ಲಿ ಅವನು ಗುರುತಿಸಿದ ಪಾಠಗಳಿಂದ ಓದುಗ ಲಾಭಪಡೆಯಬಹುದು.

ಸಾಮಾನ್ಯತಃ ಕರಾರುವಾಕ್ಕಾದ ಮಾಹಿತಿಗಳನ್ನೆ ಕಲ್ಹಣನ ರಾಜತರಂಗಿಣಿ ನಮಗೆ ನೀಡುತ್ತದೆ. ಅದರಿಂದಾಗಿ ಅನಂತರದ ಸಂಸ್ಕೃತ ಇತಿಹಾಸಗ್ರಂಥಗಳ ವಿಕ್ಷಿಪ್ತ ಐತಿಹಾಸಿಕ ದಾಖಲೆಗಳನ್ನು ಹೆಚ್ಚು ಸ್ಫುಟವಾಗಿ ಅರ್ಥವಿಸುವುದು ಸಾಧ್ಯವಾಗಿದೆ. ಅದಕ್ಕಾಗಿ ಈ ಕೃತಿಗೆ ಅಗ್ರಮನ್ನಣೆ ಸಲ್ಲಬೇಕು. ಹೀಗಾಗಿ, ಹಿರಿಯ ಕವಿ — ಇತಿಹಾಸಕಾರನಾದ ಕಲ್ಹಣ ಕಾಶ್ಮೀರದ ಪ್ರಾಚೀನ ಸಂಸ್ಕೃತಿ ಮತ್ತು ಇತಿಹಾಸವನ್ನಷ್ಟೆ ಮರೆವಿನ ಮರೆಯಿಂದ ಪಾರುಮಾಡಿದ್ದಲ್ಲ. ಅದರ ಜತೆಗೆಯೆ, ಒಬ್ಬ ವಿದ್ಯಾರ್ಥಿಗೆ ಇತಿಹಾಸಲೇಖಕರ ವಿಕ್ಷಿಪ್ತವಾದ ದಾಖಲೆಗಳನ್ನು ಸಂಯೋಜಿಸಿ ಒಟ್ಟಂದದ ರೂಪ ಕೊಡುವಲ್ಲಿಯೂ ನೆರವಾಗುತ್ತಾನೆ. ಕೊನೆಯದಾಗಿ, ಕಾಶ್ಮೀರಿ ಇತಿಹಾಸದ ವಿದ್ಯಾರ್ಥಿ, ಭಾರತದ ಇತರ ಯಾವುದೇ ಪ್ರಾಂತಕ್ಕಿಂತ ಹೆಚ್ಚು ಅಧಿಕೃತವಾಗಿ ಹೆಚ್ಚು ದಕ್ಷತೆಯಿಂದ ಮತ್ತು ಹೆಚ್ಚು ತೃಪ್ತಿಕರವಾಗಿ ಕಾಶ್ಮೀರದ ಭೂತಕಾಲದ ಬಗೆಗೆ ಮಾತನಾಡಬಲ್ಲ; ಆ ಕಾಲದ ನೈತಿಕ ಮತ್ತು ಭೌತಿಕ ಮೌಲ್ಯಗಳಿಂದ ಪಾಠ ಕಲಿಯಬಲ್ಲ.

ಇತರ ಇತಿಹಾಸಕಾರರು

ಕಲ್ಹಣನ ರಾಜತರಂಗಿಣಿ ಪ್ರಾಚೀನ ಕಾಶ್ಮೀರ ಮತ್ತು ಅದರ ಅಕ್ಕಪಕ್ಕದ ಗಡಿ ನಾಡುಗಳ ಬಗೆಗಿನ ಮಾಹಿತಿಗಳ ಗಣಿಯಾಗಿದೆ. ಕಲ್ಹಣನ ಅನಂತರದ ಕಾಶ್ಮೀರದ ವೈವಿಧ್ಯಮಯ ಬದುಕಿನ ಅರಿವಿಗೂ ಇದು ನೆರವೀಯುತ್ತದೆ. ಕವಿ - ಇತಿಹಾಸ ಕಾರ ಕಲ್ಹಣ ಇತಿಹಾಸರಚನೆಯ ಸಂಪ್ರದಾಯವನ್ನೆ ನಿರ್ಮಿಸಿದ ಆಚಾರ್ಯಪುರುಷ. ಮುಂದಿನ ಇತಿಹಾಸಕಾರಲೆಲ್ಲ ಈ ಜಾಡನ್ನೇ ತುಳಿದು ಮುಂದೆ ನಡೆದರು. ಅನಂತರದ ಇತಿಹಾಸ ಲೇಖಕರಲ್ಲಿ ಹೆಚ್ಚಿನವರು ಕಲ್ಹಣನಂತೆಯೆ ವಿದ್ವಾಂಸರೂ ಹೌದು; ಕವಿಗಳೂ ಹೌದು.

ಪಂಡಿತ ಜೋನರಾಜ ಕಲ್ಹಣನ ರಾಜತರಂಗಿಣಿಯನ್ನು ತನ್ನ ಕಾಲದ ತನಕ ಬೆಳೆಸಿ ಮುಂದುವರಿಸಿದ. ಕ್ರಿ.ಶ. 1383ರಲ್ಲಿ ಹುಟ್ಟಿದ್ದನೆಂದು ನಂಬಲಾದ ಜೋನ ರಾಜ (ಇವನ ಮೂಲ ಹೆಸರು ಜ್ಯೋತ್ಸ್ನಾಕರ) ಒಬ್ಬ ಖ್ಯಾತ ಇತಿಹಾಸಕಾರ. ಅವನು ಈ ಇತಿಹಾಸವನ್ನು ಕ್ರಿ.ಶ. 1459 ರ ತನಕ ಮುಂದುವರಿಸಿ ಸಂಸ್ಕೃತ ಪದ್ಯಗ ಳಲ್ಲಿ ಬರೆದಿಟ್ಟ. ಇವನ ಪಾಂಡಿತ್ಯದ ಪ್ರತಿಭೆಯನ್ನು ಆಗಣ ಉದಾರವಾದಿ ಮುಸ್ಲಿಂ ದೊರೆ ಜೈನ್-ಉಲ್-ಅಬಿದಿನ್ (ಕ್ರಿ.ಶ. 1420 - 1470) ಗುರುತಿಸಿದ. ಕಲ್ಹಣನ ರಾಜ ತರಂಗಿಣಿಯ ಇತಿಹಾಸದ ಎಳೆಯನ್ನು ತನ್ನ ಕಾಲದ ತನಕ ಮುಂದುವರಿಸುವಂತೆ ಈ ಸುಲ್ತಾನನೆ ಆತನನ್ನು ಕೇಳಿಕೊಂಡ. ಈ ಹೊಸ ಕೃತಿಗೆ ದ್ವಿತೀಯ (ಎರಡನೆಯ) ರಾಜತರಂಗಿಣಿ ಎಂದು ಹೆಸರಿಡಲಾಯಿತು.

ಜೋನರಾಜನ ತರಂಗಿಣಿಯ ಹೆಚ್ಚಿನ ಭಾಗ ಅನಂತರದ (ಅರ್ಥಾತ್ ಕಲ್ಹ ಣೋತ್ತರ ಕಾಲದ) ಹಿಂದೂ ರಾಜರ ಆಡಳಿತದ ಮಾಹಿತಿಯನ್ನು ನೀಡುತ್ತದೆ. ಇದು ಜಯಸಿಂಹ ರಾಜನಿಂದ ರಾಣಿ ಕೋಟಾಳವರೆಗಿನ ಅವಧಿಯನ್ನು ಒಳಗೊಂಡಿದೆ. ಪಾಂಡಿ ತ್ಯಪೂರ್ಣವಾದ ಮೂರು ವ್ಯಾಖ್ಯಾನಗಳನ್ನು ಬರೆದ ಜೋನರಾಜನ ವಿದ್ವತ್ತೆ ಇತಿಹಾ ಸಕಾರನಾಗಿ ಅವನ ಸಾಧನೆ ಮತ್ತು ಕೌಶಲಗಳಲ್ಲಿ ತುಂಬ ಪ್ರಭಾವ ಬೀರಿದೆ. ಶ್ರೀಕಾಂತ ಕೌಲ್ ಅವರು ಹೇಳುವಂತೆ, "ಐತಿಹಾಸಿಕ ನಿರೂಪಣೆಯನ್ನು ಕುಂಠಿತ ಗೊಳಿಸುವ ಮುಖ್ಯ ದೋಷವೆಂದರೆ ಒಕ್ಕಣೆಯ ಅಸ್ಪಷ್ಟತೆ. ಇತಿಹಾಸ ಲೇಖಕನ ಮಾತಿನ ಸರಣಿ ಒಮ್ಮೊಮ್ಮೆ ಖಚಿತವಾದ ಐತಿಹಾಸಿಕ ನಿರ್ಧಾರಕ್ಕೆ ಬರಲು ಬೇಕಾದ ನಿಷ್ಕೃಷ್ಟ ಮಾಹಿ ತಿಯನ್ನು ನಮಗೆ ಒದಗಿಸುವುದಿಲ್ಲ." ಈ ಕವಿ ಇತಿಹಾಸಕಾರನ ಶೈಲಿಯ ಕುರಿತು ಕೌಲರ ವಿಮರ್ಶೆ ಮೇಲಣ ಕಟುಟೀಕೆಯಲ್ಲಿ ಕೊನೆಗೊಳ್ಳುತ್ತದೆ. "ಜೋನರಾಜನ ಮುಚ್ಚಿ ಅಮುಕಿಡುವಂಥ ಮಾತಿನ ಸರಣಿ ನಮ್ಮನ್ನು ಗಲಿಬಿಲಿಗೊಳಿಸುತ್ತದೆ." ಆಳುವ

ದೊರೆಯ ಆಣತಿಯ ಮೇರೆಗೆ ಬರೆದ ಈ ಕೃತಿ ಕೆಲವೆಡೆ ಆಸ್ಥಾನದ ಚರಿತ್ರೆಯಂತೆಯೆ ಕಾಣುತ್ತದೆ. ಪ್ರಾಯಃ ಹಳೆಯ ಆಡಳಿತದ ಬಗೆಗೆ ದೊರೆತ ಮಾಹಿತಿಗಳು ಅರೆ ಬರೆ ಆಗಿದ್ದರಿಂದಲೇ ಇರಬೇಕು, ಹಿಂದಿನ ರಾಜರ ಆಡಳಿತವನ್ನು ತುಂಬ ಚುಟುಕಾಗಿ ವರ್ಣಿಸಲಾಗಿದೆ; ಮಹತ್ವದ ಘಟನೆಗಳನ್ನು ಒಂದು ಸಣ್ಣ ಪದ್ಯದಲ್ಲಿ ಹೇಳಿ ಮುಗಿಸಲಾಗಿದೆ; ಕೆಲವನ್ನಂತು ಸಂಪೂರ್ಣವಾಗಿ ಹೇಳದೆಯೆ ಕೈ ಬಿಡಲಾಗಿದೆ. ಆದರೂ, ಏನೇ ನ್ಯೂನತೆಗಳಿರಲಿ, ಜೋನರಾಜನ 'ರಾಜತರಂಗಿಣಿ' [1] ತನ್ನ ಮಹತ್ವವನ್ನು ಉಳಿಸಿಕೊಂಡಿದೆ. ಏಕೆಂದರೆ ಕ್ರಿ.ಶ. 1150 ರಿಂದ ಜೋನರಾಜ ತೀರಿಕೊಂಡ ವರ್ಷ ಕ್ರಿ.ಶ. 1459 ರ ತನಕದ ಇತಿಹಾಸದ ವಿವರಗಳಿಗೆ ಈಗ ನಮಗೆ ಉಳಿದಿರುವ ಪ್ರಾಚೀನ ಮೂಲಕೃತಿ ಇದೊಂದೆ. ಕೊಟ್ಟ ಕಡೆಯೆಲ್ಲ ವಂಶಾವಳಿಯ ಅನುಕ್ರಮ ಸರಿಯಾಗಿಯೆ ಕೊಡಲಾಗಿದೆ. ಭೂವಿವರಣೆಗಳು ನಂಬಲರ್ಹವಾಗಿವೆ. ಒಟ್ಟಿನಲ್ಲಿ, ಕಲ್ಹಣನ ಕೃತಿಯಂತೆಯೆ ವಿಶಿಷ್ಟವಾದ ಕಾವ್ಯಚೌಕಟ್ಟಿನಲ್ಲಿ ಬರೆಯಲಾದ ಈ ಕೃತಿ ಸಾಕಷ್ಟು ವಸ್ತುನಿಷ್ಠವಾದ ಒಂದು ಇತಿಹಾಸ ಗ್ರಂಥ ಎನ್ನಲಡ್ಡಿಯಿಲ್ಲ.

ಜೋನರಾಜನ ಶಿಷ್ಯ ಶ್ರೀವರ ಕೂಡ ಸುಲ್ತಾನ್ ಜೈನ್-ಉಲ್- ಅಬಿದಿನ್‌ನ ವಿಶ್ವಾಸಪಾತ್ರನಾಗಿದ್ದ. ಅವನು ಈ ಇತಿಹಾಸವನ್ನು 'ಜೈನರಾಜತರಂಗಿಣಿ' ಎಂಬ ಹೆಸರಿನಲ್ಲಿ ಪುನಃ ಮುಂದುವರಿಸಿದ. ಇದರ ನಾಲ್ಕು ಪರಿಚ್ಛೇದಗಳಲ್ಲಿ ಕ್ರಿ.ಶ. 1459 ರಿಂದ ಕ್ರಿ.ಶ. 1486ರ ತನಕದ ಇತಿಹಾಸ ಒಳಗೊಂಡಿದೆ. ಜೋನರಾಜನಂತೆ ಈತನೂ ಪಂಡಿತ-ಕವಿ ಮಾತ್ರವಲ್ಲ, ಸ್ವತಃ ಸಂಗೀತಜ್ಞನೂ ಆಗಿದ್ದ. ಇವನು ತನ್ನ ಗುರುವಿನ ಶೈಲಿಯ ಬದಲು ಸಂಪೂರ್ಣವಾಗಿ ಕಲ್ಹಣನ ಶೈಲಿಯನ್ನೆ ಅನುಸರಿಸಿದ. ಹೀಗಾಗಿ ಜೋನರಾಜನ ಗ್ರಂಥಕ್ಕೆ ಅವನು ಸೇರಿಸಿದ ಅನುಬಂಧ ಕಲ್ಹಣನ ಮೂಲ ರಾಜತರಂಗಿಣಿಯಂತೆಯೆ ಕಾಣಿಸುತ್ತದೆ. ಅವನ ಈ ನಾಲ್ಕು ಪರಿಚ್ಛೇದಗಳು ಸಮಕಾಲೀನ ಬದು

[1] ಡಾ. ಜಿ.ಎಂ.ಡಿ. ಸೂಫಿಯವರು ತಮ್ಮ 'ಕಶೀರ್'ನಲ್ಲಿ ಗುರುತಿಸುವಂತೆ, ಜೆ.ಸಿ. ದತ್ತರು ಬಳಸಿದ (1835ರ ಕಲ್ಕತ್ತ ಆವೃತ್ತಿ) ಜೋನರಾಜನ ಸಂಸ್ಕೃತ ಮೂಲಕೃತಿ 980 ಶ್ಲೋಕಗಳನ್ನು ಒಳಗೊಂಡಿದ್ದರೆ, ಡಾ. ಪೀಟರ್‌ಸನ್ನರ ಮೂಲದಲ್ಲಿ (1896ರ ಮುಂಬಯಿ ಆವೃತ್ತಿ) 1334 ಶ್ಲೋಕಗಳಿವೆ. ಡಾ. ಸೂಫಿ ಹೇಳುತ್ತಾರೆ, "ಪ್ರಾಜ್ಯಭಟ್ಟನ ಕೃತಿ ರಾಜಾವಳಿ ಪತಾಕೆಯನ್ನು ಈ ತನಕವೂ ಗಮನಕ್ಕೆ ತೆಗೆದುಕೊಂಡಂತಿಲ್ಲ. ಅಲ್ಲದೆ ಶುಕನ ರಾಜತರಂಗಿಣಿಯನ್ನೆ ಪ್ರಾಜ್ಯಭಟ್ಟ ಮತ್ತು ಶುಕ ಇವರಿಬ್ಬರ ಸಂಯುಕ್ತ ಕೃತಿಯೆಂದು ಶ್ರೀದತ್, ಡಾ. ಪೀಟರ್‌ಸನ್ ಮತ್ತು ಸರ್ ಅರೆಲ್ ಸ್ಟೈನ್ ಭ್ರಮಿಸಿಕೊಂಡಿದ್ದಾರೆ. ಸುಲ್ತಾನ್ ಫತೇಹ್ ಶಾ ಕಾಶ್ಮೀರದ ಸಿಂಹಾಸನವನ್ನು ಮೂರು ಬಾರಿ ಏರಿದ್ದರ ಪರಿಣಾಮವಾಗಿ ಅವರು ಈ ಘಟನಾವಳಿಯನ್ನು ಸಹಜವಾಗಿ ಗೊಂದಲಿಸಿಕೊಂಡಿದ್ದಾರೆ. ಶ್ರೀವರ ತನ್ನ ಇತಿಹಾಸ ಕೃತಿಯನ್ನು ಮುಗಿಸಿದ್ದಾಗ ಫತೇಹ್ ಶಾ ಮೊದಲ ಬಾರಿಗೆ ಅರಸನಾಗಿದ್ದ. ಶುಕ ತನ್ನ ಕೃತಿಯನ್ನು ಬರೆಯತೊಡಗಿದಾಗ ಫತೇಹ್ ಶಾ ಪುನಃ ಇನ್ನೊಂದು ಬಾರಿ ಪಟ್ಟವೇರಿದ್ದ. ಒಬ್ಬನೇ ರಾಜ ಎರಡನೆಯ ಬಾರಿ ಆಳುತ್ತಿದ್ದ ಪರಿಣಾಮವಾಗಿ ಈ ಮೂವರು ವಿದ್ವಾಂಸರ ಕಾಲದ ಕೊಂಡಿಯಲ್ಲಿ ಅನುಸ್ಯೂತತೆ ಕಾಣಿಸಿಕೊಂಡಿತು."

ಕಿನ ಅಮೂಲ್ಯ ವಿವರಗಳನ್ನು ನೀಡುವ ಮೂಲಕ ತುಂಬ ಮಹತ್ವದ್ದಾಗುತ್ತವೆ. ಅವನ ಇತಿಹಾಸ ಬರವಣಿಗೆಯಿಂದ ಒಂದು ಅನುಕೂಲವಾಗಿದೆ. ಮಹತ್ವದ ಪ್ರದೇಶಗಳ ಸ್ಥಳನಾಮಗಳು ಬದಲಾವಣೆ ಗೊಳ್ಳುತ್ತಿರುವುದನ್ನು ಅವನ ಚರಿತ್ರ ಕೃತಿ ಸೂಚಿಸುತ್ತದೆ. ಉದಾ:- ಲಲಿತಾದಿತ್ಯನ ಖ್ಯಾತ ದೇವಾಲಯದ ಅನತಿದೂರದಲ್ಲಿರುವ ನೀರ ಚಿಲುಮೆಯ ದೇಗುಲ ಮಾರ್ತಂಡ ತೀರ್ಥವನ್ನು ಅವನು 'ಭವನ' ಎಂಬ ಹೆಸರಿನಿಂದ ಉಲ್ಲೇಖಿಸುತ್ತಾನೆ. ಈಗಲೂ ಅದೇ ಹೆಸರು ಉಳಿದುಕೊಂಡಿದೆ. ತನ್ನ ಉದ್ಯೋಗದಲ್ಲಿ ನಿಷ್ಠೆಯಿಂದ ನಡೆದುಕೊಂಡ ಶ್ರೀವರ, ಸುಲ್ತಾನ್ ಜೈನ್-ಉಲ್-ಅಬಿದಿನ್‌ನ ಅನಂತರ ಅವನ ಉತ್ತರಾಧಿಕಾರಿಯಾದ ಸುಲ್ತಾನ್ ಹಸನ್ ಶಾಹ್ (ಕ್ರಿ.ಶ. 1472 - 84) ಕಾಲದಲ್ಲಿ ಕೂಡ ಆಸ್ಥಾನಿಕವಾಗಿ ಮುಂದುವರಿದ. ವಾಸ್ತವವಾಗಿ, ಸಂಗೀತಕ್ಕೆ ಆಶ್ರಯ ನೀಡಿ ಪೋಷಿಸುವ ಸಂಪ್ರದಾಯವನ್ನು ಈ ದೊರೆಯೂ ಮುಂದುವರಿಸಿದ್ದನಲ್ಲದೆ' ಶ್ರೀವರನನ್ನೆ ಈ ಸಂಗೀತವಿಭಾಗದ ಮುಖ್ಯಸ್ಥನನ್ನಾಗಿಯೂ ನೇಮಿಸಿದ್ದ. ಅನಂತರ ಸುಲ್ತಾನ, ಮಹಮ್ಮದ್ ಶಾಹ್ (ಕ್ರಿ.ಶ. 1484 - 86) ಕೂಡ ಶ್ರೀವರನಿಗೆ ಆಸ್ಥಾನದ ಆಶ್ರಯ ನೀಡಿ ಗೌರವಿಸಿದ್ದ.

ಇವನ ಗ್ರಂಥ ಒಳಗೊಂಡ ಕಾಲಾವಧಿ (ಕ್ರಿ.ಶ. 1459 - 86) ಮೂರು ದಶಕಗಳಿಗಿಂತಲೂ ಕಮ್ಮಿಯಾದರೂ ಶ್ರೀವರನ ನಿರೂಪಣೆ ಸಾಕಷ್ಟು ವಿವರವಾಗಿದ್ದು ಸಾಮಾನ್ಯತಃ ಈ ಕೃತಿಯ ಬರವಣಿಗೆಯ ಮಟ್ಟ ಜೋನರಾಜನ ಬರವಣಿಗೆಗಿಂತ ಉತ್ತಮವಾದದ್ದು ಎಂದು ಒಪ್ಪಲಾಗಿದೆ. ಸ್ಟೇಯ್ನ್ [2] ಶ್ರೀವರನ ಬಗ್ಗೆ ಬರೆಯುತ್ತಾ ಹೀಗೆ ಹೇಳುತ್ತಾರೆ: "ಈತನದು ಕಲ್ಹಣನನ್ನು ಕಣ್ಮುಚ್ಚಿ ಅನುಕರಿಸುವ ಗುಲಾಮಗಿರಿ" ಅವರು ಮತ್ತು ಮುಂದುವರಿದು ಹೇಳುತ್ತಾರೆ: "ಇವನ ಮೂಲಗ್ರಂಥದ ಬಹುಭಾಗ ಒಂದು ಸ್ವತಂತ್ರರಚನೆ ಎನ್ನುವುದಕ್ಕಿಂತ ಹೆಚ್ಚು ರಾಜತರಂಗಿಣಿಯದೆ ಒಂದು ಪರಿಚ್ಛೇದ ಎನ್ನುವಂತೆ ಕಾಣುತ್ತದೆ. ಜೋನರಾಜನಂತೆಯೆ ಇವನ ಬರವಣಿಗೆ ಕೂಡ ಒಬ್ಬ ಆಸ್ಥಾನ ಪಂಡಿತನಾದ ಇತಿಹಾಸಕಾರನದು......" ಏನಿದ್ದರೂ ಶ್ರೀವರನ ಇತಿಹಾಸ ಗ್ರಂಥಕ್ಕೆ ತಕ್ಕ ಗೌರವವನ್ನು ಸ್ಟೇಯ್ನ್ ಸಲ್ಲಿಸುತ್ತಾರೆ: "ಇಷ್ಟಿದ್ದೂ ಇದು ಮಹತ್ವದ ಕೃತಿ ಏಕೆಂದರೆ ಇದು ಒಳಗೊಂಡ 30 ವರ್ಷಗಳ ಐತಿಹಾಸಿಕ ವಿವರಗಳಿಗೆ ಇದೊಂದೇ ಸಮಕಾಲೀನ ದಾಖಲೆ."

ಶ್ರೀವರನ ಈ ಇತಿಹಾಸ ನಿರೂಪಣೆಯನ್ನು ಪಂಡಿತ ಪ್ರಾಜ್ಯಭಟ್ಟ ಮತ್ತೆ ಮುಂದುವರಿಸಿದ. ಅವನ ಗ್ರಂಥದ ಹೆಸರು ರಾಜಾವಳಿಪತಾಕಾ. ಕ್ರಿ.ಶ. 1486 ರಿಂದ 1513 - 14ರ ತನಕದ ಸುಮಾರು ಇಪ್ಪತ್ತೇಳು ವರ್ಷಗಳ ಅವಧಿಯ ವಿವರಣೆಯನ್ನು ಇದು ಒಳಗೊಂಡಿದೆ. ಈ ಅವಧಿಯಲ್ಲೆ ಸುಲ್ತಾನ್ ಫತೇಹ್ ಶಾಹ್ ಮತ್ತು ಸುಲ್ತಾನ್ ಮುಹಮ್ಮದ್ ಶಾಹ್ ಇವರಿಬ್ಬರೂ ಎರಡುಬಾರಿ ಒಬ್ಬರನ್ನೊಬ್ಬರು ಪರಸ್ಪರ ಪದಭ್ರ

---

[2] ಸ್ಟೇಯ್ನ್ ಎಂ.ಎ. : "ಕ್ರಾನಿಕಲ್ ಆಫ್ ದಿ ಕಿಂಗ್ಸ್ ಆಫ್ ಕಶ್ಮೀರ್", ರಾಜತರಂಗಿಣಿಯ ಇಂಗ್ಲಿಷ್ ಅನುವಾದ.

ಷ್ವಗೊಳಿಸಿ ಪಟ್ಟವೇರಿದ್ದರು. ಕ್ರಿ.ಶ. 1584 ರಲ್ಲಿ ಸಮ್ರಾಟ್ ಅಕ್‌ಬರನು ಕಾಶ್ಮೀರ ಕಣಿವೆಯನ್ನು ಸ್ವಾಧೀನಪಡಿಸಿಕೊಂಡ ಮೇಲೆ ಶ್ರೀವರನ ಶಿಷ್ಯ ಶುಕ [3] ರಾಜಾವಳಿ ಪತಾಕೆಯನ್ನು ಪೂರ್ತಿಗೊಳಿಸಿದ. ಕಲ್ಹಣನ ಖ್ಯಾತ ಕೃತಿಯಂತೆಯೆ ಅವನೂ ತನ್ನ ಕೃತಿಗೆ ರಾಜತರಂಗಿಣಿ ಎಂದೇ ಹೆಸರಿಟ್ಟ. ಈ ಎಲ್ಲ ಇತಿಹಾಸ ಕೃತಿಗಳ ವಿವರಣೆಗಳ ಹೊರತಾಗಿಯೂ ಈ ಕಾಲದ ಅರಸೊತ್ತಿಗೆಗಳ ಬಗೆಗಿನ ಹಲವಾರು ಹೇಳಿಕೆಗಳು ಇನ್ನೂ ಕೆಲವು ಗೊಂದಲವನ್ನು ಉಳಿಸಿಬಿಟ್ಟಿವೆ. ಹಳೆಯ ಕಾಲದಿಂದ ಹೊಸ ತಲೆಮಾರಿಗೆ ಪೇಟೆಪಟ್ಟಣಗಳ ಮತ್ತು ಇತರ ಪ್ರದೇಶಗಳ ಹೆಸರುಗಳಲ್ಲಿ ಆದ ಮಾರ್ಪಾಟು (ಕೆಲವು ಈಗಣ ಸ್ಥಳನಾಮಗಳಿಗೆ ತೀರ ಹತ್ತಿರವಾದಂಥವು) ಪ್ರಾಜ್ಯಭಟ್ಟ ಮತ್ತು ಶುಕನ ಕೃತಿಗಳಲ್ಲಿ ಹೆಚ್ಚು ಗಮನಾರ್ಹವಾಗಿ ಕಂಡು ಬರುತ್ತದೆ. ಆರ್.ಕೆ. ಪರ್ಮು [4] ಅವರ ಅಭಿಪ್ರಾಯದಂತೆ, "ಪ್ರಾಜ್ಯಭಟ್ಟನ ಮೂಲಕೃತಿ ಖಂಡಿತವಾಗಿಯೂ ನಷ್ಟವಾಗಿ ಹೋಗಿದೆ. ನಾವು ಈಗ ಕಾಣುವಂಥದು ಅವನ ಉತ್ತರಾಧಿಕಾರಿ ಶುಕ 50 ಶ್ಲೋಕಗಳಲ್ಲಿ ಸಂಗ್ರಹಿಸಿಟ್ಟ ಅವನ ಮೂಲ ಕೃತಿಯ ಸಾರಾಂಶ ಮಾತ್ರ." ತಾರ್ಕಿತ ಸಮರ್ಥನೆ ಇಲ್ಲದೆ, ಆಕಸ್ಮಿಕ ಎನ್ನುವಂತೆ ವಿಕ್ಷಿಪ್ತವಾಗಿ ಬರೆಯುವ ಶುಕನ ವಿಷಯನಿರೂಪಣ ಕ್ರಮ ದೋಷಪೂರ್ಣವಾದದ್ದು, ಹಲವೆಡೆ ವಂಶಾನುಕ್ರಮವೂ ತಪ್ಪಾಗಿದೆ. ಅವನ ಭೌಗೋಳಿಕ ಸ್ವಭಾವ ಪರಿಜ್ಞಾನವೂ ಖಚಿತವಾದದ್ದಲ್ಲ.

ರಾಜತತರಂಗಿಣಿಯ ಸಂಪ್ರದಾಯವನ್ನೆ ಮುಂದುವರಿಸಿದ ಇನ್ನೊಂದು ಕೃತಿ ಉಂಟು. 'ಲೋಕ ಪ್ರಕಾಶ', ಎಂಬ ಹೆಸರಿನ ಈ ಕೃತಿಯನ್ನು 11ನೆಯ ಶತಕದಲ್ಲಿ ಕ್ಷೇಮೇಂದ್ರ ಪ್ರಾರಂಭಿಸಿದ್ದ ಎಂದು ನಂಬಲಾಗಿದೆ. ಇದರ ಎರಡನೆಯ ಪರಿಚ್ಛೇದದಲ್ಲಿ ಶಾಜಹಾನನ ಉಲ್ಲೇಖವಿರುವುದು ಆ ಭಾಗವನ್ನು 17ನೆಯ ಶತಕದಲ್ಲಿ ಬರೆಯಲಾಯಿತು ಎನ್ನುವುದನ್ನು ಸೂಚಿಸುತ್ತದೆ. ಈ ಕೃತಿಯ ಬರವಣಿಗೆಯ ರೀತಿಯಿಂದ ದೃಢೀಕೃತವಾಗುವ ಸಂಗತಿ: ಇದೊಂದು ಸಂಸ್ಕೃತ, ಪರ್ಶಿಯನ್ ಮತ್ತು ಅಲ್ಲಲ್ಲಿ ಕಶ್ಮೀರಿ ಭಾಷೆಯ ಕಲಬೆರಕೆಯ ಕೃತಿ. ಇಷ್ಟಿದ್ದೂ, ಒಂದು ವಿಶೇಷಕಾರಣಕ್ಕಾಗಿ ಈ ಕೃತಿ ಮಹತ್ವದ್ದಾಗುತ್ತದೆ. ಇದರಲ್ಲಿ ಅರಸೊತ್ತಿಗೆಯ ರಾಜಕೀಯ ವಿವರಣೆಗಿಂತಲು ಆಡಳಿತದ, ಸಾಮಾಜಿಕ ಮತ್ತು ಆರ್ಥಿಕ ಸಂಗತಿಗಳ ಬಗೆಗೆ ಹೆಚ್ಚು ಮಾಹಿತಿ ನೀಡಲಾಗಿದೆ.

ಅನಂತರದ ಈ ಇತಿಹಾಸಗ್ರಂಥಗಳು ಸಾಹಿತ್ಯದ ಮೌಲ್ಯದೃಷ್ಟಿಯಿಂದ ಯಾವ ನಿಟ್ಟಿನಲ್ಲು ಕಲ್ಹಣನ ರಾಜತರಂಗಿಣಿಗೆ ಸರಿಸಾಟಿಯಾಗಿ ನಿಲ್ಲಲಾರವು. ಒಟ್ಟಿನಲ್ಲಿ ಹೇಳುವುದಾದರೆ, ಅವುಗಳ ವೈಯಕ್ತಿಕ ಕೊರತೆಗಳೇನೇ ಇರಲಿ, ಕಲ್ಹಣನ ಇತಿಹಾಸರಚನೆಯ ಈ ಪದ್ಧತಿಯನ್ನು ಅವು ಗಣನೀಯವಾಗಿ ಬೆಳೆಸಿಕೊಂಡು ಬಂದವು. ಕಾಶ್ಮೀರದ ಆಡ

---

3 "ನೋಡಿ ಕಿಂಗ್ಸ್ ಆಫ್ ಕಾಶ್ಮೀರ್ - III", ಜೋನರಾಜ, ಶ್ರೀವರ ಮತ್ತು ಶುಕ ಇವರ ರಾಜತರಂಗಿಣಿಗಳ ಅನುವಾದ. ಅನುವಾದಕರು: ಜೆ.ಸಿ. ದತ್ತ, ಕಲ್ಕತ್ತ, 1898.

4 "ಹಿಸ್ಟೋರಿ ಆಫ್ ಮುಸ್ಲಿಂ ರೂಲ್ ಇನ್ ಕಶ್ಮೀರ್"; 1320 - 1819, ಹೊಸದಿಲ್ಲಿ, 1969.

ಳಿತ ಹಿಂದುಗಳಿಂದ ಮುಸ್ಲಿಮರ ಕೈಗೆ ಹಸ್ತಾಂತರಗೊಂಡ ಈ ಸಂಧಿಕಾಲದ ಬಗೆಗಿನ ಸಾಕಷ್ಟು ಅಧಿಕೃತವಾದ ದಾಖಲೆ ಇಲ್ಲಿ ನಮಗೆ ದೊರಕುತ್ತದೆ. ಆದ್ದರಿಂದ "ಇವು ಕಾಶ್ಮೀರಿಗಳ ಸಮಕಾಲೀನ ಬದುಕಿನ ಮೇಲೆ ಬೆಳಕು ಚೆಲ್ಲುತ್ತವೆ ಮತ್ತು ಅಕ್‌ಬರನ ವಿಜಯದ ಪೂರ್ವಕಾಲದ, ಎರಡೂವರೆ ಶತಕಗಳ ಅವಧಿಯಲ್ಲಿ ಬಹುತೇಕ ಅವಿಚ್ಛಿನ್ನವಾಗಿ ನಡೆದುಕೊಂಡು ಬಂದ - ಕ್ಷೋಭೆಗಳನ್ನು, ದಮನಗಳನ್ನು ದಾಖಲಿಸುತ್ತವೆ."[5] ಸಮಕಾಲೀನ ಘಟನೆಗಳ ಬಗ್ಗೆ ಅವರ ದಾಖಲೆಗಳು — ಅಲ್ಲಿ ಇಲ್ಲಿ ಬರವಣಿಗೆಗೆ ಅವರ ವೈಯಕ್ತಿಕ ಅಭಿರುಚಿ — ಅಭಿಪ್ರಾಯಗಳ ಬಣ್ಣ ಬಂದಿರಬಹುದಾದರೂ ಒಟ್ಟಂದದಲ್ಲಿ ಸಮರ್ಪಕವಾಗಿಯೆ ಇವೆ. ಜೋಗೇಶಚಂದ್ರ ದತ್ತರು ಹೇಳುವ, ಈ ಮಾತು ಸರಿಯಾದದ್ದೆ: "ಈ ಲೇಖಕರ ಬರಹಗಳು, ಈ ಭೂಭಾಗದ ಬೇರೆ ಯಾವುದೇ ಇತಿಹಾಸಕೃತಿ ದೊರಕದೆ ಇರುವುದರಿಂದ, ಐತಿಹಾಸಿಕ ದೃಷ್ಟಿಯಿಂದ ಮಹತ್ವದ ಕೃತಿಗಳು ನಿಜ; ಆದರೆ ವ್ಯಕ್ತಿಗತ ಮತ್ತು ಘಟನೆಗಳ ಬಗೆಗೆ ಅವರ ಅನ್ನಿಸಿಕೆಗಳನ್ನು ನಾವು ಕಣ್ಮುಚ್ಚಿ ಒಪ್ಪಿಬಿಡುವುದು ಸಾಧ್ಯವಿಲ್ಲ. ಏಕೆಂದರೆ ಅವರು, ಏನೇ ಆದರೂ ಆಸ್ಥಾನ ಪಂಡಿತರಾಗಿದ್ದರು ಎನ್ನುವುದನ್ನು ನಾವು ನೆನಪಿಡಬೇಕು. ಅವರ ಬದುಕಿನ ಸರ್ವಸ್ವವೂ, ಯಾರ ಚರಿತೆಯನ್ನು ಅವರು ಬರೆದರೋ ಅಂಥ ಆಳರಸರ ಮಂದಹಾಸದ ಮಿನುಗಿನಲ್ಲಿ ನಿಂತಿತ್ತು. "[6]

ಮುಸ್ಲಿಮರ ಆಡಳಿತ ಬಂದ ಮೇಲೆಯೂ ಸುಮಾರು ಎರಡು ಶತಕಗಳ ಕಾಲ ರಾಜಕೀಯ ವ್ಯವಹಾರಗಳ ಅಧಿಕೃತಭಾಷೆ ಸಂಸ್ಕೃತವೆ ಆಗಿತ್ತು. ಕ್ರಮಶಃ ಸಂಸ್ಕೃತದಲ್ಲಿ ಚರಿತ್ರಗ್ರಂಥಗಳನ್ನು ಬರೆದಿಡುವ ಬಳಕೆ ಮಾಸಿತು. ಪರ್ಶಿಯನ್ ಭಾಷೆಯ (ಮತ್ತು ಸಾಹಿತ್ಯದ) ಮೇಲೆ ಮುಸ್ಲಿಂ ದೊರೆಗಳ ರಾಜಾಶ್ರಯದ ಕೃಪಾದೃಷ್ಟಿ ಹರಿಯಿತು. ಕಾಶ್ಮೀರದ ವಿದ್ವಾಂಸರು ಚತುರತೆಯಿಂದ ಈ ಬದಲಾವಣೆಯನ್ನು ಮೈಗೂಡಿಸಿಕೊಂಡರು ಮತ್ತು ಪರ್ಶಿಯನ್ ಭಾಷೆಯಲ್ಲೆ ಇತಿಹಾಸ ಗ್ರಂಥಗಳನ್ನು ಬರೆಯತೊಡಗಿದರು.

ಸುಲ್ತಾನ್ ಜೈನ್-ಉಲ್-ಅಬಿದಿನ್ ರಾಜತರಂಗಿಣಿಯನ್ನು ಸಂಸ್ಕೃತದ ಪದ್ಯರೂಪದಲ್ಲೆ ಮುಂದುವರಿಸಿ ಬರೆಸಿದ್ದು ಮಾತ್ರವಲ್ಲ; ಮುಲ್ಲಾ ಅಹಮದನಿಂದ ಅದನ್ನು ಪರ್ಶಿಯನ್ನಿಗೂ ಅನುವಾದ ಮಾಡಿಸಿದ. ಅನುವಾದಕನ ಆಯ್ಕೆ ತುಂಬಾ ಯೋಗ್ಯವಾಗಿತ್ತು. ಮುಲ್ಲಾ ಅಹಮದ್ ಖ್ಯಾತ ವಿದ್ವಾಂಸನಾಗಿದ್ದ ಸ್ವಂತ ಅರ್ಹತೆಯಿಂದ ಮಹಾನ್ ಕವಿ ಮತ್ತು ಇತಿಹಾಸತಜ್ಞ ಎಂದು ಹೆಸರು ಪಡೆದಿದ್ದ. ಬಹ್‌ರ್-ಉಲ್-ಅಸ್‌ಮರ್ (ಕಥೆಗಳ ಕಡಲು) ಎಂಬ ಹೆಸರಿನ ಈ ಅನುವಾದವನ್ನು ಪ್ರಾಯಃ ಅವನು ಅರ್ಧದಷ್ಟು ಮಾಡಿ ಮುಗಿಸಿದ್ದು, ಅದನ್ನು ಅಬ್ದುಲ್ ಕಾದಿರ್ ಬದಾಯುನಿ (ಅಕ್‌ಬರನ ಆಡಳಿತದ ಕಾಲದಲ್ಲೆ) ಪೂರ್ಣಗೊಳಿಸಿದ.

ಅಲ್ಲದೆ, ಸಮ್ರಾಟನ ಅಪೇಕ್ಷೆಯಂತೆ ಅವನು ಮೂಲವನ್ನು ಪರಿಷ್ಕರಣಗೊಳಿಸಿ

---

[5] ಬಂಜಾಯಿ, ಪಿ.ಎನ್ ಕೌಲ್: "ಎ ಹಿಸ್ಟೊರಿ ಆಫ್ ಕಶ್ಮೀರ್"; 1962.

[6] ಮುನ್ನುಡಿ: "ಕಿಂಗ್ಸ್ ಆಫ್ ಕಶ್ಮೀರ್", ಸಂ.III.

ದಿನಬಳಕೆಯ ಆಡುಮಾತಿನ ಪರ್ಶಿಯನ್ ಭಾಷೆಗೆ ಪರಿವರ್ತಿಸಿದ. ಈ ಎರಡು ತರ್ಜು ಮೆಗಳೂ ಈಗ ಸಿಕ್ಕಿಲ್ಲ. ಮುಲ್ಲಾ ಅಹಮದನ ಇತಿಹಾಸಗ್ರಂಥವೆ ಮಲಿಕ್ ಹೈದರ್ ಚೌದುರಾನ ಕೃತಿಗೆ ಮೂಲಾಧಾರ ಎನ್ನುವುದು ನಿಶ್ಚಿತ.

ಕಲ್ಹಣನ ರಾಜತರಂಗಿಣಿಯ ಧಾಟಿಯಲ್ಲೆ ಮಲಿಕ್ ಹೈದರನು, ಪುರಾತನ ಕಾಲ ದಿಂದ ತನ್ನ ಕಾಲದ ತನಕದ, ಅರ್ಥಾತ್ ಜಹಾಂಗೀರನ ಆಡಳಿತ ಕಾಲದ ತನಕದ ಕಾಶ್ಮೀರದ ಚರಿತೆಯನ್ನು ಪರ್ಶಿಯನ್ ಬಾಷೆಯಲ್ಲಿ ಬರೆದನು. ಸಮ್ರಾಟ್ ಜಹಾಂಗೀ ರನ ಆಡಳಿತದ 12ನೆಯ ವರ್ಷದಲ್ಲಿ, ಕ್ರಿ.ಶ.1617 ರಲ್ಲಿ ಈ ಆಖ್ಯಾಯಿಕೆ ಕೊನೆಗೊಳ್ಳು ತ್ತದೆ. ಹೈದರನ ಈ ಕೃತಿ 'ತವಾರಿಖ್-ಇ-ಕಶ್ಮೀರ್' ಸಮಕಾಲೀನ ಘಟನೆಗಳಿಗೆ ರೋಚ ಕವಾಗಿ ಬೆಳಕುಚೆಲ್ಲುವ ಕನ್ನಡಿಯಾಗುತ್ತದೆ. ಅದಕ್ಕೆ ಕಾರಣ ಆ ಕಾಲದ ರಾಜಕೀಯ ಘಟನೆಗಳಲ್ಲಿ ಮಲಿಕ್ ಹೈದರನಿಗಿದ್ದ ವೈಯಕ್ತಿಕ ನೇರ ಸಂಪರ್ಕ. ರಾಜಕೀಯದಲ್ಲಿ ಅವನು ಒಳಗೊಂಡ ಬಗೆ ಕಲ್ಹಣನಿಗಿಂತಲು ಹೆಚ್ಚು ನೇರವಾದದ್ದು, ಘನಿಷ್ಠವಾದದ್ದು; ಶೇರ್ ಆಫ್‌ಗಾನ್ ಖಾನನ ವಿಧವೆ ಮಿಹ್ರ್-ಉನ್- ನೀಸಾಳು ಹೈದರ್ ಮತ್ತು ಅವನ ಸೋದರ ಮಲಿಕ್ ಅಲಿಯಿಂದ ರಕ್ಷಿತಳಾಗಿ ಅನಂತರ ನೂರ್ ಜಹಾನ್ ಆದಳು. ಅವಳ ಕೃತಜ್ಞತೆಯ ಚಿಹ್ನೆಯಾಗಿ ಮಲಿಕ್ ಹೈದರನನ್ನು ಅವಳು ಜಹಾಂಗೀರನಿಗೆ ಶಿಫಾರಸು ಮಾಡಿದಳು. ಪರಿಣಾಮವಾಗಿ ಜಹಾಂಗೀರ್ ಅವನಿಗೆ ಬಿರುದುಗಳನ್ನಿತ್ತು ಗೌರವಿಸಿದನು. ಮತ್ತು ಕಾಶ್ಮೀರ ಸರಕಾರದಲ್ಲಿ ಅವನಿಗೆ ಸ್ವಂತಿಕೆಯ ಅಧಿಕಾರ ನೀಡಿ ದನು. ಈ ಕೊಡುಗೆಗಳಿಗೆ ಅವನು ಅರ್ಹನೂ ಆಗಿದ್ದನು. ಅವನೊಬ್ಬ ಶಿಲ್ಪಿ ಕೂಡ ಆಗಿದ್ದು ಜಮಾ ಮಸ್‌ಜಿದ್ ಮತ್ತು ಇತರ ಮಸೀದಿಗಳನ್ನು ಪುನಾರಚಿಸಿದ್ದ; ಮಲಿಕ್ ಹೈದರನ ಉಪನಾಮ ಚೌದುರಾ, ಅವನ ಹಳ್ಳಿಯಿಂದಾಗಿ ಬಂದದ್ದು; ಶ್ರೀನಗರದಿಂದ 17 ಕಿ.ಮಿ. ದಕ್ಷಿಣಕ್ಕೆ ಇರುವ ಈ ಹಳ್ಳಿ ಮಲಿಕನ ಹುಟ್ಟೂರಾಗಿತ್ತು ಎಂದು ಜಹಾಂ ಗೀರನು ತನ್ನ ಆತ್ಮಚರಿತ 'ತುಝುಕ್-ಇ-ಜಹಾಂಗಿರಿ'ಯಲ್ಲಿ ಹೇಳಿದ್ದಾನೆ. ಕುತೂಹಲದ ಸಂಗತಿಯೆಂದರೆ ಮಲಿಕ್ ಹೈದರ್, ಅಬ್ದುಲ್ ಫಝುಲ್ ಮತ್ತಿತರರು ಕಂಠೋಕ್ತವಾಗಿ ರಾಜತರಂಗಿಣಿಯನ್ನೇ ಆಧರಿಸಿ ಬರೆದ, ಕಾಶ್ಮೀರೀ ಇತಿಹಾಸದ ಗ್ರಂಥಗಳೆಲ್ಲ ಐತಿಹ್ಯ ಮತ್ತು ಪವಾಡಗಳನ್ನೊಳಗೊಂಡ ದಂತಕಥೆಗಳಲ್ಲಿ ಬಹ್ವಂಶವನ್ನು ಯಥಾವತ್ತಾಗಿ ನಕಲು ಮಾಡುತ್ತವೆ. ಕಲ್ಹಣ ಬರೆದ ಪ್ರಾಚೀನ ಹಿಂದೂ ರಾಜರ ಕಥೆಗಳನ್ನು ಮಲಿಕ್ ಹೈದರ್ ಇನ್ನಷ್ಟು ಸಿಂಗರಿಸಿ ಬಣ್ಣಕೊಟ್ಟು ಬಣ್ಣಿಸುವ ತನಕವೂ ಮುಂದುವರಿಯು ತ್ತಾನೆ. ಬದಲಾಗಿ, ಕಲ್ಹಣ ನಿರೂಪಿಸಿದ ಲೋಹರ ರಾಜವಂಶದ ದಾಖಲೆ ಮುಂತಾದ ಕೆಲವೆಡೆ ಮಾತ್ರ ಅವನು ಅವಾಸ್ತವ ಸಂಗತಿಗಳನ್ನು ಗುರುತಿಸುತ್ತಾನೆ. ವಾಸ್ತವವಾಗಿ ಇವು ಬಹ್ವಂಶ ಇತಿಹಾಸ ಸಮ್ಮತವಾದವುಗಳು.

'ತವಾರಿಖ್-ಇ-ಕಶ್ಮೀರಿ' ಎಂಬ ಇದೇ ಹೆಸರನ್ನು ಹೊತ್ತ ಇನ್ನೊಂದು ಇತಿಹಾ ಸಗ್ರಂಥ ಹಸನ್ ಅಲಿ ಕಶ್ಮೀರಿಯವರ ರಚನೆ. ಹಿಂದಿನದಕ್ಕೆ ಹೋಲಿಸಿದರೆ ಇದೊಂದು ಪುಟ್ಟಕೃತಿ. ಕ್ರಿ.ಶ. 1616 ರಷ್ಟು ಹಿಂದಿನ ದಿನಗಳಿಂದ ಹಸನ್ ಶಾಹ್‌ನ ಆಡಳಿತದ

ಕೊನೆಯ ತನಕ ಕಾಶ್ಮೀರದಲ್ಲಿ ಸುಲ್ತಾನರ ಆಡಳಿತದ ಘಟನೆಗಳ ವಿವರವಾದ ದಾಖಲೆಯನ್ನು ಇದು ಒದಗಿಸುತ್ತದೆ. ಕವಿ - ಇತಿಹಾಸಕಾರನಾಗುವ ಕಲ್ಹಣನ ಸಂಪ್ರದಾಯ ಮತ್ತು ಮುಂದುವರಿಯಿತು. ಕವಿ ಮತ್ತು ಪರ್ಶಿಯನ್ ಸಾಹಿತಿ ನಾರಾಯಣ ಕೌಲ್ ಅಜೀಜ್ (ಇಲ್ಲಿ 'ಅಜೀಜ್' ಎನ್ನುವುದು ಆತನ ಪರ್ಶಿಯನ್ ಕಾವ್ಯನಾಮ) ಕೂಡ ಹೈದರ್ ಮಲಿಕನ ಜಾಡಿನಲ್ಲೇ ಸಾಗಿ, ಕ್ರಿ.ಶ. 1710 ರಲ್ಲಿ, 'ತವಾರಿಖ್-ಇ-ಕಶ್ಮೀರ್' ಬರೆದರು. ಇದರಲ್ಲಿ ಅವರು ಸುಲ್ತಾನರ ಮತ್ತು ಪೂರ್ವದ ಮುಘಲರ ವಸ್ತುನಿಷ್ಠವಾದ ಚಿತ್ರವನ್ನು ನೀಡಿದ್ದಾರೆ. ಏನಿದ್ದರೂ ಹೆಚ್ಚಿನ ಕಥಾನಕಗಳು ಹೈದರ್ ಮಲಿಕನ ಇತಿಹಾಸ ಗ್ರಂಥವನ್ನೇ ಆಧರಿಸಿ ಬರೆದಂಥವು.

ಇತಿಹಾಸಕಾರನಿಗೆ ಬೇಕಾದ ಜಾಣ್ಮೆಯಲ್ಲಿ ತನ್ನ ಆಳವನ್ನು ತೋರಿದ ಇನ್ನೊಬ್ಬ ಕವಿ ಮಹಮ್ಮದ್ ಅಝುಮ್ ಕೌಲ್. ಅನೇಕ ಗ್ರಂಥಗಳನ್ನು ಬರೆದ ಈತ ಅನಂತರದ ಮುಘಲರ ಕಾಲದಲ್ಲಿ ಶ್ರೀನಗರದಲ್ಲಿ ಬದುಕಿದ್ದವರು. ಅವರ ಕೃತಿಯ ಹೆಸರು 'ವಕತ್-ಇ-ಕಶ್ಮೀರ್' (ಕಾಶ್ಮೀರದ ಘಟನಾವಳಿಗಳು). ಕ್ರಿ.ಶ. 1746 ರಲ್ಲಿ ಈ ಕೃತಿ ಪೂರ್ಣಗೊಂಡಿತು. ಇದೊಂದು ಪರಿಶ್ರಮಪೂರ್ಣವಾದ ಕೃತಿ. 11 ವರ್ಷಗಳ ಕಾಲಾವಧಿಯನ್ನು ಒಳಗೊಂಡ ಈ ಗ್ರಂಥ ಪೂರ್ವ ಕೃತಿಗಳ ಸಾರಸಂಗ್ರಹರೂಪವಾಗಿದ್ದರೂ ಆ ಕಾಲದ ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯಿಕ ಒಲವು-ನಿಲವುಗಳತ್ತ ಬೆಳಕು ಚೆಲ್ಲುವ ಮೂಲಕ ಮಹತ್ವದ್ದಾಗುತ್ತದೆ. ಸಾಹಿತ್ಯಕ್ಷೇತ್ರದ ಈ ಸಾಧನೆಗಳಷ್ಟೇ ಅಲ್ಲದೆ ಖ್ವಾಜಾ ಮುಹಮ್ಮದ್ ಅಝಾಮ್ ಒಬ್ಬ ಸಂತನಾಗಿ ಕೂಡ ಗೌರವದ ಸ್ಥಾನ ಗಳಿಸಿದ್ದರು. ಕ್ರಿ.ಶ. 1765 ರಲ್ಲಿ ಅವರು ತೀರಿಕೊಂಡ ಅನಂತರ ಅವರ ಮಗ ಖ್ವಾಜಾ ಮಹಮ್ಮದ್ ಅಸ್ಲಾಂ ತಂದೆಯ ಇತಿಹಾಸ ಕೃತಿಯನ್ನು 'ಗೌಹರ್-ಇ-ಆಲಮ್' (ವಿಶ್ವದ ರತ್ನಗಳು) ಎಂಬ ಹೆಸರಿನಲ್ಲಿ ಮುಂದುವರಿಸಿದರು.

19ನೆಯ ಶತಮಾನಕ್ಕೆ ಬಂದಾಗ ನಾವು ಕಾಶ್ಮೀರದ ಇನ್ನೊಬ್ಬ ಕವಿ - ಇತಿಹಾಸಕಾರನನ್ನು ಕಾಣುತ್ತೇವೆ. ಇವರೇ ಪಂಡಿತ ಬೀರ್‌ಬಲ್ ಕಚ್ರು. ಇವರು ಪರ್ಶಿಯನ್ ಸಾಹಿತ್ಯದಲ್ಲಿ ಖ್ಯಾತ ವಿದ್ವಾಂಸರಾಗಿದ್ದು, 'ಮುಖ್ತಸರ್-ತಾರಿಖ್-ಇ-ಕಶ್ಮೀರ್' (ಕಾಶ್ಮೀರದ ಸಂಕ್ಷಿಪ್ತ ಇತಿಹಾಸ) ಎಂಬ ಕೃತಿಯನ್ನು ರಚಿಸಿದ್ದರು. ಈ ಗ್ರಂಥ ಕ್ರಿ.ಶ. 1835 ರಲ್ಲಿ, ಎರಡನೆಯ ದೋಗ್ರ ಮಹಾರಾಜ ರಣಜಿತ್ ಸಿಂಗರ ಕಾಲದಲ್ಲಿ ರಚಿತವಾಯಿತು. ಮುಘಲ್ ಮತ್ತು ಅಫಘಾನರ ಕಾಲದ ಕಾಶ್ಮೀರದ ವೈವಿಧ್ಯಮಯ ಇತಿಹಾಸವನ್ನು ವಿಸ್ತಾರವಾಗಿ ಬಣ್ಣಿಸಿದ ಕಚ್ರು, ಕಲ್ಹಣನಂತೆಯೆ, ಜನತೆಯ ಆರ್ಥಿಕ ಸ್ಥಿತಿ-ಗತಿಯ ಬಗ್ಗೆಯೂ ವಿವರವಾಗಿ ಬರೆಯುತ್ತಾರೆ. ಹಿಂದೂಗಳ ಸಂಪ್ರದಾಯ ಮತ್ತು ಸಾಮಾಜಿಕ ಪದ್ಧತಿಗಳಿಗೇ ಹೆಚ್ಚು ಒತ್ತು ನೀಡಿದ್ದರೂ ಅವರು ಆ ಕಾಲದ ನೆಲೆ-ಬೆಲೆಯನ್ನು ತೂಗಿ ನೋಡಿದ ರೀತಿ ಇತಿಹಾಸತಜ್ಞರಿಗೆ ತುಂಬ ಮೌಲಿಕವಾದದ್ದು; ಇತಿಹಾಸ ಸಮರ್ಥಿಸದ ಕೆಲವು ಹೇಳಿಕೆಗಳು, ಅತ್ಯುಕ್ತಿಗಳು ಇದರಲ್ಲಿ ಕಂಡು ಬಂದರೂ ಅವು ಅಕ್ಷಮ್ಯವೇನೂ ಅಲ್ಲ.

ಭಾರತೀಯ ಸಂಸ್ಕೃತ ಸಾಹಿತ್ಯದಲ್ಲಿ ಕಾಶ್ಮೀರದ ಬಗ್ಗೆ ಹೆಚ್ಚೇನೂ ವಿವರ ದೊರಕುವುದಿಲ್ಲ. ನಾವು ಈ ಮೊದಲೇ ಗುರುತಿಸಿದಂತೆ, ಈ ಕೊರತೆಯೆ ಪರೋಕ್ಷವಾಗಿ ಕಲ್ಹಣನ ಕೃತಿಯ ಮಹತ್ವವನ್ನು ಹೆಚ್ಚಿಸಿದೆ; ಕಾಶ್ಮೀರ ಮಾತ್ರವೇ ಏನು; ಅಧ್ಯಯನ ಮತ್ತು ಸಾಹಿತ್ಯಿಕ ಚಟುವಟಿಕೆಗಳ ಪ್ರಾಚೀನ ಕೇಂದ್ರಗಳೊಡನೆ ಸಂಪರ್ಕವಿದ್ದ ಇತರ ಪ್ರಾಂತಗಳೂ ಕಾಶ್ಮೀರದಂತೆಯೇ ಅಲಕ್ಷಿಸಲ್ಪಟ್ಟಿವೆ — ಅಥವಾ ಎಲ್ಲೊ ಚಾರು ಚೂರು ಅಪೂರ್ಣವಾಗಿ ಉಲ್ಲೇಖಿಸಲ್ಪಟ್ಟಿವೆ. ಪಾಣಿನಿ ತನ್ನ ಪ್ರಖ್ಯಾತ ವ್ಯಾಕರಣ ಸೂತ್ರಗಳಲ್ಲಿ 'ಕಶ್ಮೀರ' ವನ್ನು ಉಲ್ಲೇಖಿಸಿದ್ದಾನೆ. ಮಹಾಭಾರತ ಮತ್ತು ಪುರಾಣಗಳಲ್ಲಿ ಕಾಶ್ಮೀರಿಗಳ ಉಲ್ಲೇಖ ಬರುತ್ತದೆ. ವರಾಹಮಿಹಿರರ (ಕ್ರಿ.ಶ. 500) ಬೃಹತ್‌ಸಂಹಿತಾದಲ್ಲಿ ಭಾರತದ ಉತ್ತರದ ಸೀಮಾಪ್ರಾಂತವಾಗಿ ಕಾಶ್ಮೀರ ಉಲ್ಲೇಖಗೊಂಡಿದೆ.

ಭಾರತದ ಗಡಿಯಾಚೆ ಹೋದರೆ, ಅದೊಂದು ಬೇರೆಯೆ ಕಥೆ. ತೊಲೆಮಿ ತನ್ನ ಭೂಗೋಳದಲ್ಲಿ (ಕ್ರಿ.ಶ. ಎರಡನೆಯ ಶತಮಾನ), 'ಕೃಸ್‌ಪೀರಿಯ' (ಕಶ್ಮೀರ)ವನ್ನು "ಬಿದಾಸ್ಪೆಸ್ (ವಿತಸ್ತಾ) ನದೀ ಮೂಲದ ಕೆಳಗಡೆಯಿರುವ ಭೂಭಾಗ" ಎನ್ನುತ್ತಾನೆ. ಹೆಕಟಯಸ್ (ಕ್ರಿ.ಪೂ. 546-486) ಎಂಬಾತ ಈ 'ಕಸ್‌ಪಪಿರಾಸ್' ಗಾಂಧಾರ ದೇಶೀಯರ ಪಟ್ಟಣವಾಗಿತ್ತು ಎನ್ನುತ್ತಾನೆ. ಕಾರಣಃ ಹಿಂದಿನ ಕಾಲದಲ್ಲಿ ಕಾಶ್ಮೀರ ಸಾಂಸ್ಕೃತಿಕವಾಗಿ ರಾಜಕೀಯವಾಗಿ ಗಾಂಧಾರ(ಕಾಬೂಲು ಕಣಿವೆ)ದ ಜತೆ ನಿಕಟ ಸಂಪರ್ಕ ಹೊಂದಿತ್ತು. ಹಾಗೆಯೆ, ಹೆರೊಡೋಟಸ್ ('ಇತಿಹಾಸದ ಜನಕ') ಕೂಡ ಕಸ್‌ಪಪಿರಾಸ್‌ನ ಪಟ್ಟಣವನ್ನು ಉಲ್ಲೇಖಿಸುತ್ತಾನೆ.

ಈ ಗ್ರಾಂಥಿಕ ಉಲ್ಲೇಖಗಳು ಪಾಶ್ಚಾತ್ಯ ದೇಶಗಳಲ್ಲಿ ಕೂಡ ಕಾಶ್ಮೀರದ ಖ್ಯಾತಿಯನ್ನು ಸಮರ್ಥಿಸುತ್ತವೆ. ಈ ಕಣಿವೆಯ ಬಗೆಗೆ ಚೀನಿಯರ ಪ್ರಸ್ತಾವಗಳು ಇನ್ನೂ ಹೆಚ್ಚು ವಿವರಗಳನ್ನೊಳಗೊಂಡಿವೆ. ಕ್ರಿ.ಶ. 541 ರಷ್ಟು ಪೂರ್ವದಿಂದಲೆ ಇಂಥ ದಾಖಲೆಗಳು ಸಿಗುತ್ತವೆ. ಖ್ಯಾತ ಚೀನಿಯಾತ್ರಿಕ ಹ್ಯೂಯೆನ್ ತ್ಸಾಂಗ್ ಕ್ರಿ.ಶ. 631 ರಿಂದ ಎರಡು ವರ್ಷಗಳ ಕಾಲ ಈ ಕಣಿವೆಯಲ್ಲಿ ನೆಲಸಿದ್ದ. ಅವನ ನಿರೂಪಣೆ ಸಾಕಷ್ಟು ವಿವರಗಳನ್ನೊಳಗೊಂಡಿದೆ. ಅವನು ಆಗಣ ರಾಜನ ಆಧಿಪತ್ಯ, ಅವನ ಸಹಿಷ್ಣುತೆ, ಅಲ್ಲಿಯ ಜನರು, ಹವಾಮಾನ, ಭೂ ಪ್ರದೇಶ ಮುಂತಾದವನ್ನೆಲ್ಲ ಅನುಕರಣೀಯವಾದ ನಿಖರತೆಯಿಂದ ವರ್ಣಿಸುತ್ತಾನೆ. ಕಾಶ್ಮೀರ ಕಣಿವೆಯ ಮೂಲದ ಬಗೆಗೆ ಆಗ ಬಳಕೆಯಲ್ಲಿದ್ದ ಸಾಂಪ್ರದಾಯಿಕ ಐತಿಹ್ಯಗಳನ್ನು ಅವರು ಬರೆದಿಟ್ಟಿದ್ದು, ಇದು ಇತಿಹಾಸ ಸಂಶೋಧಕರಿಗೆ ತುಂಬ ಉಪಯುಕ್ತವಾಗಿದೆ ಎನ್ನುವುದು ಈಗಾಗಲೆ ಸಿದ್ಧವಾದ ಸಂಗತಿ. ಕ್ರಿ.ಶ. 633 ರಲ್ಲಿ, ತೊಸ್ಮೇದನ್ ಬೆಟ್ಟದ ದಾರಿಯ ಮೂಲಕ ಕಾಶ್ಮೀರ ಕಣಿವೆಯಿಂದ ತಾನು ತೆರಳಿ ಅಲ್ಲಿಂದ ಪುನ್-ನು-ತ್ಸೊ ತಲುಪಿದ್ದಾಗಿ ಆತ ಹೇಳುತ್ತಾನೆ. ಇದೇ ಕಲ್ಹಣನ ಚರಿತ್ರೆಯಲ್ಲಿ ಬರುವ ಪರ್ಣೋತ್ಸ ಮತ್ತು ಈಗಣ ಪೂಂಛ್.

ಟ್ಯಾಂಗ್ ವಂಶೀಯ ಸಾಮ್ರಾಜ್ಯದ ಚರಿತ್ರೆಯೂ ಅಷ್ಟೇ ಮಹತ್ವದ್ದು. ಇದರಲ್ಲಿ ಚೀನಾದ ಆಸ್ಥಾನಕ್ಕೆ ರಾಜ ಚೆಂತೊ-ಲೊ-ಪಿ-ಲಿ (ಸುಮಾರು ಕ್ರಿ.ಶ. 713) ಕಳಿಸಿದ

ಕಾಶ್ಮೀರದ ಮೊದಲ ರಾಯಭಾರದ ಆಗಮನ ಮತ್ತು ಅನಂತರ ಆತನ ಸೋದರ ಉತ್ತರಾಧಿಕಾರಿ ಮು-ತೊ-ಪಿ ಕಳಿಸಿದ ಇನ್ನೊಂದು ರಾಯಭಾರದ ಉಲ್ಲೇಖವುಂಟು. ಇತಿಹಾಸ ತಜ್ಞರು ಏಕಕಂಠದಿಂದ ಒಪ್ಪಿದಂತೆ, ಈ ಹೆಸರುಗಳು ಕಲ್ಹಣನ ರಾಜತರಂಗಿಣಿಯ ಚಂದ್ರಾಪೀಡ ಮತ್ತು ಮುಕ್ತಾಪೀಡ (ಲಲಿತಾದಿತ್ಯ) ನನ್ನು ಉಲ್ಲೇಖಿಸುತ್ತವೆ ಎನ್ನುವುದು ಸ್ಪಷ್ಟ. ಮೊ-ಹೊ-ತೊ-ಮೊ- ಲೋಂಗ್ (ಅರ್ಥಾತ್, ಮಹಾಪದ್ಮ, ವುಲಾರ್ ಸರೋವರದ ಪುರಾತನ ಹೆಸರು) ಕೆರೆಯ ಮತ್ತು ಪೊ-ಲೊ-ಊ-ಲೋಪೋ-ಲೋ (ಅರ್ಥಾತ್, ಪ್ರವರಪುರ, ಈಗಣ ಶ್ರೀನಗರ) ನಗರದ ಉಲ್ಲೇಖಗಳು ಕೂಡ ರಾಜತರಂಗಿಣಿ ಮತ್ತು ಇತರ ಕಾಶ್ಮೀರಿ ಇತಿಹಾಸ ಗ್ರಂಥಗಳಿಂದ ಸಮರ್ಥಿಸಲ್ಪಟ್ಟಿವೆ.

ಹ್ಯೂಯೆನ್ ತ್ಸಾಂಗನಂತೆಯೆ ಉರಶಾ (ಹಝರಾ)ದ ಮೂಲಕ ಕಾಶ್ಮೀರದ ಕಣಿವೆಯನ್ನು ಪ್ರವೇಶಿಸಿದ ಇನ್ನೊಬ್ಬ ಗಮನಾರ್ಹ ಚೀನೀ ಯಾತ್ರಿಕ ಊಕಾಂಗ್ ಕ್ರಿ.ಶ. 759 ರಲ್ಲಿ ಕಾಶ್ಮೀರಕ್ಕೆ ಬಂದ. ಈತ ಸ್ಮರಣಾರ್ಹವಾದ ನಾಲ್ಕು ವರ್ಷಗಳ ಕಾಲ ಇಲ್ಲಿ ತಂಗಿದ್ದ. ಕಣಿವೆಯ ಮತ್ತು ಅಲ್ಲಿಯ ಜನರ ಬಗೆಗೆ ಅವನು ನೀಡಿದ ವಿವರಣೆಯಲ್ಲಿ ಹ್ಯೂಯೆನ್ ತ್ಸಾಂಗನ ವಿವರಣೆಯಂತೆ ನಿಖರತೆ ಮತ್ತು ಸಮಗ್ರತೆ ಇಲ್ಲವಾದರೂ ಐತಿಹಾಸಿಕವಾಗಿ ಮೌಲಿಕತೆ ಇದ್ದೇ ಇದೆ. ಏಕೆಂದರೆ ಅವಂತಿವರ್ಮ (ಕ್ರಿ.ಶ. 855 - 883) ಕಟ್ಟಿಸಿದನೆನ್ನಲಾದ ದೇವಾಲಯ ಮತ್ತು ವಿಹಾರಗಳ ಬಗೆಗೆ ಕಲ್ಹಣ ನೀಡಿದ ಹಲವಾರು ವಿವರಣೆಗಳನ್ನು ಇದು ಸಮರ್ಥಿಸುತ್ತದೆ.

ಟ್ಯಾಂಗ್ ರಾಜವಂಶದ ಅವನತಿಯ ಜತೆಗೆ ಈ ಪರಸ್ಪರ ಯಾತ್ರಾಸಮಾಗಮವೂ ಕೊನೆಗೊಂಡಿತು. ಇದರಿಂದ ನಿಚ್ಚಳವಾಗಿ ಈಶಾನ್ಯಭಾರತದ ರಾಜ್ಯಗಳು ಮತ್ತು ಚೀನಾದ ನಡುವಣ ರಾಜಕೀಯ ಸಂಪರ್ಕ ಇದ್ದಕ್ಕಿದಂತೆ ನಿಂತು ಹೋಯಿತು. ಅನಂತರದ ಎರಡು ಶತಕಗಳಲ್ಲಿ ಚೀನಾದ ಬೌದ್ಧರು ಕಾಶ್ಮೀರವನ್ನು ಸಂದರ್ಶಿಸಿದ್ದುಂಟಾದರೂ ಅವರು ತಮ್ಮ ದಿನಚರಿಯಲ್ಲಿ ಕಾಶ್ಮೀರದ ಬಗೆಗಾಗಲೀ, ಅಲ್ಲಿನ ಜನತೆಯ ಬಗೆಗಾಗಲೀ ಯಾವುದೇ ದಾಖಲೆಯನ್ನು ಉಳಿಸಿ ಹೋಗಿಲ್ಲ.

ಕಾಲಾನುಕ್ರಮದಂತೆ, ಅನಂತರದಲ್ಲಿ ಕಾಶ್ಮೀರದ ಇತಿಹಾಸ ಮತ್ತು ಭೂಗೋಲದ ಬಗೆಗೆ ಬರೆದ ವಿದೇಶೀ ಲೇಖಕರೆಂದರೆ ಪ್ರಾರಂಭದ ಮುಸ್ಲಿಂ ಸಂದರ್ಶಕರು. ಅವರಲ್ಲಿ ತುಂಬ ಮಹತ್ವದ ವ್ಯಕ್ತಿ ಎಂದರೆ ಹಿರಿಯ ಅರಬ್ ವಿದ್ವಾಂಸನಾದ ಅಲ್‌ಬೆರೂನಿ. ವಿವಿಕ್ತವಾದ ಏಕಾಂತತೆಯಲ್ಲಿದ್ದ ಈ ಕಣಿವೆಯತ್ತ — ಘುಜನಿ ಮಹಮೂದನ ವಿಜಯ ಮಾಲಿಕೆಗಳಿಂದಾಗಿ ಅವನ ಕುತೂಹಲ ಕೆರಳಿತು. ಈ ಹೇಳಿಕೆ ಇದನ್ನು ಸಮರ್ಥಿಸುತ್ತದೆ. "ನಮ್ಮ ಕೈ ಇನ್ನೂ ಮುಟ್ಟದಂಥ ಕಾಶ್ಮೀರ, ಕಾಶಿ ಮತ್ತು ಇಂಥ ಇತರ ಪ್ರದೇಶಗಳಿಗೆ ಹಿಂದುಗಳು ಪಲಾಯನ ಮಾಡಿದರು........" ಕಾಶ್ಮೀರ ಮತ್ತು ಕಾಶಿ ಜ್ಞಾನ - ವಿಜ್ಞಾನಗಳ ಪ್ರಖ್ಯಾತ ಕೇಂದ್ರವಾಗಿತ್ತು ಎನ್ನುವುದನ್ನು ಅಲ್‌ಬೆರೂನಿ ಉಲ್ಲೇಖಿಸಿದ್ದಾನೆ. ಮಹಮೂದ್ ಘಜನಿ ಕಾಶ್ಮೀರವನ್ನು ಗೆಲ್ಲಲು ವಿಫಲನಾದ ಎನ್ನುವುದಕ್ಕಾಗಿ ಅವನೆಂದೂ ಹೀಗೆ ಮಾಡಿಲ್ಲ. ಅವನು ಕಾಶ್ಮೀರದ ಬಗೆಗೆ, ಅಲ್ಲಿಯ ಜನರ ಬಗೆಗೆ,

ಅವರ ನೀತಿ - ನಡಾವಳಿಯ ಬಗೆಗೆ, ಅವರ ಬೇಸಾಯ ಪದ್ಧತಿ-ಕಲೆ-ಕುಶಲ ಕೈಗಾರಿಕೆಗಳ ಬಗೆಗೆ, ಭಾರತದ ಇತರ ಭಾಗಗಳ ಬಗೆಗೆ ಬರೆದದ್ದಕ್ಕಿಂತ ಹೆಚ್ಚು ವಿವರವಾಗಿ ಬರೆದಿದ್ದಾನೆ.

ಮುಘಲರ ಲಿಪಿಯಲ್ಲಿ, ಕಾಶ್ಮೀರ ಅನೇಕ ಬರವಣಿಗೆಗಳಿಗೆ ವಸ್ತುವಾಯಿತು. ಅಬುಲ್ ಫಝುಲ್ (ಅಯಿನ್-ಇ-ಅಕ್‌ಬರಿಯಲ್ಲಿ) ಕಾಶ್ಮೀರದ ಪೂರ್ವೇತಿಹಾಸವನ್ನು ಸಂಕ್ಷೇಪವಾಗಿ ಅಳವಡಿಸಿಕೊಂಡಿದ್ದು, ಇದಕ್ಕೆ ಕಲ್ಹಣನ ಕೃತಿಯೆ ತನಗೆ ಮೂಲಾಧಾರ ಎಂದು ಹೇಳಿಕೊಂಡಿದ್ದಾನೆ. ಹಲವು ಮಂದಿ ಐರೋಪ್ಯ ವಿದ್ವಾಂಸರು, ಮುಖ್ಯವಾಗಿ ಫಾ। ಗೆರೋಮ್ ಕ್ಸೇವಿಯರ್ ಮತ್ತು ಫ್ರಾನ್ಸಿಸ್ ಬರ್ನೀರ್ — ಕ್ರಮವಾಗಿ ಅಕ್‌ಬರ್ ಮತ್ತು ಔರಂಗಜೇಬನ ಜತೆಗಿದ್ದವರು — ಕಾಶ್ಮೀರ ಮತ್ತು ಕಾಶ್ಮೀರಿಗಳ ಬಗೆಗೆ ಬರೆದಿದ್ದಾರೆ.

ವೃತಿಯಲ್ಲಿ ವೈದ್ಯರಾದ ಡಾ। ಬರ್ನೀರ್ ಫ್ರಾನ್ಸಿನವರು. ಕ್ರಿ.ಶ. 1665 ರಲ್ಲಿ ಔರಂಗಜೇಬನ ಜತೆ ಇತ್ತ ಬಂದವರು. ಇವರ ಅಭಿಪ್ರಾಯಗಳು ಕಾಶ್ಮೀರಿಗಳ ಸಾಮಾಜಿಕ - ಆರ್ಥಿಕ ಜೀವನದ ಬಗೆಗೆ ಅಪಾರವಾಗಿ ಬೆಳಕು ಚೆಲ್ಲಿವೆ. ಕಾಶ್ಮೀರ ಕಣಿವೆಯ ಚೆಲುವನ್ನು ಒಪ್ಪವಾದ ಭಾಷೆಯಲ್ಲಿ ಬಣ್ಣಿಸುತ್ತ (ಈ ವಿವರಣೆಗೆ ನೀಡಿದ ಹೆಸರೂ ಸೂಕ್ತವಾದದ್ದೆ: "ಪ್ಯಾರಡೈಸ್ ಆಫ್ ದಿ ಇಂಡೀಸ್" — ಭರತ ಖಂಡದ ಸ್ವರ್ಗಧಾಮ) ಬರ್ನೀರ್ ಅವರು ಹೈದರ್ ಮಲಿಕನ ಚರಿತ್ರಗ್ರಂಥದ ಬಗೆಗೆ ಉಲ್ಲೇಖಿಸಿ ಹೀಗೆ ಹೇಳುತ್ತಾರೆ. "ಜಹಾಂಗೀರನ ಆಣತಿಯಂತೆ ಪರ್ಶಿಯನ್ ಭಾಷೆಯಲ್ಲಿ ಬರೆಯಲಾದ ಪ್ರಾಚೀನ ಕಾಶ್ಮೀರಿ ಅರಸರ ಇತಿಹಾಸಗಳನ್ನು ನಾನು ಅನುವಾದಿಸುತಿದ್ದೇನೆ." ಈ ಅನುವಾದ ಈ ತನಕ ಸಿಕ್ಕಿಲ್ಲ. ಪ್ರಾಯಃ ನಷ್ಟವಾಗಿರಬೇಕು. 18ನೆಯ ಶತಕದ ನಡುಗಾಲದಲ್ಲಿ ಟಿರಲೀಸ್ ಧರ್ಮಪ್ರಚಾರಕರಾದ ಲೀ ಪೇರ್ ಟೀಫೆಂಥೇಲರ್ ಅವರು ಬರೆದ, ಕಾಶ್ಮೀರದ ಪ್ರಾಚೀನ ಅರಸರ ಇತಿಹಾಸ ಸಂಗ್ರಹರೂಪವಾದ ಗ್ರಂಥಕ್ಕೂ (ಡಿಸ್ಕ್ರಿಪ್‌ಶನ್ ಡಿ ಇಂಡಿ) ಮಲಿಕ್ ಹೈದರನ ಕೃತಿಯೆ ಮೂಲವಾಗಿತ್ತು. 17ನೆಯ ಶತಕದ ಉತ್ತರಾರ್ಧ ಮತ್ತು 18ನೆಯ ಶತಕದಲ್ಲಿ ಕೆಲವು ಐರೋಪ್ಯಲೇಖಕರು ಸ್ವಪ್ಪದಾಖಲೆಗಳನ್ನು ಉಳಿಸಿಹೋಗಿದ್ದಾರೆ. ಇವುಗಳಲ್ಲಿ ತುಂಬ ಮಹತ್ವದ ದಾಖಲೆ ಕ್ರಿ.ಶ. 1783 ರಲ್ಲಿ ಕಾಶ್ಮೀರ ಕಣಿವೆಯನ್ನು ಸಂದರ್ಶಿಸಿದ, ಬಂಗಾಲೀ ಸೇನಾ ಘಟಕದ ಮುಖ್ಯಸ್ಥರಾಗಿದ್ದ ಜಾರ್ಜ್ ಫಾರ್‌ಸ್ಟರ್ ಅವರು ಬರೆದಿಟ್ಟಿರುವ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಯ ದಾಖಲೆಗಳು. ಅಫಘಾನೀಯರ ಅತ್ಯಂತ ನಿರ್ದಯವಾದ ಆಡಳಿತದ ಅವಧಿಯಲ್ಲಿ ಕಾಶ್ಮೀರಿಗಳು ಪಟ್ಟ ಪಾಡನ್ನು ಆತ ಚಿತ್ರಿಸಿದ ರೀತಿ ಕಲ್ಹಣ ಚಿತ್ರಿಸಿದ ಅಂಥದೇ ಬಗೆಯ ದಮನದ ಚಿತ್ರಣಗಳನ್ನು ನೆನಪಿಗೆ ತರುತ್ತದೆ. ಸಿಕ್ಖರ ಆಡಳಿತದ ಅವಧಿ (ಕ್ರಿ.ಶ. 1819 - 46) ಯನ್ನು ಅಳವಡಿಸಿಕೊಂಡು ಹಲವಾರು ಐರೋಪ್ಯ ಪ್ರವಾಸಿಗರು ಚಿತ್ರಿಸಿದ್ದುಂಟು. ಅವುಗಳಲ್ಲಿ ವೇನ್ ಅವರ ದಾಖಲೆ ತುಂಬ ಮಹತ್ವದ್ದು. ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯ ನಿಲುವುಗಳನ್ನು ಹೊಸ

ದಾಗಿ ಅಳೆದು ನೋಡಿದ್ದಲ್ಲದೆ ಅಲ್ಲಿಯ ಜನರು, ಅವರ ರೀತಿ-ನೀತಿಗಳು ಅವರ ನಂಬಿಕೆಗಳು, ಐತಿಹ್ಯಗಳು, ಅಲ್ಲಿನ ಶಾಲು ಉದ್ಯಮ ಮುಂತಾದವುಗಳ ಬಗೆಗೆ ಕೂಡ ಅವರ ಬರವಣಿಗೆ ಮಹತ್ವದ ಮಾಹಿತಿಯನ್ನೊದಗಿಸುತ್ತದೆ. ಮೂರ್‌ಕ್ರಾಫ್ಟ್ ಅವರು ಲಡಖ್‌ನ ಬಗೆಗೂ ಬರೆದಿದ್ದಾರೆ. ಹಾಗೆಯೇ ಅಲೆಕ್ಸಾಂಡರ್ ಕನ್ನಿಂಗ್‌ಹ್ಯಾಂ ಅವರ ಕೃತಿ 'ಲಡಖ್' ಅಂತು ಈ ಘಟ್ಟ ಟಿಬೆಟ್‌ನ ಬಗೆಗೆ ಮಾಹಿತಿಗಳ ಒಂದು ಗಣಿಯೆ ಆಗಿದೆ.

ಪ್ರವಾಸಿ ಲೇಖಕರಲ್ಲಿ ಒಬ್ಬರಾದ ಸರ್ ವಾಲ್ಟರ್ ಲಾರೆನ್ಸ್ [7] ಅವರು ಹೀಗೆ ಬರೆದಿದ್ದಾರೆ: "ಕಾಶ್ಮೀರದ ಕಣಿವೆ ಹಿಂದುಗಳಿಗೆ 'ಪವಿತ್ರ ತಾಣ'. ಪುರಾಣಕಾಲೀನ ಅವಶೇಷಗಳನ್ನು ಒಳಗೊಳ್ಳದ ಯಾವುದೇ ಹಳ್ಳಿಯನ್ನು ಪ್ರಾಯಃ ನಾನಿಲ್ಲಿ ಕಂಡದ್ದಿಲ್ಲ." ಕಲಾಹವ್ಯಾಸಿಗಳು ಮತ್ತಿತರರು ಪ್ರಾರಂಭಿಸಿದ ಉತ್‌ಖನನಗಳು ಕ್ರಮಶಃ ಹೆಚ್ಚು ಹೆಚ್ಚು ಮಹತ್ವದ ಆವಿಷ್ಕಾರಗಳನ್ನು ಬೆಳಕಿಗೆ ತಂದವು. ಸಾಂಸ್ಕೃತ ಮತ್ತು ಪರ್ಶಿಯನ್ ಹಸ್ತಪ್ರತಿಗಳನ್ನು ಕಲೆಹಾಕುವುದರಲ್ಲಿ ತೊಡಗಿದ ಜಾರ್ಜ್ ಬ್ಯೂಲರ್ (ಕ್ರಿ.ಶ. 1875) ಅವರು ಕಲ್ಹಣನ ರಾಜತರಂಗಿಣಿಯಲ್ಲಿ ಮತ್ತು ಇತರ ಕೃತಿಗಳಲ್ಲಿ ಉಲ್ಲೇಖಗೊಂಡ ಹಳೆಯ ಸ್ಥಳಗಳ ಕುರುಹನ್ನು ಪತ್ತೆ ಹಚ್ಚಿದರು. ಐತಿಹಾಸಿಕ ಭೂವಿನ್ಯಾಸದ ಮಹತ್ವಕ್ಕೆ ಒತ್ತು ನೀಡಿದ ಅವರು ರಾಜತರಂಗಿಣಿಯ ಸಮಗ್ರ ಮತ್ತು ವಿಮರ್ಶಾತ್ಮಕ ಅಧ್ಯಯನಕ್ಕೆ ಪಥ ಪ್ರದರ್ಶನ ಮಾಡಿದರು.

ಇದರಿಂದ ಸ್ಫೂರ್ತಿ ಪಡೆದು ಮುಂದುವರಿದ ಪ್ರಾಚ್ಯ ವಸ್ತು ಸಂಶೋಧನಗಳು ಕಾಶ್ಮೀರದ ಇತಿಹಾಸದ ಮೇಲೆ ಇನ್ನಷ್ಟು ಬೆಳಕು ಚೆಲ್ಲಿದವು. ಇದರಿಂದ ರಾಜತರಂಗಿಣಿಯ ಅನೇಕ ಮಹತ್ವದ ಹೇಳಿಕೆಗಳಿಗೆ ಸಮರ್ಥನೆ ದೊರಕಿತು. ರಾಜ್ಯದಲ್ಲಿ ಮತ್ತು ಹೊರಗಡೆ ದೊರಕಿದ ಚಿನ್ನ, ಬೆಳ್ಳಿ, ತಾಮ್ರ ಮತ್ತು ಹಿತ್ತಾಳೆಯ ಹಳೆಯ ನಾಣ್ಯಗಳ ಅಧ್ಯಯನ ಈ ಸಂಶೋಧನೆಗಳಿಗೆ ಪೂರಕವಾಯಿತು. ಜಾರ್ಜ್ ಕನ್ನಿಂಗ್ಹಾಮ್ ಸಂಗ್ರಹಿಸಿದ ಬೃಹತ್ ಪ್ರಮಾಣದ ನಾಣ್ಯಗಳು ರಾಜತರಂಗಿಣಿಯ ವಂಶಾನುಕ್ರಮಕ್ಕೆ ತೀರ ಅನುಗುಣವಾಗಿಯೆ ಇದ್ದವು. ಆತನ ಹಳೆಯ ನಾಣ್ಯಗಳ ಅನ್ವೇಷಣೆಯ ಮುಖ್ಯ ಫಲಿತಾಂಶಗಳು ಒಂದು ಲೇಖನದಲ್ಲಿ [8] ಪ್ರಕಟಗೊಂಡಿದ್ದವು. ಕಲ್ಹಣ ಮತ್ತು ಇತರ ಇತಿಹಾಸಕಾರರು ಬರೆದಿಟ್ಟ ಇತಿಹಾಸಗಳನ್ನು ವಿಮರ್ಶಾತ್ಮಕವಾಗಿ ತೂಗಿ ನೋಡುವಲ್ಲಿ ಈ ನಾಣ್ಯಗಳ ರುಜುವಾತಿನ ಮಹತ್ವವನ್ನು ಈ ಪ್ರಬಂಧ ಸ್ಫುಟ ಪಡಿಸಿತು.

ಈ ಕಣಿವೆಯ ಪರಿಸರದ ಪ್ರವೇಶಗಳ ಜನಾಂಗದ ವಿವರಣೆ ರಾಜತರಂಗಿಣಿಯಲ್ಲಿ ಬಹಳಷ್ಟು ಮಟ್ಟಿಗೆ ದೊರಕುತ್ತದೆ. ಪ್ರಖ್ಯಾತವಾದ ಶಾರದಾಮಂದಿರದ ಮೇಲುಗಡೆ ಇರುವ ಕಿಶನ್‌ಗಂಗಾ ಕಣಿವೆಯ ಮೇಲ್‌ಬದಿಯ ಹರವು ಈಗಿನಂತೆಯೆ ಆಗಲೂ 'ದರದ' ಜನಾಂಗದ ವಾಸ ಭೂಮಿಯಾಗಿತ್ತು. ಅವರನ್ನು ಕಾಶ್ಮೀರಿಗಳ ಬಡಗಣ ನೆರೆ

---

7 "ದಿ ವ್ಯಾಲಿ ಆಫ್ ಕಾಶ್ಮೀರ್"

8 "ನ್ಯೂಮಿಸ್ಮ್ಯಾಟಿಕ್ ಕ್ರಾನಿಕಲ್" ಕ್ರಿ.ಶ. 1846.

ಯವರು ಎಂದು ಕಲ್ಹಣ ಹಲವು ಬಾರಿ ಉಲ್ಲೇಖಿಸಿದ್ದಾನೆ. ಅವನು ಉಲ್ಲೇಖಿಸಿರುವ "ಉತ್ತರದ ಆಚೆಗಿನ ಮ್ಲೇಚ್ಛರು" ಅವನ ಕಾಲದಲ್ಲಿ ಇಸ್ಲಾಂಧರ್ಮಕ್ಕೆ ಮತಾಂತರಗೊಂಡ 'ದರದ'ರೇ ಇರಬಹುದು. ಖಶರು ಕಣಿವೆಯ ದಕ್ಷಿಣ ಮತ್ತು ಪಡುವಣ ಪರಿಸರದಲ್ಲಿ ನೆಲೆಸಿದ್ದರು. ಪರ್ವತೀಯ ಪ್ರಾಂತಗಳಾದ ರಾಜೋರಿ ಮತ್ತು ಪೂಂಛ್‌ಗಳನ್ನು ಖಶರು ಆಳಿದ್ದರು; 11ನೆಯ ಶತಕದಲ್ಲಿ ಕಾಶ್ಮೀರ ಕಣಿವೆ ಖಶವಂಶೀಯರ ಆಕ್ರಮಣಕ್ಕೆ ಒಳಗಾಗಿತ್ತು. ಭೌಟ್ಟರು (ಲಡಖ್ ಮತ್ತು ಸಮೀಪದ ಜಿಲ್ಲೆಗಳಲ್ಲಿರುವ ಈಗಣ ಭುಟಿಯಾಗಳು) ಕಾಶ್ಮೀರ ಕಣಿವೆಯ ಪೂರ್ವ ಮತ್ತು ಈಶಾನ್ಯಭಾಗದಲ್ಲಿ ನೆಲೆಸಿದ್ದರು. ರಾಜತರಂಗಿಣಿಯಿಂದ ಆಯ್ದ ಇವು ಮತ್ತು ಇಂಥ ಹಲವು ಸಂಗತಿಗಳು — ಕಾಶ್ಮೀರಿಗಳ ಮತ್ತು ಇತರ ಔತ್ತರೇಯ ಜನಾಂಗಗಳ ಸಮಗ್ರಾಧ್ಯಯನದಲ್ಲಿ — ತುಂಬ ಉಪಯುಕ್ತವಾಗಬಲ್ಲವು.

Indian Institute of Advanced Study
117228
10/12/04
SHIMLA

ಗ್ರಂಥ - ಋಣ

ಅಬುಲ್ ಫರುಲ್ : "ಅಯಿನ್-ಇ-ಅಕಬರಿ"; ಅನು: ಎಚ್.ಎಸ್. ಜಾರೆಟ್, ಬಂಗಾಲದ ಏಶಿಯಾಟಿಕ್ ಸೊಸ್ಯಾಟಿಯ "ಬಿಬ್ಲಿಯೋತಿಕಾ ಇಂಡಿಕಾ" ಮಾಲೆ ಮತ್ತು ಅನು - ಟಿಪ್ಪಣಿ; ಜೆ.ಎಸ್. ಸರ್ಕಾರ್, ಏಶಿಯಾಟಿಕ್ ಸೊಸ್ಯಾಟಿ, ಕಲ್ಕತ್ತ, 1949,.

ಬಂಜಾಯಿ, ಪಿ.ಎನ್.ಕೆ. : "ಎ ಹಿಸ್ಟೊರಿ ಆಫ್ ಕಶ್ಮೀರ್"; ಮೆಟ್ರೋ ಪಾಲಿಟನ್ ಬುಕ್ ಕಂ. (ಪ್ರೈ).ಲಿ. ದಿಲ್ಲಿ; 1962.

ಬ್ಯೂಲರ್, ಜಿ. : "ವಿಕ್ರಮಾಂಕ ದೇವ ಚರಿತ", ಅನು: ಮುಂಬಯಿ, 1875.

ದತ್ತ, ಜೆ.ಸಿ. : "ಕಿಂಗ್ಸ್ ಆಫ್ ಕಶ್ಮೀರ್III", ಜೋನರಾಜ, ಶ್ರೀವರ ಮತ್ತು ಶುಕನ ರ್‍ಾಜತರಂಗಿಣಿಗಳ ಅನುವಾದ: ಕಲ್ಕತ್ತ; 1898.

ಜೋನ್ಸ್, ಸರ್ ವಿಲಿಯಮ್ : "ಏಶಿಯಾಟಿಕ್ ರಿಸರ್ಚಸ್" ; ಕಲ್ಕತ್ತ; 1826, ಸಂ V

ಕೌಲ್ ಮುಹಮ್ಮದ್ ಅರುಖಾಮ್ : "ವಕತ್-ಇ-ಕಶ್ಮೀರ್" ; ಶ್ರೀನಗರ.

ಕೌಲ್. ಎಸ್. : "ಸಂಪಾಃ ಜೈನ - ರಾಜತರಂಗಿಣಿ" ; ಹೋಶಿಯಾರ್‌ಪುರ್, 1906.

ಲಾರೆನ್ಸ್, ವಾಲ್ಟರ್ : "ದಿ ವ್ಯಾಲಿ ಆಫ್ ಕಶ್ಮೀರ್" ; ಲಂಡನ್; 1895

ಮಜುಮ್‌ದಾರ್, ಆರ್.ಸಿ. : "ಏನ್‌ಶಂಟ್ ಇಂಡಿಯಾ" ; ವಾರಣಾಸಿ, 1956

ಮಜುಮ್‌ದಾರ್, ಆರ್.ಸಿ. : "ದಿ ವೇದಿಕ್ ಏಜ್" ; ಲಂಡನ್; 1950

ಪಂಡಿತ್, ಆರ್.ಎಸ್ : "ರಾಜತರಂಗಿಣಿ" ; ಕಲ್ಹಣನ ಮೂಲಕೃತಿಯ ಇಂಗ್ಲಿಷ್ ಅನುವಾದ; ಪುನರ್ಮುದ್ರಣ: ಸಾಹಿತ್ಯ ಅಕಾದೆಮಿ, 1977

ಪರ್ಮು, ಆರ್.ಕೆ. : "ಹಿಸ್ಟೊರಿ ಆಫ್ ಮುಸ್ಲಿಂ ರೂಲ್ ಇನ್ ಕಶ್ಮೀರ್" ಹೊಸದಿಲ್ಲಿ; 1969

ಪೀಟರ್‌ಸನ್, ಪಿ. : "ದ್ವಿತೀಯ ರಾಜತರಂಗಿಣಿ" ; ಜೋನರಾಜನ ಮೂಲಕೃತಿಯ ಇಂಗ್ಲಿಷ್ ಅನುವಾದ; ಮುಂಬಯಿ; 1896

ರಾಲಿಸ್‌ಸನ್, ಎಚ್.ಜಿ. : "ಇಂಡಿಯ" ; ಲಂಡನ್: 1937

ರೇ, ಎಸ್.ಸಿ. : "ಅರ್ಲಿ ಹಿಸ್ಟೊರಿ ಅಂಡ್ ಕಲ್ಚರ್ ಆಫ್ ಕಶ್ಮೀರ್" ; ಹೊಸದಿಲ್ಲಿ; 1969

ಸಕ್ಸೇನಾ, ಕೆ.ಎಸ್. : "ಪೊಲಿಟಿಕಲ್ ಹಿಸ್ಟೊರಿ ಆಫ್ ಕಶ್ಮೀರ್" ; ದಿ ಅಪ್ಪರ್ ಇಂಡಿಯ ಪಬ್ಲಿಷಿಂಗ ಹೈಸ್ ಪ್ರೈ. ಲಿ. ಲಖನೌ; 1974

ಸ್ಟೇಯ್ನ್, ಎಂ.ಎ : "ಕಲ್ಹಣಾಸ್ ರಾಜತರಂಗಿಣಿ" ; ಅನು. ಪುನರ್ಮುದ್ರಣ, ಮೋತೀಲಾಲ್ ಬನಾರಸೀದಾಸ್, ದಿಲ್ಲಿ, ವಾರಣಾಸಿ; 1961

ಸ್ಟೇಯ್ನ್, ಎಂ.ಎ : "ನೋಟ್ಸ್ ಆನ್ ಊ-ಕಾಂಗ್ಸ್ ಅಕೌಂಟ್ಸ್ ಆಫ್ ಕಶ್ಮೀರ್" ; ವೆಯ್ನ, 1896

ಸೂಫಿ, ಜಿ.ಎಂ.ಡಿ : "ಕಶ್ಮೀರ್" ಪುನರ್ಮುದ್ರಣ, ಲೈಟ್ ಅಂಡ್ ಲೈಫ್ ಪಬ್ಲಿಷರ್ಸ್, ಹೊಸದಿಲ್ಲಿ, 1974

ವಿಲ್‌ಸನ್. ಎಚ್.ಎಚ್ : "ಆನ್ ಎಸೆ ಆನ್ ದಿ ಹಿಂದೂ ಹಿಸ್ಟೊರಿ ಆಫ್ ಕಶ್ಮೀರ್" ; ಏಶಿಯಾಟಿಕ್ ಸೊಸ್ಯಾಟಿಯ ಅನುವಾದ; ಏಶಿಯಾಟಿಕ್ ರೀಸರ್ಚ್, ಸಂ XV ಕಲ್ಕತ್ತ, 1825

ಝಾಡೂ, ಜಗಧರ್ (ಮತ್ತು ಕಂಜೀಲಾಲ್) : ಸಂಪಾ, "ನೀಲಮತ ಪುರಾಣ" ; ಶ್ರೀನಗರ; 1928

ರಾಜತರಂಗಿಣಿಯ ಕರ್ತೃವಾದ ಸುಪ್ರಸಿದ್ಧ ಕಲ್ಹಣನು ಚರಿತ್ರಕಾರನು ಮಾತ್ರವಲ್ಲ, ತನ್ನ ತಾಯಿನಾಡಾದ ಗ್ರಾಮೀಣ ಪ್ರದೇಶ ಕಾಶ್ಮೀರವನ್ನೂ, ಅದರ ನದಿಗಳನ್ನೂ, ಜಲಪಾತಗಳನ್ನೂ, ಹೂಗಳು ಹರಡಿದ ಹುಲ್ಲುಗಾವಲುಗಳನ್ನೂ ಸಮೃದ್ಧವಾದ ಹೊಲಗದ್ದೆಗಳಮೇಲಿನ ಚಿತ್ರ ವಿಚಿತ್ರವಾದ ಮೃದುಮೋಡಗಳಿಂದ ಆವೃತವಾದ ಆಕಾಶವನ್ನೂ, ಪ್ರಾತಃಕಾಲ ಮತ್ತು ಸೂರ್ಯಾಸ್ತದಲ್ಲಿ ವಿವಿಧ ಗುಲಾಬಿ ಬಣ್ಣಗಳನ್ನೂ, ಮತ್ತು ಚಿತ್ರಕಾರನ ಬಣ್ಣದ ಫಲಕದ ಅಡರು ಬಳಿಗಳನ್ನು ಹೊಂದಿದ ಪರ್ವತಗಳ ಮೇಲಿನ ಮಂಜಿನ ದೂರದ ದೃಶ್ಯಗಳನ್ನೂ ಮೆಚ್ಚಿದ ಕವಿಯೂ ಹೌದು. ಹಲವಾರು ಶತಮಾನಗಳನ್ನು ದಾಟಿ ಬಂದ ಸ್ಫಟಿಕದಂತೆ ಶುಭ್ರವಾದ ಕಲ್ಹಣನ ಧ್ವನಿ ನೈಸರ್ಗಿಕ ಸೌಂದರ್ಯದ ಒಲುಮೆಯ ದೃಷ್ಟಿಯಲ್ಲಿ, ನರನಾರಿಯರ ಹೃದಯಗಳ ವಿಮರ್ಶಾತ್ಮಕ ಪರಿಶೋಧನೆಯಲ್ಲಿ ಮತ್ತು ಅವರು ತಮ್ಮ ಧ್ಯೇಯಗಳನ್ನು ಸಾಧಿಸಲು ಉಪಯೋಗಿಸಿದ ಸಾಧನಗಳಲ್ಲಿ ಹಲವು ವಿಧಗಳಿಂದ ಅನುಪಮ ಹಾಗೂ ವಿನೂತನವಾದುದು.

ಗತಕಾಲದ ಪ್ರಖ್ಯಾತರಾದ ಅನೇಕ ಸಂಸ್ಕೃತ ಕವಿಗಳ ಸ್ಥಿತಿಯಂತೆ ಕಲ್ಹಣನ ಜೀವನ ಕುರಿತೂ ಹೆಚ್ಚೇನೂ ತಿಳಿದು ಬಂದಿಲ್ಲ. ಸೋಮನಾಥ ಧರ್ ಅವರು ಈ ಹೊತ್ತಗೆಯಲ್ಲಿ ಕವಿಯು ತನ್ನ ಕೃತಿಯಲ್ಲಿ ಉಲ್ಲೇಖಿಸಿದ ಆಂತರಿಕ ಆಧಾರಗಳ ಮೂಲಕ ಕವಿಯ ಜೀವನ ವೃತ್ತಾಂತಕ್ಕೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸುವ ಮತ್ತು ರಾಜತರಂಗಿಣಿಯನ್ನು ಚೆನ್ನಾಗಿ ಗುಣವಿವೇಚನೆ ಮಾಡಲು ಓದುಗನಿಗೆ ಮಾರ್ಗದರ್ಶನ ನೀಡುವ ಪ್ರಯತ್ನವನ್ನು ಮಾಡಿದ್ದಾರೆ.

ಮುಖಪುಟ ವಿನ್ಯಾಸದೊಳಗೆ ಅಳವಡಿಸಿರುವುದು ಭಾರತದ ಪುರಾತತ್ವ ಸರ್ವೇಕ್ಷಣ ಇಲಾಖೆಯವರ ಕೃಪೆಯಿಂದ ಪಡೆದ, 9 ನೆಯ ಶತಮಾನದ ಆದಿಯಲ್ಲಿ ರಚಿತವಾದ ಕಾಶ್ಮೀರದ ಮಾರ್ತಾಂಡ ದೇವಾಲಯದ ತ್ರಿಪತ್ರಕ ನಿಕೇತನದಲ್ಲಿ ಭೈರವನಂತ ಆಸೀನನಾದ ಶಿವನ ಶಿಲ್ಪಾಕೃತಿಯನ್ನು ಆಧರಿಸಿ ತೆಗೆದ ಛಾಯಾಚಿತ್ರದ ಆಧಾರದಲ್ಲಿ ಎ.ದೇವ್‌ಸಿ ಅವರು ರಚಿಸಿದ ರೇಖಾಚಿತ್ರವಾಗಿದೆ.

Kalhana (Kannada)

SAHITYA AKADEMI
REVISED PRICE Rs. 15·00

ISBN 81 7201 054 0

Library IIAS, Shimla
K 891.202 109 2 K 124 D
00117228